ಹುಬ್ಬಳ್ಳಿ
ಶುಕ್ರವಾರ, 27 ಮಾರ್ಚ್ 2026
ಸಂಪುಟ 16, ಸಂಚಿಕೆ 2, ಪುಟಗಳು 14+8
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಅಲ್-ಖೈದಾ ನಂಟು: 12 ಮಂದಿ ಸೆರೆ| 02
ಶ್ರೀರಾಮನೆಂದರೆ ಅಮಿತಾನಂದಸ್ವರೂಪೀ ವಿಶೇಷ ಪುಟ 03
ಶ್ರೀರಾಮನವಮಿ ಹಬ್ಬದ ಶುಭಾಶಯ

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ : ಪುನರ್ವಸು

ದಿನದ ಮಾತು

ಅಹಂಕಾರವೇ ಎಲ್ಲಾ ಸದ್ಗುಣಗಳ ಅತಿ ಪ್ರಬಲ ವೈರಿ. ಆತ್ಮ ವಿಶ್ವಾಸದ ಹೆಸರಿನಲ್ಲಿ ಸ್ವಪ್ರತಿಷ್ಠೆ ಬೆಳೆಸಬಾರದು.
▲ಶ್ರೀ ಗುರೂಜಿ

ಧುರಂಧರ: ಸಂಭಾಷಣೆ ಮತ್ತು ಬಲೂಚ್ ಪ್ರಶ್ನೆ!

ಉಘೇ ವೀರ ಭೂಮಿಗೆ
• ಸಂತೋಷ್ ತಮ್ಮಯ್ಯ
• ಪುಟ 6

ಕಿರುಸುದ್ದಿ

ಜಿಬಿಎ ಚೊಚ್ಚಲ ಬಜೆಟ್ ಇಂದು, ನಾಳೆ ಮಂಡನೆ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ 2026-27ನೇ ಸಾಲಿನ ಚೊಚ್ಚಲ ಆಯ-ವ್ಯಯವನ್ನು ಮಾ.27 ಹಾಗೂ 28ರಂದು ಮಂಡನೆಯಾಗಲಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ನಗರ ಪಾಲಿಕೆಯಾಗಿ ರಚನೆಯಾದ ನಂತರ ಮೊದಲ ಬಾರಿಗೆ ಪಂಚ ಪಾಲಿಕೆಗಳ ಬಜೆಟ್ ಮಂಡನೆಯನ್ನು ಮಾಡಲಾಗುತ್ತಿದೆ. ಇದಕ್ಕಾಗಿ ಅಧಿಕಾರಿಗಳು ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ. ಮಾ.27ರಂದು ಬೆಳಗ್ಗೆ 9:30ಕ್ಕೆ ವೈಟ್‌ಫೀಲ್ಡ್‌ನ ಎಂ.ಎಲ್.ಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಪೂರ್ವ ನಗರ ಪಾಲಿಕೆ, ಮ.12:30ಕ್ಕೆ ಟೌನ್ ಹಾಲ್‌ನಲ್ಲಿ ಕೇಂದ್ರ ನಗರ ಪಾಲಿಕೆ ಬಜೆಟ್ ಮಂಡನೆಯಾಗಲಿದೆ. ಮಾ.28ರಂದು ಬೆಳಗ್ಗೆ 9:30ಕ್ಕೆ ಯಲಹಂಕ ನ್ಯೂ ಟೌನ್ ಅಂಬೇಡ್ಕರ್ ಭವನದಲ್ಲಿ ಉತ್ತರ ನಗರ ಪಾಲಿಕೆ, ಮ.12:30ಕ್ಕೆ ಮಲ್ಲೇಶ್ವರದ ಐಪಿಪಿ ಸೆಂಟರ್‌ನಲ್ಲಿ ಪಶ್ಚಿಮ ನಗರ ಪಾಲಿಕೆ ಬಜೆಟ್, ಮ.2:30ಕ್ಕೆ ಜಿಲ್ಲಾ ಪಂಚಾಯಿತಿ ಸಭಾಂಗಣ, ಬನಶಂಕರಿ ದೇವಸ್ಥಾನ ಹತ್ತಿರ, ದಕ್ಷಿಣ ನಗರ ಪಾಲಿಕೆ ಬಜೆಟ್ ಮಂಡನೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.




ರಾಮನವಮಿ ಹಿನ್ನೆಲೆ ಕಲಬುರಗಿ ನಗರದಲ್ಲಿ 15 ಅಡಿ ಎತ್ತರದ ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮನ ಅದ್ದೂರಿ ಶೋಭಾಯಾತ್ರೆ ಜರುಗಿತು. 2 ಲಕ್ಷಕ್ಕೂ ಅಧಿಕ ರಾಮ ಭಕ್ತರು ಶೋಭಾಯಾತ್ರೆಗೆ ಸಾಕ್ಷಿಯಾದರು.

ಲಕ್ಷಾಂತರ ರಾಮಭಕ್ತರ ಜೈ ಘೋಷ

ಕಲಬುರಗಿಯಲ್ಲಿ ಶ್ರೀರಾಮನ ಅದ್ದೂರಿ ಶೋಭಾಯಾತ್ರೆ

• **ಕಲಬುರಗಿ:** ರಾಮನವಮಿ ಅಂಗವಾಗಿ ಬಿಸಿಲು ನಾಡಾದ ಕಲಬುರಗಿಯಲ್ಲಿ ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮನ 15 ಅಡಿ ಎತ್ತರದ ಮೂರ್ತಿಯ ಅದ್ದೂರಿ ಮೆರವಣಿಗೆಯೂ ಗುರುವಾರ ಲಕ್ಷಾಂತರ ರಾಮಭಕ್ತರ ಜೈ ಘೋಷಗಳ ಮಧ್ಯೆ ವೈಭವಮಯವಾಗಿ ನಡೆಯಿತು.

ನಗರದ ಹೊರವಲಯದ ಚೆಕ್‌ಪೋಸ್ಟ್ ಬಳಿಯ ರಾಮತೀರ್ಥ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಶರಣಬಸವೇಶ್ವರರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ, ಪಾಳಾದ ಗುರುಮೂರ್ತಿ ಶಿವಾಚಾರ್ಯರು ಸೇರಿದಂತೆ ಜಿಲ್ಲೆಯ ವಿವಿಧ ಮಠಾಧೀಶರ ನೇತೃತ್ವದಲ್ಲಿ ಅದ್ದೂರಿ ಶೋಭಾಯಾತ್ರೆಗೆ ಚಾಲನೆ ನೀಡಿದ್ದು, ಚೆಕ್ ಪೋಸ್ಟ್‌ನಿಂದ ಹೊರಟ ಶೋಭಾಯಾತ್ರೆ, ದೇವಿ ನಗರ, ಖಾದ್ರಿ ಚೌಕ್, ಶೆಟ್ಟಿ ಟಾಕೀಸ್, ಸೂಪರ್ ಮಾರ್ಕೆಟ್, ಜನತಾ ಬಜಾರ್, ಸಿಟಿ ಸೆಂಟರ್ ಮಾಲ್ ಮುಖಾಂತರ ನಗರದ ಜಗತ್ ವೃತ್ತದಲ್ಲಿ ಸಂಪನ್ನಗೊಂಡಿತು. ಶೋಭಾಯಾತ್ರೆಯ ಮಾರ್ಗದುದ್ದಕ್ಕೂ ರಾಮ ಭಕ್ತರಿಗಾಗಿ ವಿವಿಧ ಸಂಘ ಸಂಸ್ಥೆಗಳು, ಉದ್ಯಮಿಗಳಿಂದ ಪ್ರಸಾದ, ತಂಪು ಪಾನೀಯ ವ್ಯವಸ್ಥೆ ಮಾಡಲಾಗಿತ್ತು. ನಗರದ ಚೆಕ್ ಪೋಸ್ಟ್ ನಿಂದ ರಾಮನವಮಿ ಉತ್ಸವ ಸಮಿತಿ ಹಾಗೂ ಮಹೇಶ್ ಗೊಬ್ಬೂರ ನೇತೃತ್ವದ ಆದಿ ಪುರುಷ ರಾಮನವಮಿ ಉತ್ಸವ ಸಮಿತಿಯ ಎರಡು ಶೋಭಾಯಾತ್ರೆ ಹೊರಟರೇ, ರಾಮಮಂದಿರದಿಂದ ಇನ್ನೊಂದು ಶೋಭಾಯಾತ್ರೆ ಜರುಗಿತು. ಶೋಭಾಯಾತ್ರೆಯಲ್ಲಿ 2 ಲಕ್ಷಕ್ಕೂ ಅಧಿಕ ರಾಮ ಭಕ್ತರು ಪಾಲ್ಗೊಂಡು, ಭಕ್ತಿಯ ಜ್ವಾಲೆಯಲ್ಲಿ ಮಿಂದೆದ್ದರು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಮುಖ್ಯಮಂತ್ರಿಗಳ ಜತೆ ಇಂದು ಮೋದಿ ಸಭೆ

ಸನ್ನದ್ಧತೆ ಪರಾಮರ್ಶೆ



• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆಯಲ್ಲಿ ರಾಜ್ಯಗಳ ಸನ್ನದ್ಧತೆ ಮತ್ತು ಯೋಜನೆಗಳನ್ನು ಪರಿಶೀಲಿಸಲು ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ಚುನಾವಣೆ ಎದುರಿಸಲಿರುವ ರಾಜ್ಯಗಳ ಹೊರತುಪಡಿಸಿ, ಉಳಿದೆಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಂವಾದ ನಡೆಸಲಿದ್ದಾರೆ. ಟೀಮ್ ಇಂಡಿಯಾ ಸ್ಫೂರ್ತಿಯಲ್ಲಿ ಸಂಘಟಿತ ಪ್ರಯತ್ನಗಳನ್ನು ಉತ್ತೇಜಿಸುವುದು ಪ್ರಸ್ತುತ ಸಂವಾದದ ಮೂಲಾಶಯವೆಂದು ಮೂಲಗಳು ತಿಳಿಸಿವೆ.

ಪ. ಏಷ್ಯಾ ಸಂಘರ್ಷ ಹಿನ್ನೆಲೆಯಲ್ಲಿ ಇಂಧನ, ಆಹಾರ ಮತ್ತು ಭದ್ರತೆ ಕುರಿತು ರಾಜ್ಯಗಳ ಸನ್ನದ್ಧತೆಗಳಿಗೆ ಸಂಬಂಧಿಸಿ ಪ್ರಧಾನಿ ಮೋದಿಯವರು ಶುಕ್ರವಾರ ಸಂಜೆ ವಿಡಿಯೊ ಕಾನ್ಫರೆನ್ಸಿಂಗ್ ಮುಖೇನ ವಿವಿಧ ರಾಜ್ಯಗಳ ಸಿಎಂಗಳ ಜತೆ ಸಂವಾದ ನಡೆಸುವರು. ಚುನಾವಣಾ ನೀತಿ ಸಂಹಿತೆ ಕಾರಣ, ಚುನಾವಣಾ ಹೊಸ್ತಿಲಲ್ಲಿರುವ ರಾಜ್ಯಗಳು ಈ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ.



ಇದು ಮೊದಲ ಸಭೆ: ಫೆ.28 ರಂದು ಶುರುವಾಗಿರುವ ಪ. ಏಷ್ಯಾ ಸಂಘರ್ಷಕ್ಕೆ ಸಂಬಂಧಿಸಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ಮೋದಿ ಸಂವಾದ ನಡೆಸುತ್ತಿರುವುದು ಇದು ಮೊದಲು. ಸಂಪುಟ ಸಚಿವಾಲಯವು ಚುನಾವಣೆಗೆ ಸಜ್ಜಾಗಿರುವ ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಅಸ್ಸಾಂ, ಕೇಂದ್ರಾಡಳಿತ ಪ್ರದೇಶ ಪುದುಚೇರಿಯ ಮುಖ್ಯ ಕಾರ್ಯದರ್ಶಿಗಳ ಜತೆ ಪ್ರತ್ಯೇಕ ಸಭೆ ನಡೆಸಲಿದೆ. ➡ಪುಟ 9

ದೇಶದಲ್ಲಿ ಭದ್ರತಾ ಸಂಸ್ಥೆಗಳು ಸನ್ನದ್ಧ ಸ್ಥಿತಿಯಲ್ಲಿ: ಪ್ರಧಾನಿ

ಕೆಲವು ಶಕ್ತಿಗಳು ಇಂತಹ ಸನ್ನಿವೇಶಗಳ ದುರ್ಲಾಭ ಪಡೆಯಲೆತ್ನಿಸುವ ಆತಂಕವಿದೆ ಎಂದು ಪ.ಏಷ್ಯಾ ಬಿಕ್ಕಟ್ಟು ಸೃಜಿಸಲಿರುವ ಆಂತರಿಕ ಭದ್ರತಾ ಆಯಾಮ ಗಳತ್ತ ಪ್ರಧಾನಿ ಗಮನ ಸೆಳೆದಿದ್ದರು. ಈ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಭದ್ರತಾ ಸಂಸ್ಥೆಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿದೆ ಮತ್ತು ಕರಾವಳಿ, ಗಡಿ, ಸೈಬರ್, ಪ್ರಾಣಹಾನಿಕ ಸೌಲಭ್ಯಗಳ ಸಹಿತ ಎಲ್ಲಾ ರಂಗಗಳಲ್ಲೂ ಭದ್ರತೆಯನ್ನು ಮತ್ತಷ್ಟು ಬಲಪಡಿಸಲಾಗಿದೆ. ➡ಪುಟ 9

ಅನಗತ್ಯವಾಗಿ ಎಲ್‌ಪಿಜಿ ಖರೀದಿಸಬೇಡಿ: ಸಚಿವ

• **ಬೆಂಗಳೂರು:** ರಾಜ್ಯದಲ್ಲಿ ಅಭಾವ ಸಂದರ್ಭದಲ್ಲಿ ಅನಗತ್ಯವಾಗಿ ಎಲ್‌ಪಿಜಿ ಸಿಲಿಂಡರ್ ಖರೀದಿ ಮಾಡಬೇಡಿ. ಅನಿಲವನ್ನು ಮಿತವಾಗಿ ಬಳಕೆ ಮಾಡಿ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.



ಗುರುವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಗ್ರಾಹಕರು ಗ್ಯಾಸ್ ಏಜೆನ್ಸಿ ಹತ್ತಿರ ಹೋಗಿ ಸರತಿ ನಿಲ್ಲುವುದು ಬೇಡ. ➡ಪುಟ 9

ರಾಜ್ಯದ ಹಿತ ಕಾಪಾಡಿದ್ದರಿಂದ 17ನೇ ಬಜೆಟ್ ಮಂಡಿಸಿದೆ: ಸಿಎಂ

ಜನ, ಶಾಸಕರ ಆಶೀರ್ವಾದ ನನಗಿದೆ

• **ವಿಧಾನ ಪರಿಷತ್:** 1994-95ರಲ್ಲಿ ಐದು ವರ್ಷ ಹಣಕಾಸು ಮಂತ್ರಿ ಆಗಿದ್ದೆ, ಧರಂಸಿಂಗ್ ಮುಖ್ಯಮಂತ್ರಿ ಆಗಿದ್ದಾಗ ಹಣಕಾಸು ಸಚಿವನಾಗಿದ್ದೆ, ಮುಖ್ಯಮಂತ್ರಿ ಆದ ಬಳಿಕವೂ ಹಣಕಾಸು ಮಂತ್ರಿಯಾಗಿದ್ದೇನೆ. ನಾನು ರಾಜ್ಯದ ಜನರ ಹಿತ ಕಾಪಾಡುವ ಕೆಲಸ ಮಾಡದೇ ಇದ್ದರೆ ಹಣಕಾಸು ಮಂತ್ರಿ ಆಗಲು ಸಾಧ್ಯವೇ ಇರಲಿಲ್ಲ, ಕರ್ನಾಟಕದಲ್ಲಿ 17 ಬಜೆಟ್ ಮಂಡಿಸಿದ್ದು ಇತಿಹಾಸ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ಬಜೆಟ್ ಮೇಲಿನ ಚರ್ಚೆಗೆ ಮೇಲ್ಮನೆಯಲ್ಲಿ ಸುದೀರ್ಘವಾಗಿ ಉತ್ತರಿಸಿದ ಅವರು. ಇಷ್ಟು ಅವಕಾಶ ಸಿಗಬೇಕಾದರೆ ಜನತೆಯ ಆಶೀರ್ವಾದ, ಶಾಸಕರ ಆಶೀರ್ವಾದ, ಹೈಕಮಾಂಡ್‌ನ ವಿಶ್ವಾಸ ಇದೆ. ಇಲ್ಲದಿದ್ದರೆ ಇಷ್ಟೊಂದು ಬಾರಿ ನನ್ನನ್ನು ಏಕೆ ಹಣಕಾಸು ಮಂತ್ರಿ ಮಾಡುತ್ತಿದ್ದರು. ಯಾರೇ,. ಯಾವುದೇ, ಟೀಕೆ ಮಾಡಿದರೂ ಟೀಕೆಗಳು ಸಹಜವಾಗಿರಬೇಕು. ನಿಮ್ಮ ಟೀಕೆಗಳನ್ನು ಸ್ವಾಗತಿಸುತ್ತೇನೆ ಎಂದರು. ➡ಪುಟ 9



ವಿದೇಶ ಪ್ರಯಾಣ ದುಂದು ವೆಚ್ಚವಲ್ಲವೇ?
ವಿಮಾನಯಾನ ಪ್ರಯಾಣ, ಹೆಲಿಕಾಪ್ಟರ್ ಪ್ರಯಾಣಕ್ಕೆ ದುಂದುವೆಚ್ಚ ಮಾಡಿರುವುದಾಗಿ ಪ್ರತಿಪಕ್ಷ ನಾಯಕರು ಆರೋಪಿಸಿದ್ದಾರೆ. ನಾನು 2023 ರಿಂದ ಈವರೆಗೂ ಮಾಡಿರುವ ಖರ್ಚು 12 ಕೋಟಿ ರೂ. ಉಳಿದ 2 ವರ್ಷಗಳಲ್ಲಿ ತಲಾ ₹21 ಕೋಟಿ ಮಾಡಿದ್ದೇನೆ. ➡ಪುಟ 9

ಉಪ ಸಮರ ಹಿನ್ನೆಲೆ ವಿಶೇಷ ಸಂಪುಟ ಸಭೆ ಮುಂದೂಡಿಕೆ

ಪರಿಶಿಷ್ಟರ ಒಳ ಮೀಸಲು ಸದ್ಯಕ್ಕಿಲ್ಲ

• **ಬೆಂಗಳೂರು:** ರಾಜ್ಯದಲ್ಲಿ ಅತ್ಯಂತ ಸೂಕ್ಷ್ಮ ವಿಚಾರವಾಗಿರುವ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಕಲ್ಪಿಸುವ ಕುರಿತು ಚರ್ಚಿಸಲು ಕರೆಯಲಾಗಿದ್ದ ವಿಶೇಷ ಸಚಿವ ಸಂಪುಟ ಸಭೆಯನ್ನು ರಾಜ್ಯ ಸರ್ಕಾರವು ದಿಢೀರ್ ಮುಂದೂಡಿದೆ. ಶುಕ್ರವಾರ (ಮಾ.27) ಮಧ್ಯಾಹ್ನ 12 ಗಂಟೆಗೆ ನಿಗದಿಯಾಗಿದ್ದ ಮಹತ್ವದ ಸಚಿವ ಸಂಪುಟದ ವಿಶೇಷ ಸಭೆಯು, ರಾಜ್ಯದ 2 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ನೀತಿ ಸಂಹಿತೆಯ ಕಾರಣಕ್ಕೆ ಮುಂದೂಡಿದೆ.



ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆ ಮಾದರಿ ನೀತಿ ಸಂಹಿತೆ ಅನ್ವಯದ ಕುರಿತು ಸಂಪುಟಕ್ಕೆ ಮಾಹಿತಿ ಕೊಡಲಾಯಿತು. ➡ಪುಟ 9

ವಿಧೇಯಕಗಳಿಗೆ ಘಟನೋತ್ತರ ಅನುಮೋದನೆ
ವಿಧಾನ ಮಂಡಲದಲ್ಲಿ ಮಂಡನೆಯಾಗಿ ಅಂಗೀಕೃತಗೊಂಡಿರುವ ಮೂರು ವಿಧೇಯಕಗಳಿಗೆ ಸಚಿವ ಸಂಪುಟ ಸಭೆಯು ಘಟನೋತ್ತರ ಅನುಮೋದನೆ ನೀಡಿದೆ. ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ, 2026 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2026 ಹಾಗೂ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2026ಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಅಧಿವೇಶನದಲ್ಲೇ ಪಕ್ಷಾತೀತವಾಗಿ ಸದಸ್ಯರ ಮನವಿ

ಟಿಕೆಟ್‌ಗಾಗಿ ಶಾಸಕರ ಬೇಡಿಕೆ

ನಾಳೆಯಿಂದ ಐಪಿಎಲ್ ಪಂದ್ಯಗಳು ಆರಂಭ

• **ಬೆಂಗಳೂರು:** 2026ರ ಅತ್ಯಂತ್ರಿಯ ಐಪಿಎಲ್ ಪಂದ್ಯಗಳು ಶನಿವಾರದಿಂದ ಆರಂಭವಾಗಲಿವೆ. ಮೊದಲ ಪಂದ್ಯ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಇದರ ನಡುವೆಯೇ ಸದನದಲ್ಲೂ ಐಪಿಎಲ್ ಟಿಕೆಟ್ ಹವಾ ಜೋರಾಗಿದ್ದು ಟಿಕೆಟ್‌ಗಾಗಿ ಬಿಜೆಪಿ ಶಾಸಕರು, ಕಾಂಗ್ರೆಸ್ ಶಾಸಕರು ಪಕ್ಷಾತೀತವಾಗಿ ಬೇಡಿಕೆ ಇಟ್ಟಿದ್ದಾರೆ. ಕೊನೆಗೆ ಸ್ಪೀಕರ್ ಪ್ರತಿಯೊಬ್ಬ ಶಾಸಕರಿಗೂ 4 ಟಿಕೆಟ್ ವ್ಯವಸ್ಥೆ ಮಾಡಿಸಲು ಸರ್ಕಾರಕ್ಕೆ ಸೂಚಿಸಿದರು.

ಈ ಬಗ್ಗೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ನಾವು ಒಂದು ಟಿಕೆಟ್‌ಗಾಗಿ ಅಂಗಲಾಚಬೇಕು. ನನ್ನ ಹೆಸರಲ್ಲೇ ಟಿಕೆಟ್ ಕಳಿಸುತ್ತಾರೆ. ಅದರಲ್ಲಿ ನನ್ನ ಹೆಂಡತಿಯನ್ನೂ ಕಳುಹಿಸಲು ಆಗಲ್ಲ, ಮಗನನ್ನು ಕಳುಹಿಸಲೂ ಆಗಲ್ಲ ಎಂದರು. ಅಲ್ಲದೇ, ಕ್ರಿಕೆಟ್‌ನವರಿಗೆ ದುಡ್ಡಿನ ಕೊರತೇನಾ? ➡ಪುಟ 9

ಅಧ್ಯಾಪಕನಿಗೆ ಧರ್ಮದೇಟು

ವೈದ್ಯ ವಿದ್ಯಾರ್ಥಿನಿಗೆ ಪ್ರಪೋಸ್ ಮಾಡಿದ ಅಬ್ದುಲ್ ಬಂಧನ



• **ನೆಲಮಂಗಲ:** ಗೃಹ ಸಚಿವ ಡಾ.ಪರಮೇಶ್ವರ್ ಒಡೆತನದ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನಲ್ಲಿ ಬುಧವಾರ ಮಧ್ಯಾಹ್ನ ಹೈಡ್ರಾಮಾ ನಡೆದಿದೆ. ತರಗತಿಯಲ್ಲೇ ವೈದ್ಯ ವಿದ್ಯಾರ್ಥಿನಿಯೊಬ್ಬಳಿಗೆ ಚಾಕಲೇಟ್ ನೀಡಿ ಪ್ರಪೋಸ್ ಮಾಡಲು ಯತ್ನಿಸಿದ ಉಪನ್ಯಾಸಕನಿಗೆ ವಿದ್ಯಾರ್ಥಿಗಳು ಹಿಗ್ಗಾಮುಗ್ಗ ಥಳಿಸಿದ್ದಾರೆ. ➡ಪುಟ 9

ಕಿರುಸುದ್ದಿ

ವಿವಿಧ ಕಾರ್ಯಕ್ರಮ ಇಂದು

•ಹುಬ್ಬಳ್ಳಿ: ಇಲ್ಲಿಯ ಜೆಸಿ ಕಲಾ ಬಳಗ ಹುಬ್ಬಳ್ಳಿ, ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಮಾ. 27 ಹಾಗೂ 30 ರಂದು ಹಮ್ಮಿಕೊಳ್ಳಲಾಗಿದೆ ಎಂದು ಕಲಾವಿದ ಗವಿಗೆಯ್ಯ ಹಿರೇಮಠ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.27 ರಂದು ವಿಶ್ವ ರಂಗ ಭೂಮಿ ದಿನಾಚರಣೆ ಸಮಾರಂಭ ಸಂಜೆ 6 ಗಂಟೆಗೆ ನಡೆಯಲಿದೆ. ಲಿಂಗರಾಜ ನಗರದ ಸಂಸ್ಕೃತಿಕ ಸಮುದಾಯ ಭವನದ ಅಧ್ಯಕ್ಷ ಡಾ. ಜಿ.ಬಿ. ಕಲಕೋಟಿ ಸಮಾರಂಭಕ್ಕೆ ಚಾಲನೆ ನೀಡುವರು. ಕಿಮ್ಸ್ ಆಸ್ಪತ್ರೆ ನಿರ್ದೇಶಕ ಎಂ.ಜಿ. ಹಿರೇಮಠ ಅಧ್ಯಕ್ಷತೆ ವಹಿಸುವರು. ರಂಗ ಉಪನ್ಯಾಸ ನಿವೃತ್ತ ಪ್ರಾಂಶುಪಾಲರಾದ ಡಾ. ಭಾರತಿ ಹಿರೇಮಠ, ರಂಗ ಗೌರವ ನಟರಾಜ ಕಲಾ ಬಳಗ ಅಧ್ಯಕ್ಷ ಸಿ.ಎಸ್. ಕಾಳೆ ಅವರಿಗೆ ಸಲ್ಲಿಸಲಾಗುವುದು. ಜಾನಪದ ಹಾಡುಗಳ ಕಲಿಕಾ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನಿವೃತ್ತ ಪ್ರಾಂಶುಪಾಲ ಸಿ.ಆರ್. ಹಿರೇಮಠ ವಿತರಿಸುವರು. ಮುಖ್ಯ ಅತಿಥಿಯಾಗಿ ಪ್ರೆಂಡ್ಸ್ ಕ್ಲಬ್ ಅಧ್ಯಕ್ಷ ಡಾ.ಎಂ.ಜಿ. ಸಜ್ಜನರ, ಲತಾರಾಣಿ ಉಮರಾಣಿ ಭಾಗವಹಿಸುವರು ಎಂದರು. ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು ಎಂಬ ನಾಟಕ ಪ್ರದರ್ಶನ ಮಾ. 30 ರಂದು ಸಂಜೆ 6 ಗಂಟೆಗೆ ದೇಶಪಾಂಡೆ ನಗರ ಸವಾಯಿ ಗಂಧರ್ವ ಭವನದಲ್ಲಿ ನಡೆಯಲಿದೆ. ಡಿಸಿಪಿ ರವೀಶ ಸಿ.ಆರ್. ಚಾಲನೆ ನೀಡಲಿದ್ದಾರೆ ಎಂದರು. ಜಾನಪದ ಕಲಾವಿದ ಡಾ. ರಾಮು ಮೂಲಗಿ ಇದ್ದರು.

ಇಂದು ಪಾಲಕಿ ಮೆರವಣಿಗೆ

•ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮೀಜಿ ಮಠದಲ್ಲಿ, ಸಿದ್ಧಾರೂಢ ಸ್ವಾಮೀಜಿ ಅವರ 191ನೇ ಜನ್ಮೋತ್ಸವ ಅಂಗವಾಗಿ ಮಾ.27ರಂದು ಬೆಳಗ್ಗೆ 12 ಗಂಟೆಗೆ ಶ್ರೀಗಳ ಪಾಲಕಿಯು ಮೆರವಣಿಗೆ ನಡೆಯಲಿದೆ. ವಾದ್ಯ ಮೇಳಗಳೊಂದಿಗೆ ನಗರದಲ್ಲಿ ಸಂಚರಿಸಿ ಸಂಜೆ 5 ಗಂಟೆಗೆ ಆರತಿ ಹಾಗೂ ಕುಂಭ ಹೊತ್ತ ಮಹಿಳೆಯರು ಸ್ವಾಗತಿಸಿಕೊಂಡು ಶ್ರೀಮಠಕ್ಕೆ ತಲುಪುವರು. ಬಳಿಕ ಶ್ರೀಗಳ ತೊಟ್ಟಿಲೋತ್ಸವ ನಡೆಯಲಿದೆ. ರಾತ್ರಿ 10 ಗಂಟೆಗೆ ಸಿದ್ಧಾರೂಢ ಮಹಾತ್ಮೆ ಎಂಬ ಆಧ್ಯಾತ್ಮಿಕ ನಾಟಕವನ್ನು ಶ್ರೀಮಠದ ಪಾಠ ಶಾಲೆ ವಿದ್ಯಾರ್ಥಿಗಳಿಂದ ನೆರವೇರುವುದು ಎಂದು ಶ್ರೀಮಠ ಪ್ರಕಟಣೆಗೆ ತಿಳಿಸಿದೆ.

ಉಸ್ತುವಾರಿ ನೇಮಕ

•ಕುಂದಗೋಳ: ಕೆಪಿಸಿಸಿ ಒಬಿಸಿ ವಿಭಾಗದ ರಾಜ್ಯ ಕಾರ್ಯದರ್ಶಿ ತಾಲೂಕಿನ ಸಂಶಿ ಗ್ರಾಮದ ಹನುಮಂತಪ್ಪ ಲಕ್ಷ್ಮೇಶ್ವರ ಅವರನ್ನು ಏ. 9ರಂದು ನಡೆಯುವ ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯ ಉಸ್ತುವಾರಿಯನ್ನಾಗಿ ಕೆಪಿಸಿಸಿ ಒಬಿಸಿ ವಿಭಾಗದ ರಾಜ್ಯ ಅಧ್ಯಕ್ಷ ಹಾಗೂ ಶಿಕ್ಷಣ ಸಚಿವ ಎಸ್ ಮಧು ಬಂಗಾರಪ್ಪ ಅವರು ನಿಯೋಜನೆ ಮಾಡಿ ಆದೇಶ ಹೊರಡಿಸಿದ್ದಾರೆ.



ಇಂದು ಅವ್ವ ಪ್ರಶಸ್ತಿ ಪ್ರದಾನ

•ಧಾರವಾಡ: ದೇವರಹುಬ್ಬಳ್ಳಿಯ ಅವ್ವ ಸಾಂಸ್ಕೃತಿಕ ಹಾಗೂ ಗ್ರಾಮಾಭಿವೃದ್ಧಿ ಸಂಸ್ಥೆಯು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ, ವಿಶ್ವ ರಂಗಭೂಮಿ ದಿನಾಚರಣೆ ಪ್ರಯುಕ್ತ ಅವ್ವ ಪ್ರಶಸ್ತಿ ಪ್ರದಾನ, ನಾಟಕ ಪ್ರದರ್ಶನ ಹಾಗೂ ವೈವಿಧ್ಯಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾ.27 ರಂದು ಬೆಳಗ್ಗೆ 11 ಗಂಟೆಗೆ ನಗರದ ಚಟಸಿ ಸಭಾಭವನದಲ್ಲಿ ಆಯೋಜಿಸಲಾಗಿದೆ.

ಕವಿವಿಯ ನಿವೃತ್ತ ಪ್ರಾಧ್ಯಾಪಕಿ ಡಾ.ಪ್ರಭಾ ನೀರಲಗಿ ಹಾಗೂ ರಂಗ ನಿರ್ದೇಶಕಿ ವಿಶ್ವೇಶ್ವರಿ ಹಿರೇಮಠ ಅವರಿಗೆ ಅವ್ವ ಪ್ರಶಸ್ತಿ ಪ್ರದಾನ ನೆರವೇರಲಿದ್ದು, ಕೃಷಿ ಇಲಾಖೆಯ ಕೃಷಿ ಕಲಾ ತಂಡದಿಂದ ಸ.ಹಿ.ಪ್ರಾ.ಶಾಲೆ-1990 ನಾಟಕ ಪ್ರದರ್ಶನಗೊಳ್ಳಲಿದೆ.

ವ್ಯಕ್ತಿ ಮೇಲೆ ಬೀದಿನಾಯಿ ದಾಳಿ

•ನವಲಗುಂದ: ಪಟ್ಟಣದ ಬಸ್ ನಿಲ್ದಾಣ ಮುಂದೆ ವಾಕಿಂಗ್ ತೆರಳುತ್ತಿದ್ದ ವ್ಯಕ್ತಿಗೆ ಬೀದಿನಾಯಿಗಳು ದಾಳಿ ನಡೆಸಿ ಕಚ್ಚಿ ಗಾಯಗೊಳಿಸಿದ ಘಟನೆ ತಾಲೂಕಿನಲ್ಲಿ ನಡೆದಿದೆ. ಬಸನಗೌಡ ಪಾಟೀಲ ಎಂಬುವವರು ಬೀದಿ ನಾಯಿ ಕಡಿತಕ್ಕೊಳಗಾಗಿದ್ದು, ಅವರನ್ನು ಸಾರ್ವಜನಿಕರು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಬೆಳಗಿನ ಸಮಯ ವಾಯುವಿಹಾರಕ್ಕೆ ಹೋಗುವುದಕ್ಕೂ ಸಾಧ್ಯವಾಗುತ್ತಿಲ್ಲ, ಜನರು ಆವರ ದಾರಿಗೆ ಅವರು ಹೋಗುತ್ತಿದ್ದರೂ ಬೀದಿ ನಾಯಿಗಳು ಏಕಾಏಕಿ ದಾಳಿ ನಡೆಸಲು ಆರಂಭಿಸುತ್ತವೆ. ಬೀದಿನಾಯಿಗಳ ನಿಯಂತ್ರಣಕ್ಕಾಗಿ ಅಧಿಕಾರಿಗಳು, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.



ಶಾಂತಮ್ಮ ಗಾಂಜಿಯವರ ನಿಧನ

•ಧಾರವಾಡ: ತಾಲೂಕಿನ ರಾಮಾಪೂರದ ಗ್ರಾಮದ ಶತಾಯುಷಿ ಶಾಂತಮ್ಮ ಮಡಿವಾಳಪ್ಪ ಗಾಂಜಿಯವರ (101) ಬುಧವಾರ ನಿಧನ ಹೊಂದಿದರು.

ಅವರಿಗೆ ಇಬ್ಬರು ಪುತ್ರರು, ಏಳು ಪುತ್ರಿಯರು ಹಾಗೂ ಅಪಾರ ಬಳಗವಿದೆ.





ಧಾರವಾಡ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ 2025-26ನೇ ಸಾಲಿನ ರಾಜ್ಯ ಮಟ್ಟದ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿಗೆ ಭಾಜನವಾದ ಧಾರವಾಡ ಜಿಲ್ಲೆಯ ಕಟ್ಟೆನೂರು ಗ್ರಾಮದ ಕಾಮಧೇನು ಸಂಜೀವಿನಿ ಮಹಿಳಾ ಸ್ವ-ಸಹಾಯ ಸಂಘದ ಪ್ರತಿನಿಧಿ ರಾಜೇಶ್ವರಿ ಪವಾರ, ಇತರರನ್ನು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸನ್ಮಾನಿಸಿದರು.

ನೇರ ರೈಲು ಸೇವೆ ಆರಂಭಿಸಲು ಆಗ್ರಹ

•ಹುಬ್ಬಳ್ಳಿ: ಹುಬ್ಬಳ್ಳಿಯಿಂದ ಜೋಧಪುರ, ಬಾರ್ಮೇರ್, ಬಿಕಾನೇರ್ ಸೇರಿದಂತೆ ರಾಜಸ್ಥಾನದ ವಿವಿಧ ನಗರಗಳಿಗೆ ನೇರ ರೈಲು ಸೇವೆ ಆರಂಭಿಸುವಂತೆ ಆಗ್ರಹಿಸಿ ಬೆಳಗಾವಿಯ ಕರ್ನಾಟಕ ರಾಜಸ್ಥಾನಿ ಸಮಾಜದ ಪ್ರತಿನಿಧಿ ಮಂಡಳಿಯು ದಕ್ಷಿಣ ಪಶ್ಚಿಮ ರೈಲ್ವೆ ಸಲಹಾ ಸಮಿತಿ ಸದಸ್ಯ ಮಹೇಂದ್ರ ಸಿಂಘಿ ಅವರನ್ನು ಭೇಟಿ ಮಾಡಿ ರೈಲ್ವೆ ಸಂಬಂಧಿತ ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು.

ಪ್ರತಿನಿಧಿ ಮಂಡಳಿಯು ಹುಬ್ಬಳ್ಳಿ-ಜೋಧಪುರ ಮಾರ್ಗದಲ್ಲಿ ಕನಿಷ್ಠ ಮೂರು ತಿಂಗಳು ಹಬ್ಬ ಹಾಗೂ ಬೇಸಿಗೆ ವಿಶೇಷ ರೈಲುಗಳನ್ನು ಓಡಿಸಲು ಅಥವಾ ಈ ಮಾರ್ಗದಲ್ಲಿ ನಿಯಮಿತ ರೈಲು ಸೇವೆಯನ್ನು ಆರಂಭಿಸಲು ಒತ್ತಾಯಿಸಲಾಗಿದೆ. ಈಗಾಗಲೇ ಬೆಂಗಳೂರು ಮೂಲದ ರೈಲುಗಳಲ್ಲಿ ಹೆಚ್ಚು ಗದ್ದಲ ಮತ್ತು ಪ್ರಯಾಣಿಕರ ದಟ್ಟಣೆ ಇರುವುದರಿಂದ ರಾಜಸ್ಥಾನಕ್ಕೆ ಪ್ರಯಾಣಿಸುವವರಿಗೆ ತೊಂದರೆ ಉಂಟಾಗುತ್ತಿದೆ. ಸಮಾಜದ ಸದಸ್ಯರು ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಕೊಪ್ಪಳ, ಬಾಗಲಕೋಟೆ ಸೇರಿದಂತೆ ಹಲವು ಜಿಲ್ಲೆಗಳಿಂದ ರಾಜಸ್ಥಾನಕ್ಕೆ ಪ್ರಯಾಣಿಸುವವರ ಸಂಖ್ಯೆ ಹೆಚ್ಚಿನದಾಗಿದೆ. ಹೀಗಾಗಿ ಹುಬ್ಬಳ್ಳಿಯಿಂದ ನೇರ ರೈಲು ಸೇವೆ ಆರಂಭಿಸುವುದು ಕಾಲದ ಅಗತ್ಯವಾಗಿದೆ ಎಂದರು. ವಿಕ್ರಂ ರಾಜಪುರೋಹಿತ್ ಧಾಂಧ್ಲಾ, ಹೇಮರಾಜ್ ಸಾಧು, ಭಾನಸಿಂಗ್ ಭಾಗ್ಲಿ, ಸರದಾರ್ ಸಿಂಗ್ ಸಾಕರ್ನಾ, ರಾಮೇಶ್ವರ ಭಾಟಿ, ಮಹೇಂದ್ರ ಭಾಟಿ, ಸಂತೋಷ್ ಶರ್ಮಾ, ಸುಜಾರಾಮ್ ಚೌಧರಿ, ಸುರೇಶ್ ಜೈನ್, ವಿಕ್ರಂ ಜೈನ್, ಚಂದನ್ ಪುರೋಹಿತ್ ಇದ್ದರು.



ಹುಬ್ಬಳ್ಳಿ: ಹುಬ್ಬಳ್ಳಿಯಿಂದ ಜೋಧಪುರ, ಬಾರ್ಮೇರ್, ಬಿಕಾನೇರ್ ಸೇರಿದಂತೆ ರಾಜಸ್ಥಾನದ ವಿವಿಧ ನಗರಗಳಿಗೆ ನೇರ ರೈಲು ಸೇವೆ ಆರಂಭಿಸುವಂತೆ ಆಗ್ರಹಿಸಿ ಬೆಳಗಾವಿಯ ಕರ್ನಾಟಕ ರಾಜಸ್ಥಾನಿ ಸಮಾಜದ ಪ್ರತಿನಿಧಿ ಮಂಡಳಿಯು ದಕ್ಷಿಣ ಪಶ್ಚಿಮ ರೈಲ್ವೆ ಸಲಹಾ ಸಮಿತಿ ಸದಸ್ಯ ಮಹೇಂದ್ರ ಸಿಂಘಿ ಅವರನ್ನು ಭೇಟಿ ಮಾಡಿ ರೈಲ್ವೆ ಸಂಬಂಧಿತ ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು.

ರಾಷ್ಟ್ರೀಯ ವಿಚಾರ ಸಂಕಿರಣ | ಕುಲಪತಿ ಪ್ರೊ. ಎ.ಎಂ.ಖಾನ್ ಅಭಿಮತ

ಗುರುಕುಲ ಮಾದರಿ ಶಿಕ್ಷಣ ಅಗತ್ಯ

•ಧಾರವಾಡ: ಪ್ರಾಚೀನ ಗುರುಕುಲ ಪದ್ಧತಿಯಂತೆ ಪ್ರಸ್ತುತ ಆಧುನಿಕತೆಯ ಸ್ಪರ್ಶದ ಜೊತೆಗೆ ಶಾಲೆ, ಕಾಲೇಜುಗಳು ಗುರುಕುಲ ಮಾದರಿಯಲ್ಲಿ ಪರಿವರ್ತನೆ ಆಗುತ್ತಿವೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎ.ಎಂ.ಖಾನ್ ಅಭಿಪ್ರಾಯಪಟ್ಟರು.

ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ಅಧ್ಯಯನ ವಿಭಾಗ, ಪಿ.ಎಂ. ಉಷಾ ಯೋಜನೆ ಸಹಯೋಗದಲ್ಲಿ ನಗರದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ನಡೆದ ಭಾರತೀಯ ಜ್ಞಾನ ಪರಂಪರೆ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಪ್ರಾಚೀನ ಕಾಲದ ಸಂಸ್ಕೃತಿಗಳು ಆಧುನಿಕ ಯುಗದಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಮುಂದುವರಿಯುತ್ತಿವೆ. ನಮ್ಮ ಜ್ಞಾನವನ್ನು ಹಂಚುವ ಪ್ರಕ್ರಿಯೆ ಮುನ್ನಡೆಯಬೇಕು. ಪ್ರಾಚೀನ ವೇದಗಳು, ಶಾಸ್ತ್ರಗಳು, ಕಾವ್ಯಗಳು ಯುವಜನತೆಗೆ ಪರಿಚಯಿಸಬೇಕು ಎಂದರು.



ಬೆಂಗಳೂರಿನ ಜೈನ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಪ್ರಾಧ್ಯಾಪಕಿ ಡಾ. ರಜನಿ ಜಯರಾಮ ಮಾತನಾಡಿ, ಕೋವಿಡ್ ಸಮಯದಲ್ಲಿ ಭಾರತೀಯ ಆಯುರ್ವೇದ ಪರಂಪರೆಯ ಔಷಧಿಗಳನ್ನು ಹೆಚ್ಚು ಬಳಕೆ ಮಾಡಿರುವುದಾಗಿ ತಿಳಿಸಿದರು. ಆಯುರ್ವೇದ ಔಷಧಿಗಳು ಹೆಚ್ಚು ಬಳಸುವುದು ಭಾರತದ ಪಾರಂಪರಿಕ ವೈದ್ಯ ಜ್ಞಾನ ವಿಜ್ಞಾನವೇ ಆಗಿದೆ. ಭಾರತೀಯ ಪರಂಪರೆಯನ್ನು ಬಿಂಬಿಸುವಲ್ಲಿ, ದೃಶ್ಯ ನಾಟಕಗಳು ಸಮಾಜದ ಪ್ರತಿಬಿಂಬವಾಗಿದ್ದವು. ಇವನ್ನು ಮುಂದುವರೆಸುವ ಸಲಹೆ ನೀಡಿದರು.

» ವಿಚಾರ ಸಂಕಿರಣದ ತಾಂತ್ರಿಕ ಗೋಷ್ಠಿಯಲ್ಲಿ ಭಾರತೀಯ ಜ್ಞಾನ ಪದ್ಧತಿ ಕುರಿತು ಸಂಸ್ಕೃತ ಪಂಡಿತರು, ಪ್ರಾಧ್ಯಾಪಕರು, ಸಂಶೋಧಕರು ಪ್ರಬಂಧ ಮಂಡಿಸಿದರು

ಕಲಾ ನಿಕಾಯದ ಡೀನ್ ಡಾ. ಮೃತ್ಯುಂಜಯ ಅಗಡಿ ಅಧ್ಯಕ್ಷತೆ ವಹಿಸಿದ್ದರು. ಸಿಂಡಿಕೇಟ್ ಸದಸ್ಯ ಶ್ಯಾಮ ಮಲ್ಲನಗೌಡರ, ಪ್ರೊ. ಆರ್.ಎಫ್ .ಭಜಂತ್ರಿ, ಡಾ. ಪದ್ಮಾವತಿ ಸಿಂಗಾರಿ, ಡಾ.ರಜನಿ.ಎಸ್, ಡಾ.ಪ್ರಮೋದ್ ಚಾಂದಿ ಇತರರಿದ್ದರು.

ಪ್ರತ್ಯೇಕ ಪಾಲಿಕೆಗೆ ಬಿಜೆಪಿ ವಿರೋಧ: ಪಾಟೀಲ

•ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಗೆ ಜಿಲ್ಲೆಯ ಬಿಜೆಪಿ ನಾಯಕರು ವಿರೋಧಿಸುತ್ತಿದ್ದಾರೆ ಎಂದು ಹೋರಾಟ ವೇದಿಕೆ ಅಧ್ಯಕ್ಷ ಮನೋಜ ಪಾಟೀಲ ಆರೋಪ ಮಾಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರತ್ಯೇಕ ಪಾಲಿಕೆಯ ರಚನೆಗೆ ಕಳೆದ ಆರು ವರ್ಷಗಳಿಂದ ನಿರಂತರ ಹೋರಾಟ ಮಾಡಲಾಗುತ್ತಿದೆ. ಹೋರಾಟದ ಫಲವಾಗಿ ವಿಧಾನಸಭೆ ಒಪ್ಪಿಗೆ ಬಳಿಕ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿ ವರ್ಷವೇ ಗತಿಸಿದೆ ಎಂದರು. ಪ್ರತ್ಯೇಕ ಪಾಲಿಕೆಗೆ ರಾಜ್ಯಪಾಲರ ಅಂಕಿತ ಬಿದ್ದಿದೆಯೇ? ಇಲ್ಲವೋ? ಎಂಬುದರ ಬಗ್ಗೆ ರಾಜ್ಯ ಸರ್ಕಾರವೂ ತಿಳಿಸಲಿಲ್ಲ, ರಾಜ್ಯಭವನವೂ ಮಾಹಿತಿ ನೀಡಲಿಲ್ಲ, ಇದೀಗ ಏಕಾಏಕಿ ಧಾರವಾಡ ಪ್ರತ್ಯೇಕ ಪಾಲಿಕೆ ಬೇಡ ಎಂಬ ಅಪಸ್ವರ ಎದ್ದಿರುವ ಕುರಿತು ಬೇಸರಿಸಿದರು.

ರಾಜ್ಯ ಸರ್ಕಾರ ಪ್ರತ್ಯೇಕ ಪಾಲಿಕೆ ಘೋಷಿಸಿದ ಬಳಿಕ ಹಾವೇ ಮಾಡಿಸಿದ್ದಾಗ ಬ್ಯಾನರ್ ಹಾಕಿಸಿಕೊಂಡ ಬಿಜೆಪಿ ಶಾಸಕ ಅರವಿಂದ ಬೆಲ್ಲದ ಮತ್ತು ಸಚಿವ ಪ್ರಹ್ಲಾದ್ ಜೋಶಿ ಅವರು, ಇದೀಗ ವಿರೋಧ ಮಾಡುವುದು ಏಕೆ? ಎಂದು ಪ್ರಶ್ನೆ ಮಾಡಿದರು.

ಕೇಂದ್ರ ಸರ್ಕಾರದ ಅನುದಾನ ಬರುವುದಕ್ಕೂ, ಪ್ರತ್ಯೇಕ ಪಾಲಿಕೆಗೂ ಸಂಬಂಧ ಏನು? ಧಾರವಾಡ ಪ್ರತ್ಯೇಕ ಪಾಲಿಕೆ ಕುರಿತು ಬಿಜೆಪಿ ನಾಯಕರು ಇಚ್ಛಾಶಕ್ತಿಯೂ ತೋರುತ್ತಿಲ್ಲ, ಅಲ್ಲದೇ ವೇದಿಕೆಯೊಂದಿಗೆ ಸಕಾರಾತ್ಮಕವಾಗಿಯೂ ಸ್ಪಂದಿಸದ ಬಗ್ಗೆ ದೂರಿದರು. ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ವಿಷಯದಲ್ಲಿ ಮಧ್ಯಪ್ರವೇಶಿಸಿ ಧಾರವಾಡದ ನಾಗರಿಕರಿಗೆ ನ್ಯಾಯ ಒದಗಿಸುವಂತೆ ರಾಜ್ಯಪಾಲರಿಗೆ, ಪ್ರಧಾನಮಂತ್ರಿಗೆ ಹಾಗೂ ರಾಷ್ಟ್ರಪತಿಗಳಿಗೂ ಪತ್ರ ಬರೆಯುವುದಾಗಿ ಅಧ್ಯಕ್ಷ ಮನೋಜ ಪಾಟೀಲ ಮಾಹಿತಿ ನೀಡಿದರು. ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಅಂಕಿತ ಹಾಕಲು ಸಚಿವ ಪ್ರಹ್ಲಾದ್ ಜೋಶಿ ಹಾಗೂ ಶಾಸಕ ಅರವಿಂದ ಬೆಲ್ಲದ ರಾಜ್ಯಪಾಲರಿಗೆ ಪತ್ರ ಹಾಕಿದ್ದರೆ, ಮುಂಬರುವ ದಿನಗಳಲ್ಲಿ ಉಭಯ ನಾಯಕರ ಮನೆಗಳ ಮುಂಭಾಗ ಧರಣಿ ನಡೆಸುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆ ಉಪಾಧ್ಯಕ್ಷ ಡಾ. ಷಡಕ್ಷರಯ್ಯ, ಕಾರ್ಯದರ್ಶಿ ಡಾ. ಎಂ.ಬಿ.ಕಟ್ಟಿ ಇದ್ದರು.



ವದಂತಿಗಳಿಗೆ ಕಿವಿಗೊಡದಿರಿ: ಟೆಂಗಿನಕಾಯಿ



•ಹುಬ್ಬಳ್ಳಿ: ಧಾರವಾಡ ಜಿಲ್ಲೆಯಲ್ಲಿ ಪೆಟ್ರೋಲ್ ಸೇರಿದಂತೆ ಗ್ಯಾಸ್ ಅಡುಗೆ ಅನಿಲ ವಿಚಾರದಲ್ಲಿ ಕೇಂದ್ರ ಸರ್ಕಾರವು ನಿಗಾ ವಹಿಸಿದ್ದು, ಯಾವುದೇ ಕೊರತೆಯುಲ್ಲ, ಜಾಲತಾಣಗಳಲ್ಲಿ ಕಿಡಿಗೇಡಿಗಳು ಸುಳ್ಳು ಸುದ್ದಿಯನ್ನು ಹಬ್ಬಿಸುತ್ತಿದ್ದು ಇಂತಹ ವದಂತಿಗಳಿಗೆ ಯಾರು ಕಿವಿಗೊಡಬಾರದು ಎಂದು ಶಾಸಕ ಮಹೇಶ ಟೆಂಗಿನಕಾಯಿ ಅವರು ನಗರ ಜನತೆಯಲ್ಲಿ ಮನವಿ ಮಾಡಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ನಾನು ಈಗಾಗಲೇ ಹಲವಾರು ಸುತ್ತು ಏಜೆನ್ಸಿಗಳ ಮಾಲೀಕರ ಜೊತೆಗೆ ಮಾತನಾಡಿ ನಿರಂತರ ಸಂಪರ್ಕದಲ್ಲಿದ್ದೇನೆ. ಯಾವ ಕೊರತೆ ಇಲ್ಲ, ಯಾರು ಆತಂಕ ಪಡುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಜನತೆ ಅನಗತ್ಯವಾಗಿ ಸ್ಟಾಕ್ ಸಂಗ್ರಹಿಸುವುದು ಬೇಡ. ನಿಮಗೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟೇ ಪೆಟ್ರೋಲ್ ಡೀಸೆಲ್ ಹಾಕಿಸಿಕೊಳ್ಳಿ, ಅನಾವಶ್ಯಕವಾಗಿ ಸಂಗ್ರಹ ಮಾಡಿ ಇಟ್ಟುಕೊಳ್ಳಬೇಡಿ ಎಂದು ವಿನಂತಿಸಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳು ಈ ಕುರಿತು ಸ್ಪಷ್ಟನೆಯನ್ನು ನೀಡಿದ್ದಾರೆ. ಜಿಲ್ಲೆಯಲ್ಲಿ ಪೆಟ್ರೋಲ್ ಅಡುಗೆ ಅನಿಲ ಕೊರತೆ ಇಲ್ಲ ಎಂದು ತಿಳಿಸಿದ್ದಾರೆ.



ಕಲಘಟಗಿ: ತಾಲೂಕಿನ ಜೋಡಳ್ಳಿ ಕ್ರಾಸ್‌ನಿಂದ ತಾರೀಹಾಳ ಗ್ರಾಮಕ್ಕೆ ಹೋಗುವ ರಸ್ತೆ ಕಾಮಗಾರಿಯನ್ನು ಸಚಿವ ಸಂತೋಷ್ ಲಾಡ್ ಅವರ ಅನುದಾನದ ಅಡಿಯಲ್ಲಿ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಡಿಯಲ್ಲಿ 25 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿ ಮತ್ತು ಸಮಾಜ ಕಲ್ಯಾಣ ಇಲಾಖೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಕಾಲನಿಯಲ್ಲಿ ಸುಮಾರು 15 ಲಕ್ಷ ರೂ.ನ ಸಿಸಿ ರಸ್ತೆ ಕಾಮಗಾರಿಗಳ ಭೂಮಿಪೂಜೆ ಇತ್ತೀಚೆಗೆ ಜರುಗಿದವು.



ಕುಂದಗೋಳ: ಬಲಿದಾನ ದಿವಸದ ಅಂಗವಾಗಿ ಕ್ರಾಂತಿಕಾರಿ ಭಗತ್ ಸಿಂಗ್ ಯುವಸೇನೆ, ಕುಂದಗೋಳ ವತಿಯಿಂದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಲಾಯಿತು. ಪಟ್ಟಣದ ಶಿವಾಜಿನಗರ ಕಿಲ್ಲಾ ಓಣಿಯ ಶಂಭೋಲಿಂಗೇಶ್ವರ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಗತ್‌ಸಿಂಗ್ ಭಾವ ಚಿತ್ರಕ್ಕೆ ಸಲ್ಲಿಸಿ ನಂತರ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಹಾಗೂ ಪೆನ್‌ಗಳನ್ನು ವಿತರಿಸಲಾಯಿತು. ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸದಸ್ಯರು, ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಟ್ಟಡ ಕಾರ್ಮಿಕರಿಗೆ ಸುರಕ್ಷತಾ ಕಿಟ್

•ಅಳ್ನಾವರ: ಕಟ್ಟಡ ಮತ್ತು ಅಸಂಘಟಿತ ಕಾರ್ಮಿಕರ ಬದುಕಿಗೆ ಆಸರೆಯಾಗಬಲ್ಲ, ಅನೇಕ ಯೋಜನೆಗಳನ್ನು ಜಾರಿಗೆ ತರುವುದರಮೂಲಕ ಅವರನ್ನು ಮುಖ್ಯ ವಾಹಿನಿಗೆ ತರಲು ಕಾರ್ಮಿಕ ಸಚಿವ ಸಂತೋಷ ಲಾಡ ಅವರು ಇಲಾಖೆಯಲ್ಲಿ ಆವಿಷ್ಕಾರವನ್ನೇ ಮಾಡಿದ್ದಾರೆ ಎಂದು ಅಳ್ನಾವರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶಗೌಡ ಕಲಗೌಡರ ಹೇಳಿದರು.

ಅಳ್ನಾವರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಕಾರ್ಮಿಕರಿಗೆ ಸುರಕ್ಷಾ ಕಿಟ್ ವಿತರಿಸಿ ಮಾತನಾಡಿದರು. ಜಿಲ್ಲಾ ಕಾರ್ಮಿಕ ಅಧಿಕಾರಿ ಮಾರಿಕಾಂಬಾ ಮಾತನಾಡಿದರು. ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಆಪ್ತ ಕಾರ್ಯದರ್ಶಿ ಶ್ರೀಕಾಂತ ಗಾಯಕವಾಡ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿನಾಯಕ ಕುರುಬರ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ನಿಂಗಪ್ಪ ಬೆಣ್ಣಕರ, ಪೈರೋಜಖಾನ ಪಠಾಣ, ತಮೀಮ ತೇರಗಾಂವ, ಮಧು ಬಡಸ್ಕರ, ರಮೇಶ ಕುನ್ನೂರಕರ, ಪರಶುರಾಮ ಬೇಕನೇಕರ, ಸತ್ತಾರ ಬಾತಖಂಡೆ, ಕಲೀಲ ಸನದಿ, ಆಕಾಶ ಬನಹಟ್ಟಿ, ಕಾರ್ಮಿಕ ನಿರೀಕ್ಷಕರಾದ ಮೀನಾಕ್ಷಿ ಮತ್ತು ಅಶೋಕ, ಚನ್ನಪ್ಪ ಪಾಟೀಲ,ಮುಸ್ತಾಕ ತೇಗೂರ, ಬಳರಾಮ ಅಶೋಗಿ, ರೇಖಾ ಕಲಘಟಗಿ, ಪುಷ್ಪಾ ಅನಂತಪೂರ, ಪರಮೇಶ್ವರ ತೇಗೂರ ಇತರರಿದ್ದರು.





ಅಣ್ಣಿಗೇರಿ: ಸಮರ್ಥ ಬಾವು ಸಾಹೇಬ್ ಮಹಾರಾಜರ ಬ್ರಹ್ಮ ಶಾಲೆ ಅಣ್ಣಿಗೇರಿ ವತಿಯಿಂದ ಸಮರ್ಥ ಬಾವು ಸಾಹೇಬ್ ಮಹಾರಾಜರ ಸರ್ವಧರ್ಮ ಸಮನ್ವಯ ಆಧ್ಯಾತ್ಮಿಕ ಜ್ಞಾನ ಯಜ್ಞ ಸಪ್ತಾಹದ ಅಂಗವಾಗಿ ನಗರದ ರಾಜಬೀದಿಗಳಲ್ಲಿ ಶೋಭಾಯಾತ್ರೆ ಜರುಗಿತು.

ಕಡಲೆ ಖರೀದಿ ಕೇಂದ್ರಕ್ಕೆ ದಾಡಿಬಾವಿ ಭೇಟಿ



•ನವಲಗುಂದ: ತಾಲೂಕು ಮೊರಬ ಗ್ರಾಮದಲ್ಲಿ, ಪ್ರಾರಂಭವಾದ ಕಡಲೆ ಖರೀದಿ ಕೇಂದ್ರಕ್ಕೆ ಬಿಜೆಪಿ ಮುಖಂಡ ದೇವರಾಜ್ ಬಿ.ದಾಡಿಬಾವಿ ಭೇಟಿ ನೀಡಿದರು. ನಂತರ ಮಾತನಾಡಿದ ಅವರು, ಖರೀದಿ ಕೇಂದ್ರದಲ್ಲಿ ಖಾಲಿ ಚೀಲದ ಅಭಾವ ಕಂಡುಬರುತ್ತಿದ್ದು ಸರ್ಕಾರ ಕೂಡಲೇ ಎಲ್ಲ ಕಡಲೆ ಕೇಂದ್ರಗಳಿಗೆ ಖಾಲಿ ಚೀಲ ಪೂರೈಸಿ ರೈತರಿಗೆ ಅನುಕೂಲ ಕಲ್ಪಿಸಬೇಕು ಹಾಗೂ ಪ್ರಸ್ತುತ ಖರೀದಿ ಕೇಂದ್ರದ ಸ್ಥಿತಿಗತಿಗಳನ್ನು ಕುರಿತು ರೈತರೊಂದಿಗೆ ಚರ್ಚಿಸಿ ರೈತರು ಹಾವು ಬೆಳೆದ ಕಡಲೆ ಬೆಳೆ ಬೆಂಬಲ ಬೆಲೆಯಲ್ಲಿ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿ ಖರೀದಿ ಕೇಂದ್ರದ ಸದುಪಯೋಗ ಪಡೆದುಕೊಳ್ಳಲು ಹೇಳಿದರು.



ಧಾರವಾಡ: ಬುಧವಾರ ಸುರಿದ ಭೀಕರ ಗಾಳಿ-ಮಳೆಗೆ ಧಾರವಾಡ ಜರ್ಮನ್ ಆಸ್ಪತ್ರೆ, ಬಳಿ ಮತ್ತು ಅರಣ್ಯ ಇಲಾಖೆಯ ಕಚೇರಿ ಹತ್ತಿರ ವಿದ್ಯುತ್ ಕಂಬಗಳು ಹಾಗೂ ಮರಗಳು ಧರೆಗೆ ಉರುಳಿದೆ.

ಕುಸ್ತಿ ಪಂದ್ಯಾವಳಿಗೆ ಸ್ವಾಮೀಜಿ ಚಾಲನೆ



•ಉಪ್ಪಿನಬೆಟಗೇರಿ: ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಗುರುವಾರ ನಡೆದ ಲವಾಗಿನ ಉತ್ಸವದಲ್ಲಿ, ನಡೆದ ಕುಸ್ತಿ ಪಂದ್ಯಾವಳಿ ಕೊನೆಯ ದಿನದಂದು ಮೂರುಸಾವಿರ ವಿರೂಪಾಕ್ಷ ಸ್ವಾಮೀಜಿ ಚಾಲನೆ ನೀಡಿದರು.

ವಿವಿಧ ಜಿಲ್ಲೆಯಿಂದ ಆಗಮಿಸಿದ ಕುಸ್ತಿಯಲ್ಲಿ ವಿಜೇತರಾದ ಪೈಲ್ವಾನರಿಗೆ ಬಹುಮಾನ ನೀಡಿದರು. ಉಪ್ಪಿನಬೆಟಗೇರಿ ಪೈಲ್ವಾನ್ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಹುಟಗಿ, ಉಪಾಧ್ಯಕ್ಷ ಮಡಿವಾಳಪ್ಪ ರೇಷ್ಮಿ ಹಾಗೂ ವಿರೂಪಾಕ್ಷಪ್ಪ ದೊಡವಾಡ, ಗಫಾರ ಮುಲ್ಲಾ, ವಿರೂಪಾಕ್ಷಪ್ಪ ಯಮೋಜಿ, ಹಸನಸಾಬ ಜೋರಮ್ಮನವರ, ಅಮ್ಜದ ಹಂಚಿನಮನಿ, ಅದಮಸಾಬ ಸೈಯ್ಯದ, ಅಬ್ದುಲ್ ರಹಿಮಾನ ಮುಜಾವಾರ, ಬಸಪ್ಪ ಯಮೋಜಿ, ಬಿಕ್ಕೆ ಮುಲ್ಲಾ, ಮಲ್ಲಪ್ಪ ಗುದ್ದದಮನಿ, ಶಿವಪ್ಪ ವಿಜಾಪೂರ, ಅಬ್ದುಲ್ ಮಜೀದ ಮುಲ್ಲಾ , ಬಾಬಾಜಾನ ಮಂಡ್ಯಾಳ, ಬಾಬುಲಾಲ ಜೋರಮ್ಮನವರ, ಬಸಪ್ಪ ಹಡಮನಿ, ಮಲ್ಲಯ್ಯ ಮಠಪತಿ, ಶಿವಾನಂದ ಹುಕ್ಕಿ, ದರೆಪ್ಪ ಬೊಬ್ಬಿ , ಸುರೇಶಬಾಬು ತಳವಾರ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಪೈಲ್ವಾನರು ಉಪಸ್ಥಿತರಿದ್ದರು.

ಹಿರೇಮಠದಲ್ಲಿ ಜಂಗಮ ವಟುಗಳಿಗೆ ದೀಕ್ಷೆ

•ಉಪ್ಪಿನಬೆಟಗೇರಿ: ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದಲ್ಲಿ, ಗುರುಶಾಂತಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ 16 ಜಂಗಮ ವಟುಗಳಿಗೆ ಶಾಸ್ತ್ರೋಕ್ತವಾಗಿ ದೀಕ್ಷೆ ನೀಡಲಾಯಿತು.

ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಹಿರಿಯ ಶ್ರೀಗಳಾದ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಕಿರಿಯ ಶ್ರೀಗಳಾದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಲಬುರ್ಗಿ ಜಿಲ್ಲೆ ಬೇಳಗುಂಪಾ ಬೃಹನ್ಮಠದ ಅಭಿನವ ಪರ್ವತೇಶ್ವರ ಶಿವಾಚಾರ್ಯ ಸ್ವಾಮೀಜಿ ವೀರಶೈವ ಧರ್ಮ ಸಿದ್ಧಾಂತ ಪರಂಪರೆಯಂತೆ ಜರುಗಿದ ಶಾಸ್ತ್ರೋಕ್ತ ಸಂಸ್ಕಾರಗಳ ನಂತರ ವಟುಗಳಿಗೆ ಇಷ್ಟಲಿಂಗ ಧಾರಣೆಮಾಡಿ ಮಂತ್ರೋಪದೇಶ ಬೋಧಿಸಿದರು.

ವೈದಿಕರುಗಳಾದ ಎಸ್.ಎಂ. ಪ್ರಶಾಂತ ರಾಜಗುರು, ಕುಮಾರಸ್ವಾಮಿ ಹಾಗೂ ಸೋಮಲಿಂಗಶಾಸ್ತ್ರಿಗುಡ್ಡದಮಠ ಅವರು ದೀಕ್ಷಾ ಕಾರ್ಯದ ಪೂಜಾ ಕೈಂಕರ್ಯಗಳನ್ನು ನಿರ್ವಹಿಸಿದರು. ಹಳೇಹುಬ್ಬಳ್ಳಿಯ ವೀರಶೈವ ಜಂಗಮ ಕ್ಷೇಮಾಭಿವೃದ್ಧಿ ಸಮಿತಿಯ ವತಿಯಿಂದ ಪದಾಧಿಕಾರಿಗಳಾದ ವೀರಯ್ಯಸ್ವಾಮಿ ಸಾಲಿಮಠ, ಚನ್ನಬಸಯ್ಯ ಹಿರೇಮಠ, ಪ್ರಕಾಶ ಕುಲಕರ್ಣಿ ಹಾಗೂ ಡಾ. ಫಕೀರಯ್ಯ ಬಡಿಗೇರಮಠ ಅವರು ಎಲ್ಲಾ ವಟುಗಳಿಗೆ ರೇಣುಕಾಚಾರ್ಯರ ಭಾವಚಿತ್ರ ಹಾಗೂ ಶಿವಪೂಜಾ ವಿಧಿ ಪುಸ್ತಕವನ್ನು ಶ್ರೀಗಳ ಮೂಲಕ ವಿತರಣೆ ಮಾಡಿದರು.



ಗೀತಾ ಚಿಕ್ಕಮಠಗೆ ಚನ್ನಮ್ಮ ಪ್ರಶಸ್ತಿ



•ಧಾರವಾಡ: ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆಯು ನೀಡುವ 2026ನೇ ಸಾಲಿನ ರಾಜ್ಯಮಟ್ಟದ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿಗೆ ಕಲಾವಿದೆ ಗೀತಾ ಚಿಕ್ಕಮಠ ಅವರು ಭಾಜನರಾಗಿದ್ದಾರೆ ಎಂದು ಕಲಾಸಂಗಮ ಅಧ್ಯಕ್ಷ ಡಾ. ಪ್ರಭು ಹಂಚಿನಾಳ ಮಾಹಿತಿ ನೀಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಚಿಕ್ಕ ವಯಸ್ಸಿನಿಂದ ಕಲೆ ಆರಾಧಕರಾದ ಗೀತಾ ಅವರು ರಂಗಭೂಮಿ, ಮಾಡಲಿಂಗ್, ಚಿತ್ರರಂಗದಲ್ಲೂ ತಮ್ಮದಾದ ಛಾಪು ಮೂಡಿಸಿದ್ದಾರೆ. ಅವರ ಸಾಧನೆಗೆ ಪ್ರಶಸ್ತಿ ಒಲಿದಿದೆ. ಸಮಾಜಮುಖಿ ಕೆಲಸದಲ್ಲೂ ತೊಡಗಿಕೊಂಡಿರುವ ಚಿಕ್ಕಮಠ ಅವರ ಕಾರ್ಯಕ್ಷಮತೆ ಇಂದಿನ ಯುವ ಮಹಿಳೆಯರಿಗೆ ಸ್ಫೂರ್ತಿ ಎಂದರು.

ಪ್ರಶಸ್ತಿ ಪುರಸ್ಕೃತೆ ಗೀತಾ ಚಿಕ್ಕಮಠ ಮಾತನಾಡಿ, ಚನ್ನಮ್ಮ ಪ್ರಶಸ್ತಿ ಬಂದಿರುವುದು ಜೀವನದ ಸಾರ್ಥಕ ಕ್ಷಣ. ಈ ಪ್ರಶಸ್ತಿಯು ಖುಷಿ ತರುವುದರ ಜೊತೆಗೆ ಜವಾಬ್ದಾರಿ ಹೆಚ್ಚಿಸಿದೆ. ಇನ್ನಷ್ಟು ಸಮಾಜಮುಖಿ ಕೆಲಸದಲ್ಲಿ ತೊಡಲು ಪ್ರೇರೇಪಿಸಿದ್ದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಲಾವಿದ ಬಸವರಾಜ ಮುರಗೋಡ, ಎನ್ ಎ.ದೇಸಾಯಿ ಇದ್ದರು.

ಅಹಿಂಸಾ ದಿನವನ್ನಾಗಿ ಆಚರಿಸಲು ಮನವಿ

•ಕುಂದಗೋಳ: ಭಗವಾನ್ ಮಹಾವೀರ ಜಯಂತಿ ದಿನವನ್ನು ತಾಲೂಕು ಮಟ್ಟದಲ್ಲಿ, ಅಹಿಂಸಾ ದಿನವನ್ನಾಗಿ ಆಚರಿಸಬೇಕು. ಆ ದಿನ ಮದ್ಯ ಮತ್ತು ಮಾಂಸ ಮಾರಾಟವನ್ನು ನಿಷೇಧಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಗುರುವಾರ ತಾಲೂಕಿನ ಗುಡೇನಕಟ್ಟಿ ಗ್ರಾಮದ ಪದ್ಮಾವತಿ ಮಹಿಳಾ ಮಂಡಳಿಯವರು ತಹಶೀಲ್ದಾರ್ ರಾಜು ಮಾವರಕರ ಅವರಿಗೆ ಮನವಿ ಸಲ್ಲಿಸಿದರು. ಭಗವಾನ್ ಮಹಾವೀರರು ಅಹಿಂಸೆಯ ತತ್ವವನ್ನು ಜಗತ್ತಿಗೆ ಸಾರಿದ ಮಹಾನ್ ತತ್ವಜ್ಞಾನಿಯಾಗಿದ್ದು, ಅವರ ಜಯಂತಿ ದಿನವನ್ನು ಸರ್ಕಾರದ ಮಾರ್ಗಸೂಚಿಯಂತೆ ಎಲ್ಲ ಸರ್ಕಾರಿ ಕಚೇರಿಗಳಲ್ಲಿಯೂ ಕಡ್ಡಾಯವಾಗಿ ಆಚರಿಸಬೇಕು. ಕೆಲವು ಕಚೇರಿಗಳಲ್ಲಿ ಮಹಾವೀರ ಜಯಂತಿಯನ್ನು ಸರಿಯಾಗಿ ಆಚರಿಸಲಾಗುತ್ತಿಲ್ಲ . ಮಹಾವೀರ ಜಯಂತಿ ದಿನವನ್ನು ಅಹಿಂಸಾ ದಿನವನ್ನಾಗಿ ಘೋಷಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಆ ದಿನ ಮದ್ಯ ಹಾಗೂ ಮಾಂಸ ಮಾರಾಟವನ್ನು ನಿಷೇಧಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ. ಸರಸ್ವತಿ ಮಲ್ಲಿಗವಾಡ, ಮಾಣಿಕ್ಯ ಚಿಲ್ಲೂರು, ಬಸವರಾಜ ಯೋಗಪ್ಪನವರ, ಅನಸೂಯ ಯೋಗಪ್ಪನವರ, ಗಿರಿಜವ್ವ ಮಲ್ಲಿಗವಾಡ, ಶಾರದಾ ಮಲ್ಲಿಗವಾಡ, ಗಂಗವ್ವ ಮಲ್ಲಿಗವಾಡ, ಕಸ್ತೂರವ್ವ ಮಲ್ಲಿಗವಾಡ, ಮಮತಾ ಯೋಗಪ್ಪನವರ, ಶಿಲ್ಪಾ ಮಲ್ಲಿಗವಾಡ, ಪ್ರಿಯಾಂಕ ಯೋಗಪ್ಪನವರ, ಸುಧಾ ಮಲ್ಲಿಗವಾಡ, ಮಂಜವ್ವ ಯೋಗಪ್ಪನವರ, ಲಕ್ಷ್ಮೀ ಯೋಗಪ್ಪನವರ, ರೇಖಾ ಮಲ್ಲಿಗವಾಡ, ಶಾಂತವ್ವ ಮಲ್ಲಿಗವಾಡ, ರತ್ನವ್ವ ಯೋಗಪ್ಪನವರ, ಸುಧಾ ಯೋಗಪ್ಪನವರ ಸೇರಿದಂತೆ ಜೈನ ಸಮಾಜದ ಅನೇಕ ಸದಸ್ಯರು ಉಪಸ್ಥಿತರಿದ್ದರು.



ಮನೆ ಮನೆಗೂ ಹಸುವಿನ ಹಾಲು ಪೂರೈಕೆ ಶ್ಲಾಘನೀಯ: ಡಾ.ವಿ.ಎಸ್.ವಿ.ಪ್ರಸಾದ

• **ಹುಬ್ಬಳ್ಳಿ:** ದೇಸಿ ಗೋವಿನ ಹಾಲಿನ ಕುರಿತು ಜಾಗೃತಿ ಮೂಡಿಸುತ್ತಿರುವ ಗೋ ಸೇವಾ ಗತಿವಿಧಿಯೂ ಮನೆ ಮನೆಗೂ ಭಾರತೀಯ ಹಸುವಿನ ಹಾಲು ಪೂರೈಕೆಗೆ ಕ್ರಮ ಕೈಗೊಂಡಿರುವುದು ಶ್ಲಾಘನೀಯ ಎಂದು ಉದ್ಯಮಿ ಡಾ.ವಿ.ಎಸ್.ವಿ.ಪ್ರಸಾದ ತಿಳಿಸಿದರು.

ಇಲ್ಲಿನ ಕೇಶ್ವಾಪುರದ ಮಧುರಾ ಕಾಲೋನಿಯಲ್ಲಿ ಗುರುವಾರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗೋ-ಸೇವಾ ಗತಿವಿಧಿ ಕರ್ನಾಟಕ ಉತ್ತರ ಪ್ರಾಂತ ಹುಬ್ಬಳ್ಳಿ ಮಹಾನಗರ ಘಟಕದಿಂದ ಹಮ್ಮಿಕೊಳ್ಳಲಾಗಿದ್ದ ಮನೆ ಮನೆಗೆ ಭಾರತೀಯ ಹಸುವಿನ ಹಾಲು ವಿತರಣಾ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು.

ಸದ್ಯ ಎಲ್ಲೆಡೆ ಕಲಬೆರಕೆ ಹಾಲು ಬಳಸಲಾಗುತ್ತಿದೆ. ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬರುತ್ತಿದ್ದು, ಸಾರ್ವಜನಿಕರು ಜಾಗೃತಿಗೊಳ್ಳಬೇಕಿದೆ. ಪ್ರತಿಯೊಬ್ಬರೂ ದೇಶಿ ಹಸುವಿನ ಹಾಲು ಬಳಸಲು ಮುಂದಾಗಬೇಕು ಎಂದರು.

ಗೋವಿನ ಹಾಲನ್ನು ಬಳಸಿ ಹಿಂದೆ ಋಷಿ ಮುನಿಗಳು ನೂರಾರು ವರ್ಷ ಆರೋಗ್ಯದಿಂದ ಬದುಕುತ್ತಿದ್ದರು. ಸದ್ಯ ಜರ್ಸಿ ಆಕಳು, ಪ್ಯಾಕೇಟ್ ಹಾಗೂ ಕಲಬೆರಿಕೆ ಹಾಲು ಬಳಸುವುದರಿಂದ ಮಕ್ಕಳಿಂದ ಹಿಡಿದು ವೃದ್ಧರ ವರೆಗೂ ಆರೋಗ್ಯ ಸಮಸ್ಯೆ ಎದುರಿಸುವಂತಾಗಿದೆ ಎಂದು ತಿಳಿಸಿದರು.



ಗೋ ಸಂಸ್ಕೃತಿಯ ಪ್ರತೀಕವಾಗಿದೆ. ಭಾರತೀಯ ಸಂಸ್ಕೃತಿ ಹಾಳು ಮಾಡಲು ಬ್ರಿಟಿಷರು ದೇಸಿ ಹಸುಗಳ ಬದಲಾಗಿ ಜರ್ಸಿ ಆಕಳುಗಳನ್ನು ಕೊಡುಗೆ ನೀಡಿದರು. ಆದರೆ ರೈತರು ಈಗ ಜರ್ಸಿ ಆಕಳು ಹೆಚ್ಚಿನ ಹಾಲು ನೀಡುತ್ತವೆ ಎಂದು ದೇಸಿ ಹಸು ಸಾಕುವುದನ್ನು ಕೈ ಬಿಟ್ಟಿರುವುದು ಬೇಸರ ಸಂಗತಿ ಎಂದರು.

ಸಾನ್ನಿಧ್ಯ ವಹಿಸಿದ್ದ ಅಮ್ಮಿನಬಾವಿ ಪಂಚಗ್ರಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯರು ಆಶೀರ್ವಚನ ನೀಡಿ, ಭಾರತದಲ್ಲಿ ಗೋವಿಗೆ ಮಾತೆಯ ಸ್ಥಾನ ನೀಡಲಾಗಿದೆ. ನಮ್ಮ ಸಂಸ್ಕೃತಿ ಆರಂಭವಾಗುವುದೇ ಗೋಮಾತೆಯಿಂದ. ಹಾಗಾಗಿ ಪ್ರತಿಯೊಬ್ಬರೂ ದೇಸಿ ಗೋವುಗಳ ಸಂರಕ್ಷಣೆಗೆ ಪಣ ತೊಡಬೇಕಿದೆ. ಮನೆ ಮನೆಗೆ ಭಾರತೀಯ ಹಸುವಿನ ಹಾಲು ಮಾರಾಟ ಕೇಂದ್ರ ಪ್ರಾರಂಭಿಸಿರುವುದು ಶ್ಲಾಘನೀಯ.

ಇದಕ್ಕಾಗಿ ಬೆಲೆ ನಿಗದಿಗೊಳಿಸಿರುವುದು ಗೋವುಗಳ ನಿರ್ವಹಣೆಗಾಗಿಯೇ ಹೊರತು ವ್ಯಾಪಾರದ ಉದ್ದೇಶವಲ್ಲ, ಪ್ರತಿಯೊಬ್ಬರೂ ದೇಸಿ ಗೋವಿನ ಪ್ರಯೋಜನಗಳ ಕುರಿತು ಅರಿವು ಹೊಂದುವ ಮೂಲಕ ಅವುಗಳ ರಕ್ಷಣೆಗೆ ಆದ್ಯತೆ ನೀಡುವಂತೆ ಕರೆ ನೀಡಿದರು.

ದತ್ತಾತ್ರೇಯ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಮಧುರಾ ಕಾಲೋನಿ ಅಧ್ಯಕ್ಷ ತೇಜಸ್ ಗೋಕಾಕ್, ಬಾಬುರಾವ್ ಘಂಟಸಾಲ, ಮುದಾರಾಂಜಿ ಚೌಧರಿ, ಜಗದೀಶಭಾಯಿ ಸುತಾರ, ಭರತ್ ಜೈನ್ ಇದ್ದರು.

> **ಮೊದಲ ಕೇಂದ್ರವಾಗಿ ಹುಬ್ಬಳ್ಳಿಯಲ್ಲಿ ಪ್ರಾರಂಭಿಸುತ್ತಿರುವುದು ಉತ್ತಮವಾದ ಕಾರ್ಯ. ಭಾರತೀಯ ಹಸುವಿನ ಹಾಲು ಸೇವನೆಯಿಂದಾಗುವ ಪ್ರಯೋಜನ ಕುರಿತು ಪ್ರತಿಯೊಬ್ಬರೂ ಅರಿತುಕೊಂಡು ಬಳಸಲು ಮುಂದಾಗಬೇಕಿದೆ.**
> ■ ಡಾ.ವಿ.ಎಸ್.ವಿ.ಪ್ರಸಾದ, ಉದ್ಯಮಿ



ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಿ: ಕೋನರಡ್ಡಿ

• **ಹುಬ್ಬಳ್ಳಿ:** ಬಹುದಿನದ ಬೇಡಿಕೆಯಾದ ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಿ ಕಲ್ಯಾಣ ಕರ್ನಾಟಕಕ್ಕೆ ನೀಡಿದ ವಿಶೇಷ ಸ್ಥಾನಮಾನ 371ಜೆ ನೀಡಿದಂತೆ ನಮ್ಮ ಭಾಗಕ್ಕೂ ಸರಿಸಮಾನವಾದ ಸ್ಥಾನಮಾನ ನೀಡಿ ಪ್ರತಿ ವರ್ಷ 5 ಸಾವಿರ ಕೋಟಿ ಅನುದಾನ ನಿಗದಿಪಡಿಸಲು ಗುರುವಾರ ವಿಧಾನಸಭೆಯಲ್ಲಿ ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ನಿರ್ಣಯ ಮಂಡಿಸಿದರು.



ಐತಿಹಾಸಿಕ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಬೆಳಗಾವಿ ವಿಭಾಗದ ಕಿತ್ತೂರು ಕರ್ನಾಟಕ ವಿಭಾಗದ ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಬಾಗಲಕೋಟೆ, ವಿಜಯಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳು ಅಭಿವೃದ್ಧಿಯ ದೃಷ್ಟಿಯಿಂದ ಇನ್ನೂ ನಿರೀಕ್ಷಿತ ಮಟ್ಟವನ್ನು ತಲುಪಿಲ್ಲ. ಈ ಭಾಗದ ಪ್ರಗತಿಗೆ ವಿಶೇಷ ಒತ್ತು ನೀಡುವ ಅವಶ್ಯಕತೆ ಇದ್ದು, ಬೇರೆ ಬೇರೆ ಪ್ರದೇಶಗಳಿಗೆ ಹೋಲಿಸಿದರೆ, ಕಿತ್ತೂರು ಕರ್ನಾಟಕ ಭಾಗವು ಆರ್ಥಿಕವಾಗಿ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (ಶಿಕ್ಷಣ, ಆರೋಗ್ಯ ಸಾಕ್ಷರತೆ) ತೀರಾ ಹಿಂದುಳಿದಿದೆ.

ಈ ಭಾಗದ ಜಿಲ್ಲೆಗಳ ತಲಾ ಆದಾಯ ರಾಜ್ಯದ ಸರಾಸರಿಗಿಂತ ಕಡಿಮೆ ಇದ್ದು, ರಾಜ್ಯದಲ್ಲಿ ಅತೀ ಕಡಿಮೆ ತಲಾ ಆದಾಯ ಹೊಂದಿದೆ. ಈ ಪ್ರದೇಶದಲ್ಲಿ ಬೃಹತ್ ಕೈಗಾರಿಕೆ ಮತ್ತು ಮೂಲಸೌಕರ್ಯಗಳ ಕೊರತೆಯಿದೆ ಎಂದು ತಿಳಿಸಿದರು.

ಡಾ. ನಂಜುಂಡಪ್ಪ ವರದಿ ಅನ್ವಯ ಈ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ವಿಶೇಷ ಆರ್ಥಿಕ ಪ್ಯಾಕೇಜ್, ಹೆಚ್ಚಿನ ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಷ್ಟಿಯ ಅಗತ್ಯವಿದೆ. ಈಗಾಗಲೇ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಎಲ್ಲಾ ಶಾಸಕರು ಪಕ್ಷಾತೀತವಾಗಿ ಮಾತನಾಡಿದ ಪ್ರಕಾರ ಕಿತ್ತೂರ ಕರ್ನಾಟಕದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಮತ್ತು ಸರ್ವಾಂಗೀಣ ಪ್ರಗತಿಗಾಗಿ ಹಾಗೂ ರಾಜ್ಯದಲ್ಲಿ ವಿವಿಧ ಮಂಡಳಿಗಳನ್ನು ರಚಿಸಿದಂತೆ ಉತ್ತರ ಕರ್ನಾಟಕ ಭಾಗದ "ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ"ಯನ್ನು ರಚಿಸುವುದು ಹಾಗೂ ಈ ಮಂಡಳಿಗೆ ಪ್ರತಿವರ್ಷ ಆಯವ್ಯಯದಲ್ಲಿ ಕನಿಷ್ಠ ರೂ. 5 ಸಾವಿರ ಕೋಟಿ ವಿಶೇಷ ಅನುದಾನ ಮೀಸಲಿಡುವುದಕ್ಕಾಗಿ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವಂತೆ ಈ ಸದನದ ಮೂಲಕ ನಿರ್ಣಯ ಮಂಡಿಸಿ ಕೋನರಡ್ಡಿ ಅವರು ಒತ್ತಾಯಿಸಿದರು.

ಮಾಜಿ ಉಪಮುಖ್ಯಮಂತ್ರಿ, ಅಥಣಿ ಶಾಸಕರಾದ ಲಕ್ಷ್ಮಣ ಸವದಿ, ಉಪನಾಯಕ ಅರವಿಂದ ಬೆಲ್ಲದ, ಧಾರವಾಡ ಗ್ರಾಮೀಣ ಶಾಸಕ ವಿನಯ ಕುಲಕರ್ಣಿ, ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬೆಂಬಲಿಸಿ ಈಗಾಗಲೇ ಪಕ್ಷಾತೀತವಾಗಿ ಅಂದಾಜು 45 ಶಾಸಕರು ಸಹಿ ಮಾಡಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು ಗೋವಿಂದರಾವ ಸಮಿತಿ ವರದಿ ಸಲ್ಲಿಸಿದ ನಂತರ ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ಬೆಳಗಾವಿಯಲ್ಲಿ ಭರವಸೆ ನೀಡಿದ್ದರು. ಅದರ ಪ್ರಕಾರ ಈ ಭಾಗಕ್ಕೂ ಕೂಡ ವಿಶೇಷ ಅನುದಾನ ನೀಡಲು ಎಲ್ಲ ಶಾಸಕರು ಹಕ್ಕೊತ್ತಾಯಕ್ಕೆ ಬೆಂಬಲಿಸಿದರು.

ಕಾಂಗ್ರೆಸ್ ಮುಖಂಡನ ಹತ್ಯಾ ಯತ್ನದ ತನಿಖೆ ಚುರುಕು
ಬಂಧಿತ ನಾಲ್ವರು ಪೊಲೀಸ್ ಕಸ್ಟಡಿಗೆ

• **ಅಂಕೋಲಾ:** ಕಾಂಗ್ರೆಸ್ ಪ್ರಮುಖ ಗೋಪಾಲಕೃಷ್ಣ ನಾಯಕ ಅವರ ಹತ್ಯಾ ಯತ್ನಕ್ಕೆ ಸಂಬಂಧಿಸಿದಂತೆ ಕಾರವಾರ ಪೊಲೀಸರು ಗೋವಾ ಗಡಿಯಲ್ಲಿ ಬಂಧಿಸಿದ್ದ ನಾಲ್ವರು ಆರೋಪಿಗಳನ್ನು ಅಂಕೋಲಾ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಗುರುವಾರ ಹಾಜರು ಪಡಿಸಿದ್ದು, ಇವರನ್ನು ಹೆಚ್ಚಿನ ವಿಚಾರಣೆಯ ಉದ್ದೇಶದಿಂದ ಮಾರ್ಚ್ 31 ರ ವರೆಗೆ ಪೊಲೀಸ್ ಕಸ್ಟಡಿ ನೀಡಲಾಗಿದೆ.

ಈ ಮಧ್ಯೆ ಈ ಕೃತ್ಯದಲ್ಲಿ ಭಾಗಿಯಾಗಿದ್ದ ಅಂಕೋಲಾ ಮೂಲದ ಇನ್ನಿಬ್ಬರನ್ನು ಸಹ ಪೊಲೀಸರು ವಶಕ್ಕೆ ಪಡೆದು ಈ ಕೃತ್ಯದ ಮಾಸ್ಟರ್ ಮೈಂಡ್ ಕುರಿತು ಮಾಹಿತಿ ಪಡೆದಿದ್ದಾರೆಂದು ತಿಳಿದು ಬಂದಿದೆಯಾದರೂ ಪೊಲೀಸರು ಇದನ್ನು ದೃಢಪಡಿಸಿಲ್ಲ.

ಮಾರ್ಚ್ 25 ರಂದು ಗೋಪಾಲಕೃಷ್ಣ ನಾಯಕ ಅವರು ತಮ್ಮ ಸಹೋದರ ಸಂಬಂಧಿಯೊಂದಿಗೆ ಪಟ್ಟಣದ ಕಣಕಣೇಶ್ವರ ದೇವಾಲಯದ ಸಮೀಪದ ಸೆಲೂನ್ ಒಂದರಿಂದ ಹೊರಗೆ ಬರುತ್ತಿರುವುದನ್ನು ಹೊಂಚು ಹಾಕಿ ಕಾಯುತ್ತಿದ್ದ ಗೋವಾ ನೋಂದಣಿ ಸಂಖ್ಯೆಯ ಕಾರು ಮತ್ತು ಎರಡು ಬೈಕುಗಳಲ್ಲಿ ಬಂದಿದ್ದ ಆರು ಜನ ದುಷ್ಕರ್ಮಿಗಳು ಗೋಪಾಲಕೃಷ್ಣ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಅವರ ಹತ್ಯೆಗೆ ಯತ್ನ ನಡೆಸಿದ್ದರು. ಘಟನೆ ನಂತರ ಗೋವಾದತ್ತ ಬೇರೊಂದು ವಾಹನದಲ್ಲಿ ತೆರಳುತ್ತಿದ್ದ ಗೋವಾ ಮೂಲದ ಜಾಕೀರ್, ಸದ್ದಾಂ,ಇರ್ಫಾನ್ ಮತ್ತು ಸ್ಟೀವರ್ ಎನ್ನುವವರನ್ನು ಕಾರವಾರ ಪೊಲೀಸರು ಬಂಧಿಸಿದ್ದರು. ಬಂಧಿತ ಆರೋಪಿತರನ್ನು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ,ಡಿ.ವೈ.ಎಸ್.ಪಿ ಗಿರೀಶ, ಅಂಕೋಲಾ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತಿನಲ್ಲಿ ಅಂಕೋಲಾ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ಘಟನೆಯಲ್ಲಿ ಭಾಗಿಯಾಗಿರುವ ಅಂಕೋಲಾ ಕನಸೆಗದ್ದೆಯಲ್ಲಿ ಬಾಡಿಗೆಯಲ್ಲಿದ್ದ ಇಬ್ಬರು ಆರೋಪಿತರು ನಾಪತ್ತೆಯಾಗಿದ್ದು ಜಿಲ್ಲಾ ಪೊಲೀಸ್ ವರಿಷ್ಠರ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚಿಸಿ ಆರೋಪಿತರ ಬಂಧನಕ್ಕೆ ಬಲೆ ಬೀಸಲಾಗಿದ್ದು ಅತಿ ಶೀಘ್ರದಲ್ಲಿ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಡಿ.ವೈ.ಎಸ್.ಪಿ ಗಿರೀಶ ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ.



> **ಗೋಪಾಲಕೃಷ್ಣ ನಾಯಕ ಹತ್ಯೆಗೆ ಸಂಚುರೂಪಿಸಿದ ನಾಲ್ವರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಇನ್ನಿಬ್ಬರ ಶೋಧ ಕಾರ್ಯ ಮುಂದುವರಿದಿದೆ. ಘಟನೆಯಲ್ಲಿ ಒಂದು ಕಾರು ಮತ್ತು ಎರಡು ಪಲ್ಸರ್ ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಘಟನೆಯು ರಾಜಕೀಯ ದ್ವೇಷವೇ ಅಥವಾ ಇನ್ನೇನಾದರೂ ಇದೆಯೇ ಎನ್ನುವುದು ತನಿಖೆಯಿಂದ ತಿಳಿದುಬರಬೇಕಿದೆ. ಈಗಾಗಲೆ ಘಟನೆಗೆ ಸಂಬಂಧಿಸಿದಂತೆ ಇನ್ನಿಬ್ಬರನ್ನು ಬಂಧಿಸಲು ನಾಲ್ಕು ವಿಶೇಷ ತಂಡಗಳನ್ನು ರಚಿಸಲಾಗಿದೆ.**
> ■ ದೀಪನ್, ಪೊಲೀಸ್ ವರಿಷ್ಠಾಧಿಕಾರಿ

ಮಾಜಿ ಶಾಸಕರ ಪುತ್ರನ ಹತ್ಯೆ ಪ್ರಕರಣ
ನಾಲ್ವರು ಆರೋಪಿಗಳ ಬಂಧನ

• **ಧಾರವಾಡ:** ಬೈಲಹೊಂಗಲದ ಮಾಜಿ ಶಾಸಕರ ಪುತ್ರ ರಾಜು ಬೋಗಶೆಟ್ಟಿ ಹತ್ಯೆ ಪ್ರಕರಣ ಗ್ರಾಮೀಣ ಠಾಣೆಯ ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾಗಿ ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ ಹೇಳಿದರು.



ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಪ್ರಕರಣದ ಆರೋಪಿಗಳಾದ ಮುನೀರಾ ಶರೀಫ್ ದಿಲ್ಲುನಾಯ್ಕ(32), ಆಕೆಯ ಅಪ್ರಾಪ್ತ ಪುತ್ರ, ಮೃತ್ಯುಂಜಯ ಕುಂಬಾರ (26), ಬಸವರಾಜ ಮಾಚೇರಿ (30) ಬಂಧಿತ ಆರೋಪಿಗಳ ಎಂದು ತಿಳಿಸಿದರು. ಶಾಲೆಯಲ್ಲಿ ಅಡುಗೆ ಮಾಡುವ ಮುನೀರಾ ಅವಳೊಂದಿಗೆ ಹತ್ಯೆಯಾದ ರಾಜು, ಅನೈತಿಕ ಸಂಬಂಧ ಹೊಂದಿರುವುದರ ಜೊತೆ ರೂ.2 ಲಕ್ಷ ಸಾಲವೂ ಕೊಟ್ಟಿದ್ದ ಎನ್ನಲಾಗಿದೆ. ಇದೇ ವಿಚಾರಕ್ಕೆ ಇಬ್ಬರ ನಡುವೆ ವೈಮನಸ್ಸು ಉಂಟಾಗಿದೆ ಎಂದು ಹೇಳಿದರು. ಸಾಲದ ಹಣ ವಾಪಸ್ ಕೇಳಿದ್ದ ರಾಜುವಿನ ಕಾಟ ತಪ್ಪಿಸಿಕೊಳ್ಳಲು ಹಾಗೂ ಆತನ ಸಂಬಂಧ ಕಡಿದುಕೊಳ್ಳಲು ತನ್ನ ಅಪ್ರಾಪ್ತ ಮಗ ಹಾಗೂ ಇಬ್ಬರು ಸಹಚರರೊಂದಿಗೆ ಮಾ.23ರಂದು ರಾತ್ರಿ 8.30ಕ್ಕೆ ಹತ್ಯೆ ಮಾಡಿದ್ದಾರೆ ಎಂದು ಆರ್ಯ ಮಾಹಿತಿ ನೀಡಿದರು. ಹತ್ಯೆಯ ಬಳಿಕ ಮೃತದೇಹ ಹೂಳಲು ಚಿಂತಿಸಿ, ಕೊನೆಗೆ ಮೃತ್ಯುಂಜಯನಿಗೆ ಗೊತ್ತಿರುವ ರಾಮಾಪುರ ಗ್ರಾಮಕ್ಕೆ ರಾಜುವಿನ ಕಾರಿನಲ್ಲಿಯೇ ಬಂದು ನಿರ್ಜನ ಪ್ರದೇಶದಲ್ಲಿ ಬೆಂಕಿಹಚ್ಚಿನ ಬಳಿಕ ಸಾಕ್ಷ್ಯ ನಾಶ ಮಾಡಲು ಯೋಜಿಸಿದ್ದಾರೆ ಎಂದು ತಿಳಿಸಿದರು.

ವಾಹನದ ನಂಬರ್ ಪತ್ತೆ ಹಚ್ಚಿ, ಕೊಲೆಯಾದ ವ್ಯಕ್ತಿ ಬಗ್ಗೆ ಮಾಹಿತಿ ಕಲೆ ಹಾಕಿದ ನಂತರ ಶವ ಸುಡಲು ಪೆಟ್ರೋಲ್ ಖರೀದಿ, ಬೈಕ್ ಬಳಕೆ ಬಗ್ಗೆ ಸಿಸಿಟಿವಿ ದೃಶ್ಯ ಆಧಾರಿಸಿ, ಕೇವಲ 24 ಗಂಟೆಗಳಲ್ಲಿಯೇ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ ಎಂದರು. ಡಿಎಸ್ಪಿ ಶಿವಾನಂದ ಕಟಗಿ, ವಿನೋದ ಮುಕ್ತೇದಾರ, ಗ್ರಾಮೀಣ ಠಾಣೆ ಇನ್ಸ್‌ಪೆಕ್ಟರ್ ಎಸ್.ಎಸ್.ಕಮತಗಿ ತಂಡ ಪ್ರಕರಣ ಭೇದಿಸಿದೆ ಎಂದ ಅವರು, ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಅಧೀಕ್ಷಕ ಗುಂಜನ್ ಆರ್ಯ ತಿಳಿಸಿದರು.

ಜಿಲ್ಲೆಯಲ್ಲಿ ಪೆಟ್ರೋಲ್, ಡೀಸೆಲ್ ಕೊರತೆಯಿಲ್ಲ: ಹೆಗ್ಗಳಗಿ

• **ಹುಬ್ಬಳ್ಳಿ:** ಜಿಲ್ಲೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಯಾವುದೇ ರೀತಿ ಕೊರತೆ ಇಲ್ಲ, ನಾಲ್ಕರಿಂದ ಐದು ದಿನಗಳವರೆಗೆ ಆಗುವಷ್ಟು ಸಂಗ್ರಹವಿದೆ. ನಗರ ಮತ್ತು ಗ್ರಾಮೀಣ ಸೇರಿದಂತೆ ಜಿಲ್ಲೆಯಾದ್ಯಂತ ಒಟ್ಟು 204 ಪೆಟ್ರೋಲ್ ಬಂಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ಪ್ರತಿದಿನ 371 ಕೆಎಲ್ ಪೆಟ್ರೋಲ್ ಮತ್ತು 582 ಕೆಎಲ್ ಡೀಸೆಲ್ ವಿತರಿಸಲಾಗುತ್ತಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಜಂಟಿ ನಿರ್ದೇಶಕ ವಿನೋದಕುಮಾರ ಹೆಗ್ಗಳಗಿ ಹೇಳಿದರು.

ಹುಬ್ಬಳ್ಳಿ ನಗರದ ವಿವಿಧ ಪೆಟ್ರೋಲ್ ಬಂಕ್‌ಗಳಿಗೆ ಭೇಟಿ ನೀಡಿ, ಪರಿಶೀಲನೆಯ ನಂತರ, ಹುಬ್ಬಳ್ಳಿ ನ್ಯೂ ಕಾಟನ್ ಮಾರ್ಕೆಟ್‌ದ ಸಂಚಾರಿ ಪೊಲೀಸ್ ಠಾಣೆಯ ಹತ್ತಿರದಲ್ಲಿರುವ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು.



ಪ್ರಸ್ತುತ ಜಿಲ್ಲೆಯಲ್ಲಿ ಪೆಟ್ರೋಲ್ 1,115 ಕೆಎಲ್ ಹಾಗೂ ಡೀಸೆಲ್ 1,735 ಕೆಎಲ್ ಸಂಗ್ರಹವಿದೆ. ಇದೇ ವೇಳೆ ದಿನ ನಿತ್ಯದ ಮಾರಾಟದಲ್ಲಿ ಪೆಟ್ರೋಲ್ 371 ಕೆಎಲ್ ಹಾಗೂ ಡೀಸೆಲ್ 582 ಕೆಎಲ್‌ವರೆಗೆ ಮಾರಾಟವಾಗುತ್ತಿದೆ ಎಂದರು.

ಮಾ.23 ರ ಹಿಂದಿನ ದಿನಗಳಲ್ಲಿ ಪೆಟ್ರೋಲ್ ದಿನಕ್ಕೆ ಸುಮಾರು 267 ಕೆಎಲ್ ಹಾಗೂ ಡೀಸೆಲ್ 480 ಕೆಎಲ್ ಮಾರಾಟವಾಗುತ್ತಿತ್ತು. ಆದರೆ, ಇತ್ತೀಚೆಗೆ ಮಾರಾಟದಲ್ಲಿ ಏರಿಕೆ ಕಂಡುಬಂದಿದ್ದು, ಜನರಲ್ಲಿ ಉಂಟಾದ ಆತಂಕ ಮತ್ತು ತಪ್ಪು ಮಾಹಿತಿಯ ಪರಿಣಾಮವಾಗಿ ಜನರು ಹೆಚ್ಚುವರಿಯಾಗಿ ಇಂಧನ ಖರೀದಿಸುತ್ತಿದ್ದಾರೆ ಎಂದು ತಿಳಿಸಿದರು.

ಪೆಟ್ರೋಲ್ ಮತ್ತು ಡೀಸೆಲ್ ಖರೀದಿಸಲು ಯಾವುದೇ ಮಿತಿ ವಿಧಿಸಿಲ್ಲ, ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್ ಸಂಗ್ರಹಿಸಿಕೊಂಡು ಇಟ್ಟವರ ವಿರುದ್ಧ ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಈಗಾಗಲೇ ಮೂರು ಪ್ರಕರಣಗಳನ್ನು ದಾಖಲಿಸಲಾಗಿದ್ದು, ಒಟ್ಟು 75 ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹುಬ್ಬಳ್ಳಿ ಶಹರ ತಹಶೀಲ್ದಾರ ಮಹೇಶ ಗಸ್ತೆ, ಉಪನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪ್ರಭು ಗಂಗೇನಹಳ್ಳಿ, ಕಂದಾಯ ನಿರೀಕ್ಷಕ ರವಿ ಬೆಣ್ಣೂರ ಇದ್ದರು.

ಹತ್ತಳ್ಳಿ ಬೋರಿ ಹಳ್ಳದಲ್ಲಿ ಪಕ್ಷಿಗಳ ಮಾರಣಹೋಮ
ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಗ್ರಾಮಸ್ಥರ ಆಕ್ರೋಶ

• **ಚಡಚಣ:** ತಾಲೂಕಿನ ಹತ್ತಳ್ಳಿ ಗ್ರಾಮದ ಬೋರಿ ಹಳ್ಳದಲ್ಲಿ ನೂರಾರು ಪಕ್ಷಿಗಳು ಹಾಗೂ ಕೆಲವು ಕಾಡು ಪ್ರಾಣಿಗಳು ಸತ್ತಿರುವ ಘಟನೆಗೆ ಹಳ್ಳದ ಬದಿಯಲ್ಲಿರುವ ಗ್ರಾಮ ಪಂಚಾಯಿತಿ ಹಾಗೂ ಚಡಚಣ ಪಟ್ಟಣ ಪಂಚಾಯಿತಿಯವರ ನಿರ್ಲಕ್ಷ್ಯವೇ ಕಾರಣ ಎಂಬ ಆರೋಪ ಗ್ರಾಮಸ್ಥರಿಂದ ಕೇಳಿಬಂದಿದೆ.

ಊರಿನ ಘಟಾರ (ಕಲುಷಿತ) ನೀರನ್ನು ನೇರವಾಗಿ ಬೋರಿ ಹಳ್ಳಕ್ಕೆ ಹರಿಬಿಟ್ಟಿರುವುದರಿಂದ ಪರಿಸರ ಮಾಲಿನ್ಯ ಉಂಟಾಗಿ ಮತ್ತು ಬೇಸಿಗೆಯ ಕಾಲದಲ್ಲಿ ಹಳ್ಳ ಸಂಪೂರ್ಣ ಬತ್ತಿರುವುದರಿಂದ ಪಕ್ಷಿಗಳ ಸಾವಿಗೆ ಕಾರಣವಾಗಿದೆ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಳ್ಳದ ಸುತ್ತಮುತ್ತ ನವಿಲುಗಳು, ಬಾತುಕೋಳಿಗಳು ಸೇರಿದಂತೆ ವಿವಿಧ ಪಕ್ಷಿಗಳು ಹಾಗೂ ನರಿ ಮುಂತಾದ ಕಾಡು ಪ್ರಾಣಿಗಳು ಸತ್ತ ಸ್ಥಿತಿಯಲ್ಲಿ ಪತ್ತೆಯಾಗುತ್ತಿವೆ. ಹಳ್ಳದಲ್ಲಿ ನಿಂತ ನೀರು ದುರ್ವಾಸನೆಯಿಂದ ಕಲುಷಿತಗೊಂಡಿದ್ದು, ಇದನ್ನು ಕುಡಿದ ಪಕ್ಷಿಗಳು ಮತ್ತು ಪ್ರಾಣಿಗಳು ಸಾವನ್ನಪ್ಪುತ್ತಿರುವ ಸಾಧ್ಯತೆ ಇದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ರಾಷ್ಟ್ರಪಕ್ಷಿ ನವಿಲುಗಳ ಸಾವು ಜನರಲ್ಲಿ ಹೆಚ್ಚಿನ ಆತಂಕಕ್ಕೆ ಕಾರಣವಾಗಿದೆ.



ಗ್ರಾಮಸ್ಥರ ಪ್ರಕಾರ, ಚಡಚಣ ಪಟ್ಟಣದ ಒಳಚರಂಡಿ ನೀರನ್ನು ಯಾವುದೇ ಶುದ್ಧೀಕರಣವಿಲ್ಲದೆ ನೇರವಾಗಿ ಹಳ್ಳಕ್ಕೆ ಬಿಡಲಾಗುತ್ತಿದೆ. ಇದರಿಂದ ಹಳ್ಳದ ನೀರು ಸಂಪೂರ್ಣವಾಗಿ ಕಲುಷಿತಗೊಂಡು ವಿಷಮಯವಾಗಿದೆ. ಬೇಸಿಗೆ ಕಾಲದಲ್ಲಿ ನೀರಿನ ಕೊರತೆ ಇರುವುದರಿಂದ ಪಕ್ಷಿಗಳು ಹಳ್ಳದಲ್ಲಿನಿಂತ ಇದೇ ನೀರನ್ನು ಕುಡಿಯಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದು, ಅದರ ಪರಿಣಾಮವಾಗಿ ಸಾವುಗಳು ಹೆಚ್ಚಾಗುತ್ತಿವೆ ಎಂದು ಹೇಳಿದ್ದಾರೆ.

ಈ ಘಟನೆಗೆ ಸಂಬಂಧಿಸಿದಂತೆ ನೀರಾವರಿ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ವಿರುದ್ಧ ಗಂಭೀರ ನಿರ್ಲಕ್ಷ್ಯ ಆರೋಪಗಳು ಕೇಳಿಬಂದಿವೆ. ಹಳ್ಳದ ನಿರ್ವಹಣೆ, ಶುದ್ಧೀಕರಣ ಹಾಗೂ ನೀರಿನ ಸಂರಕ್ಷಣೆ ಕುರಿತು ಯಾವುದೇ ಕ್ರಮ ಕೈಗೊಳ್ಳದಿರುವುದು ಈ ದುರಂತಕ್ಕೆ ಕಾರಣವಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ತಕ್ಷಣ ಅರಣ್ಯ ಇಲಾಖೆ, ಪರಿಸರ ಇಲಾಖೆ ಹಾಗೂ ಪಶುವೈದ್ಯಕೀಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ನೀರಿನ ಮಾದರಿ ಹಾಗೂ ಸತ್ತ ಪಕ್ಷಿಗಳ ಮಾದರಿಗಳನ್ನು ಪರೀಕ್ಷಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

> **ನಿಖರವಾದ ಮಾಹಿತಿ ಸಂಬಂಧಪಟ್ಟ ಅಧಿಕಾರಿಗಳಿಂದ ತನಿಖಾ ವರದಿ ಬಂದ ಮೇಲೆ ಪಕ್ಷಿಗಳ ಸಾವಿಗೆ ಕಾರಣ ಏನು ಎಂಬುದು ತಿಳಿಯಲಿದೆ. ನೀರಾವರಿ ಇಲಾಖೆಯಿಂದ ಹಳ್ಳಕ್ಕೆ ನೀರು ಹರಿಸುವ ವ್ಯವಸ್ಥೆ ಕೂಡಾ ಮಾಡಲಾಗುವುದು.**
> ■ ಬಿ.ಕೆ.ತಾವಸೆ, ಪಪಂ ಮುಖ್ಯಾಧಿಕಾರಿ



ಉಪಚುನಾವಣೆ: ಕಾಂಗ್ರೆಸ್ಸಿಗೆ ಬಂಡಾಯದ ಭೀತಿ

• **ದಾವಣಗೆರೆ:** ತೀವ್ರ ಕುತೂಹಲ ಮೂಡಿಸಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಕಣದಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಸಾದಿಕ್ ಪೈಲ್ವಾನ್ ಮನವೊಲಿಸಲು ಗುರುವಾರ ಪಕ್ಷದ ರಾಜ್ಯ ನಾಯಕರು ನಡೆಸಿದ ಹೈವೋಲ್ಟೇಜ್ ಸಂಧಾನ ಸಭೆ ವಿಫಲವಾಗಿದೆ. ಇದರೊಂದಿಗೆ ಸಾದಿಕ್ ಪೈಲ್ವಾನ್ ಕಣದಲ್ಲುಳಿಯುವುದು ಖಚಿತವಾಗಿದೆ. ಕಾಂಗ್ರೆಸ್ಸಿಗೆ ಬಂಡಾಯದ ಭೀತಿ ಎದುರಾಗಿದೆ.

ನಾಮಪತ್ರ ಹಿಂಪಡೆಯಲು ಗುರುವಾರ ಮಧ್ಯಾಹ್ನ 3 ಗಂಟೆವರೆಗೆ ಅವಕಾಶವಿತ್ತು. ಆದರೆ ಬೆಂಗಳೂರಿನಿಂದ ಕಾಂಗ್ರೆಸ್ ನಾಯಕರು ದಾವಣಗೆರೆ ಬರುವಷ್ಟರಲ್ಲಿ ಮಧ್ಯಾಹ್ನ 2.45 ಆಗಿತ್ತು. ಈ ವೇಳೆ ಸಾದಿಕ್ ಪೈಲ್ವಾನ್ ಮನೆ ಮುಂದೆ ಜಮಾಯಿಸಿದ್ದ ನೂರಾರು ಬೆಂಬಲಿಗರು ಕಾಂಗ್ರೆಸ್ ನಾಯಕರ ವಿರುದ್ಧ ಗೋ ಬ್ಯಾಕ್ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಸ್ಥಳೀಯ ಮುಖಂಡರು ನಾನಾ ರೀತಿಯಲ್ಲಿ ನಡೆಸಿದ್ದ ಸಂಧಾನ ಕೂಡ ವಿಫಲವಾಗಿದ್ದರಿಂದ ಬೆಂಗಳೂರಿನಿಂದ ಬಂದಿದ್ದ ಶಾಸಕ ರಿಜ್ವಾನ್ ಹರ್ಷದ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಮಹಮ್ಮದ್ ಸೇರಿದಂತೆ ಹಲವು ನಾಯಕರು ಸಾದಿಕ್ ಪೈಲ್ವಾನ್ ಜೊತೆ ಮಾತುಕತೆ ನಡೆಸಿದರೂ, ಸಂಧಾನ ಫಲ ನೀಡಲಿಲ್ಲ. ಯಾವುದೇ ಕಾರಣಕ್ಕೂ ನಾಮಪತ್ರ ವಾಪಾಸ್ ಪಡೆಯುವುದಿಲ್ಲ ಎಂದು ಸಾದಿಕ್ ಪೈಲ್ವಾನ್ ಸ್ಪಷ್ಟಪಡಿಸಿದ್ದಾರೆ.




ಅಂತಿಮ ಕಣದಲ್ಲಿ 25 ಮಂದಿ ಅಭ್ಯರ್ಥಿಗಳು: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಉಮೇದುವಾರಿಕೆ ಸಲ್ಲಿಸಿದ್ದ 39 ಜನರ ಪೈಕಿ 11 ಅಭ್ಯರ್ಥಿಗಳು ಗುರುವಾರ ತಮ್ಮ ನಾಮಪತ್ರಗಳನ್ನು ವಾಪಾಸ್ಸು ಪಡೆದಿದ್ದು, ಪರಿಶೀಲನೆ ವೇಳೆ ಮೂವರ ನಾಮಪತ್ರಗಳು ಅಸಿಂಧುಗೊಂಡಿವೆ. ಚುನಾವಣೆಯ ಅಂತಿಮ ಕಣದಲ್ಲಿ 25 ಮಂದಿ ಅಭ್ಯರ್ಥಿಗಳು ಉಳಿದಿದ್ದಾರೆ. ಚುನಾವಣೆಗೆ ಒಟ್ಟು 39 ಅಭ್ಯರ್ಥಿಗಳು 45 ನಾಮಪತ್ರ ಸಲ್ಲಿಸಿದ್ದರು. ಇದರೊಂದಿಗೆ ಅಂತಿಮ ಕಣದಲ್ಲಿ 25 ಮಂದಿ ಉಳಿದಂತಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಬಾಗಲಕೋಟೆ: ಅಂತಿಮ ಕಣದಲ್ಲಿ 9 ಅಭ್ಯರ್ಥಿಗಳು

• **ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಗುರುವಾರ 14 ಅಭ್ಯರ್ಥಿಗಳ ಪೈಕಿ 5 ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆಯನ್ನು ಹಿಂಪಡೆದಿದ್ದು, ಅಂತಿಮವಾಗಿ ಚುನಾವಣಾ ಕಣದಲ್ಲಿ 9 ಅಭ್ಯರ್ಥಿಗಳು ಇದ್ದಾರೆಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಅಂತಿಮ ಚುನಾವಣಾ ಕಣದಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನಿಂದ ಉಮೇಶ ಹುಲ್ಲಪ್ಪ ಮೇಟಿ, ಭಾರತೀಯ ಜನತಾ ಪಾರ್ಟಿಯಿಂದ ಚರಂತಿಮಠ ವೀರಭದ್ರಯ್ಯ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಸಂತೋಷ ಸವ್ವಾಸೆ, ಜನತಾ ಚಳುವಳಿ ಭಾರತ ಪಕ್ಷದಿಂದ ತೇಜೋರಾಮಚೆಟ್ಟಿ ದೇವಾಂಗ, ಕರ್ನಾಟಕ ರಾಷ್ಟ್ರ ಸಮಿತಿಯಿಂದ ನಾಗರಾಜ ಕಲಕುಟಗರ, ಬ್ಲ್ಯೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ, ಆಲ್ ಇಂಡಿಯಾ ಜನರಕ್ಷ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರರಿಂದ ಆನಂದ ಬಜಾತಿ, ರವಿ ಶಿವಪ್ಪ ಪಡಸಲಗಿ ಉಳಿದುಕೊಂಡಿದ್ದಾರೆ.

ರಾಮ ಬಾಣ



ದಿನ ಭವಿಷ್ಯ

ಮೇಷ ಹೇಳಬೇಕಾದುದನ್ನು ಸರಿಯಾಗಿ ಹೇಳಿ. ಕೆಲವರಿಗೆ ಅದು ಅರ್ಥ ಆಗದಿರಬಹುದು. ಆರೋಗ್ಯ ಸಂಬಂಧಿ ಚಿಂತೆ. ಧನವ್ಯಯ.

ವೃಷಭ ಬಿಡುವಿರದ ದಿನ. ಕೆಲಸವನ್ನು ಆನಂದಿಸಿ. ಅದರಿಂದ ಒತ್ತಡ ಕಡಿಮೆ ಆದೀತು. ಆಪ್ತರ ಜತೆಗಿನ ಮಾತುಕತೆಯಿಂದ ಮನಸೋಲ್ಲಾಸ.

ಮಿಥುನ ಮನೆಯಲ್ಲಿ ನಿಮ್ಮ ನಿಲುವಿಗೇ ಅಂಟಿಕೊಂಡು ಸೌಹಾರ್ದ ಕೆಡಿಸದಿರಿ. ಕ್ಲಿಷ್ಟ ಪರಿಸ್ಥಿತಿ ಎದುರಾದೀತು. ಹೊಂದಾಣಿಕೆ ಸ್ವಭಾವ ಬೆಳೆಸಿಕೊಳ್ಳಿ.

ಕಟಕ ನಿಮ್ಮ ವ್ಯವಹಾರ ಉತ್ತಮಪಡಿಸಲು ಹೊಸ ಚಿಂತನೆ ರೂಪಿಸಿ. ಕಡಿಮೆ ಖರೀದಿಯಿಂದ ಹಣ ಉಳಿಸಬಹುದು. ಮೈ ನೋವು ಬಾಧಿಸಬಹುದು.

ಸಿಂಹ ಪ್ರತಿಕೂಲ ಸನ್ನಿವೇಶ ಎದುರಿಸುವಿರಿ. ಆದರೆ ಪಾಸಿಟಿವ್ ಚಿಂತನೆ ಬಿಡದಿರಿ. ಮನೆಯಲ್ಲಿ ಸೌಹಾರ್ದ ವಾತಾವರಣ. ಆರೋಗ್ಯ ಚಿಂತೆ ಮಾಯ.

ಕನ್ಯಾ ಗುರಿ ಸಾಧಿಸಲು ಕಠಿಣ ಶ್ರಮ ಬೇಕು. ಸಂಗಾತಿ ಜತೆ ಭಿನ್ನಮತ. ಹೊಟ್ಟೆ ಸಂಬಂಧಿ ಅನಾರೋಗ್ಯ.

ತುಲಾ ಆಪ್ತೀಯರ ಉನ್ನತಿಗೆ ಇಂದು ಪರಿಶ್ರಮ ಪಡುವಿರಿ. ವೃತ್ತಿಯಲ್ಲಿ ಉದ್ವಿಗ್ನ ಸ್ಥಿತಿ ಮೂಡಿದರೂ ಬಳಿಕ ಶಮನ. ಸಹೋದ್ಯೋಗಿ ಸಹಕಾರ.

ವೃಶ್ಚಿಕ ಆಪ್ತರ ಜತೆ ವ್ಯವಹರಿಸುವಾಗ ಹೃದಯದ ಭಾವಕ್ಕೆ ಬೆಲೆ ಕೊಡಿ. ಎಲ್ಲವನ್ನು ತರ್ಕದಿಂದ ಯೋಚಿಸದಿರಿ.

ಧನು ಮನಸ್ಸಿಗೆ ಸಮಾಧಾನ ತರುವ ನಿರ್ಧಾರ ತಾಳುವಿರಿ. ಸಂಬಂಧದಲ್ಲಿ ಪ್ರಗತಿ. ಎಲ್ಲರ ಜತೆ ಬೆರೆಯಲು ಗಮನ ಕೊಡಿ.

ಮಕರ ವೃತ್ತಿ ಕ್ಷೇತ್ರದಲ್ಲಿ ಉಂಟಾಗಿದ್ದ ಬಿಗು ಪರಿಸ್ಥಿತಿ ಶಮನವಾಗಲಿದೆ. ಸಂಘರ್ಷಕ್ಕಿಂತ ಸಹಕಾರ ಒಳ್ಳೆಯದು. ಆರ್ಥಿಕ ವ್ಯವಹಾರದಲ್ಲಿ ಲಾಭ.

ಕುಂಭ ಧಾರ್ಮಿಕ ಕ್ಷೇತ್ರ ದರ್ಶನ. ಸಮಸ್ಯೆ ಪರಿಹಾರಕ್ಕೆ ಯತ್ನ. ಮಕ್ಕಳ ಸಾಧನೆ ಸಮಾಧಾನ ತರಲಿದೆ. ಖರ್ಚು ಕಡಿಮೆ ಮಾಡಲು ಆದ್ಯತೆ ಕೊಡಿ.

ಮೀನ ವಾಗ್ವಾದ ನಡೆದೀತು. ಕೆಲವರು ನಿಮ್ಮನ್ನು ಅಣಕ ಮಾಡಿಯಾರು. ಸಹನೆ ಇರಲಿ. ಸುಖದುಃಖ ಬದುಕಿನ ಅವಿಭಾಜ್ಯ ಅಂಗ ಎಂದರಿಯಿರಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 4,9,1,7

ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಪ್ರಸ್ತಾಪ
ಸರ್ಕಾರಕ್ಕೆ ಆದಾಯ ಕೊರತೆ

• **ವಿಧಾನಸಭೆ:** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಿಂದ 20,380 ಕೋಟಿ ರೂ. ಆದಾಯ ಕೊರತೆಗೆ ಕಾರಣವಾಗಿದ್ದು, ಇದರ ಪರಿಣಾಮ ವಿತ್ತೀಯ ಕೊರತೆಯು 2023-24ರಲ್ಲಿ 65,522 ಕೋಟಿ ರೂ. ಗಳಿಂದ 2024-25ರಲ್ಲಿ 58,030 ಕೋಟಿ ಇದೆ ಎಂದು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) ವರದಿ ತಿಳಿಸಿದೆ.

ಗುರುವಾರ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಚಿವ ದಿನೇಶ್ ಗುಂಡೂರಾವ್ ಅವರು, 2024ಕ್ಕೆ ಕೊನೆಗೊಂಡ ರಾಜಸ್ವದ ವರದಿಯನ್ನು ಮಂಡಿಸಿದರು. 2025-26ರಲ್ಲಿ ಒಟ್ಟು 50,077 ಕೋಟಿ ರೂ. ಹಣವನ್ನು ವಿವಿಧ ಇಲಾಖೆಗಳಿಗೆ ಸಹಾಯಧನ ನೀಡಲಾಗಿದೆ. ಇದರಲ್ಲಿ ಇಂಧನ ಇಲಾಖೆಗೆ ಅತೀ ಹೆಚ್ಚು ಸಹಾಯಧನ ಸಿಕ್ಕಿದ್ದು, ಗೃಹಜ್ಯೋತಿ ಮತ್ತು ರೈತರ ಕೃಷಿ ಪಂಪ್ ಸೆಟ್ ಬಳಕೆಗೆ ಉಚಿತ ವಿದ್ಯುತ್‌ಗೆ 9,157.66 ಕೋಟಿ ನೀಡಲಾಗಿದೆ. ಶೇ.45ರಷ್ಟು ಸಹಾಯಧನವನ್ನು ಐದು ಗ್ಯಾರಂಟಿಗಳಿಗೆ ನೀಡಲಾಗಿದೆ.

ಜಿಡಿಪಿಯಲ್ಲಿ ರಾಜ್ಯದ ಬೆಳವಣಿಗೆ ಉತ್ತಮವಾಗಿದ್ದು, ತಲಾ ಆದಾಯದಲ್ಲಿ ದೇಶಕ್ಕಿಂತ ಮುಂದೆ ಇದೆ. ಬಜೆಟ್ ಹೊರತುಪಡಿಸಿ, ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಮಾಡಿರುವ ರಾಜ್ಯ ಸರ್ಕಾರದ ಸಾಲವು 14,154.91 ಕೋಟಿ ರೂ. ಇದೆ. ರಾಜ್ಯಕ್ಕೆ ಜಿಎಸ್‌ಟಿಯಿಂದ 52,971.23 ಕೋಟಿ ರೂ. ಬಾಕಿ ಇದ್ದು, ಜಿಎಸ್‌ಟಿ ದರಗಳನ್ನು ಇಳಿಸಿದ್ದರಿಂದ ಮುಂದಿನ ದಿನಗಳಲ್ಲಿ ರಾಜ್ಯಕ್ಕೆ ಜಿಎಸ್‌ಟಿ ಆದಾಯ ಕಡಿಮೆಯಾಗಲಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದ್ದಲ್ಲಿ, ರಾಜ್ಯದ ಲಾಭಾಂಶವು 2024-25ರಲ್ಲಿ ಶೇ.236 ರಷ್ಟು ಹೆಚ್ಚಾಗಿದೆ. 2025-25 ರಾಜ್ಯದ ಒಟ್ಟು ವೆಚ್ಚ 3,43,524 ಕೋಟಿ ರೂ. ಆಗಿದ್ದು, ರಾಜಸ್ವ ವೆಚ್ಚ 2,78,987, ಬಂಡವಾಳ ವೆಚ್ಚ 57,906 ಮತ್ತು ಸಾಲ ಮತ್ತು ಮುಂಗಡಗಳಿಗಾಗಿ 6,631 ಕೋಟಿ ರೂ. ಹಂಚಿಕೆಯಾಗಿದೆ. 2024-25ರಲ್ಲಿ ನೀರಾವರಿ ಯೋಜನೆಗೆ ಅತೀ ಹೆಚ್ಚು 19,000 ಕೋಟಿ ರೂ. ದೊರೆತಿದ್ದರೂ ಅನೇಕ ಕಾಮಗಾರಿಗಳು ಅಪೂರ್ಣವಾಗಿವೆ ಎಂದು ವರದಿಯಲ್ಲಿ ಹೇಳಿದೆ.

ರಾಜಸ್ವ ಸಂಗ್ರಹ ಹೆಚ್ಚಳ

ರಾಜ್ಯ ಸರ್ಕಾರಕ್ಕೆ 2024-25ರ ಅವಧಿಯಲ್ಲಿ ಶೇ.10.63 ರಷ್ಟು ರಾಜಸ್ವ ಸಂಗ್ರಹ ಹೆಚ್ಚಳವಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.14ರಷ್ಟು ಏರಿಕೆಯಾಗಿದೆ. ತೆರಿಗೆಯೇತರ ರಾಜಸ್ವವು ಶೇ.23.11 ರಷ್ಟು ಹೆಚ್ಚಾಗಿದೆ. ಪ್ರಮುಖವಾಗಿ ಅಬಕಾರಿ ಹಾಗೂ ಮುದ್ರಾಂಕ ಮತ್ತು ನೋಂದಣಿ ಇಲಾಖೆಗಳಿಂದ ರಾಜಸ್ವ ಇಳಿಕೆಯಾಗಿದೆ.



ನರೇಗಾ ಯೋಜನೆಗೆ ಅನುದಾನ ಇಳಿಕೆ

2024-25ರ ಅವಧಿಯಲ್ಲಿ ಮನರೇಗಾ ಯೋಜನೆಗೆ 1,513.38 ಕೋಟಿ ರೂ. ನೀಡಲಾಗಿದ್ದು, ಇದು 2023-24 ವರ್ಷಕ್ಕೆ ಹೋಲಿಸಿದರೆ ಶೇ.7.54 ರಷ್ಟು ಇಳಿಕೆಯಾಗಿದೆ. ಈ ಯೋಜನೆ ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಜನಸಂಖ್ಯೆ ಮತ್ತೊಮ್ಮೆ ನಗರಕ್ಕೆ ಮರಳಿದ್ದರಿಂದ ಇಳಿಕೆ ಆಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

5000 ಕೋಟಿ ರೂ. ಅನುದಾನ ಮೀಸಲಿಡಿ

• **ವಿಧಾನಸಭೆ:** ಕಿತ್ತೂರು ಕರ್ನಾಟಕದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚಿಸಿ ಕನಿಷ್ಠ 5000 ಕೋಟಿ ರೂ.ಗಳ ಅನುದಾನವನ್ನು ಮೀಸಲಿಡುವುದಕ್ಕೆ ಒತ್ತಾಯಿಸಿ ಖಾಸಗಿ ನಿರ್ಣಯ ಮಂಡಿಸಲಾಯಿತು.

ಖಾಸಗಿ ಸದಸ್ಯರ ಕಾರ್ಯಕಲಾಪದಲ್ಲಿ ಕಾಂಗ್ರೆಸ್ ಶಾಸಕ ಎನ್.ಎಚ್. ಕೋನರಡ್ಡಿ ಈ ನಿರ್ಣಯ ಮಂಡಿಸಿದರು. ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಬೆಳಗಾವಿ ವಿಭಾಗದ (ಕಿತ್ತೂರು ಕರ್ನಾಟಕ) ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಬಾಗಲಕೋಟೆ, ವಿಜಯಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳು ಅಭಿವೃದ್ಧಿಯ ದೃಷ್ಟಿಯಿಂದ ಇನ್ನೂ ನಿರೀಕ್ಷಿತ ಮಟ್ಟ ತಲುಪಿಲ್ಲ.

ಈ ಭಾಗದ ಪ್ರಗತಿಗೆ ವಿಶೇಷ ಒತ್ತು ನೀಡುವ ಅವಶ್ಯಕತೆ ಇದ್ದು, ಬೇರೆ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಕಿತ್ತೂರು ಕರ್ನಾಟಕ ಭಾಗವು ಆರ್ಥಿಕವಾಗಿ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (ಶಿಕ್ಷಣ, ಆರೋಗ್ಯ ಸಾಕ್ಷರತೆ) ತೀರಾ ಹಿಂದುಳಿದಿದೆ.

ಈ ಭಾಗದ ಜಿಲ್ಲೆಗಳ ತಲಾ ಆದಾಯ ರಾಜ್ಯದ ಸರಾಸರಿಗಿಂತ ಕಡಿಮೆ ಇದ್ದು, ರಾಜ್ಯದಲ್ಲಿ ಅತೀ ಕಡಿಮೆ ತಲಾ ಆದಾಯ ಹೊಂದಿದೆ. ಈ ಪ್ರದೇಶದಲ್ಲಿ ಬೃಹತ್ ಕೈಗಾರಿಕೆ ಮತ್ತು ಮೂಲಸೌಕರ್ಯಗಳ ಕೊರತೆಯಿದೆ ಎಂದು ಹೇಳಿದರು.

> **ಬಯಲುಸೀಮೆಯಲ್ಲಿ ನಮಗೆ ಏನೂ ಸಿಗುತ್ತಿಲ್ಲ, ಪ್ರತ್ಯೇಕ ಮಂಡಳಿ ಮಾಡಿ ಕಲ್ಯಾಣ ಕರ್ನಾಟಕದಂತೆ ಪ್ರತಿ ವರ್ಷ 5,000 ಕೋಟಿ ರೂ. ನೀಡಿದ್ದರೂ ಕನಿಷ್ಠ 2,500 ಕೋಟಿ ರೂ.ಗಳಾದರೂ ಕೊಡಿ. ಪ್ರತೀ ಶಾಸಕನಿಗೆ ತಲಾ 50 ಕೋಟಿ ರೂ.ಗಳಷ್ಟು ಅಭಿವೃದ್ಧಿ ಕಾರ್ಯಗಳಿಗಾಗಿ ನೀಡಿ.**
>
> ■ **ಬಸನಗೌಡ ಪಾಟೀಲ್ ಯತ್ನಾಳ್**, ಶಾಸಕ

ಟಿಕೆಟ್‌ಗಾಗಿ ಶಾಸಕರ ಬೇಡಿಕೆ

ಪುಟ 1ರಿಂದ ನಮಗೆ ಅಲ್ಲಿ ಒಂದು ಪಾಸೂ ಕೊಡಲ್ಲ, ಕ್ರಿಕೆಟ್ ಸ್ಟೇಡಿಯಂ ಕಟ್ಟೋಕೆ ಸರ್ಕಾರದ ಹಣ ಬೇಕಾ? ಸಾಕಾಗಿದೆ ಮೊನ್ನೆ ಹನ್ನೊಂದು ಜನ ಸತ್ತಿದ್ದಾರೆ. ಜಾಗ ಕೊಟ್ಟಿದ್ದೇವೆ ಕ್ರಿಕೆಟ್ ಆಡಲು, ತರಬೇತಿ ನೀಡಲು, ಅವರ ಬಳಿ ಸಾವಿರಾರು ಕೋಟಿ ದುಡ್ಡಿದೆ. ಆದರೆ ನಾವು ಒಂದು ಟಿಕೆಟ್‌ಗೆ ಅಂಗಲಾಚಬೇಕು ಎಂದು ಅಶೋಕ್ ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ್ ಮಾತನಾಡಿ, ಶಾಸಕರಿಗೆ ಒಂದು ಟಿಕೆಟ್ ಕೊಡುತ್ತಾರೆ. ಅದು ಸಾಮಾನ್ಯ ಗ್ಯಾಲರಿಯಲ್ಲಿ ಹೋಗಿ ಕುಳಿತುಕೊಳ್ಳಬೇಕು. ಮೊದಲು ಎರಡು ಟಿಕೆಟ್ ಕೊಡುತ್ತಿದ್ದರು. ಎಂಎಲ್‌ಎಗಳು ಕೂರಲು ಒಂದು ಅವಕಾಶ ಮಾಡಿ ಕೊಡಿ. ನಮ್ಮ ಮಕ್ಕಳು, ನಮ್ಮ ಮನೆಯವರು ಹೋಗುತ್ತಾರೆ ಎಂದರು. ನಾವು ವಿವಿಐಪಿಗಳು ನಮಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ನಾವು ಕ್ರೀಡಾಂಗಣಕ್ಕೆ ಹೋದರೆ ಮರ್ಯಾದೆ ಇಲ್ಲ, ಶಾಸಕರು, ಸಚಿವರಿಗೆ ಪ್ರತ್ಯೇಕ ಗ್ಯಾಲರಿ ಮಾಡಿ ಎಂದು ಪಕ್ಷಾತೀತವಾಗಿ ಶಾಸಕರು ಒತ್ತಾಯ ಮಾಡಿದರು.

ಈ ವೇಳೆ ಮಧ್ಯಪ್ರವೇಶ ಮಾಡಿದ ಸ್ಪೀಕರ್ ಖಾದರ್, ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು. ಕೆಎಸ್‌ಸಿಎಯವರನ್ನು ಕರೆದು ಮಾತಾಡಬೇಕು. ಅಲ್ಲಿ ಹೋಗಿ ಶಾಸಕರಿಗೆ ಅಗೌರವ ಆಗೋದು ಸರಿಯಲ್ಲ. ಶಾಸಕರ ಕುಟುಂಬಕ್ಕೆ ಕನಿಷ್ಠ 4 ಟಿಕೆಟ್ ಕೊಡಬೇಕು. ಅಲ್ಲಿ ಶಾಸಕರಿಗೆ ಗೌರವ ಕೊಡುವ ಕೆಲಸ ಆಗಬೇಕು ಎಂದು ಸರ್ಕಾರಕ್ಕೆ ಸೂಚಿಸಿದರು.

ಐಪಿಎಲ್ ಟಿಕೆಟ್‌ಗೆ ನನ್ನ ಹತ್ತಿರ ಬರಬೇಡಿ, ಡಿಸಿಎಂ ಹತ್ತಿರ ಹೋಗಿ ಅವರು ಕೊಡಿಸುತ್ತಾರೆ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು. ಇದಕ್ಕೆ ಉತ್ತರಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಶಾಸಕರು ಕೇಳುವುದರಲ್ಲಿ ತಪ್ಪೇನಿಲ್ಲ, ನಾನು ಕೂಡ ಅಲ್ಲಿ ಸದಸ್ಯ, ಕೆಎಸ್‌ಸಿಎ ಅಧ್ಯಕ್ಷರನ್ನು ಕರೆಯಿಸಿ ನಾನು ಮಾತನಾಡುತ್ತೇನೆ.

ಸನ್ನದ್ಧತೆ ಪರಾಮರ್ಶೆ

ಪುಟ 1ರಿಂದ ಪ.ಏಷ್ಯಾ ಸಂಘರ್ಷದಿಂದ ಸೃಜಿಸಲ್ಪಟ್ಟಿರುವ ಸಂಕೀರ್ಣ ಜಾಗತಿಕ ಸನ್ನಿವೇಶಗಳು ದೀರ್ಘಕಾಲ ಮುಂದುವರಿಯುವ ಆತಂಕವಿದೆ. ಹಾಗಾಗಿ ಕೋವಿಡ್ ಸಂದರ್ಭ ಒಗ್ಗಟ್ಟು ಮೆರೆದಂತೆ, ಪ್ರಸಕ್ತ ಎಲ್ಲ ಸವಾಲುಗಳು ಎದುರಾದರೂ ಒಗ್ಗಟ್ಟಾಗಿ ಎದುರಿಸಲು ಸನ್ನದ್ಧರಾಗಿರುವಂತೆ ದೇಶವಾಸಿಗಳನ್ನು ಉದ್ದೇಶಿಸಿ ಪ್ರಧಾನಿ ಮೋದಿ ಸೋಮವಾರ ಲೋಕಸಭೆಯಲ್ಲಿ ಹೇಳಿಕೆ ನೀಡಿದ್ದರು.

ಅನಗತ್ಯವಾಗಿ ಎಲ್‌ಪಿಜಿ ಖರೀದಿಸಬೇಡಿ: ಸಚಿವ

ಪುಟ 1ರಿಂದ ನಗರಗಳಲ್ಲಿ 25 ದಿನ, ಹಳ್ಳಿಗಳಲ್ಲಿ 45 ದಿನದ ನಂತರ ಎಲ್‌ಪಿಜಿ ರೀಫಿಲ್ಲಿಂಗ್‌ಗೆ ಅವಕಾಶವಿದೆ ಎಂದರು. ಅನಗತ್ಯವಾಗಿ ಗ್ಯಾಸ್ ಖರೀದಿ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡಬೇಡಿ. ಪ್ರತಿನಿತ್ಯ 16 ಸಾವಿರ ವಾಣಿಜ್ಯ ಸಿಲಿಂಡರ್ ಕೊಡುತ್ತಿದ್ದೇವೆ. ಹೋಟೆಲ್‌ಗಳಿಗೆ ಅಗತ್ಯಕ್ಕಾಗಿ ಶೇ.20ರಷ್ಟು ಸಿಲಿಂಡರ್ ಪೂರೈಸುತ್ತಿದ್ದೇವೆ. ಆಸ್ಪತ್ರೆಗಳಿಗೆ ಶೇ.100 ರಷ್ಟು ಸಿಲಿಂಡರ್ ಪೂರೈಸುತ್ತಿದ್ದೇವೆ ಎಂದರು. ಹೋಟೆಲ್‌ಗಳಿಗೆ ಇನ್ನೂ ಹೆಚ್ಚಿನ ಸಿಲಿಂಡರ್ ಪೂರೈಕೆ ಮಾಡಲಾಗುತ್ತದೆ. ಈ ಬಗ್ಗೆ ಸೋಮವಾರ ಸಭೆ ಮಾಡಿ ನಿರ್ಧಾರ ಮಾಡುತ್ತೇವೆ. ಗ್ರಾಹಕರು ವಿನಾಕಾರಣ ಗ್ಯಾಸ್ ಏಜೆನ್ಸಿ ಬಳಿ ಸರತಿ ನಿಲ್ಲಬೇಡಿ. ಬುಕ್ ಮಾಡಿದರೆ ನಿಮ್ಮ ಮನೆಗೆ ಸಿಲಿಂಡರ್ ಬರುತ್ತದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.



ಭದ್ರತಾ ಸಂಸ್ಥೆಗಳು ಸನ್ನದ್ಧ ಸ್ಥಿತಿಯಲ್ಲಿ

ಪುಟ 1ರಿಂದ ಆದಷ್ಟು ಸಂಯಮ, ಸಹನೆ ಮತ್ತು ಜಾಗೃತ ಸ್ಥಿತಿಯಲ್ಲಿರುವಂತೆ ಕರೆ ನೀಡಿದ್ದ ಪ್ರಧಾನಿ ಮೋದಿ, ಅಹಿತ್ಯಕಾರ ಮುಖೇನ ಸನ್ನಿವೇಶದ ದುರ್ಲಾಭಕ್ಕೆ ಯತ್ನಿಸುವವರಿದ್ದಾರೆ. ಕಾಳಸಂತೆ ಅಥವಾ ಅಕ್ರಮ ದಾಸ್ತಾನುಗಾರರ ವಿರುದ್ಧ ಪಿಗಾ ಇರಿಸಿ ಅಂತಹ ಶಕ್ತಿಗಳ ವಿರುದ್ಧ ತುರ್ತು ಕ್ರಮ ಕೈಗೊಳ್ಳುವಂತೆ ಎಲ್ಲಾ ರಾಜ್ಯ ಸರಕಾರಗಳನ್ನು ವಿನಂತಿಸಿದ್ದರು.

2 ಕ್ಷೇತ್ರಗಳಲ್ಲೂ ಕಾಂಗ್ರೆಸ್‌ಗೆ ಜಯ: ಸಚಿವೆ ಹೆಬ್ಬಾಳಕರ್

• **ಕುಂದಾಪುರ:** ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲೂ ಮುಂಬರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಗಳಿಸಲಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕುಂದಾಪುರದ ಕೋಟೇಶ್ವರ ಸಮೀಪದ ಯುವ ಮೆರಿಡಿಯನ್ ಹೆಲಿಪ್ಯಾಡ್ ಬಳಿ ಗುರುವಾರ ಮಾಧ್ಯಮಗಳ ಜೊತೆ ಮಾತನಾಡಿದ ಸಚಿವರು, ಸಾಮಾನ್ಯವಾಗಿ ಉಪಚುನಾವಣೆಗಳಲ್ಲಿ ಅಧಿಕಾರದಲ್ಲಿರುವ ಪಕ್ಷದ ಕಡೆಗೆ ಮತದಾರರ ಒಲವಿರುತ್ತದೆ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ಮನೆ ಮನೆಗೆ ತಲುಪಿವೆ. ಗ್ಯಾರಂಟಿ ಯೋಜನೆಗಳಿಂದ ಜನ ಸಾಮಾನ್ಯರಿಗೆ ಸಾಕಷ್ಟು ಅನುಕೂಲ ಆಗಿದೆ. ಅಭಿವೃದ್ಧಿಯ ಜೊತೆಗೆ ಜನರ ಆದಾಯ ಕೂಡ ಜಾಸ್ತಿ ಆಗಿದೆ. ಅದರಲ್ಲೂ ಮಹಿಳಾ ಮತದಾರರು ಸಂತೋಷದಲ್ಲಿದ್ದಾರೆ ಎಂದರು. ಎರಡು ಕ್ಷೇತ್ರಗಳಲ್ಲೂ ಗೆದ್ದೇ ಗೆಲ್ಲುತ್ತೇವೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಟಿಕೆಟ್ ಕೇಳುವ ಹಕ್ಕಿದೆ. ಗೆಲುವೊಂದೇ ನಮಗೆ ಮಾನದಂಡ. ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಕ್ಷೇತ್ರಕ್ಕೆ ಅವರ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಲಾಗಿದೆ. ಇದು ಹೈಕಮಾಂಡ್ ನಿರ್ಧಾರಕ್ಕೆ ನಾವು ಬದ್ಧ ಎಂದರು.

ಯಾವ ಜವಾಬ್ದಾರಿ ಕೊಟ್ಟರೂ ನಿಭಾಯಿಸುವೆ

• **ಬೆಂಗಳೂರು:** ನನಗೆ ಇದೇ ಬೇಕು ಅದೇ ಬೇಕು ಎಂದೆಲ್ಲ ಇಲ್ಲ, ಯಾವ ಜವಾಬ್ದಾರಿ ಕೊಟ್ಟರೂ ಅದನ್ನು ಪ್ರಾಮಾಣಿಕವಾಗಿ ಮಾಡಬೇಕು. ಅದನ್ನು ಮಾಡುತ್ತಿದ್ದೇನೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು. ವಿಧಾನಸಭಾಧ್ಯಕ್ಷರ ಸ್ಥಾನದಲ್ಲಿ ಮಾಡುತ್ತಿರುವ ಕೆಲಸ ತೃಪ್ತಿ ಕೊಟ್ಟಿದೆ. ನನಗೆ ಇಂಥದ್ದೇ ಹುದ್ದೆ ಬೇಕೆಂದೇನು ಇಲ್ಲ, ಏನು ಕೊಟ್ಟರೂ ಜವಾಬ್ದಾರಿಯಿಂದ ನಿರ್ವಹಿಸುತ್ತೇನೆ. ಹುದ್ದೆ ಇಲ್ಲದಿದ್ದರೂ ಶಾಸಕನಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು. ವಿಧಾನಸಭೆಯ ಅವಧಿ ಪೂರ್ಣಗೊಳ್ಳುವ ಮೊದಲೇ ಗ್ರೂಪ್ ಫೋಟೋ ತೆಗೆಸಿದ ವಿಚಾರಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿದ ಅವರು, ವಿಧಾನಪರಿಷತ್ತಿನ ಸದಸ್ಯರು ಗ್ರೂಪ್ ಫೋಟೋ ತೆಗೆಸುತ್ತಿದ್ದಾರೆ ಎನ್ನುವ ವಿಚಾರ ಗೊತ್ತಾಯಿತು. ನಾವೂ ಫೋಟೋ ತೆಗೆಸೋಣ ಅಲ್ಲವೇ ಎಂದಾಗ ಅಧಿಕಾರಿಗಳೆಲ್ಲರೂ ಒಪ್ಪಿದರು. ಹೀಗಾಗಿ ವಿಧಾನಸಭಾ ಸದಸ್ಯರ ಗ್ರೂಪ್ ಫೋಟೋಗೆ ವ್ಯವಸ್ಥೆ ಮಾಡಿದ್ದೆವು ಅಷ್ಟೇ ಎಂದರು.

ಅಧ್ಯಾಪಕನಿಗೆ ಧರ್ಮದೇಟು

ಪುಟ 1ರಿಂದ ಈ ಘಟನೆಯ ವಿಡಿಯೋ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ತಾಲೂಕಿನ ಟಿ.ಬೇಗೂರಿನಲ್ಲಿರುವ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಉಪನ್ಯಾಸಕ ಅಬ್ದುಲ್ ಎಂಬಾತನ ವರ್ತನೆಯಿಂದಾಗಿ ಕ್ಯಾಂಪಸ್ ಬೆಚ್ಚಿಬಿದ್ದಿದೆ. ತರಗತಿಯಲ್ಲಿದ್ದ ವಿದ್ಯಾರ್ಥಿನಿಯ ಬಳಿ ಬಂದ ಅಬ್ದುಲ್, ಚಾಕಲೇಟ್ ನೀಡಿ ಅಸಭ್ಯವಾಗಿ ವರ್ತಿಸಿದ್ದಾನೆ ಎನ್ನಲಾಗಿದೆ. ಉಪನ್ಯಾಸಕನ ಈ ಅತಿರೇಕದ ನಡವಳಿಕೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿನಿ ಕೂಡಲೇ ಆತನನ್ನು ತರಾಟೆಗೆ ತೆಗೆದುಕೊಂಡಿದ್ದಾಳೆ. ವಿದ್ಯಾರ್ಥಿನಿಯ ಪ್ರತಿರೋಧದ ಬೆನ್ನಲ್ಲೇ ರೊಚ್ಚಿಗೆದ್ದ ಇತರೆ ವಿದ್ಯಾರ್ಥಿಗಳು ಉಪನ್ಯಾಸಕನ ಮೇಲೆ ಮುಗಿಬಿದ್ದಿದ್ದಾರೆ. ವಿದ್ಯಾರ್ಥಿಗಳ ಕೈಯಿಂದ ತಪ್ಪಿಸಿಕೊಳ್ಳಲು ಅಬ್ದುಲ್ ತನ್ನ ಕಾರಿನತ್ತ ಓಡುತ್ತಿದ್ದಾಗ ಆತನನ್ನು ಅಡ್ಡಗಟ್ಟಿ ವಿದ್ಯಾರ್ಥಿಗಳ ಗುಂಪು ಹಲ್ಲೆ ನಡೆಸಿದೆ. ಸಂತ್ರಸ್ತ ವಿದ್ಯಾರ್ಥಿನಿ ಚಪ್ಪಲಿಯಿಂದ ಹಲ್ಲೆ ಮಾಡಿದರೆ, ಉಳಿದ ವಿದ್ಯಾರ್ಥಿಗಳು ಕಾಲಿನಿಂದ ಒದ್ದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯದ ಗೃಹ ಸಚಿವ ಒಡೆತನದ ಶಿಕ್ಷಣ ಸಂಸ್ಥೆಯಲ್ಲೇ ಹೆಣ್ಣುಮಕ್ಕಳಿಗೆ ಇಂತಹ ಪರಿಸ್ಥಿತಿ ಬಂದೊದಗಿರುವುದು ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ. ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಧ್ಯಾಪಕ ವಿರುದ್ಧ ಪ್ರಕರಣ ದಾಖಲಾಗಿದೆ.

ಡಿಕೆಶಿ-ಮುನಿರತ್ನ ಜಟಾಪಟಿ

• **ವಿಧಾನಸಭೆ:** ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಬಿಜೆಪಿ ಶಾಸಕ ಮುನಿರತ್ನ ನಡುವೆ ನಡೆದ ವೈಯಕ್ತಿಕ ಜಟಾಪಟಿಯಿಂದ ಸದನದಲ್ಲಿ ಗದ್ದಲದ ವಾತಾವರಣ ಉಂಟಾಯಿತು. ಇವರಿಬ್ಬರ ಮಾತಿನ ಚಕಮಕಿಯು ಆಡಳಿತ ಪಕ್ಷದ ಶಾಸಕರು ಧರಣಿ ನಡೆಸುವ ಪ್ರಸಂಗ ಜರುಗಿತು.

ಬೆಂಗಳೂರು ನಗರದ ಅಭಿವೃದ್ಧಿ ಕುರಿತಂತೆ ನಡೆದ ಚರ್ಚೆಯಲ್ಲಿ ಡಿ.ಕೆ.ಶಿವಕುಮಾರ್ ಉತ್ತರಿಸುವಾಗ ಆಡಿದ ಮಾತು ಮುನಿರತ್ನ ಅವರನ್ನು ಕೆರಳಿಸಿತು. ಪ್ರತಿಯಾಗಿ ಮುನಿರತ್ನ ಅವರೂ ಕೂಡ ಏರಿದ ಧ್ವನಿಯಲ್ಲಿ ಮಾತನಾಡಿದರು. ಇದಕ್ಕೆ ಆಡಳಿತ ಪಕ್ಷದ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮಾತನಾಡಿದಾಗ ವಿಪಕ್ಷ ನಾಯಕ ಆರ್.ಅಶೋಕ್ ಮಧ್ಯಪ್ರವೇಶಿಸಿ, ವೈಯಕ್ತಿಕ ವಿಚಾರ ಚರ್ಚೆಯಾಗುವುದು ಬೇಡ, ಉಪಮುಖ್ಯಮಂತ್ರಿ ಹಾಗೂ ಶಾಸಕರು ಬಳಸಿರುವ ಶಬ್ದಗಳನ್ನು ಮತ್ತು ವಿಚಾರವನ್ನು ಕಡತದಿಂದ ತೆಗೆಸಿ ಎಂಬ ಸಲಹೆ ಮಾಡಿದರು. ಮುನಿರತ್ನ ಅವರನ್ನು ಸಮಾಧಾನಪಡಿಸಲು ಸಭಾಧ್ಯಕ್ಷರು ಪದೇಪದೇ ಯತ್ನಿಸಿದರೂ ಪ್ರಯೋಜನವಾಗಲಿಲ್ಲ, ಬೆಂಗಳೂರು ಅಭಿವೃದ್ಧಿ ಕುರಿತಂತೆ ಪ್ರಸ್ತಾಪವಾದ ವಿಚಾರಗಳನ್ನು ಹೊರತುಪಡಿಸಿ ಉಳಿದೆಲ್ಲಾ ವಿಚಾರಗಳನ್ನು ಕಡತದಿಂದ ತೆಗೆಯಲು ಸೂಚಿಸಿದರು.

ಕ್ರಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ ಅಳವಡಿಕೆ

• **ವಿಧಾನಪರಿಷತ್:** ಆಲಮಟ್ಟಿ ಜಲಾಶಯವನ್ನು 509 ಅಡಿಗಳಿಂದ 524.56 ಅಡಿಗೆ ಎತ್ತರಿಸಲು ಪೂರಕವಾಗಿ 26 ರೇಡಿಯಲ್ ಕ್ರಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ ಅಳವಡಿಕೆಗೆ ಮೇಲ್ಮನೆಯಲ್ಲಿ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಕುರಿತು ನಿರ್ಣಯವನ್ನು ಮಂಡಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಆಲಮಟ್ಟಿ ಜಲಾಶದಲ್ಲಿ ಹೂಳು ತುಂಬಿರುವುದು ಹಾಗೂ ಕರ್ನಾಟಕದ ಪಾಲಿನ ನೀರಿನ ಸದ್ಬಳಕೆಗೆ ಅಣೆಕಟ್ಟೆಯನ್ನು ಎತ್ತರಿಸಬೇಕಿದೆ. ಜಲಾಶಯದ ಕ್ರಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್‌ಗಳ ಅಳವಡಿಸಬೇಕಿದೆ. ಅಣೆಕಟ್ಟೆಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಸದ್ಯಕ್ಕೆ ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಅರ್ಜಿಗಳಿಲ್ಲ, ಈ ಕುರಿತಂತೆ ನ್ಯಾಯಾಲಯ, ನ್ಯಾಯಾಧೀಕರಣದಿಂದ ಯಾವುದೇ ತಡೆಯಾಜ್ಞೆಯೂ ಇಲ್ಲ, ಹೀಗಾಗಿ ಜಲಾಶಯದಲ್ಲಿ 303 ಟಿಎಂಸಿ ನೀರು ಸಂಗ್ರಹಿಸಲು ಈ ನಿರ್ಣಯ ತರಲಾಗಿದೆ. ಇದನ್ನು ಕೆಳಮನೆ ಈಗಾಗಲೇ ಅಂಗೀಕರಿಸಿದೆ ಎಂದು ಸದನಕ್ಕೆ ವಿವರಿಸಿದರು. ಅದನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ಇದಕ್ಕೂ ಮೊದಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ವಿಧಾನಸಭೆಯಲ್ಲಿ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣ (ತಿದ್ದುಪಡಿ) ವಿಧೇಯಕ 2026 ಅನ್ನು ಮಂಡಿಸಿದರು. ಸಾಮಾನ್ಯ ಹಾಗೂ ಸ್ಲೀಪರ್ ಬಸ್ ಮೇಲಿನ ತೆರಿಗೆಯನ್ನು ಕಡಿತಗೊಳಿಸುವುದು ಹಾಗೂ ಮತ್ತಿತರೆ ವಾಹನಗಳ ತೆರಿಗೆಯನ್ನು ಹೆಚ್ಚಿಸುವುದು ಮಸೂದೆಯ ಉದ್ದೇಶವನ್ನು ವಿವರಿಸಿದರು.

ಅದನ್ನು ಸ್ವಾಗತಿಸಿ ಮಾತನಾಡಿದ ಬಿಜೆಪಿಯ ನವೀನ್ ಕೆ.ಎಸ್, ಶರವಣ ಅವರು, ಕರ್ನಾಟಕದಲ್ಲಿ ಅನ್ಯ ರಾಜ್ಯಗಳ ಬಸ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಿವೆ ಎಂದರು.

ಜನ, ಶಾಸಕರ ಆಶೀರ್ವಾದ ನನಗಿದೆ

ಪುಟ 1ರಿಂದ ಈ ಬಾರಿ 1.37 ಲಕ್ಷ ಕೋಟಿ ಸಾಲ ಪಡೆದಿದ್ದೇವೆ. ಆದರೆ, ಬಜೆಟ್ ಗಾತ್ರ 4.48 ಲಕ್ಷ ಕೋಟಿ ರೂ. ಇದೆ. 2025-26ಕ್ಕೆ ಕೇಂದ್ರ ಸರ್ಕಾರದ ಬೆಳವಣಿಗೆ ಶೇ.5.6 ರಷ್ಟಿದ್ದರೆ, ರಾಜ್ಯದ್ದು ಶೇ.9.6 ರಷ್ಟು ಇದೆ. ಕೇಂದ್ರ ಸರ್ಕಾರ 16.96 ಲಕ್ಷ ಕೋಟಿ ರೂ. ಸಾಲ ಮಾಡಿದೆ. ಡಾ.ಮನಮೋಹನ್ ಸಿಂಗ್ ಇದ್ದಾಗ 53.11 ಲಕ್ಷ ಕೋಟಿ ರೂ. ಸಾಲ ಮಾಡಿದ್ದರು. ಈಗ 217 ಕೋಟಿ ರೂ. ಸಾಲ ಮಾಡಿದ್ದಾರೆ ಎಂದು ವಿವರಿಸಿದರು. ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯ ಬಹಳ ಹಿಂದುಳಿದಿದೆ ಎಂದು ಸದಸ್ಯ ಸಿ.ಟಿ. ರವಿ ಸದನಕ್ಕೆ ಪ್ರಶ್ನಿಸಿದ್ದರು. ಹಾಗಾಗಿ ಬೇರೆ ರಾಜ್ಯದೊಂದಿಗೆ ತೆರಿಗೆ ಹೋಲಿಕೆ ಮಾಡಿದರೆ, 2024-25ರಲ್ಲಿ 2,3,393 ಕೋಟಿ ರೂ. ಆದಾಯ ಅಂದಾಜು ಮಾಡಲಾಗಿದ್ದು 1.59(ಶೇ.92.2) ಲಕ್ಷ ಕೋಟಿ ರೂ. ಚೇತರಿಕೆ ಕಂಡುಬಂದಿದೆ. 2025ರಿಂದ 26ರಲ್ಲಿ 2,24,600 ಕೋಟಿ ರೂ. ಆದಾಯ ಅಂದಾಜು ಮಾಡಲಾಗಿದ್ದು, 2,10,600(ಶೇ.93.8) ಕೋಟಿ ರೂ. ಚೇತರಿಕೆಯಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಚೇತರಿಕೆಯಾಗಿರುವ ಶೇಕಡವಾರು ನಮ್ಮ ರಾಜ್ಯವೇ ಜಾಸ್ತಿ ಇದೆ ಎಂದರು.

ಪ್ರತಿ ಬಾರಿಯೂ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಹೋಲಿಕೆ ಮಾಡಿಕೊಳ್ಳಬೇಡಿ ಎಂದು ಪ್ರತಿಪಕ್ಷದ ನಾಯಕರು ಹೇಳುತ್ತಾರೆ. ನಾವು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ರಾಜ್ಯ ಸರ್ಕಾರಗಳು ಆರ್ಥಿಕವಾಗಿ ಸದೃಢವಾದರೆ ಕೇಂದ್ರ ಸರ್ಕಾರವು ಸದೃಢವಾಗುತ್ತದೆ. ಅದೇ ರೀತಿ ಕೇಂದ್ರ ಸರ್ಕಾರ ಸದೃಢವಾದರೆ ಸಾಮಾನ್ಯವಾಗಿ ರಾಜ್ಯಗಳು ಪ್ರಬಲವಾಗುತ್ತವೆ. ಇದನ್ನೇ ಒಕ್ಕೂಟ ವ್ಯವಸ್ಥೆ ಎಂದು ಹೇಳುವುದು. ರಾಜ್ಯ ಸರ್ಕಾರದ ಬಜೆಟ್ ಅನ್ನು ನಾವು ಮುನ್ಸಿಪಾಲಿಟಿಗೆ ಹೋಲಿಕೆ ಮಾಡಲು ಆಗುವುದಿಲ್ಲ, ಕೇಂದ್ರ ಸರ್ಕಾರಕ್ಕೆ ಹೋಲಿಕೆ ಮಾಡಲೇಬೇಕಾಗುತ್ತದೆ. ಕರ್ನಾಟಕದಿಂದ ಪ್ರತಿ ವರ್ಷ ಕೇಂದ್ರಕ್ಕೆ ಲಕ್ಷಾಂತರ ಕೋಟಿ ತೆರಿಗೆ ಪಾವತಿಸುತ್ತೇವೆ. 2025-26ರಲ್ಲಿ ಕರ್ನಾಟಕ ಕೇಂದ್ರಕ್ಕೆ 5 ಲಕ್ಷ ಕೋಟಿ ರೂ.ಗಿಂತಲೂ ಅಧಿಕ ತೆರಿಗೆ ಪಾವತಿಸಿದೆ. ಆದರೆ, ನಮಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರುವುದು ಅಲ್ಪ ಪ್ರಮಾಣದ ಅನುದಾನ. ನಮ್ಮ ರಾಜ್ಯಕ್ಕೆ ಅನ್ಯಾಯವಾದಾಗ ನಾವು ಪ್ರಶ್ನೆ ಮಾಡಲೇಬೇಕಾಗುತ್ತದೆ. ಟೀಕೆ ಮಾಡದಿದ್ದರೆ ಅದನ್ನು ಸರ್ವಾಧಿಕಾರಿ ಧೋರಣೆ ಆಗುತ್ತದೆ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳ ಉತ್ತರ ಖಂಡಿಸಿ, ಬಜೆಟ್‌ನಲ್ಲಿ ದಲಿತರಿಗೆ ದೊಡ್ಡ ಮಟ್ಟದ ಅನ್ಯಾಯ ಮಾಡಲಾಗಿದೆ. ಮುಖ್ಯಮಂತ್ರಿಗಳ ಬಜೆಟ್ ಮೇಲಿನ ಉತ್ತರವೂ ನಮಗೆ ಬೇಸರ ತರಿಸಿದೆ ಎಂದು ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಪ್ರತಿಪಕ್ಷ ಸದಸ್ಯರು ಸಭಾತ್ಯಾಗ ಮಾಡಿದರು. ಬಿಜೆಪಿ ಸದಸ್ಯರ ಸಭಾತ್ಯಾಗದ ನಡುವೆಯೇ ಕರ್ನಾಟಕ ಧನ ವಿನಿಯೋಗ ವಿಧೇಯಕ ಅಂಗೀಕಾರವಾಯಿತು. ಬಿಜೆಪಿ ಸದಸ್ಯರು ದಲಿತ ವಿರೋಧಿ ಸರ್ಕಾರ ಎಂದು ಘೋಷಣೆ ಕೂಗಿದರೆ, ಅದಕ್ಕೆ ಪ್ರತಿಯಾಗಿ ಸಿಎಂ ಸಿದ್ದರಾಮಯ್ಯ, ಸಭಾನಾಯಕ ಎನ್.ಎಸ್.ಭೋಸರಾಜ್, ಎಚ್.ಸಿ.ಮಹಾದೇವಪ್ಪ ಹಾಗೂ ಇನ್ನಿತರ ಕಾಂಗ್ರೆಸ್ ಸದಸ್ಯರು ಬಿಜೆಪಿಗರು ಮನುವಾದಿಗಳು, ಪಲಾಯನವಾದಿಗಳು ಎಂದು ಜೋರಾಗಿ ಕೂಗಿದರು.

ವಿದೇಶ ಪ್ರಯಾಣ ದುಂದು ವೆಚ್ಚವಲ್ಲವೇ?

ಪುಟ 1ರಿಂದ 2022-23ರಲ್ಲಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ 37 ಕೋಟಿ ರೂ. ಖರ್ಚು ಮಾಡಿದ್ದಾರೆ. ಅಲ್ಲದೇ, ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶ ಪ್ರಯಾಣಕ್ಕೆ 814 ಕೋಟಿ ಹಣವನ್ನು ವೆಚ್ಚ ಮಾಡಿದ್ದಾರೆ. ಇದೆಲ್ಲ ವಿಪಕ್ಷದವರಿಗೆ ದುಂದುವೆಚ್ಚ ಅಲ್ಲವೇ? ಎಂದು ತಮ್ಮ ನಡೆಯನ್ನು ಮುಖ್ಯಮಂತ್ರಿಗಳು ಸಮರ್ಥಿಸಿಕೊಂಡರು.

ಪರಿಶಿಷ್ಟರ ಒಳ ಮೀಸಲು ಸದ್ಯಕ್ಕಿಲ್ಲ

ಪುಟ 1ರಿಂದ ಒಳ ಮೀಸಲಾಯಿತಿ ಸಂಬಂಧಿಸಿ ವಿಶೇಷ ಸಚಿವ ಸಂಪುಟ ಸಭೆ ಶುಕ್ರವಾರ ನಿಗದಿಯಾಗಿತ್ತು. ಇದು ಸಾರ್ವತ್ರಿಕವಾಗಿರುವ ತಾತ್ವಿಕ ವಿಷಯ ಆಗಿರುವುದರಿಂದ ಅಡ್ವೋಕೇಟ್ ಜನರಲ್ ಅವರು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದ್ದರಿಂದ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಅದನ್ನು ಮುಂದೂಡಲಾಗಿದೆ ಎಂದು ವಿವರಿಸಿದರು.

ಜಲಸಂಪನ್ಮೂಲ ಇಲಾಖೆಯಲ್ಲಿ 2003ರ ಮೊದಲು ನೇಮಕಾತಿ ಹೊಂದಿ ಇಲಾಖಾ ಬೇರ್ಪಡಿಕೆ ಸಂದರ್ಭದಲ್ಲಿ ಯಾವ ಇಲಾಖೆಗೆ ಸೇರುತ್ತೇವೆ ಎಂದು ಅಭಿಮತ ಸಲ್ಲಿಸದೇ ಜಲಸಂಪನ್ಮೂಲ ಇಲಾಖೆಯಲ್ಲೇ ಮುಂದುವರಿದಿರುವ 379 ಅಧಿಕಾರಿ ಹಾಗೂ ನೌಕರರನ್ನು ಜಲಸಂಪನ್ಮೂಲ ಇಲಾಖೆಯ ಆಯಾ ವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಪರಿಗಣಿಸಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಸಚಿವರು ತಿಳಿಸಿದರು.

ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ (ಆರ್‌ಬಿಎಸ್‌ಕೆ) ಯೋಜನೆಯಲ್ಲಿ ಅನುಮತಿಸಲಾದ 148 ಚಿಕಿತ್ಸಾ ಕಾರ್ಯವಿಧಾನಗಳು, ಅಲ್ಲದೇ ಆರ್‌ಬಿಎಸ್‌ಕೆ ಒಪ್ಪಂದ(ಎಂಒಯು)ದಲ್ಲಿ ಸೇರಿಲ್ಲದ ಹೆಚ್ಚಿನ ಚಿಕಿತ್ಸೆಗಳನ್ನು ಕೈಗೊಂಡಿದ್ದಕ್ಕಾಗಿ 2015-16ರಿಂದ 2018-19ನೇ ಆರ್ಥಿಕ ವರ್ಷದ ಬಾಕಿಯಿರುವ 23.30 ಕೋಟಿ ರೂ.ಗಳ ಮೊತ್ತದ ಬಿಲ್ಲುಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಅನುದಾನದಿಂದ ಪಾವತಿಸಲು ಸಮ್ಮತಿಸಲಾಗಿದೆ ಎಂದರು.

ಅವರ ನಿಬಂಧಕರ ಹುದ್ದೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶ ಎ.ಜಿ. ಗಂಗಾಧರ ಅವರನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಲು ಅನುಮೋದನೆ ನೀಡಲಾಗಿದೆ. ಅಲ್ಲದೆ, ಲೋಕೋಪಯೋಗಿ ಇಲಾಖೆಯ ಸಿಂದಗಿ ಉಪ ವಿಭಾಗದ ಅಂದಿನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಶಾಂತ ಗಿಡ ದಾನಪ್ಪಗೋಳ ವಿರುದ್ಧ ಕರ್ನಾಟಕ ಲೋಕಾ ಕಾಯ್ದೆಯಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪ ಲೋಕಾಯುಕ್ತರು ಮಾಡಿರುವ ಶಿಫಾರಸನ್ನು ಕೈಬಿಡಲು ತೀರ್ಮಾನಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಶ್ರೀರಾಮೋತ್ಸವದ ಮಾತೃ ಸಮಾವೇಶದಲ್ಲಿ ರಾಘವೇಶ್ವರ ಶ್ರೀಗಳಿಂದ ಪ್ರದಾನ
3 ಮಕ್ಕಳ ತಾಯಂದಿರಿಗೆ ಧನ್ಯಜನನೀ ಪ್ರಶಸ್ತಿ

ಹೊಸನಗರ: ಮೂರು ಅಥವಾ ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದ 87 ಮಾತೆಯರಿಗೆ ಧನ್ಯಜನನೀ ಪ್ರಶಸ್ತಿಯನ್ನು ಶ್ರೀರಾಮ ಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ನೀಡಿ ಗೌರವಿಸಿದರು.



ಹೊಸನಗರದ ಶ್ರೀ ರಾಮಚಂದ್ರಾಪುರ ಮಠದಲ್ಲಿ ನಡೆಯುತ್ತಿರುವ ಶ್ರೀರಾಮೋತ್ಸವದ ಮಾತೃ ಸಮಾವೇಶದಲ್ಲಿ ಮಾತನಾಡಿದ ಶ್ರೀಗಳು, ಸಂತಾನವೇ ಸಂಪತ್ತಾಗಿದ್ದು, ಮಕ್ಕಳು ಬೇಡ ಎಂಬ ಆಧುನಿಕ ಚಿಂತನೆ ದೇಶದ ವಿನಾಶಕ್ಕೆ ಕಾರಣವಾಗಬಹುದಾಗಿದೆ. ಮಿತ ಸಂತಾನದಿಂದ ಸಮಾಜ ಪೇಕ್ಷೆಯವಾಗುವ ಅಪಾಯ ಎದುರಾಗಿದ್ದು, ಸಮಾಜ ಪಕ್ಷಣ ಎಚ್ಚೆತ್ತುಕೊಳ್ಳಬೇಕಿದೆ ಎಂದು ಹೇಳಿದರು.

ಮದುವೆಯ ಮೂಲ ಉದ್ದೇಶವೇ ಉತ್ತಮ ಸಂತಾನವನ್ನು ಪಡೆಯುವುದಾಗಿದ್ದು, ಒಂದೇ ಮಕ್ಕಳನ್ನು ಹೊಂದಿದರೆ ನಮ್ಮ ಜನಸಂಖ್ಯೆ ಅರ್ಧಕ್ಕೆ ಇಳಿದಂತೆ. ಇಬ್ಬರು ಮಕ್ಕಳನ್ನು ಪಡೆದರೆ ಅಲ್ಲಿಂದಲ್ಲಿಗೆ ಆದಂತಾಗುತ್ತದೆ. ಮೂರು ಮಕ್ಕಳನ್ನು ಪಡೆದಾಗ ಸಮಾಜ ಸಶಕ್ತವಾಗಲು ಸಾಧ್ಯ. ಮೂರು ಮಕ್ಕಳು ಎನ್ನುವಾಗ ತಲೆತಗ್ಗಿಸುವ ಅವಶ್ಯಕತೆ ಇಲ್ಲ. ಸಮಾಜ ಅಂತಹ ಮಾತೆಯರನ್ನು ಗೌರವಿಸಬೇಕಿದೆ ಎಂದರು.

ಡಿಸೆಂಬರ್ 2024 ರಲ್ಲಿ ನಡೆದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ ನಾವು ಈ ವಿಷಯವನ್ನು ಪ್ರಸ್ತಾಪಿಸಿದ್ದೆವು. ಅದು ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದ್ದು, ಕಿರಿಯ ವಯಸ್ಸಿನ ಅನೇಕರು ಯುವ ದಂಪತಿಗಳಿಗೆ ಮಕ್ಕಳೆಂಬ ಸಂಪತ್ತನ್ನು ಪಡೆಯುವಂತೆ ಪ್ರೇರಣೆ ನೀಡುತ್ತಿರುವುದು ಕಂಡುಬರುತ್ತಿದೆ. ತಾಯಿ ಎಂಬ ಪದವಿಯು ಜಗತ್ತಿನ ಎಲ್ಲಾ ಪದವಿಗಿಂತ ಬಹುದೊಡ್ಡ ಪದವಿಯಾಗಿದ್ದು, ಪ್ರಜಾ ಸಂಪತ್ತನ್ನು ಸಂವರ್ಧಿಸುವ ತಾಯಿಯನ್ನು ಸಮಾಜ ಗೌರವಿಸಬೇಕು. ಇಂದಿನ ಯುವ ಪೀಳಿಗೆ ದುಡಿಮೆಯಲ್ಲಿ ಮೈಮರೆತು ಪ್ರಜಾ ಸಂವರ್ಧನೆಯ ಕರ್ತವ್ಯದಿಂದ ದೂರವಾಗುತ್ತಿರುವುದು ಆತಂಕಕಾರಿ ಎಂದು ಕಳವಳ ವ್ಯಕ್ತಪಡಿಸಿದರು.

ಕಂಚಿಯ ಪರಮಾಚಾರ್ಯರು ಕೆಲವು ದಶಕಗಳ ಮೊದಲು 10 ಮಕ್ಕಳನ್ನು ಹೆತ್ತ ತಾಯಿಗೆ ವೀರಮಾತಾ ಪ್ರಶಸ್ತಿ ನೀಡಿ ಆಶೀರ್ವಾದ ಮಾಡುತ್ತಿದ್ದರು. ಅಭಿನವ ಶಂಕರರಾದ ಅವರು ಪ್ರಜಾ ಸಂಪತ್ತಿನ ಮಹತ್ವವನ್ನು ಅಂದೇ ಗುರುತಿಸಿದ್ದರು ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ರಾಮೋತ್ಸವದ ಪ್ರಯುಕ್ತ ಪುಷ್ಪ ರಥೋತ್ಸವ, ಪೂಗ ಪೂಜೆ, ಮಾತೆಯರಿಂದ ಕುಂಕುಮಾರ್ಚನೆ, ಅಖಂಡ ಭಜನೆಗೆ ಚಾಲನೆ ದೊರೆಯಿತು. ನಾಳೆ ಹಾಗೂ ನಾಡಿದ್ದು ರಾಮೋತ್ಸವದ ಅಂಗವಾಗಿ ರಾಮಜನ್ಮೋತ್ಸವ, ರಥೋತ್ಸವ, ಸೀತಾರಾಮ ಪಟ್ಟಾಭಿಷೇಕ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಎಸ್ಸೆಸ್ಸೆಲ್ಸಿ 30ರ ಪರೀಕ್ಷೆ 31ಕ್ಕೆ ಮುಂದೂಡಿಕೆ

ಬೆಂಗಳೂರು: 2026ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆ ವೇಳಾಪಟ್ಟಿಯಲ್ಲಿ ಮಹತ್ವದ ಬದಲಾವಣೆ ಮಾಡಿದ್ದು, ಮಹಾವೀರ ಜಯಂತಿ ರಜೆ ಬದಲಾವಣೆ ಹಿನ್ನೆಲೆಯಲ್ಲಿ ಮಾ.30 ರಂದು ನಿಗದಿಯಾಗಿದ್ದ ತೃತೀಯ ಭಾಷೆ ಪರೀಕ್ಷೆಯನ್ನು ಮಾ.31 ಕ್ಕೆ ಮುಂದೂಡಲಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ಈ ಹಿಂದೆ ಪ್ರಕಟಿಸಿದ್ದ ಅಂತಿಮ ವೇಳಾಪಟ್ಟಿ ಪ್ರಕಾರ ಮಾ.30 ರಂದು ತೃತೀಯ ಭಾಷೆ ಪರೀಕ್ಷೆಯನ್ನು ನಡೆಸಲು ನಿರ್ಧರಿಸಲಾಗಿತ್ತು. ಆದರೆ, ರಾಜ್ಯ ಸರ್ಕಾರವು ಮಹಾವೀರ ಜಯಂತಿ ಪ್ರಯುಕ್ತ ನೀಡಲಾಗಿದ್ದ ಸಾರ್ವತ್ರಿಕ ರಜೆಯನ್ನು ಮಾ.31ರ ಬದಲಾಗಿ ಮಾ.30 ರಂದು ಬದಲಾಯಿಸಿ ಆದೇಶಿಸಿದೆ. ಈ ಸರ್ಕಾರದ ಹೊಸ ಆದೇಶದ ಹಿನ್ನೆಲೆ ಪರೀಕ್ಷಾ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ. ಉಳಿದ ವಿಷಯಗಳ ಪರೀಕ್ಷೆಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಶಾಸಕರ ಹಾಜರಾತಿಗೆ ಬಯೋಮೆಟ್ರಿಕ್

ಬೆಂಗಳೂರು: ಮುಂದಿನ ವಿಧಾನಮಂಡಲ ಅಧಿವೇಶನದ ವೇಳೆಗೆ ಶಾಸಕರ ಹಾಜರಾತಿಗೆ ಬಯೋಮೆಟ್ರಿಕ್ ಬಳಸುವುದು ಹಾಗೂ ಕಾಗದರಹಿತ ಶಾಸನಸಭೆ ನಡೆಸಲು ಪ್ರಯತ್ನಿಸಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.



ಗುರುವಾರ ವಿಧಾನಸಭೆ ಕಾರ್ಯಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, ಪ್ರಸ್ತುತ ಶಾಸಕರ ಹಾಜರಾತಿಗಾಗಿ ದಿನಪಟ್ಟಿಯನ್ನು ನಿರ್ವಹಣೆ ಮಾಡಲಾಗುತ್ತಿದೆ. ಪ್ರತಿ ಶಾಸಕರೂ ಅದರಲ್ಲಿ ಸಹಿ ಮಾಡಿ, ಪ್ರವೇಶದ ಸಮಯ ಬರೆಯ ಬೇಕಿದೆ. ಈ ವ್ಯವಸ್ಥೆಯನ್ನು ಬಯೋಮೆಟ್ರಿಕ್ ಮಾಡಲು ನಿರ್ಧರಿಸಲಾಗಿದೆ ಎಂದರು.

ಹಾಜರಾತಿಗೆ ಶಾಸಕರ ಬೆರಳಚ್ಚು ಮಾತ್ರ ಪಡೆಯಬೇಕಾ ಅಥವಾ ಮುಖದ ಚಿತ್ರ, ಆಳವಡಿಸಬೇಕಾ ಎಂಬುದು ಇನ್ನೂ ನಿರ್ಣಯ ಮಾಡಿಲ್ಲ, ಕೆಲ ಹಿರಿಯ ಶಾಸಕರ ಬೆರಳಚ್ಚು ಬಾರದೆಯೂ ಇರಬಹುದು. ಆದ್ದರಿಂದ ಮುಖದ ಚಿತ್ರ ಪಡೆಯುವ ಆಲೋಚನೆಯೂ ಇದೆ. ಬಯೋಮೆಟ್ರಿಕ್ ಯಂತ್ರವನ್ನು ವಿಧಾನಸಭಾಂಗಣದ ಪ್ರವೇಶದ್ವಾರಗಳ ಬಳಿ ಅಳವಡಿಸುವ ಸಲಹೆಗಳು ಬಂದಿವೆ. ಮುಂದಿನ ಅಧಿವೇಶನದ ವೇಳೆಗೆ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಅನುಷ್ಠಾನಿಸುತ್ತೇವೆ ಎಂದು ವಿವರಿಸಿದರು.

ಈ ಮೊದಲು ವಿಧಾನಮಂಡಲದ ವೆಚ್ಚದಲ್ಲೇ ನಮ್ಮದೇ ಆದ ಅಪ್ಲಿಕೇಶನ್ ಅಭಿವೃದ್ಧಿಪಡಿಸಬೇಕೆಂಬ ಪ್ರಸ್ತಾವವಿತ್ತು. ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಭಾಧ್ಯಕ್ಷರಾಗಿದ್ದಾಗಲೇ ಈ ಪ್ರಯತ್ನಗಳು ನಡೆದಿದ್ದವು. ಅದೇ ರೀತಿ ನೇವ ಅಳವಡಿಕೆಯ ಚರ್ಚೆಗಳು ಆಗಿದ್ದವು. ನೇವ ಅಳವಡಿಸಿಕೊಂಡರೆ ಕೇಂದ್ರ (ಸಂಸತ್)ಶೇ.60ರಷ್ಟು ಖರ್ಚನ್ನು ಭರಿಸುತ್ತದೆ. ಉಳಿದ ಶೇ.40 ರಷ್ಟು ಖರ್ಚನ್ನು ರಾಜ್ಯ ಕೊಡಬೇಕಾಗುತ್ತದೆ. ಹೀಗಾಗಿ ಅದನ್ನೇ ಆಯ್ಕೆ ಮಾಡಿಕೊಂಡಿದ್ದು, ಅದಕ್ಕೀಗ ಕೇಂದ್ರ ಸರ್ಕಾರವೂ ಸಮ್ಮತಿಸಿದೆ. ಮುಂದಿನ ವಾರ ನೇವ ತಂಡವು ರಾಜ್ಯಕ್ಕೆ ಆಗಮಿಸಿ ಇ- ವಿಧಾನ್ ಖರ್ಚು, ವೆಚ್ಚ, ಅದರ ಕಾರ್ಯನಿರ್ವಹಣೆ ಇತ್ಯಾದಿಗಳ ಬಗ್ಗೆ ವಿವರಿಸಲಿದ್ದು, 3 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವ ವಿಶ್ವಾಸವಿದೆ ಎಂದರು.

ಶಾಸನಸಭೆ ಇನ್ನು ಡಿಜಿಟಲ್

ಸಂಸತ್ ಮಾದರಿಯಲ್ಲಿ ಕರ್ನಾಟಕ ವಿಧಾನಮಂಡಲ ಶಾಸನ ಸಭೆಯನ್ನು ಡಿಜಿಟಲೀಕರಿಸಲು ತೀರ್ಮಾನಿಸಿದೆ. ರಾಷ್ಟ್ರೀಯ ಇ-ವಿಧಾನ್ ಅಪ್ಲಿಕೇಶನ್ (ನೇವ) ಮೂಲಕ ಇದನ್ನು ಅನುಷ್ಠಾನಕ್ಕೆ ತರಲಾಗುವುದು. ಈಗಾಗಲೇ ಅನೇಕ ರಾಜ್ಯಗಳು ಇದೇ ಅಪ್ಲಿಕೇಶನ್ ಅಳವಡಿಸಿಕೊಂಡಿದ್ದು, ಕರ್ನಾಟಕ ವಿಧಾನಮಂಡಲಕ್ಕೂ ಇದನ್ನೇ ಅಳವಡಿಸಿಕೊಳ್ಳಲು ತೀರ್ಮಾನಿಸಿದ್ದೇವೆ ಎಂದರು.

ಕಿರುಸುದ್ದಿ

ಯಶಸ್ವಿ ಅಧಿವೇಶನ

ಬೆಂಗಳೂರು: ಹದಿನಾರನೆಯ ವಿಧಾನಸಭೆಯ 9ನೇ ಅಧಿವೇಶನದ ಮುಂದುವರಿದ ಉಪವೇಶನವು ಯಶಸ್ವಿಯಾಗಿ ನಡೆದಿದ್ದು, ಎರಡು ದಾಖಲೆಗಳಾಗಿವೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು. ವಿಧಾನಸಭೆಯ ಕಾರ್ಯಕಲಾಪವನ್ನು ಗುರುವಾರ ಅನಿರ್ದಿಷ್ಟ ಅವಧಿಗೆ ಮುಂದೂಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಕಾರ್ಯಕಲಾಪಗಳ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾ. 6ರಿಂದ 26ರವರೆಗೆ ಒಟ್ಟು 13 ದಿನಗಳ ಕಾಲ 80 ತಾಸು 12 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ. 2026-27ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾ.6ರಂದು ಮುಖ್ಯಮಂತ್ರಿಯವರು ಮಂಡಿಸಿದ್ದು, ಅದರ ಕುರಿತ ಸಾಮಾನ್ಯ ಚರ್ಚೆ ಮತ್ತು ಅನುದಾನಗಳ ಬೇಡಿಕೆಗಳ ಕುರಿತಾದ ಚರ್ಚೆಯಲ್ಲಿ 50 ಸದಸ್ಯರು ಭಾಗವಹಿಸಿ 24 ತಾಸು 45 ನಿಮಿಷಗಳ ಕಾಲ ಮಾತನಾಡಿದ್ದು ದಾಖಲೆಯಾಗಿದೆ. ಮಾ.24ರಂದು ಬೆಳಗ್ಗೆ 11.35ಕ್ಕೆ ಪ್ರಾರಂಭವಾದ ಸದನವು ಮರುದಿನ ಮುಂಜಾವ 1.42ರವರೆಗೆ (12 ತಾಸು 41 ನಿಮಿಷಗಳು) ನಡೆದಿರುವುದು ಕೂಡ ದಾಖಲೆಯಾಗಿದೆ ಎಂದರು. ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕಗಳೂ ಸೇರಿದಂತೆ ಒಟ್ಟು 12 ವಿಧೇಯಕಗಳನ್ನು ಮಂಡಿಸಿ, 11 ವಿಧೇಯಕಗಳನ್ನು ಅಂಗೀಕರಿಸಲಾಗಿದೆ. ನಿಯಮ 60ರಡಿಯಲ್ಲಿ ನೀಡಿದ್ದ ಎರಡು ನಿಲುವಳಿ ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಿರುವುದು ಸೇರಿ ಒಟ್ಟು ಐದು ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿದೆ. ಒಟ್ಟು 15 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ. ಒಟ್ಟು 2,791 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 195 ಪ್ರಶ್ನೆಗಳ ಪೈಕಿ 180 ಪ್ರಶ್ನೆಗಳಿಗೆ; ಲಿಖಿತ ಮೂಲಕ ಉತ್ತರಿಸುವ 2,503 ಪ್ರಶ್ನೆಗಳ ಪೈಕಿ 2,254 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ. ನಿಯಮ 351ರಡಿಯಲ್ಲಿ ಸ್ವೀಕೃತವಾದ 217 ಸೂಚನೆಗಳ ಪೈಕಿ 101 ಸೂಚನೆಗಳಿಗೆ, ಗಮನಸೆಳೆಯುವ 323 ಸೂಚನೆಗಳ ಪೈಕಿ 158 ಸೂಚನೆಗಳಿಗೆ ಚರ್ಚಿಸಿ ಉತ್ತರಗಳನ್ನು ಸ್ವೀಕರಿಸಲಾಗಿದೆ ಎಂದು ವಿವರಿಸಿದರು.

1ನೇ ತರಗತಿ ಪ್ರವೇಶಕ್ಕೆ ಎರಡು ತಿಂಗಳ ವಿನಾಯಿತಿ

ವಿಧಾನಸಭೆ: ಒಂದನೇ ತರಗತಿ ಪ್ರವೇಶಕ್ಕೆ 6 ವರ್ಷ ತುಂಬಬೇಕೆಂಬ ಕಡ್ಡಾಯ ನಿಯಮದಲ್ಲಿ 2026-27ನೇ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಸರ್ಕಾರ ವಿನಾಯಿತಿ ನೀಡಿದೆ. ಈ ಕುರಿತು ವಿಧಾನಸಭೆಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ ಮಾಡಿದ್ದಾರೆ. ಒಂದನೇ ತರಗತಿ ದಾಖಲಾತಿಗೆ 6 ವರ್ಷ ತುಂಬಿರಲೇಬೇಕೆಂಬ ನಿಯಮದಲ್ಲಿ ಈ ವರ್ಷವೂ ವಿನಾಯಿತಿ ನೀಡಲಾಗಿದೆ. 60 ದಿನಗಳ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದೆ. 2 ತಿಂಗಳ ರಿಯಾಯಿತಿ ತರುತ್ತೇವೆ. ಅದರಂತೆ 2026-27ನೇ ಶೈಕ್ಷಣಿಕ ವರ್ಷದಲ್ಲಿ ಒಂದನೇ ತರಗತಿ ದಾಖಲಾತಿ ಸಂಬಂಧ 60 ದಿನಗಳ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದರು. ಈ ಸಂಬಂಧ ದಾಖಲಾತಿ ತಂತ್ರಾಂಶದಲ್ಲಿ ಬದಲಾವಣೆ ಮಾಡಲಾಗುತ್ತದೆ. ಒಂದನೇ ತರಗತಿ ದಾಖಲಾತಿಗೆ 6 ವರ್ಷದ ಕಡ್ಡಾಯ ನಿಯಮಕ್ಕೆ ಹೊಂದಿಕೊಳ್ಳುವಂತೆ ಇತ್ತ ಎಲ್‌ಕೆಜಿ, ಯುಕೆಜಿ ಮಟ್ಟದಲ್ಲೇ ದಾಖಲಾತಿ ವಯೋಮಿತಿ ನಿಗದಿ ಮಾಡುವ ಸಂಬಂಧ ಕಾಯ್ದೆ ತರಲಾಗುವುದು. ಎಲ್‌ಕೆಜಿ, ಯುಕೆಜಿಗೆ ಮಕ್ಕಳ ದಾಖಲಾತಿಗೆ ಈಗ ವಯೋಮಿತಿ ನಿಗದಿ ಮಾಡುವ ಕಾನೂನು ಇಲ್ಲ. ಹೀಗಾಗಿ ದಾಖಲಾತಿಗೆ ಸಮಸ್ಯೆಯಾಗುತ್ತಿದೆ. ಒಂದನೇ ತರಗತಿಗೆ 6 ವರ್ಷ ತುಂಬಿರಬೇಕು ಎಂಬ ಕಡ್ಡಾಯ ನಿಯಮಕ್ಕೆ ಎಲ್‌ಕೆಜಿ, ಯುಕೆಜಿಗೆ ಮಕ್ಕಳ ದಾಖಲಾತಿ ವಯೋಮಿತಿ ನಿಗದಿ ಸಂಬಂಧ ಕಾಯ್ದೆಯನ್ನು ರೂಪಿಸಿ ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇಂಗಿತ
ವಿಚಾರಧಾರೆ ನಿರಂತರ

ಮೈಸೂರು: ಭಾರತೀಯ ವಿಚಾರಧಾರೆಯು ನಿರಂತರವಾದ ಜ್ಞಾನಪ್ರವಾಹ. ಭಾರತೀಯ ವಿಶ್ವ ದರ್ಶನವನ್ನು ಲೋಕಭಾಷೆಯಲ್ಲಿ ನೀಡಬೇಕು. ಸಾಮಾನ್ಯ ಜನರೂ ಅದನ್ನು ಅಳವಡಿಸಿಕೊಳ್ಳುವಂತಾಗಬೇಕು ಎಂದು ಕೇಂದ್ರ ಉನ್ನತ ಶಿಕ್ಷಣ ಸಚಿವ ಧರ್ಮೇಂದ್ರಪ್ರಧಾನ್ ಹೇಳಿದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾದ ಏಕಾತ್ಮ ಮಾನವ ದರ್ಶನ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ದೀನ ದಯಾಳ್ ಉಪಾಧ್ಯಾಯರು ಏಕಾತ್ಮ ಮಾನವ ದರ್ಶನದಲ್ಲಿ ಮಾನವನ ಸಮಗ್ರತೆಯನ್ನು ಗುರುತಿಸಿದ್ದರು. ಅದರ ಆಧಾರಿತವಾಗಿಯೇ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರದ ವತಿಯಿಂದ ರೂಪಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು 2047ರ ಹೊತ್ತಿಗೆ ವಿಕಸಿತ ಭಾರತವನ್ನಾಗಿಸಬೇಕು ಎಂದು ಕರೆಕೊಟ್ಟಿದ್ದಾರೆ ಎಂದರು.

ಸಂಶೋಧಕರಾದ ಡಾ. ಎಂ ಎಸ್ ಚೈತ್ರಾ ಮಾತನಾಡಿ., ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯ ವಿಷಯಗಳ ಕುರಿತು ತಿಳಿಸುವಮತ್ತು ಶಿಕ್ಷಣ ಕ್ಷೇತ್ರದ ನಿರ್ವಸಾಹತೀಕರಣ ಸುಲಭದ ಕೆಲಸವಲ್ಲ, ಏಕೆಂದರೆ ಅವುಗಳನ್ನು ಮಕ್ಕಳಿಗೆ ತಲುಪಿಸುವಶಿಕ್ಷಕರು ಮತ್ತು ತರಗತಿ ಶಿಕ್ಷಣದ ಕುರಿತು ಇಲ್ಲಿಯವರೆಗೂ ನಾವು ಗಂಭೀರವಾಗಿ ಯೋಚಿಸಿಲ್ಲ, ಶಿಕ್ಷಕರನ್ನುಮತ್ತು ತರಗತಿ ಶಿಕ್ಷಣದಲ್ಲಾಗಬೇಕಾದ ಬದಲಾವಣೆಯ ಕುರಿತು ಯೋಚಿಸಬೇಕಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳನ್ನಂತೆ ತಾನಿದ್ದು ಕಲಿಯುವ ವಾತಾವರಣವನ್ನು ಕಲ್ಪಿಸುವುದಕ್ಕೆ ಸಾಧ್ಯಗುತ್ತದೆಯೇ ಎನ್ನುವುದನ್ನುಚಿಂತಿಸಬೇಕು. ನಮ್ಮ ಶೈಕ್ಷಣಿಕ ಸಾಂಸ್ಥಿಕ ಸೋಲಿನ ಕುರಿತು ಮರುಚಿಂತನೆ ಅಗತ್ಯ. ನಮ್ಮ ರಾಷ್ಟ್ರದ ಶಿಕ್ಷಣಪದ್ಧತಿಯ ತಳಹದಿ ಗುರುಶಿಷ್ಯ ಪರಂಪರೆ. ಅದರ ಆಧಾರದ ಮೇಲೆಯೇ ನಮ್ಮ ಸಂಸ್ಥೆಗಳನ್ನು ಭಾರತೀಯಕರಣಗೊಳಿಸಬೇಕುಎಂದು ಅಭಿಪ್ರಾಯಪಟ್ಟರು. ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಪ್ರೊ. ಶರಣಪ್ಪ ಹಲಸೆ, ಡಾ. ಶ್ಯಾಮಪ್ರಸಾದ್ ಮುಖರ್ಜಿ ಸಂಶೋಧನಾ ಫೌಂಡೇಶನ್ನ ಟ್ರಸ್ಟಿ ಎಂ ಮದನ್ ಗೋಪಾಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಭಾರತದ ಶ್ರೇಷ್ಠ ಕೊಡುಗೆ ಪುರುಷಾರ್ಥಗಳು

ಪುರುಷಾರ್ಥಗಳು ವೈಜ್ಞಾನಿಕವಾಗಿದ್ದರೂತಪ್ಪಾಗಿ ನಿರೂಪಿಸಲಾಗಿದೆ ಮತ್ತು ಸರಿಯಾಗಿಪ್ರತಿನಿಧಿಸಲಾಗಿಲ್ಲ. ಮೈಸೂರಿನಖ್ಯಾತ ವಿದ್ವಾಂಸರಾದ ಹಿರಿಯಣ್ಣ ಅವರು ಎಲ್ಲಾ ಮೌಲ್ಯಗಳ ನಿಜವಾದ ಸಾರ ಪುರುಷಾರ್ಥಗಳು.ಭಾರತೀಯ ತತ್ತ್ವಶಾಸ್ತ್ರವನ್ನುವುದು ಮೌಲ್ಯಗಳ ಅಧ್ಯಯನ ಎಂದು ಹೇಳಿದ್ದಾರೆ. ಪುರುಷಾರ್ಥಗಳು ಜಗತ್ತಿನಪರಂಪರೆಗೆ ಭಾರತದ ಶ್ರೇಷ್ಠ ಕೊಡುಗೆ ಎಂದು ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್ ಹೇಳಿದರು. ಧರ್ಮದ ವಿರುದ್ಧವಲ್ಲದ ಆಸೆಪಾಲಿಸಬಹುದಾದ ಮೌಲ್ಯವಾಗುತ್ತದೆ, ಧರ್ಮದ ವಿರುದ್ಧವಾದ ಆಸೆ ಶೋಚನೀಯ ಶತ್ರುವಾಗುತ್ತದೆ.ಗಳಿಸಿದ ತೃಪ್ತಿಯ ವ್ಯವಸ್ಥೆಯನ್ನು ಅರ್ಥವೆನ್ನುತ್ತೇವೆ. ಅರ್ಥ ಮತ್ತು ಕಾಮದಎಲ್ಲಾ ಆಯಾಮವನ್ನು ಬೆಳಗುವ ಕೈದೀಪಿಗೆಯಾಗಿ ಧರ್ಮ ಕಾರ್ಯನಿರ್ವಹಿಸುತ್ತದೆ. ಸಾಕ್ಷಾತ್ಕಾರದ ಸ್ಥಿತಿಯೇ ಮೋಕ್ಷ, ಪ್ರಜ್ಞಾಪ್ರವಾಹದ ಯುವ ಆಯಾಮದ ಕರ್ನಾಟಕ ಉತ್ತರ ಪ್ರಾಂತ ಸಂಯೋಜಕ ಪುನೀತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಳಸುವ ಪ್ರತಿಪದದ ಸ್ಪಷ್ಟತೆ ಇರಲಿ: ನಂದಕುಮಾರ್

ಭಾರತೀಯ ಇತಿಹಾಸವನ್ನು ಗಮನಿಸಿದಾಗನಾವು ಬಳಸುವ ಪದಗಳ ಕುರಿತಾದ ಸ್ಪಷ್ಟತೆ ನಮ್ಮಲ್ಲಿಲ್ಲ. ವೈಚಾರಿಕ ವಲಯದಲ್ಲಿ ನಾವು ಬಳಸುವ ಪ್ರತಿಪದದ ಕುರಿತೂ ಸ್ಪಷ್ಟತೆ ನಮಗಿರಬೇಕು. ಇಲ್ಲದಿದ್ದರೆ ವಸಾಹತುಶಾಹಿಗಳು ಮಾಡಿದಂತೆಯೇ ಆ ಪದಗಳ ಕುರಿತುತಪ್ಪು ವ್ಯಾಖ್ಯಾನವನ್ನು ಇತರರು ಮಾಡುತ್ತಾರೆ. ಎಂದು ಪ್ರಜ್ಞಾಪ್ರವಾಹದ ಅಖಿಲ ಭಾರತೀಯ ಸಂಯೋಜಕ ಜೆ. ನಂದಕುಮಾರ್ ಹೇಳಿದರು. ರಾಷ್ಟ್ರವನ್ನುಅರ್ಥೈಸಿಕೊಳ್ಳಲು ಯಾವ ದೃಷ್ಟಿಕೋನದಲ್ಲಿ ನಾವು ನೋಡುತ್ತೇವೆ ಎನ್ನುವುದನ್ನು ಮೊದಲು ನೋಡಬೇಕು ಎನ್ನುವುದನ್ನುದೀನ ದಯಾಳ ಉಪಾಧ್ಯಾಯರು ತಿಳಿಸಿದ್ದಾರೆ. ರಾಷ್ಟ್ರವನ್ನು ಏಕಾತ್ಮತೆಯ ದೃಷ್ಟಿಕೋನದಲ್ಲಿ ನೋಡಬೇಕು ಎಂದು ತಿಳಿಸಿದ್ದಾರೆ.

ಸುದೀರ್ಘವಾದ ಉತ್ತರ ನೀಡಿದ ಮುಖ್ಯಮಂತ್ರಿ
ಸಾಮಾಜಿಕ ನ್ಯಾಯದ ಬಜೆಟ್: ಸಿದ್ದರಾಮಯ್ಯ

ವಿಧಾನಪರಿಷತ್: ಮಹಾತ್ಮಗಾಂಧಿ ಅವರ ಸರ್ವೋದಯ, ಅಂತ್ಯೋದಯ ಸದಾಶಯ, ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ನಿಷ್ಠೆ ಹಾಗೂ ಬಸವಣ್ಣನವರ ಸಮಾನತೆಯ ತತ್ವದ ಅಡಿ ಕಾಂಗ್ರೆಸ್ ಸರ್ಕಾರ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರದ್ದು ಟ್ರಿಕಲ್ ಡೌನ್ ಆರ್ಥಿಕ ನೀತಿಯಾಗಿದ್ದರೆ, ಯುನಿವರ್ಸಲ್ ಬೇಸಿಕ್ ಇಕಾನಮಿಕ್ ನಮ್ಮ ಧ್ಯೇಯ. 2026-27ನೇ ಸಾಲಿಗೆ ಮಂಡಿಸಿರುವ ಮುಂಗಡ ಪತ್ರ ಸಾಮಾಜಿಕ ನ್ಯಾಯದ ಬಜೆಟ್ ಎಂದು ಸಿಎಂ ಸಿದ್ದರಾಮಯ್ಯ ಬಣ್ಣಿಸಿದರು.



ಬಜೆಟ್ ಮೇಲೆ ನಡೆದ ಚರ್ಚೆಗೆ ಸುದೀರ್ಘವಾದ ಉತ್ತರ ನೀಡಿದ ಮುಖ್ಯಮಂತ್ರಿ, ಟ್ರಿಕಲ್ ಡೌನ್ ಆರ್ಥಿಕತೆ ಎಂದರೆ ಕಾರ್ಪೋರೇಟ್ ಪರ, ಉಳ್ಳವರ ಹಿತ ಕಾಯುವ ನೀತಿ. ನಮ್ಮದು ಟ್ರಿಕಲ್ ಡೌನ್ ಅಲ್ಲ, ಬಡವರ ಉದ್ಧಾರವೇ ಯುನಿವರ್ಸಲ್ ಬೇಸಿಕ್ ಇಕಾನಮಿಕ್ ಥಿಯರಿ. ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಸಮಾನತೆ ನಿವಾರಣೆಯಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳು ಮಹತ್ವದ ಪಾತ್ರ ವಹಿಸುತ್ತಿವೆ.

ಧರ್ಮ, ಭಾಷೆಗಳನ್ನು ಮೀರಿ ಎಲ್ಲ ವರ್ಗದ 1.26 ಕೋಟಿ ಮಹಿಳೆಯರಿಗೆ ಗೃಹ ಲಕ್ಷ್ಮಿ ಹಣ ತಲುಪಿದೆ. ಬಡವರಲ್ಲಿ ಖರೀದಿಸುವ ಶಕ್ತಿ ತುಂಬಿದೆ. ಜನರನ್ನು ಆರ್ಥಿಕವಾಗಿ ಸಶಕ್ತರನ್ನಾಗಿಸಬೇಕು ಎಂಬುದೇ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬರ ವಾದವಾಗಿತ್ತು ಎಂದರು.

ಎಂಎಲ್‌ಸಿ ಅನುದಾನ ಹೆಚ್ಚಳಕ್ಕೆ ಆಗ್ರಹ

ವಿಧಾನಸಭೆ ಶಾಸಕರಿಗೆ 25 ರಿಂದ 30 ಕೋಟಿ ರೂ. ಕ್ಷೇತ್ರಾಭಿವೃದ್ಧಿ ನಿಧಿ ನೀಡುವಂತೆ ಮೇಲ್ಮನೆ ಶಾಸಕರಿಗೂ ಕನಿಷ್ಠ 5 ಕೋಟಿ ರೂ. ಅನುದಾನ ಒದಗಿಸಬೇಕು. ಮೂರ್ನಾಲ್ಕು ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುವ ಎಂಎಲ್‌ಸಿಗಳು ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಬಹುತೇಕ ಶಾಸಕರು ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಒದಗಿಸುವುದರಿಂದ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ಮೇಲ್ಮನೆ ಸದಸ್ಯರಾದ ಭೋಜೇಗೌಡ, ಶರವಣ ಒತ್ತಾಯಕ್ಕೆ ಸಭಾಪತಿ ಬಸವರಾಜ್ ಹೊರಟ್ಟಿಯೂ ಧ್ವನಿಗೂಡಿಸಿದರು. ಅದಕ್ಕೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ, ಈಗಾಗಲೇ ಬಜೆಟ್ ಮಂಡನೆಯಾಗಿರುವುದರಿಂದ ಪೂರಕ ಬಜೆಟ್‌ನಲ್ಲಿ ಈ ಪ್ರಸ್ತಾವನೆಯನ್ನು ಪರಿಗಣಿಸುವುದಾಗಿ ಭರವಸೆ ನೀಡಿದರು.

₹16 ಸಾವಿರ ಕೋಟಿ ಸಾಲ: ಛಲವಾದಿ

ವಿಧಾನಪರಿಷತ್: ಬಜೆಟ್ ಗಾತ್ರ ಹಿಗ್ಗಿಸಿ ಸಾಲ ಹೆಚ್ಚು ಮಾಡಿಕೊಳ್ಳುವ ಬದಲು ಹಣ ಉಳಿಸುವ ನಿಟ್ಟಿನಲ್ಲಿ ಬಜೆಟ್ ಮಂಡಿಸದ ಪರಿಣಾಮ, ರಾಜ್ಯದ ಸಾಲ 16 ಸಾವಿರ ಕೋಟಿ ರೂ. ದಾಟಿದೆ. 17 ಬಾರಿ ಬಜೆಟ್ ಮಾಡಿ ಸಾಧನೆ ಮಾಡಿದರೂ, ಸಾಲದ ಗಾತ್ರ ಹಿಗ್ಗಿಸಿದ್ದೇ ಸರ್ಕಾರದ ಸಾಧನೆಯಾಗಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಗುರುವಾರ ಮೇಲ್ಮನೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ದಾಖಲೆಯ ಮುಂಗಡಪತ್ರದ ಬಗ್ಗೆ ಕಿಡಿಕಾರಿದರು. 17ನೇ ಬಾರಿ ಬಜೆಟ್ ಮಂಡಿಸುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ, ಮುಖ್ಯಮಂತ್ರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜತೆಗೆ ಅವರ ಅನುಭವದ ಪ್ರಕಾರ, ಕೊರತೆ ಬಜೆಟ್ ಮಂಡಿಸದೇ ಮಾಡಬೇಕಾಗಿತ್ತು. ಅವರ ದೃಷ್ಟಿಕೋನ ಬದಲಾಗಿಲ್ಲ, ಸಿದ್ದರಾಮಯ್ಯ ಅವರ ಬಹುತೇಕ ಬಜೆಟ್‌ಗಳು ಡೆಫಿಸಿಟ್ ಬಜೆಟ್ ಆಗಿಯೇ ಇದೆ ಎಂದರು.

ದಾಖಲೆ ಬಜೆಟ್ ಮಂಡಿಸಿದ್ದರೂ, ಸಾಲದ ದಾಖಲೆ ಮಾಡಿದ್ದಾರೆ. ಈ ಬಜೆಟ್‌ನಲ್ಲಿ ಎಷ್ಟು ಉಳಿತಾಯ ಮಾಡಿದ್ದೀರಿ, ಜನರಿಗೆ ಏನೆಲ್ಲ ಅನುಕೂಲವಾಗಿದೆ ಎಂಬ ಬಗ್ಗೆ ಹೇಳಬೇಕಿತ್ತು. ವಿತ್ತೀಯ ಶಿಸ್ತು ಅಂತೀರಿ, ಸುಸ್ತು ಎಂಬಂತಾಗಿದೆ. ತೆರಿಗೆ ಸಂಗ್ರಹದಲ್ಲಿ ಕಡಿತವಾಗಿದ್ದರಿಂದ ಆದಾಯ ಕುಸಿದಿದೆ. ಯಾವಾಗಲೂ ಕೇಂದ್ರದ ಮೇಲೆ ಬೊಟ್ಟು ಮಾಡಿ ಮಾತನಾಡುತ್ತಾರೆ. ನಿರ್ಮಲಾ ಸೀತಾರಾಮನ್, ಮೋದಿ ಬಗ್ಗೆ ಮಾತಾಡುವ ಮುನ್ನ ಉತ್ತಮ ಬಜೆಟ್ ಮಂಡಿಸಿ ಬಳಿಕ ಕೇಂದ್ರದ ಬಗ್ಗೆ ಮಾತನಾಡಿ ಎಂದು ಟೀಕಿಸಿದರು.

ಡಿಫಿಸಿಟ್ ಬಜೆಟ್ ಮಂಡಿಸಿದ್ದ ಅಭಿವೃದ್ಧಿ ಯೋಜನೆ ನನೆಗುದಿಗೆ, ಮೂಲಸೌಕರ್ಯ ಮೂಲೆಗೆ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ಇಲಾಖೆಗೆ ಚಿಪ್ಪು ಎನ್ನುವ ರೀತಿ ಜನ ಹೊರಗೆ ಟೀಕೆ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಅನುದಾನ ದುರ್ಬಳಕೆಯಾಗಿದೆ ಎಂದರು.

ಮೋದಿ ಧುರಂಧರ್

ಅಧಿಕಾರ ನಡೆಸುವವರಿಗೆ ಸಂಯಮ ಬಹಳ ಮುಖ್ಯ ಯಾವ ಸಂದರ್ಭದಲ್ಲಿ ನಮಗೆ ಕಷ್ಟ ಬರುತ್ತದೆಯೋ



ಆಗ ಸಂಯಮವಾಗಿರಬೇಕು. ಗೆಲುವಿನ ಸಂದರ್ಭದಲ್ಲಿ ಹೇಗಿರಬೇಕು ಎಂಬುದನ್ನು ಕೂಡ ನಾಯಕರು ಅರ್ಥ ಮಾಡಿಕೊಳ್ಳಬೇಕು. ಆಪರೇಷನ್ ಸಿಂದೂರದ ಮೂಲಕ ಮೋದಿ ಅವರು ಗೆಲುವು ಪಡೆದರು. ಇದಕ್ಕೆ ಹೇಳುವುದು ನರೇಂದ್ರ ಮೋದಿ ಸರೆಂಡರ್ ಅಲ್ಲ, ಅವರು ಧುರಂಧರ್ ಎಂದು ಛಲವಾದಿ ಹೇಳಿದರು.

ಕರಾವಳಿ ಮಂಡಳಿ ತಿದ್ದುಪಡಿಗೆ ಖಾಸಗಿ ನಿರ್ಣಯ

ವಿಧಾನಸಭೆ: ಕರಾವಳಿಯ ಅಭಿವೃದ್ಧಿ ಹಿತದೃಷ್ಟಿಯಿಂದ ವಿಶಿಷ್ಟ ಅಧಿಕಾರವುಳ್ಳ ನೂತನ ಮಂಡಳಿಯನ್ನು ರಚಿಸುವ ಬಗ್ಗೆ ಅಥವಾ ಈಗಿರುವ ಕರಾವಳಿ ಅಭಿವೃದ್ಧಿ ಮಂಡಳಿ ಅಧಿನಿಯಮ, 2023ರ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಬಗ್ಗೆ ಖಾಸಗಿ ನಿರ್ಣಯ ಮಂಡಿಸಲಾಯಿತು.

ಖಾಸಗಿ ಸದಸ್ಯರ ಕಾರ್ಯಕಲಾಪದಲ್ಲಿ ಬಿಜೆಪಿ ಶಾಸಕ ಗುರುರಾಜ್ ಗಂಟಿಹೊಳೆ ಅವರು ಈ ನಿರ್ಣಯ ಮಂಡಿಸಿದರು. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನೊಳಗೊಂಡ ಕರ್ನಾಟಕ ಕರಾವಳಿ ಪ್ರದೇಶದಲ್ಲಿ ರಾಜ್ಯದಲ್ಲಿ ಬೇರೆಲ್ಲೂ ಇಲ್ಲದ ಸಮಸ್ಯೆಗಳಿವೆ. ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್), ಕಡಲುಕೊರೆತ, ಸಮುದ್ರತೀರ, ಅತಿವೃಷ್ಟಿ, ಮೀನುಗಾರಿಕೆ ಸಮಸ್ಯೆ ಮುಂತಾದವು ಆ ಪ್ರದೇಶಕ್ಕೆ ಮಾತ್ರ ಸೀಮಿತವಾಗಿವೆ. ಅಲ್ಲಿನ ಭೌಗೋಳಿಕ ರಚನೆ, ಜೀವನ ಶೈಲಿಯಲ್ಲಿಯೂ ವ್ಯತ್ಯಾಸವಿದ್ದು, ಅಲ್ಲಿನ ಸಮಸ್ಯೆಗಳ ನಿವಾರಣೆಗಾಗಿ ಪ್ರತ್ಯೇಕ ನೀತಿ, ನಿಯಮಗಳನ್ನು ರೂಪಿಸಬೇಕು ಎಂದು ಆಗ್ರಹಿಸಿದರು.

ಕರಾವಳಿ ಅಭಿವೃದ್ಧಿಗಾಗಿ ಸ್ಥಾಪಿತವಾದ ಕರಾವಳಿ ಅಭಿವೃದ್ಧಿ ಮಂಡಳಿಯು ಸೀಮಿತ ಅಧಿಕಾರವನ್ನು ಹೊಂದಿದೆ. ಕರಾವಳಿ ಭಾಗಕ್ಕೆ ಬಾಧಿತವಾಗುವಂತಹ ಕಾನೂನುಗಳು ಜಾರಿಯಾದಲ್ಲಿ ಅಂತಹ ಕಾಯ್ದೆಗಳನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವ ಅಧಿಕಾರ ಅದಕ್ಕಿಲ್ಲ, ಆದ್ದರಿಂದ ಕರಾವಳಿಯ ಅಭಿವೃದ್ಧಿಯ ಹಿತದೃಷ್ಟಿಯಿಂದ, ಸರ್ವಾಂಗೀಣ ಪ್ರಗತಿಗಾಗಿ ಹಾಗೂ ರಾಜ್ಯದಲ್ಲಿ ಕಾಲಕಾಲಕ್ಕೆ ರೂಪಿತವಾದ ಕಾಯ್ದೆ ಅಥವಾ ನಿಯಮಗಳಿಂದ ಕರಾವಳಿ ಭಾಗವು ಬಾಧಿತವಾಗುವುದನ್ನು ನಿರ್ಬಂಧಿಸಲು ಸರ್ಕಾರಕ್ಕೆ ಸೂಕ್ತ ಸಲಹೆ-ಶಿಫಾರಸ್ಸುಗಳನ್ನು ಮಾಡುವಂತಹ ವಿಶಿಷ್ಟ ಅಧಿಕಾರವುಳ್ಳ ನೂತನ ಮಂಡಳಿ ರಚಿಸಬೇಕು. ಇಲ್ಲವೇ ಈಗಿರುವ ಕರಾವಳಿ ಅಭಿವೃದ್ಧಿ ಮಂಡಳಿ ಅಧಿನಿಯಮ, 2023ರ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವುದಕ್ಕೆ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಕರಾವಳಿಯವರು ನಮಗಿಂತ ಅಭಿವೃದ್ಧಿಯಲ್ಲಿ ಯಾಕೆ ಮುಂದೆ ಇದ್ದಾರೆ ಎಂದರೆ ಅವರು ಯಾವತ್ತೂ ನಮಗೆ ದುಡ್ಡು ಕೊಡಿ ಎಂದು ಕೇಳುವುದಿಲ್ಲ. ಬದಲಾಗಿ ನೀತಿ, ನಿಯಮಗಳನ್ನು ಕೇಳುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಕರ್ನಾಟಕ ಕರಾವಳಿಯಲ್ಲಿ ಉದ್ಯಮಿಗಳು ಹೂಡಿಕೆಗೆ ಉತ್ಸಾಹಿತರಾಗಿದ್ದರೂ ಇಲ್ಲಿನ ಸಿಆರ್‌ಝಡ್ ನೀತಿಯಿಂದ ಸಮಸ್ಯೆಯಾಗುತ್ತಿದೆ. ನೆರೆಯ ಕೇರಳ, ಗೋವಾ, ಮಹಾರಾಷ್ಟ್ರದಲ್ಲಿ ಸಿಆರ್‌ಝಡ್ ನಿಯಮ ಸರಳೀಕರಿಸಲಾಗಿದೆ. ರಾಜ್ಯದಲ್ಲಿ ಸಮುದ್ರ ಕಿನಾರೆ, ನದಿ ಕಿನಾರೆ, ದ್ವೀಪಗಳು ಪ್ರವಾಸೋದ್ಯಮಕ್ಕೆ ಅನುಕೂಲಕರವಾಗಿವೆ. ಬೆಲ್ದಾಡಳಿತವು ಪ್ರಸ್ತಾವಿತ ಮಂಗಳಾ ಕಾರ್ನಿಶ್ ರಸ್ತೆ ಅಭಿವೃದ್ಧಿಪಡಿಸಬೇಕು.

■ ಅಶೋಕ್ ರೈ, ಕಾಂಗ್ರೆಸ್ ಶಾಸಕ

ಅರಣ್ಯ ಪ್ರದೇಶದ ಮಂಜೂರಾದ ಭೂಮಿ ರದ್ದು: ಸಚಿವ

ವಿಧಾನಸಭೆ: ಬೆಂಗಳೂರು ಉತ್ತರ ತಾಲೂಕು ಜಾರಕಬಂಡೆ ಕಾವಲ್‌ನಲ್ಲಿ ಭಾರತೀಯ ವಾಯುಪಡೆಗೆ 1987ರಲ್ಲಿ ಮಂಜೂರು ಮಾಡಿದ್ದ ಭೂಮಿಯ ಪೈಕಿ 452 ಎಕರೆ 4 ಗುಂಟೆ ಅರಣ್ಯ ಪ್ರದೇಶವಾಗಿದ್ದು, ಈ ಮಂಜೂರಾತಿಯನ್ನು 2017ರಲ್ಲಿ ರದ್ದುಪಡಿಸಲಾಗಿದೆ ಎಂದು ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.



ಗುರುವಾರ ಸದನದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು ನಿಯಮ 69ರಡಿ ಸಾರ್ವಜನಿಕ ಮಹತ್ವದ ವಿಷಯ ಪ್ರಸ್ತಾಪಿಸಿ, ಜಾರಕಬಂಡೆ ಶ್ರೀಗಂಧ ಕಾವಲ್ ಮತ್ತು ಪೀಣ್ಯ ನೆಡುತೋಪು ಪ್ರದೇಶವು ಅರಣ್ಯ ಇಲಾಖೆ ಭೂಮಿಯಾಗಿದ್ದರೂ ಅದನ್ನು ಭಾರತೀಯ ವಾಯುಪಡೆಯು ಅತಿಕ್ರಮಣ ಮಾಡಿಕೊಂಡಿದೆ. ಅದನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಬಾರದು. ಅರಣ್ಯ ಭೂಮಿಯನ್ನು ಅರಣ್ಯ ಭೂಮಿಯಾಗಿಯೇ ಉಳಿಸಿಕೊಳ್ಳಬೇಕು. ನಮ್ಮ ಮೆಟ್ರೋಗೆ ನೀಡಿದ ಅರಣ್ಯ ಭೂಮಿಯ ಪರಿಹಾರವನ್ನೂ ವಾಯುಪಡೆ ಪಡೆದುಕೊಂಡಿದ್ದು, ಅದನ್ನೂ ವಾಪಸ್ ಪಡೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಅಲ್ಲದೇ ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಹೇಳುತ್ತೇವೆ. ಆದರೆ, ತಮಿಳುನಾಡಿನಲ್ಲಿ ಶ್ರೀಗಂಧ ಹರಾಜು ದರ 22,000 ರೂ. ಇದ್ದರೆ ಕರ್ನಾಟಕದಲ್ಲಿ ಅದು 7,000 ರೂ. ಇದೆ. ಕರ್ನಾಟಕದಲ್ಲಿ ಶ್ರೀಗಂಧ ಬೆಳೆಯುವುದಕ್ಕೆ ರೈತರಿಗೆ ಪ್ರೋತ್ಸಾಹಿಸಬೇಕು ಎನ್ನುವ ಮಧ್ಯೆ ಈ ರೀತಿಯ ತಾರತಮ್ಯ ಸರಿಯಲ್ಲ ಎಂದು ಹೇಳಿದರು.

ಇದಕ್ಕೆ ಉತ್ತರಿಸಿದ ಸಚಿವರು, ಪ್ರಸ್ತುತ ಈ 452 ಎಕರೆ ಜೊತೆಗೆ ಜಾರಕಬಂಡೆ ಮತ್ತು ಪೀಣ್ಯ ನೆಡುತೋಪಿನಲ್ಲಿ 83 ಎಕರೆ ಅರಣ್ಯ ಭೂಮಿ ವಾಯುಪಡೆ ವಶದಲ್ಲಿದೆ. ಇದನ್ನು ತೆರವು ಮಾಡಿಸಲು ಕ್ರಮ ವಹಿಸಲಾಗುವುದು. ಈ ಹೆಚ್ಚುವರಿ ಜಮೀನಿನ ಪೈಕಿ 58.08 ಎಕರೆಯನ್ನು ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ನೀಡಿ ಹಣ ಪಡೆದು ಕಾನೂನು ಉಲ್ಲಂಘಿಸಲಾಗಿದೆ. ಈ ಹಣವೂ ಅರಣ್ಯ ಇಲಾಖೆಗೆ ಬರಬೇಕು, ಇದನ್ನು ಪಡೆದುಕೊಳ್ಳಲು ಕ್ರಮ ವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಈ ಸಂಬಂಧ ರಾಜ್ಯದ ಮುಖ್ಯ ಕಾರ್ಯದರ್ಶಿಯವರು, 2018ರ ಸೆಪ್ಟೆಂಬರ್ 15 ರಂದು ರಕ್ಷಣಾ ಇಲಾಖೆಯ ಕಾರ್ಯದರ್ಶಿಗೆಪತ್ರ ಬರೆದು ಭಾರತೀಯವಾಯುಪಡೆಯ ಜಾಲಹಳ್ಳಿ ವಾಯುನೆಲೆಯು ಈ ಭೂಮಿಯನ್ನು ತನಗಾಗಿ ಬಳಸುವುದನ್ನು ಮುಂದುವರಿಸಲು ಬಯಸಿದರೆ, ಅರಣ್ಯ (ಸಂರಕ್ಷಣಾ) ಕಾಯ್ದೆ-1980 ರಡಿಯಲ್ಲಿ ಈ ಅರಣ್ಯ ಭೂಮಿಗಳ ಬಳಕೆಯನ್ನು ಕ್ರಮಬದ್ಧಗೊಳಿಸುವುದು ಕಡ್ಡಾಯವಾಗಿದೆ. ಅದಕ್ಕೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ಹಿತಾಸಕ್ತಿಯ ಸಂಸ್ಥೆಯಾಗಿರುವುದರಿಂದ ಅರಣ್ಯ ತೀರುವಳಿ ಮಾಡುವಂತೆ ತಿಳಿಸಿದ್ದರೂ ಅವರು ಈವರೆಗೆ ಯಾವುದೇ ಅರ್ಜಿ ಹಾಕಿಲ್ಲ, ತಾವು ಸಚಿವರಾದ ತರುವಾಯ ಈ ಭೂಮಿಯ ಜಂಟಿ ಸರ್ವೆ ಮಾಡಲು ತಿಳಿಸಿದ್ದು, ಆ ಕಾರ್ಯವೂ ಪೂರ್ಣವಾಗಿದೆ. ತಮ್ಮನ್ನು 2-3 ಬಾರಿ ಈ ಸಂಬಂಧ ಭೇಟಿ ಮಾಡಿದ್ದ ವಾಯುಪಡೆ ಅಧಿಕಾರಿಗಳಿಗೆ ನಿಯಮಾನುಸಾರ ಪರ್ಯಾಯ ಭೂಮಿ ನೀಡಿ, ಎನ್.ಪಿ.ವಿ. ಮೌಲ್ಯ ಪಾವತಿಸಿ ಆ ಜಮೀನನ್ನು ಬಳಸುವಂತೆ ತಿಳಿಸಲಾಗಿದೆ. ಆದಾಗ್ಯೂ ಅವರು ನಿಯಮಾನುಸಾರ ನಡೆದುಕೊಂಡಿಲ್ಲ ಎಂದು ಸದನಕ್ಕೆ ವಿವರಿಸಿದರು.

ಪ್ರತಿವರ್ಷ ವೈಮಾನಿಕ ಪ್ರದರ್ಶನ ನಡೆಯುವ ಬೆಂಗಳೂರು ಉತ್ತರ ತಾಲೂಕು ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮದ ಸರ್ವೆ ನಂ.47ರಲ್ಲಿ 132 ಎಕರೆ 3 ಗುಂಟೆ ಮತ್ತು 48ರಲ್ಲಿ 27 ಎಕರೆ 26 ಗುಂಟೆ ಒಟ್ಟು 159 ಎಕರೆ 29 ಗುಂಟೆ ಪ್ರದೇಶ ಸಹ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದೆ. ಇದನ್ನೂ ಅರಣ್ಯ ಇಲಾಖೆಯ ವಶಕ್ಕೆ ಪಡೆಯಲು ಅಥವಾ ನಿಯಮಾನುಸಾರ ಪರ್ಯಾಯ ಭೂಮಿ ಒದಗಿಸಿ ಬಳಸುವಂತೆ ಮಾಡಲು ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಶ್ರೀಗಂಧ ನಿಯಮ ಸರಳೀಕರಣ

ಶ್ರೀಗಂಧದ ನೀತಿಯಲ್ಲಿ ಸರಳೀಕರಿಸಲಾಗುತ್ತಿದ್ದು, ವೃಕ್ಷರಾಜ ಎಂದೇ ಖ್ಯಾತವಾದ ಶ್ರೀಗಂಧವನ್ನು ತೋಟದ ಬೆಳೆ ಎಂದು ಪರಿಗಣಿಸಲು ಬರುವುದಿಲ್ಲ, ಆದರೆ, ಶ್ರೀಗಂಧ ಬೆಳೆಗಾರರಿಗೆ ಅನಾನುಕೂಲ ಆಗದಂತೆ ಶ್ರೀಗಂಧ ಬೆಳೆಯಲು, ಕಟಾವು ಮಾಡಲು, ದಾಸ್ತಾನು ಮತ್ತು ಸಾಗಾಟ ಮಾಡಲು ನಿಯಮಗಳನ್ನು ಸರಳೀಕರಿಸಲಾಗುವುದು ಎಂದು ತಿಳಿಸಿದರು.

ವನ್ಯಜೀವಿಗಳ ದಾಳಿಗೆ ಮೃತಪಟ್ಟರೆ ಸರ್ಕಾರಿ ನೌಕರಿ ಇಲ್ಲ: ಸಚಿವ

ವಿಧಾನಸಭೆ: ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರಿ ನೌಕರಿ ನೀಡಲು ಸರ್ಕಾರಿ ಆದೇಶದನ್ವಯ ಅವಕಾಶ ಇರುವುದಿಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸ್ಪಷ್ಟಪಡಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ರಾಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾನವ-ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಮತ್ತು ಮಾಸಾಶನ ನೀಡಲಾಗುತ್ತಿದೆ. ಈ ಹಿಂದೆ ಇದ್ದ 15 ಲಕ್ಷ ರೂ. ಪರಿಹಾರದ ಮೊತ್ತವನ್ನು 2025ರ ಏಪ್ರಿಲ್‌ನಿಂದ 20 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಪರಿಹಾರದ ಜೊತೆಗೆ 5 ವರ್ಷಗಳ ಕಾಲ ಮಾಸಿಕ 4 ಸಾವಿರ ರೂ. ಮಾಸಾಶನವನ್ನು ಮೃತರ ಕುಟುಂಬದ ಸದಸ್ಯರಿಗೆ ನೀಡಲಾಗುತ್ತಿದೆ. ಅಲ್ಲದೇ ದಾಳಿಗೊಳಗಾದ ಸಂತ್ರಸ್ತರ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಅರಣ್ಯ ಇಲಾಖೆ ಭರಿಸುತ್ತಿದೆ ಎಂದು ವಿವರಿಸಿದರು. ಅರಣ್ಯ ಇಲಾಖೆಯಲ್ಲಿ ಕಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರು ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿ ಹಗಲಿರುಳೆನ್ನದೆ ಕ್ಲಿಷ್ಟಕರ ಸನ್ನಿವೇಶದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ತವ್ಯ ನಿರತ ಸಿಬ್ಬಂದಿ ಮೃತಪಟ್ಟಾಗ ಈ ಹಿಂದೆ 30 ಲಕ್ಷ ರೂ. ಅನುಗ್ರಹ ಧನ ನೀಡಲಾಗುತ್ತಿತ್ತು. ಈಗ ಆ ಮೊತ್ತವನ್ನು 50 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಆನೆ ಸೇರಿದಂತೆ ವನ್ಯಜೀವಿ- ಮಾನವ ಸಂಘರ್ಷ ನಿಯಂತ್ರಿಸಲು ಸರ್ಕಾರ ಶಕ್ತಿಮೀರಿ ಶ್ರಮಿಸುತ್ತಿದೆ ಎಂದೂ ಈಶ್ವರ ಖಂಡ್ರೆ ಹೇಳಿದರು.

ಸಂಪಾದಕೀಯ

ಸಂಕಷ್ಟದ ಬೆನ್ನೇರಿ ಬರುವ ಸಮಾಜಘಾತುಕರು

ಯುದ್ಧ ಎಂಬುದು ಎಲ್ಲೋ ಒಂದು ಕಡೆ ನಡೆದರೂ ಅದು ನಮಗೆ ಯಾವುದೇ ಅಕ್ಷಿ ಮಾಡಲ್ಲ ಎಂಬುದು ಸತ್ಯವಲ್ಲ. ಅದು ಜಗತ್ತಿನ ಎಲ್ಲ ದೇಶಗಳಿಗೂ ಒಂದಿಲ್ಲೊಂದು ರೀತಿಯಲ್ಲಿ ಅಕ್ಷಿ ಮಾಡುತ್ತದೆ. ಇಂಥ ಹೊತ್ತಿನಲ್ಲಿ ತಾವು ಲಾಭ ಮಾಡಿಕೊಳ್ಳುವುದು ಹೇಗೆ ಎಂಬುದು ಸಮಾಜಘಾತುಕರ ಆಲೋಚನೆ. ಇದಕ್ಕಾಗಿ, ದೇಶದ ಮತ್ತು ಜನರ ಸ್ಥೈರ್ಯವನ್ನೇ ಅಲ್ಲಾಡಿಸಲು ಹೊಂಚು ಹಾಕುತ್ತಿರುತ್ತಾರೆ. ಕರೋನಾ ಸಂಕಟದ ದಿನಗಳಲ್ಲಿ ಔಷಧ, ಆಕ್ಸಿಜನ್ ಕೊರತೆಯ ಮಧ್ಯೆಯೂ ಇಲ್ಲದ-ಸಲ್ಲದ ಸುದ್ದಿ ಹಬ್ಬಿಸಿ, ಕಾಳಸಂತೆ ನಡೆಸಿದವರು ನಮ್ಮ ನಡುವೆಯೇ ಇದ್ದರು. ಆ ಸ್ವಾರ್ಥದ ಕಳಂಕ ಇನ್ನೂ ಒಣಗಿಲ್ಲ.



ಈಗ ಜಗತ್ತುಯುದ್ಧದ ನೆರಳಿನಲ್ಲಿ ನಿಂತಿರುವ ಸಮಯದಲ್ಲಿ, ಮತ್ತದೇ ಚಾಣಾಯಮಾನದ ಮಂದಿ ಸಕ್ರಿಯರಾಗಿದ್ದಾರೆ. ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸರಬರಾಜಿನಲ್ಲಿ ಯಾವುದೇ ತೊಂದರೆ ಇಲ್ಲ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ಪಷ್ಟಪಡಿಸಿದ್ದರೂ, ಸಾಮಾಜಿಕ ಮಾಧ್ಯಮಗಳ ಮೂಲಕ ಹಬ್ಬಿಸಿದ ವದಂತಿಗಳನ್ನೇ ನಿಜ ಎಂದು ಭ್ರಮಿಸಿ ಜನ ಬಂಕ್‌ಗಳ ಮುಂದೆ ಕ್ಯೂ ನಿಲ್ಲುತ್ತಿದ್ದಾರೆ. ಈ ಅವ್ಯವಸ್ಥೆ ಆಕಸ್ಮಿಕವಲ್ಲ; ಯಾರದ್ದೋ ದುರುದ್ದೇಶದ ಸ್ಕ್ರಿಪ್ಟ್ ಇದು. ಈಗಾಗಲೇ ತೈಲ ಕಂಪನಿಗಳು ಎರಡು ತಿಂಗಳಿಗೆ ಆಗುವಷ್ಟು ದಾಸ್ತಾನು ನಮ್ಮಲ್ಲಿದೆ ಎಂದು ಹೇಳುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಅವರು, ಶುಕ್ರವಾರ ಎಲ್ಲ ಮುಖ್ಯಮಂತ್ರಿಗಳ ಸಭೆ ಕರೆದು ಪರಿಸ್ಥಿತಿ ಅವಲೋಕಿಸುತ್ತಾರೆ. ಈ ಯುದ್ಧದ ಗಾಂಭೀರ್ಯತೆ ಎಲ್ಲರಿಗೂ ಅರ್ಥವಾಗಿದೆ. ಆದರೆ, ಇಲ್ಲಿ ಕೆಲವು ರಾಜಕೀಯ ಪಕ್ಷಗಳ ಪಾತ್ರವನ್ನೂ ಪ್ರಶ್ನಿಸಲೇಬೇಕು. ಆಡಳಿತ ಪಕ್ಷಗಳ ವೈಫಲ್ಯ ಎತ್ತಿ ತೋರಿಸಲು ವಿರೋಧ ಪಕ್ಷಗಳು ಅವಕಾಶ ಹುಡುಕುವುದು ಸಹಜ. ಆದರೆ ಆ ಅವಕಾಶಕ್ಕಾಗಿ ದೇಶದ ಸ್ಥಿರತೆಯನ್ನೇ ಒತ್ತೆ ಇಡುವುದು ರಾಜಕೀಯ ನೈತಿಕತೆಯ ಅಧಃಪತನ. ಸಂಕಷ್ಟ ಕಾಲದಲ್ಲಿ ರಾಜಕೀಯ ವ್ಯತ್ಯಾಸಗಳನ್ನು ಬದಿಗಿಟ್ಟು ರಾಷ್ಟ್ರಹಿತದ ನೆಲೆಯಲ್ಲಿ ನಿಲ್ಲುವ ಪ್ರಬುದ್ಧತೆ ಇಲ್ಲದಿದ್ದರೆ, ಅದು ಆ ಪಕ್ಷದ ಮಾತ್ರವಲ್ಲ, ನಮ್ಮ ಪ್ರಜಾಪ್ರಭುತ್ವದ ದೌರ್ಬಲ್ಯ.

ವದಂತಿ ಹಬ್ಬಿಸುವವರ ವಿರುದ್ಧ ಕಾನೂನು ಕ್ರಮ ಕಠಿಣವಾಗಿರಲೇಬೇಕು. ಆದರೆ ಇಷ್ಟೇ ಸಾಲದು. ಸರ್ಕಾರ ಸಹ ಕೇವಲ ಅಧಿಕೃತ ಹೇಳಿಕೆ ಕೊಟ್ಟು ಕೈ ತೊಳೆದುಕೊಳ್ಳಬಾರದು. ಪ್ರತಿ ಮೂಲೆಮೂಲೆಗೂ ಸತ್ಯ ತಲುಪುವಂತಹ ಪ್ರಭಾವಶಾಲಿ ಮಾಹಿತಿ ಪ್ರಚಾರ ಅಗತ್ಯ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರತಿ ನಾಗರಿಕನೂ ತಾನೊಬ್ಬ ಜವಾಬ್ದಾರಿಯುತ ದೇಶದ ಸದಸ್ಯ ಎಂಬ ಪ್ರಜ್ಞೆಯಿಂದ ವರ್ತಿಸಬೇಕು. ಮಾಧ್ಯಮಗಳ ಜವಾಬ್ದಾರಿಯೂ ಈ ಸಂದರ್ಭದಲ್ಲಿ ನಿರ್ಣಾಯಕ. ಅಪದ್ಧ ಸುದ್ದಿಗಳನ್ನು ವೇಗವಾಗಿ ಹರಡುವ ಸಾಮಾಜಿಕ ಮಾಧ್ಯಮಕ್ಕೆ ಪ್ರತಿತಂತ್ರವಾಗಿ, ಮುಖ್ಯವಾಹಿನಿ ಮಾಧ್ಯಮಗಳು ತ್ವರಿತವಾಗಿ, ಸಾಕ್ಷ್ಯಾಧಾರಿತವಾಗಿ ಸತ್ಯ ಹೇಳಬೇಕು. ಸುಳ್ಳು ಸುದ್ದಿ ಮತ್ತು ಸತ್ಯ ಸುದ್ದಿ ನಡುವಿನ ಓಟದಲ್ಲಿ ಮಾಧ್ಯಮ ಹಿಂದೆ ಬಿದ್ದರೆ, ಸೋಲು ಇಡೀ ಸಮಾಜದ್ದು.

ಸಂಕಷ್ಟ ಕಾಲದಲ್ಲಿ ತಾಳ್ಮೆ ಮತ್ತು ವಿವೇಕ ಇವೇ ನಿಜವಾದ ದೇಶಭಕ್ತಿ. ಗಾಬರಿ ಹುಟ್ಟಿಸುವ ಸಂದೇಶಗಳಿಗೆ ಬಲಿಯಾಗದಿರುವುದು ದೇಶಕ್ಕೆ ಮಾಡುವ ಸೇವೆ.

ಆಯುರ್ವೃದ್ಧಿ- ಕ್ಷೀಣ ಹೇಗೆ?

ವೃದ್ಧಾರ್ಕೋ ಹೋಮಧೂಮಶ್ಚ ಬಾಲಸ್ತ್ರೀ ನಿರ್ಜರೋದಕಮ್।
ರಾತ್ರೌ ಕ್ಷೀರಾನ್ನ ಭುಕ್ತಿಶ್ಚ ಆಯುರ್ವೃದ್ಧಿರ್ದಿನೇ ದಿನೇ॥
ಬಾಲಾರ್ಕಃ ಪ್ರೇತಧೂಮಶ್ಚ ವೃದ್ಧಸ್ತ್ರೀ ಪಲ್ವಲೋದಕಮ್।
ರಾತ್ರೌ ದಧ್ಯನ್ನಭುಕ್ತಿಶ್ಚ ಆಯುಃ ಕ್ಷೀಣಂ ದಿನೇ ದಿನೇ ॥

ಸಂಜೆಯ ಸೂರ್ಯದರ್ಶನ, ಹೋಮಧೂಮ, ಕಿರಿಯವಳೊಂದಿಗೆ ಮದುವೆ, ಝರಿಯ ಜಲಸೇವನೆ, ರಾತ್ರಿ ಹಾಲನ್ನದ ಊಟ ಇವು ಆಯುಸ್ಸನ್ನು ವೃದ್ಧಿಸುತ್ತವೆ.



ಅಂತೆಯೇ ಬೆಳಗಿನ ಸೂರ್ಯದರ್ಶನ, ಹೆಣದ ಹೊಗೆ, ಹಿರಿಯವಳೊಂದಿಗೆ ಮದುವೆ, ಕೆರೆಯ ನೀರು ಸೇವನೆ, ರಾತ್ರಿ ಮೊಸರನ್ನದ ಊಟ - ಇವು ಆಯುಷ್ಯವನ್ನು ಕಡಿಮೆ ಮಾಡುತ್ತವೆ - ಎಂಬುದು ಶ್ಲೋಕಾರ್ಥ.

ಪ್ರತಿಯೊಬ್ಬರಿಗೂ ಇಷ್ಟು ವರ್ಷ ಆಯುಷ್ಯವೆಂಬುದು ವಿಧಿಲಿಖಿತ. ಇದನ್ನು ಬದಲಾಯಿಸಲು ಸಾಧ್ಯವೆ ಎಂಬ ಜಿಜ್ಞಾಸೆ ಸಹಜ. ಸಹಜವಾಗಿ, ನಮ್ಮ ಆಚಾರ-ವಿಚಾರ ವ್ಯವಹಾರಗಳ ಮೂಲಕ ಆಯುಷ್ಯಾವಧಿಯನ್ನು ವಿಸ್ತರಿಸಿಕೊಳ್ಳಬಹುದು. ಕ್ಷೀಣಮಾಡಿಕೊಳ್ಳಬಹುದು. ಎಲ್ಲವೂ ನಮ್ಮ ಪ್ರಾಮಾಣಿಕ ಪ್ರಯತ್ನ, ಸಾಧನೆಗಳನ್ನು ಅವಲಂಬಿಸಿದೆ. ಪ್ರಕೃತ ಯುಗಳ ಶ್ಲೋಕದಲ್ಲಿ ಆಯುಷ್ಯವನ್ನು ಹೇಗೆ ವೃದ್ಧಿಸಿಕೊಳ್ಳಬಹುದು ಹಾಗೂ ಹೇಗೆ ನಡೆದುಕೊಂಡರೆ ಆಯುಷ್ಯ ಕ್ಷೀಣವಾಗುತ್ತದೆ ಎಂಬುದನ್ನು ತಿಳಿಸಲಾಗಿದೆ. ಯಾವೆಲ್ಲ ಕಾರಣಗಳಿಂದಾಗಿ ಆಯುಸ್ಸು ಕ್ಷೀಣಿಸುತ್ತದೆ ಎಂಬುದನ್ನು ಎರಡನೆಯ ಶ್ಲೋಕ ತಿಳಿಸಿಕೊಡುತ್ತದೆ. ಮುಳುಗುವ ಸೂರ್ಯ ಕೆಂಬಣ್ಣದಿಂದ ದಿಗಂತವನ್ನು ಬೆಳಗುತ್ತಾ ನಮ್ಮಲ್ಲೂ ಉತ್ಸಾಹವನ್ನು ಹೆಚ್ಚಿಸುತ್ತಾನೆ. ಮುಳುಗುವ ಸೂರ್ಯ ನಾಳೆ ಉದಯಿಸುವ ಸೂರ್ಯನಿಗೆ ಮುನ್ನುಡಿ. ಇಂಥಹ ಸೂರ್ಯನ ದರ್ಶನ ಉತ್ಸಾಹ ತುಂಬುವುದರ ಮೂಲಕ ಆಯುಷ್ಯ ವೃದ್ಧಿಗೆ ಕಾರಣನಾಗುತ್ತಾನೆ.

ಹೋಮದ ಹೊಗೆ ಅಪೂರ್ವ ದ್ರವ್ಯಗಳನ್ನು ಸ್ವೀಕರಿಸಿ ಹೊರಹೊಮ್ಮುವಂಥದ್ದು. ಅಗ್ನಿಗೆ ಅರ್ಪಿಸುವ ತುಪ್ಪ ಹಾಗೂ ವಿಶೇಷ ಸಮಿತ್ತುಗಳಿಂದಾಗಿ ಹೋಮ ಧೂಮಕ್ಕೆ ರೋಗಾಣುಗಳನ್ನು ನಾಶಪಡಿಸುವ ಸಾಮರ್ಥ್ಯ ಬಂದಿರುತ್ತದೆ. ಜತೆಗೆ ಮಂತ್ರದ ಮೂಲಕ ಅಭಿಮಂತ್ರಿತ ಹೋಮದ್ರವ್ಯಗಳಾದ್ದರಿಂದ ಹೊರಸೂಸುವ ಧೂಮ ಆರೋಗ್ಯಕಾರಕ. ತನಗಿಂತಲೂ ಚಿಕ್ಕವಳನ್ನು ಮದುವೆಯಾಗುವುದರಿಂದ ಅವಳ ಉತ್ಸಾಹದ ಒಡನಾಟ ನಮ್ಮ ಆರೋಗ್ಯವನ್ನು ಹೆಚ್ಚಿಸಿ ದೀರ್ಘಾಯುಷ್ಯಕ್ಕೆ ಕಾರಣವೆನಿಸುತ್ತದೆ. ಝರಿಯ ನೀರು ಪರಿಶುದ್ಧ ಆಯುಃಕಾರಕ. ರಾತ್ರಿಯ ಹೊತ್ತು ಹಾಲನ್ನವನ್ನು ಊಟ ಮಾಡಬೇಕು. ಈ ಲಘುವಾದ ಆಹಾರ ಜೀರ್ಣಕ್ರಿಯೆಗೆ ಪೂರಕವಾಗಿ ಆಯುಷ್ಯ ವೃದ್ಧಿಸುತ್ತದೆ. ಇವುಗಳ ಸರಿಯಾದ ಪಾಲನೆಯೇ ಆಯುಷ್ಯ ವೃದ್ಧಿಗೆ ಕಾರಣ ಎಂಬುದು ಜ್ಞಾನಿಗಳ ಅಭಿಮತ.

ಎಳೆಬಿಸಿಲು ಅಂದರೆ ಮುಂಜಾನೆಯ ಬಿಸಿಲು ಆರೋಗ್ಯಕ್ಕೆ ಒಳ್ಳೆಯದು. ವಿಟಮಿನ್ನುಗಳಿರುತ್ತವೆ ಇತ್ಯಾದಿ ಹೇಳುತ್ತಾರೆ. ಆದರೆ ಪ್ರಕೃತ ಶ್ಲೋಕದಲ್ಲಿ ಬೆಳಗಿನ ಬಿಸಿಲು ದೀರ್ಘಾಯುಷ್ಯಕ್ಕೆ ಮಾರಕ ಎನ್ನಲಾಗಿದೆ. ಈ ಹೇಳಿಕೆಯು ಬಗ್ಗೆ ನನಗೇ ಗೊಂದಲವಿದೆ. ಮೂಲಗ್ರಂಥದಲ್ಲಿ ಬಲವಾದ ಕಾರಣವಿರಬಹುದು. ಹೆಣ ಸುಟ್ಟ ಹೊಗೆ, ಕಸಕಡ್ಡಿ, ಪ್ಲಾಸ್ಟಿಕ್ ಸುಟ್ಟ ಹೊಗೆ ಇವೆಲ್ಲವೂ ವಿಷಯುಕ್ತ. ಇವುಗಳನ್ನು ಸೇವಿಸಿದರೆ ಆಯುಷ್ಯಕ್ಕೆ ಕ್ರಮೇಣ ಸಂಚಕಾರ. ವೃದ್ಧ ಸ್ತ್ರೀ ಅಂದರೆ ನಮಗಿಂತಲೂ ಹಿರಿಯವಳು ಮಡದಿಯಾದರೆ ಚಟುವಟಿಕೆ ನಮಗಿಂತಲೂ ಕಡಿಮೆ. ಪರಿಣಾಮವಾಗಿ ಜೀವನೋತ್ಸಾಹವಿರದು. ಸರೋವರದ ನೀರು ಆರೋಗ್ಯಕ್ಕೆ ಒಳ್ಳೆಯದಲ್ಲ, ಎಲ್ಲ ರೀತಿಯ ಹೊಲಸು ಅಲ್ಲಿರಬಹುದು. ರಾತ್ರಿಯ ಹೊತ್ತು ಮೊಸರನ್ನ ನಿಷಿದ್ಧ. ಇದು ಆರೋಗ್ಯದ ಏರುಪೇರಿಗೆ ಕಾರಣ. ಶ್ವಾಸಕೋಶಕ್ಕೂ ಒಳ್ಳೆಯದಲ್ಲ, ಆದ್ದರಿಂದ ರಾತ್ರಿ ಮೊಸರನ್ನ ಊಟ, ಮಜ್ಜಿಗೆ ಕುಡಿಯುವುದು... ಆಯುಷ್ಯ ಕ್ಷೀಣತೆಗೆ ಕಾರಣವೆನಿಸುತ್ತದೆ.

ಧುರಂಧರ: ಸಂಭಾಷಣೆ ಮತ್ತು ಬಲೂಚ್ ಪ್ರಶ್ನೆ!



ಧುರಂಧರ ಸಿನೆಮಾ ನೋಡಿದ ಬಹುತೇಕರಿಗೆ ಇದು ಮಹತ್ವದ ದೃಶ್ಯಗಳೇನಲ್ಲ!

ಎಸ್. ಪಿ ಚೌಧರಿ ಅಸ್ಲಾಂ ಸಂದರ್ಭ ಸಿಕ್ಕಾಗಲೆಲ್ಲಾ ಬಲೂಚಿಗಳನ್ನು "ಏ ಬಲೂಚ್" ಎಂದು ಕರೆಯುತ್ತಾನೆ. ಪಠಾಣ್ ಅಹಂಕಾರ ಹೊದ್ದ ಎಸ್.ಪಿ ಚೌಧರಿಗೆ ಬಲೂಚಿಗಳೆಂದರೆ ಪಠಾಣರಷ್ಟು ಶ್ರೇಷ್ಠರಲ್ಲದ, ಅವರಷ್ಟು ಹಕ್ಕಿಲ್ಲದ, ತೆಪ್ಪಗಿರಲೆಂದೇ ಹುಟ್ಟಿದ ಜನ. ಎಸ್.ಪಿ ಚೌಧರಿಯ ಈ ಮಾನಸಿಕತೆಯೇ ಪಾಕಿಸ್ತಾನದ್ದೂ ಕೂಡ. ಶೇರ್-ಎ-ಬಲೂಚ್ ಬರುದು ಹೊತ್ತವನನ್ನು ಕೂಡ ಈ ಚೌಧರಿ ಹಾಗೆಯೇ ಕರೆಯುತ್ತಾನೆ. ಒಂದು ಹಂತದಲ್ಲಂತೂ ಆತ ಐವರು ಬಲೂಚ್ ವಿದ್ಯಾರ್ಥಿಗಳ ನಕಲಿ ಎನ್‌ಕೌಂಟರ್ ನಡೆಸುತ್ತಾನೆ. ಅದಕ್ಕೆ ಆತ "ಮಗರಮುಚ್ ಪೆ ಭರೋಸಾ ಕರ್ ಸಕ್ತೆ ಹೈ, ಪರ್ ಬಲೂಚ್ ಪೆ ನಹೀ"(ಮೊಸಳೆಯನ್ನಾದರೂ ನಂಬಬಹುದು, ಬಲೂಚಿಗಳನ್ನಲ್ಲ) ಎಂಬ ಕಾರಣ ಕೊಡುತ್ತಾನೆ.

ಇವೆಲ್ಲವೂ ಸಿನೆಮಾ ವಿಮರ್ಶಕರು ಚರ್ಚೆ ಮಾಡಲೇಬೇಕಾದ ಸಂಗತಿಗಳೇನಲ್ಲ, ಸಿನೆಮಾ ಹೇಳಹೊರಟ ಸಂಗತಿಯೇ ಬೇರೆ. ಆದರೆ ಸಿನೆಮಾದಲ್ಲಿ ಬಲೂಚ್ ದಟ್ಟವಾಗಿ ಕಾಣುವುದರಿಂದ ಅದೂ ಕೂಡ ಮುಖ್ಯ. ಬಲೂಚ್ ಇತಿಹಾಸವನ್ನು ಅವಲೋಕಿಸಿದರೆ ಈ ಸಂಭಾಷಣೆಗಳು ಕಳೆದ ಏಳು ದಶಕಗಳಲ್ಲಿ ಬಲೂಚಿಗಳೊಂದಿಗೆ ಏನು ನಡೆದಿದೆಯೋ ಅದರ ನಾಲ್ಕು ಹನಿಗಳ ಪಾಕ ಎನಿಸದಿರದು. ಜೊತೆಗೆ ಪಾಕ್ ಇತಿಹಾಸ ಕೂಡ ಎನ್‌ಕೌಂಟರ್ ಸ್ಪೆಶಲಿಸ್ಟ್ ದಿವಂಗತ ಚೌಧರಿ ಅಸ್ಲಾಮನನ್ನು ಆತನ ಬಲೂಚ್ ದ್ವೇಷದ ಒಂದೇ ಕಾರಣಕ್ಕೆ ಮಹಾಪುರುಷನ ರೀತಿಯಲ್ಲಿ ನೋಡುತ್ತದೆ! ಅಲ್ಲದೆ ಇಂದಿಗೂ ಪಾಕಿಸ್ತಾನದಲ್ಲಿ ಒರಟಾಗಿ ವರ್ತಿಸುವವರನ್ನು, ಉರ್ದು ಬಾರದವನನ್ನು ಮತ್ತು ಅನಕ್ಷರಸ್ಥನನ್ನು ಬಲೂಚ್ ಎಂದು ಹಂಗಿಸಲಾಗುತ್ತದೆ! (Searchlights on Baloches and Balochistan-Justice Mir Khuda Bakhsh Marri). ಹಾಗಾಗಿ ಸಿನೆಮಾದಲ್ಲೂ ಅದನ್ನೇ ಬಳಸಿರುವುದರಲ್ಲಿ ನಿರ್ದೇಶಕನ ಸಂಚೇನಿಲ್ಲ.

ಆದರೆ ನಿರ್ದೇಶಕ ಸಾಂಕೇತಿಕವಾಗಿ ಬಳಸಿದ ಕೆಲವು ಸಂಭಾಷಣೆಗಳಿಂದ ಕೆಲ 'ಇಂಗ್ಲಿಷ್ ಬಲೂಚಿಗಳಿಗೆ' ಬೇಸರವಾಗಿದೆಯಂತೆ. ಎಷ್ಟೆಂದರೆ ಅವರು ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿ, ಚಿತ್ರಪ್ರದರ್ಶನವನ್ನು ರದ್ದು ಮಾಡಬೇಕೆಂದು ಕೋರಿದ್ದಾರೆ. ವಿಚಿತ್ರವೆಂದರೆ ಸಿನೆಮಾದಿಂದ ಬಲೂಚಿಸ್ತಾನದ ಸಾಮಾನ್ಯ ಬಲೂಚ್‌ಗಳಿಗೇನೂ ಬೇಸರವಾಗಿಲ್ಲ! ಅವರು ಸಿನೆಮಾ ಮತ್ತು ನಿರ್ದೇಶಕನನ್ನು ಹೊಗಳಿದ್ದಾರೆ. ಹಾಗಾದರೆ ಕಷ್ಟಕಾಣದ ಬಲೂಚಿಗಳು ಸಹವಾಸದೋಷದಿಂದ ಕೆಟ್ಟರೇ? ಹಾಗೆ ಹೇಳಬಹುದು. ಏಕೆಂದರೆ ವಿದೇಶದ ಬಲೂಚ್ ಸಂಘಟನೆಗಳು ವರ್ಷಕ್ಕೊಮ್ಮೆಯೋ ಎರಡು ಬಾರಿಯೋ ಕ್ಯಾಂಡಲ್ ಉರಿಸಿ ಬಲೂಚಿತನ ಪ್ರದರ್ಶಿಸಿದರೆ ಕರ್ತವ್ಯ ಮುಗಿಯಿತೆಂದು ತಿಳಿದಿರುವವರು. ಅದಕ್ಕೆ ಯಾವುದೋ ಗೊಂದಲ, ಜನಾಂಗೀಯ ದೌರ್ಜನ್ಯವನ್ನು ಕಾಫಿರರ ಮುಂದೆ ತೋರಿಸಿಕೊಳ್ಳಬಾರದೆಂಬ ಸ್ವಭಾವವೂ ಇರಬಹುದು. ಇಲ್ಲದಿದ್ದರೆ ಇವರಿಗೆ ಸಿನೆಮಾದಲ್ಲಿ ಪಾಕಿಸ್ತಾನದ ಬಲೂಚ್ ವಿರೋಧಿ ನೀತಿ ಕಾಣಿಸಬೇಕಿತ್ತು. ಆದರೆ ಇವರು ಕೋಪಿಸಿಕೊಂಡಿದ್ದು ನಿರ್ದೇಶಕನ ಮೇಲೆ!

ಧುರಂಧರ್ ಭಾರತದ ಆಂತರಿಕ ಭದ್ರತೆ, ಗೂಢಚರ್ಯೆ ವ್ಯವಸ್ಥೆ, ರಾಜತಾಂತ್ರಿಕ ಕಥನದಂತೆ ಕಂಡರೂ ಸಿನೆಮಾದುದ್ದಕ್ಕೂ ಬಲೂಚ್ ಬೆಸೆದುಕೊಂಡಿದೆ. ಕರಾಚಿಯ ಸುತ್ತಮುತ್ತ ನಡೆಯುವ ಗ್ಯಾಂಗ್‌ವಾರ್‌ಗಳಿಂದ ಹಿಡಿದು ಸಂಸತ್ ಚುನಾವಣೆಯವರೆಗೆ ಬಲೂಚ್‌ಗಳು ಪ್ರಮುಖ ಪಾತ್ರ ವಹಿಸಬಲ್ಲರು ಎಂಬುದನ್ನು ಸಿನೆಮಾದ ಎರಡೂ ಭಾಗಗಳು ಹೇಳುತ್ತವೆ. ಇದೇ ಕಥೆಯನ್ನು ಆದಿತ್ಯ ಧರ್ ಕೊಂಚವೇ ತಿದ್ದಿದರೂ ಅದು ಪಕ್ಕಾ ಬಲೂಚ್ ಸಿನೆಮಾದಂತೆಯೂ ಕಾಣಿಸಬಹುದೆಂಬಷ್ಟು ಅದು ಬಲೂಚ್‌ಮಯವಾಗಿದೆ. ಅಸಲಿಗೆ ಬಲೂಚ್ ನೋವನ್ನು ಹೊತ್ತು ಅಸ್ತಿತ್ವದಲ್ಲಿರುವುದು ಹಾಗೆಯೇ. ಏಳು ದಶಕಗಳಿಂದಲೂ ಅದು ಗಾಯಗೊಂಡಿದೆ. ಗಾಯಗೊಂಡ ಕಾರಣಕ್ಕೆ ಘಾತಕತನವನ್ನು ಮೈಗೂಡಿಸಿಕೊಂಡಿದೆ. ಸಿನೆಮಾದಲ್ಲಿ ಕಾಣುವಂತೆಯೇ ಬಲೂಚಿಗಳಲ್ಲಿ ಒರಟುತನವಿದೆ. ತನ್ನ ಮುಕ್ತಿಗಾಗಿ ತನ್ನನ್ನೇ ಕೊಂದುಕೊಳ್ಳುವಷ್ಟು ಆಕ್ರೋಶವಿದೆ. ಪಾಕಿಸ್ತಾನದ ಒಟ್ಟು ಭೂಭಾಗದ ಶೇ.44ರಷ್ಟನ್ನು ಹೊಂದಿದ್ದರೂ ಅಲ್ಲಿನ ಶೇ.84ರಷ್ಟು ಜನರಿನ್ನೂ ಬಡವರು. ಇಸ್ಲಾಮಾಬಾದ್, ಲಾಹೋರ್‌ಗಳು ಹೇಳುವಂತೆ ಬಲೂಚಿನ ಹೆಚ್ಚಿನವರು ಅನಕ್ಷರಸ್ಥರು. ಆದರೆ ಪಠಾಣರಷ್ಟು ಕಪಮೂರ್ಖರಲ್ಲ, ಪಠಾಣರಿಗೆ ತಮಗಿಂತಲೂ ಬಲೂಚಿಗಳು ಪರಾಕ್ರಮಿಗಳೆಂಬ ಹೊಟ್ಟೆಕಿಚ್ಚಿದೆ. ಆದರೆ ಬಲೂಚಿಗಳಿಗೆ ತಾವು ಪಠಾಣರಂತೆ ಪ್ರಾಣಭಯದಿಂದ ಪಲಾಯನ ಮಾಡುವವರಲ್ಲ ಎಂಬ ಸ್ವಾಭಿಮಾನವಿದೆ. ಪಠಾಣ-ಪಂಜಾಬಿಗಳಂತೆ ಬಲೂಚಿಗಳು ಖವ್ವಾಲಿ, ಕವಿಗೋಷ್ಠಿಗಳ ಶೋಕಿ ಇರುವವರಲ್ಲ. ಆದರೆ ಶತಮಾನಗಳಿಂದ ಭಾಷೆ ಮತ್ತು ಜಾನಪದವನ್ನು ಉಳಿಸಿಕೊಂಡು ಬಂದವರು.

ಒಂದು ಕಾಲದ ಶ್ರೀಮಂತ ಬಲೂಚಿಗಳಿಂದು ಪಾಕಿಸ್ತಾನದ ಗುಲಾಮಗಿರಿಗೆ ಬಿದ್ದಿದೆ. ಒಂದೊಮ್ಮೆ ಬಲೂಚ್‌ಗಳೇ ಇದ್ದ ಕ್ವೆಟ್ಟಾದಲ್ಲೇ ಇಂದು ಅವರು ಅಲ್ಪಸಂಖ್ಯಾತರಾಗುವ ಹಾದಿಯಲ್ಲಿದ್ದಾರೆ. ಅವರ ಸಂಪನ್ಮೂಲಗಳಿಂದ ಇಸ್ಲಾಮಾಬಾದ್ ಕೊಬ್ಬಿದೆ. ಇನ್ನೇನು ಬಲೂಚಿ ಧ್ವನಿ ಉಡುಗಿತು ಎನ್ನುವಷ್ಟರಲ್ಲಿ ಬಲೂಚರ ವಂಶವಾಹಿನಿಯಲ್ಲಿ ಪರಾಕ್ರಮದ ಘರ್ಜನೆ ಮೊಳಗುತ್ತದೆ. ಬಲೂಚರನ್ನು ಬೇಟೆಯಾಡಲು ಪಾಕಿಸ್ತಾನ ಸೇನೆ ಪಠಾಣ್ ಸೈನಿಕರ ವಿಶೇಷ ತುಕಡಿಯನ್ನು ರಚನೆ ಮಾಡಿದೆ. ಬಲೂಚಿಗಳ ಮಾರಣಹೋಮ ನಡೆಯುತ್ತದೆ. ಪಠಾಣ್ ಪಡೆ ಗೆದ್ದು ಬೀಗುತ್ತಿದ್ದಾಗಲೇ ಇಸ್ಲಾಮಾಬಾದಿನಲ್ಲೆಲ್ಲೋ ಬಲೂಚಿಗಳ ಸ್ಫೋಟದ ಸದ್ದು ಕೇಳಿಸುತ್ತದೆ. ಪಾಕಿಸ್ತಾನ ರಚನೆಯಾದಂದಿನಿಂದ ಬಲೂಚಿಗಳಿಗೆ ಅವರ ಮೇಲೆ ಸಂಪೂರ್ಣ ಗೆಲುವು ಸಾಧ್ಯವಾಗಲಿಲ್ಲ ಎಂಬುದು ಎಷ್ಟು ಸತ್ಯವೋ, ಪಾಕಿಸ್ತಾನಕ್ಕೂ ಬಲೂಚಿಗಳನ್ನು ಪೂರ್ಣ ಗೆಲ್ಲಲಾಗಲಿಲ್ಲ ಎಂಬುದು ಕೂಡ ಅಷ್ಟೇ ಸತ್ಯ. ಬಲೂಚಿಗಳು ಅಲೆಕ್ಸಾಂಡರನ ಕಾಲದಿಂದಲೂ ರಣಭೂಮಿಯಲ್ಲಿ ಪಳಗಿದವರು. ಭಾಷೆ ಮತ್ತು ಪರಂಪರೆಯನ್ನು ಸವಾಲುಗಳ ಹೊರತಾಗಿಯೂ ಕಾಪಿಟ್ಟುಕೊಂಡವರು. ಬುಡಕಟ್ಟು ಗುಣದ ಬಲೂಚಿಗಳನ್ನು ಆಯಾ ಕಾಲಘಟ್ಟದಲ್ಲಿ ಎಲ್ಲರೂ ಬಳಸಿಕೊಳ್ಳುತ್ತಾ ಬಂದರೂ ಅವರ ಸ್ವಂತಿಕೆ ನಾಶವಾಗಿಲ್ಲ. ಬ್ರಿಟಿಷರಿಗೆ ಪರಿಸ್ಥಿತಿಗಳು ಬಿಗುತ್ತಿದ್ದಾಗಲೆಲ್ಲಾ ಸಹಾಯಕ್ಕೆ ಬಂದವರು ಈ ಬಲೂಚಿಗಳು. ಬಲೂಚಿಗಳನ್ನು ಬಳಸಿಯೇ ಬ್ರಿಟಿಷರು ಆಫ್ಘನ್ ಯುದ್ಧಗಳನ್ನು ಗೆದ್ದರು. ಜೊತೆಗೆ ಬಲೂಚಿನ ಸಂಪನ್ಮೂಲಗಳನ್ನೂ ದೋಚಿದರು. ಇಷ್ಟೆಲ್ಲಾ ನಡೆಯುತ್ತಿದ್ದಾಗಲೂ ಬಲೂಚಿಗಳಿಗೆ ತಮ್ಮ 'ಕಲಾತ್' ಎಂಬ ಸಂಸ್ಥಾನವಿತ್ತು. ಆದರೆ ಖಾನ್‌ಗಳು ಬ್ರಿಟಿಷರೊಂದಿಗಿದ್ದರೂ ಸ್ವತಂತ್ರ ಬಲೂಚಿನ ಆಕಾಂಕ್ಷೆ ಅವರಲ್ಲಿ ಇಂಗಿರಲಿಲ್ಲ. 1920ರಲ್ಲಿ ಯೂಸುಫ್ ಅಲಿ ಮಾಗ್ಸಿ ಎಂಬಾತನ ನೇತೃತ್ವದಲ್ಲಿ ಬಲೂಚ್ ರಾಷ್ಟ್ರವಾದಿಗಳ ಗುಂಪು 'ಯಂಗ್ ಬಲೂಚ್' ಎಂಬ ರಹಸ್ಯ ಸಂಘಟನೆಯನ್ನು ಸ್ಥಾಪಿಸಿದರು. ಕೆಲ ವರ್ಷಗಳ ನಂತರ ಅದು ಹೆಸರು ಮತ್ತು ಸ್ವರೂಪಗಳೆರಡನ್ನೂ ಬದಲಿಸಿಕೊಂಡು 'ಅಂಜುಮನ್-ಎ ಇತ್ತೆಹಾದ್-ಎ ಬಲೂಚಾನ್' ಆಯಿತು. ಮುಂದೆ ಅದು ರಾಜಕೀಯ ಪಕ್ಷವಾಗಿ ಬದಲಾಯಿತು. ಅದರ ಪ್ರೇರಣೆಯಿಂದ ಇನ್ನೂ ಹಲವು ರಾಜಕೀಯ ಪಕ್ಷಗಳು ಉಗಮವಾದವು. ಜನರ ಸ್ವಾತಂತ್ರ್ಯಭಿಲಾಷೆ ಬಲಗೊಳ್ಳತೊಡಗಿದಂತೆ ಎದುರಾದ ಮಹಾಯುದ್ಧ ಸೃಷ್ಟಿಸಿದ ಒತ್ತಡಗಳಿಂದ ಬಲೂಚಿಸ್ತಾನ್ 1948ರ ಆಗಸ್ಟ್ 11ರಂದು ಸ್ವತಂತ್ರವಾಯಿತು. 108 ವರ್ಷಗಳ ಆಡಳಿತದಿಂದ ಬಿಡುಗಡೆಗೊಂಡರೂ ಕಲಾತ್ ಮುಖಂಡ ಖಾನ್ ಮೀರ್ ಸರ್ ಅಹಮದ್ ಯಾರ್ ಖಾನ್ ಅಹಮದ್‌ಜಾಯ್ ಇನ್ನೂ ಗೊಂದಲದಲ್ಲಿದ್ದ. ಬಲೂಚನ್ನು ಬ್ರಿಟಿಷರು ಪ್ರಿನ್ಸ್ಲೀ ಸ್ಟೇಟ್ ಆಗಿಯೇ ಇಟ್ಟಿದ್ದರು. ಖಾನ್ ಸಾಹೇಬನಿಗೆ ಬಲೂಚಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ತನಗಿದೆ ಎಂಬ ಭಾವನೆ ಅಹಂಕಾರವಾಗಿ ಬದಲಾಯಿತು. ಒಂದು ಹಂತದಲ್ಲಿ ಖಾನ್ ಎಲ್ಲರಿಂದಲೂ ಅಂತರ ಕಾಯ್ದುಕೊಂಡ. ಆದರೆ ಸ್ವತಂತ್ರವಾಗುಳಿಯುವ ಮತ್ತು ಯಾರೊಂದಿಗೂ ವಿಲೀನದ ನಿರ್ಧಾರವನ್ನು ತೆಗೆದುಕೊಳ್ಳದೇ ಹೋದ. ಆದರೆ ಖಾನ್ ಸಾಹೇಬನಿಗೆ ಬ್ರಿಟಿಷ್ ಕಾಲದಲ್ಲಿ ಕಾನೂನು ಸಲಹೆಗಾರನಾಗಿದ್ದವನು ಮಹಮದಾಲಿ ಜಿನ್ನಾ. ತರಮಾರದ ಜಿನ್ನಾ ನೇರವಾಗಿ ಖಾನ್ ಸಾಹೇಬನಿಗೆ ಪಾಕಿಸ್ತಾನದೊಂದಿಗೆ ವಿಲೀನವಾಗಬೇಕೆಂದು ಬೆದರಿಕೆಯ ಪತ್ರ ರವಾನಿಸಿದ. ಖಾನ್ ಅದಕ್ಕೂ ಉತ್ತರಿಸಲಿಲ್ಲ. ಕೊನೆಗೆ 1948ರ ಮಾರ್ಚ್ 27ರಂದು ಲಾಹೋರಿನಿಂದ ಹೊರಟ ಪಠಾಣ್ ತುಕಡಿ ಖಾನನ ಅಸ್ಥಾನಕ್ಕೆ ನುಗ್ಗಿ ಬಲವಂತದಿಂದ ಪಾಕಿಸ್ತಾನದೊಂದಿಗೆ ವಿಲೀನದ ಪತ್ರಕ್ಕೆ ಸಹಿ ಹಾಕಿಸಿಕೊಂಡಿತು. ಕೇವಲ 137 ದಿನಗಳಲ್ಲೇ ಬಲೂಚರು ಸ್ವಾತಂತ್ರ್ಯ ಕಳೆದುಕೊಂಡಿದ್ದರು. ಅದೆಷ್ಟು ಹೀನಾಯವಾಗಿ ಕಳೆದುಕೊಂಡರೆಂದರೆ ಬ್ರಿಟಿಷ್ ಕಾಲದಲ್ಲಿದ್ದ ಸ್ವಾತಂತ್ರ್ಯ ಕೂಡ ಈಗಿರಲಿಲ್ಲ, ಬೆಂಕಿಯಿಂದ ಹೊರಬಂದವು ಎಂದುಕೊಳ್ಳುತ್ತಿದ್ದಂತೆಯೇ ಬಲೂಚರು ಬಾಣಲೆಗೆ ಬಿದ್ದರು.

ಪಾಕಿಸ್ತಾನಕ್ಕೆ ಸೇರಿದ ಬಲೂಚಿನ ಸಂಪನ್ಮೂಲ ಮತ್ತೊಮ್ಮೆ ಲೂಟಿಯಾಗತೊಡಗಿತು. ಬಲೂಚರ ಸ್ವಾಭಿಮಾನ ಬಡವನ ಕೋಪದಂತಾಗುತ್ತಿತ್ತು. 1948ರ ಕ್ರಾಂತಿಯನ್ನು ಪಾಕಿಸ್ತಾನ ಅದೆಷ್ಟು ಭೀಕರವಾಗಿ ಅಡಗಿಸಿತೆಂದರೆ ಕ್ರಾಂತಿಕಾರಿಗಳನ್ನು ಸಾಮೂಹಿಕವಾಗಿ ಗಲ್ಲಿಗೇರಿಸಿತು. 1958ರಲ್ಲಿ ಆಯೂಬ್ ಖಾನ್ ಬಲೂಚಿನ ರಾಜ್ಯ ಸ್ಥಾನಮಾನವನ್ನು ಕೊನೆಗೊಳಿಸಿ ಅಲ್ಪಸ್ವಲ್ಪ ಸ್ವಾಯತ್ತತೆಯನ್ನೂ ರದ್ದುಗೊಳಿಸಿದ. ವಿರೋಧಿಸಿದವರನ್ನು ಗಲ್ಲಿಗೇರಿಸಿದ. 1960ರ ಗೆರಿಲ್ಲಾ ಯುದ್ಧ ಪಾಕಿಸ್ತಾನದ ನಿದ್ರೆ ಕೆಡಿಸಿತ್ತಾದರೂ ಕ್ರೂರವಾಗಿ ಕ್ರಾಂತಿಯನ್ನು ಅಡಗಿಸಲಾಯಿತು. 1970ರಲ್ಲಿ ಇರಾನ್ ಜೊತೆಗೂಡಿ ಪಾಕಿಸ್ತಾನ ಬಲೂಚ್ ಸ್ವಾತಂತ್ರ್ಯ ಹೋರಾಟಗಾರರ ನರಮೇಧ ನಡೆಸಿತು. ದಾಖಲೆಗಳ ಪ್ರಕಾರ ಅಂದು 30 ಸಾವಿರಕ್ಕೂ ಹೆಚ್ಚಿನ ಬಲೂಚ್‌ಗಳ ಮಾರಣಹೋಮ ನಡೆಯಿತು. ಇಂದು ಅದೇ ಇರಾನ್ ನಮ್ಮ ಮೇಲೆ ಅನ್ಯಾಯವಾಗಿ ಆಕ್ರಮಣ ನಡೆಸಲಾಗಿದೆ ಎಂದು ಅವಲತ್ತುಕೊಳ್ಳುತ್ತಿದೆ. ಪಾಲುದಾರ ಪಾಕಿಸ್ತಾನ ತಾನು ಯುದ್ಧವನ್ನು ನಿಲ್ಲಿಸುತ್ತೇನೆ ಎಂದು ಒದ್ದಾಡುತ್ತಿದೆ! ಈ ಎಲ್ಲಾ ಕ್ರಾಂತಿಗಳು ಬೇಗನೆ ಅಡಗಿತ್ತಾದರೂ 2003ರಲ್ಲಿ ಪ್ರಾರಂಭವಾದ ಬಲೂಚ್ ರಾಷ್ಟ್ರೀಯತೆಯ ಅಲೆ ಸ್ವತಂತ್ರ ಬಲೂಚಿನ ಭರವಸೆಯನ್ನು ಜೀವಂತವಾಗಿಟ್ಟಿದೆ. ಪಾಕಿಸ್ತಾನದ ನಿರ್ಲಕ್ಷ್ಯ ಮತ್ತು ಬಲೂಚಿಗಳ ಮೇಲಿನ ದೌರ್ಜನ್ಯವನ್ನು ವಿಶ್ವಮಟ್ಟಕ್ಕೆ ಮುಟ್ಟಿಸುವ ಪ್ರಯತ್ನದಲ್ಲಿ ಬಲೂಚಿಗಳು ಅಷ್ಟಿಷ್ಟು ಯಶಸ್ಸು ಕಂಡಿದ್ದಾರೆ. ಅದರಲ್ಲೂ ಬಲೂಚಿನ ಗ್ವಾದರ್ ಬಂದರು ಮತ್ತು ಚೀನಾ ಗುತ್ತಿಗೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಸಶಸ್ತ್ರ ಕ್ರಾಂತಿ ಹಿಂದೆಂದಿಗಿಂತಲೂ ಪಾಕಿಸ್ತಾನಕ್ಕೆ ತಲೆನೋವಾಗಿದೆ. ಬಲೂಚ್ ನ್ಯಾಶನಲ್ ಮೂವ್ಮೆಂಟ್ (BNM), ಬಲೂಚ್ ರಿಪಬ್ಲಿಕನ್ ಪಾರ್ಟಿ (BRP), ಬಲೂಚಿಸ್ತಾನ್ ಲಿಬರೇಷನ್ ಫ್ರಂಟ್ (BLF), ಬಲೂಚ್ ಲಿಬರೇಷನ್ ಆರ್ಮಿ (BLA), ಬಲೂಚ್ ಸ್ಟೂಡೆಂಟ್ಸ್ ಆರ್ಗನೈಜೇಷನ್‌ಗಳು ಹೋರಾಟಕ್ಕಿಳಿದಿವೆ. ಕೆಲವು ವರದಿಗಳ ಪ್ರಕಾರ 2003ರಿಂದ 2007ರವರೆಗೆ ಬಲೂಚಿಸ್ತಾನದಲ್ಲಿ ಕಾಣೆಯಾದವರ ಸಂಖ್ಯೆ 18,000ಕ್ಕೂ ಹೆಚ್ಚು. ಈ ಅವಧಿಯಲ್ಲಿ 7,000ಕ್ಕೂ ಹೆಚ್ಚು ಮಂದಿ ಪಾಕಿಸ್ತಾನದ ಬಂಧನದಲ್ಲಿಯೇ ಸಾವನ್ನಪ್ಪಿದ್ದಾರೆ. ಆದರೆ 1948ರಿಂದ ಇಲ್ಲಿಯವರೆಗೆ ಎಷ್ಟು ಜನ ಬಲೂಚ್‌ಗಳು ಸಾವನ್ನಪ್ಪಿದ್ದಾರೆ, ಕಾಣೆಯಾಗಿದ್ದಾರೆಂಬುದರ ಸಂಖ್ಯೆ ಲೆಕ್ಕದಲ್ಲಿಲ್ಲ. ಮಾನವಹಕ್ಕುಗಳೇ ಇಲ್ಲದ ದೇಶದಲ್ಲಿ ಸತ್ತವರ ಲೆಕ್ಕಹಾಕುವವರಾರು? ವಿಚಿತ್ರವೆಂದರೆ ಮಾನವಹಕ್ಕುಗಳ ದೊಡ್ಡದೊಡ್ಡ ಮಾತಾಡುವ ಜಾಗತಿಕ ಸಂಘಟನೆಗಳು ಮತ್ತು ತಾನೇ ಜಗತ್ತಿನ ಪಟೇಲ ಎಂದಾಡುವವರಾರೂ ಬಲೂಚರನ್ನು ಬೆಂಬಲಿಸಿಲ್ಲ. ಭದ್ರತಾಮಂಡಳಿ ಅಲ್ ಜಜೀರಾದ ರದ್ದಿ ಪೇಪರಿನ ಸುದ್ದಿಗಳನ್ನು ಆರಿಸಿ ವರದಿಯೊಂದನ್ನು ಮಂಡಿಸಿ ಕೈತೊಳೆದುಕೊಂಡಿದೆ. ಭೂಪಟದಲ್ಲಿ ಗಾಜಾ ಗುರುತಿಸಲಾಗದಿದ್ದರೂ ಸೇವ್ ಪ್ಯಾಲೆಸ್ಟೀನ್ ಎನ್ನುವ ಭಾರತೀಯ ಮುಸ್ಲಿಮರು ಬಲೂಚರನ್ನು ಅನುಕಂಪದಿಂದ ನೋಡಿದ್ದಕ್ಕೆ ಉದಾಹರಣೆಗಳಿಲ್ಲ, ಗಾಜಾದ ಭಯೋತ್ಪಾದಕರಿಗೆ ಸಲ್ಲುವ ಗೌರವ ಬಲೂಚಿಗಳಿಲ್ಲವೆಂದರೆ ಅವರೆಷ್ಟು ನತದೃಷ್ಟರಾಗಿರಬಹುದು?

ಬಲೂಚರ ದುರಂತ ಕಥನವನ್ನು ಅರ್ಥ ಮಾಡಿಕೊಳ್ಳದಿದ್ದರೆ ಧುರಂಧರ ಕೂಡ ಪ್ರಭಾವಿಯಾಗಿ ಮೂಡುತ್ತಿರಲಿಲ್ಲ. ಲಿಯಾರಿಯಲ್ಲಿ ನಡೆಯುತ್ತಿದ್ದ ಗ್ಯಾಂಗ್‌ವಾರುಗಳಲ್ಲಿ ಬಲೂಚಿ ಗೂಂಡಾಗಳದ್ದೇ ಕೈಮೇಲೇಕೆ? ಅಲ್ಲೂ ಬಲೂಚಿಯರನ್ನು ಪಾಕಿಸ್ತಾನ ಹೇಗೆ ಬಳಸಿಕೊಂಡಿತು? ರೆಹಮಾನ್ ಬಲೂಚ್, ಉಜೈರ್ ಬಲೂಚ್ ಮೊದಲಾದವರನ್ನು ಬಲೂಚರ ವಿರುದ್ಧ ಹೇಗೆ ಬಳಸಿಕೊಳ್ಳಲಾಯಿತು? ಎಂಬುದನ್ನು ಸಿನೆಮಾ ಸೂಕ್ಷ್ಮವಾಗಿ ಹೇಳಿದರೂ ಅಸಲಿ ಕಥೆ ಅಷ್ಟೇ ಅಲ್ಲ, ಆದರೆ ಅಷ್ಟನ್ನಾದರೂ ಸಿನೆಮಾ ಮೂಲಕ ತೋರಿಸಿದ್ದಕ್ಕಾಗಿ ಬಲೂಚರು ನಿರ್ದೇಶಕರಿಗೆ ಋಣಿಯಾಗಿರಬೇಕಿತ್ತು. ಆದರೆ ಸಹವಾಸದಿಂದ ಬಲೂಚನೂ ಕೆಟ್ಟು ಕೋರ್ಟ್ ಮೆಟ್ಟಿಲೇರಿದ.

ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ...!

ತರಿರ ಹೆಚ್.ಪಿ.



ರಾಮರಾವಣರ ನಡುವೆ ಯುದ್ಧ ಆರಂಭವಾಗಿದೆ, ಕುಂಭಕರ್ಣನನ್ನು ರಾವಣನು ಯುದ್ಧಕ್ಕಾಗಿ ಎಬ್ಬಿಸಿ ಯುದ್ಧಕ್ಕೆ ಹೋಗಬೇಕು ಎಂದಾಗ, ಕುಂಭಕರ್ಣನು 'ಶ್ರೀರಾಮನು ಏಕೆ ನಮ್ಮ ಮೇಲೆ ಯುದ್ಧಕ್ಕೆ ಬಂದಿರುವನು' ಎಂದು ಪ್ರಶ್ನಿಸಿದನು. ಆಗ ರಾವಣನು ಸೀತೆಯ ಅಪಹರಣದ ಘಟನೆಯನ್ನು ವಿವರಿಸಿದ. ಕುಂಭಕರ್ಣನು 'ನಿನಗೆ ಸೀತೆಯು ಒಲಿದಳೆ' ಎಂದು ಕೇಳಿದ. ಆಗ ರಾವಣನು 'ನಾನು ಸಾಕಷ್ಟು ರೀತಿಯಲ್ಲಿ ಪ್ರಯತ್ನಿಸಿದ್ದೇನೆ, ಆದರೂ ಆಕೆ ನನಗೆ ಒಲಿಯಲಿಲ್ಲ' ಎಂದನು. ಆಗ ಕುಂಭಕರ್ಣನು 'ನೀನು ಶ್ರೀರಾಮನ ಶರೀರವನ್ನು ತಾಳಿ ಆಕೆಯ ಬಳಿ ಸಾಗಿದೆಯಾ' ಎಂದು ಪ್ರಶ್ನಿಸಿದನು. ಆಗ ರಾವಣ ಹೇಳುತ್ತಾನೆ, 'ಅಯ್ಯಾ ಕುಂಭಕರ್ಣ, ನಾನು ಶ್ರೀರಾಮನನ್ನು ನನ್ನಲ್ಲಿ ಆಹ್ವಾನಿಸಿಕೊಂಡರೆ, ನನ್ನಲ್ಲಿರುವ ರಾವಣನೇ ಇಲ್ಲವಾಗುತ್ತಾನೆ. ರಾವಣನಿಗೆ ಪರಸ್ತ್ರೀ ಮೇಲೆ ವ್ಯಾಮೋಹವೇ ಹೊರತು ಶ್ರೀರಾಮನಿಗಲ್ಲ, ಹೀಗಾಗಿ ನಾನು ರಾಮನಂತೆ ದೇಹವನ್ನು ಹೊಂದಿದರೆ ಸೀತೆಯ ಮೇಲಿನ ಕಾಮನೆಯೇ ಹೊರಟು ಹೋಗುತ್ತದೆ'

ಇದು ಶ್ರೀರಾಮನ ಆದರ್ಶಗಳಿಗೆ ಉದಾಹರಣೆ.

ಕುಂಭಕರ್ಣನು ಸತ್ತ ನಂತರ ರಾವಣನು ಇಂದ್ರಜಿತುವನ್ನು ಯುದ್ಧಕ್ಕೆ ಕಳುಹಿಸಿದ. ಲಕ್ಷ್ಮಣನು ರಾವಣನ ಮಗನಾದ ಇಂದ್ರಜಿತುವನ್ನು ಕೊಂದನು. ಇಂದ್ರಜಿತುವಿನ ಬಲಗೈ ಆತನ ಪತ್ನಿಯಾದ ಸುಲೋಚನೆಯ ಬಳಿ ಬಿದ್ದಿತು. ಆ ಕೈ ಅಲ್ಲಿಯವರೆಗೆ ನಡೆದ ವೃತ್ತಾಂತವನ್ನು ನೆಲದ ಮೇಲೆ ಬರೆದು, ತನ್ನ ಮೃತ್ಯುವು ಲಕ್ಷ್ಮಣನಿಂದ ಆಯಿತು ಎಂದು ಬರೆದು ಸುಮ್ಮನಾಯಿತು. ಆಗ ಸುಲೋಚನೆ ತಾನು ತನ್ನ ಪತಿಯೊಡನೆ ಚಿತೆಯನ್ನು ಏರಲು ನಿರ್ಧರಿಸಿದಳು. ತನ್ನ ಮಾವನಾದ ರಾವಣನ ಬಳಿ ಹೋಗಿ, ನನ್ನ ಪತಿಯು ಮರಣವಾಗಿದೆ, ಅವರ ಶರೀರ ಈಗ ರಾಮನ ಬಳಿಯಿದೆ, ತಾವು ಅದನ್ನು ತರಿಸಿಕೊಟ್ಟರೆ, ನಾನು ಪತಿಯೊಡನೆ ಸಹಗಮನ ಮಾಡುವೆ ಎಂದಳು. ಆಗ ರಾವಣನು, 'ನೀನೇ ಹೋಗಿ ನಿನ್ನ ಪತಿಯ ಶರೀರವನ್ನು ರಾಮನಿಂದ ಪಡೆದುಕೋ' ಎಂದ. ರಾವಣನ ಸಭೆಯಲ್ಲಿದ್ದವರೆಲ್ಲರೂ, 'ಹೇ ಪ್ರಭು ನೀವೇನು ಮಾಡುತ್ತಿರುವಿರಿ? ನಿಮ್ಮ ಸೊಸೆಯನ್ನು ರಾಮನ ಬಿಡಾರಕ್ಕೆ ಕಳುಹಿಸುತ್ತಿದ್ದೀರಲ್ಲ, ಆತನು ನಿಮ್ಮ ಶತ್ರು, ನೀವು ಆತನ ಪತ್ನಿಯನ್ನು ನಿಮ್ಮ ಬಳಿ ಇಟ್ಟುಕೊಂಡಿರುವಿರಿ. ನಿಮ್ಮ ಸೊಸೆಯನ್ನು ಆತನ ಬಳಿ ಮಗನ ಶವಕ್ಕಾಗಿ ಕಳುಹಿಸುವುದು ಎಷ್ಟು ಸರಿ? ರಾಮ ನಿಮ್ಮ ಸೊಸೆಗೆ ಏನಾದರೂ ಮಾಡಿಬಿಟ್ಟರೆ' ಎಂದರು. ಆಗ ರಾವಣನು 'ನಾನು ಶ್ರೀರಾಮನನ್ನು ನಂಬುತ್ತೇನೆ. ಇತರರ ಮನೆಯ ಹೆಣ್ಣನ್ನು ಬಂಧಿಯಾಗಿ ಇಡಲು ಆತನು ರಾವಣನಲ್ಲ, ಆತ ಶ್ರೀರಾಮಚಂದ್ರ. ನೀವು ಬಹುಶಃ ನನ್ನ ನೆಚ್ಚಿಸುವ ಸಲುವಾಗಿ ನಿಮ್ಮ ಆಲೋಚನಾ ಸಾಮರ್ಥ್ಯವನ್ನು ಕಳೆದುಕೊಂಡಿರಬೇಕು. ರಾವಣನು ಪರಸ್ತ್ರೀಯನ್ನು ಅಪಹರಿಸುವ ಬುದ್ಧಿಯುಳ್ಳವನೇ ಹೊರತು ರಾಮನಲ್ಲ' ಎಂದನು.



ಹೀಗೆ ಪ್ರತಿಯೊಬ್ಬರಲ್ಲೂ ರಾಮ-ರಾವಣರಿರುತ್ತಾರೆ. ಇದೇ ವಿಷಯವನ್ನು ಡಿ.ವಿ.ಜಿ.ಯವರು ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ಹೇಳುತ್ತಾರೆ.

ದೇವ ದಾನವರ ರಣರಂಗ ಮಾನವಹೃದಯ
ಭಾವರಾಗಹತಂಗಳವರ ಸೇನೆಗಳು ।
ಭೂವಿಭವಜಯಿಗಳ ಭ್ರಾಂತಿಯಲಿ ಮರೆಯುವರು
ಜೀವಾಮೃತವನವರು - ಮಂಕುತಿಮ್ಮ ॥

ನಮ್ಮ ಹೃದಯದಲ್ಲಿ ಶ್ರೀರಾಮನಿಗೆ ಅವತಾರವನ್ನು ತಾಳಲು ನಾವು ಅವಕಾಶ ನೀಡಬೇಕು. ಆಗ ನಮ್ಮಲ್ಲಿರುವ ರಾವಣನ ಅಂತ್ಯವಾಗುತ್ತದೆ. ರಾಮನಿರುವಲ್ಲಿ ರಾವಣನಿರಲು ಸಾಧ್ಯವಿಲ್ಲ. ಇತರರು ನಮ್ಮನ್ನು ಎಷ್ಟು ಬದಲಾಯಿಸಲು ಪ್ರಯತ್ನಿಸಿದರೂ ನಾವುಗಳು ಬದಲಾಗುವುದಿಲ್ಲ, ಹೀಗಾಗಿ ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು. ಧರ್ಮ ಎಂಬ ಶಬ್ದಕ್ಕೆ ಹಲವಾರು ಅರ್ಥಗಳಿವೆ. ಶ್ರೀವಿಷ್ಣು ಸಹಸ್ರನಾಮದಲ್ಲಿ ವಿಷ್ಣುವಿನ ಒಂದು ಹೆಸರು ಧರ್ಮ, ಎಲ್ಲೆಡೆ ವ್ಯಾಪಿಸುವುದರಿಂದ ಆತನನ್ನು ವಿಷ್ಣು ಎಂದು ಕರೆಯುತ್ತೇವೆ. ದೇವರು ಪ್ರತಿಯೊಬ್ಬರ ಹೃದಯದಲ್ಲಿ ವಾಸಿಸುತ್ತಿದ್ದಾನೆ ಎಂದು ತಿಳಿದವರು ಹೇಳುತ್ತಿದ್ದರು. ಹೀಗಾಗಿ ಧರ್ಮವೆಂದರೆ ನಮ್ಮ ಚೈತನ್ಯವೆಂದಾಗುತ್ತದೆ. ನಾವುಗಳು 'ನಾನು, ನಾನು' ಎಂದು ಸಂಬೋಧಿಸುವುದನ್ನೇ 'ಆತ್ಮ' ಎಂದು ಸಂಸ್ಕೃತದಲ್ಲಿ ಕರೆಯಲಾಗಿದೆ. ಆತ್ಮನನ್ನು ಅರಿತವನು ಸರ್ವವನ್ನು ಅರಿಯುತ್ತಾನೆ ಎಂಬುದು ಉಪನಿಷತ್ತಿನ ಉಪದೇಶವಾಗಿದೆ. ಧರ್ಮವೆಂಬುದು ಶುದ್ಧ ಚೈತನ್ಯದ ಹೆಸರಾಗಿದೆ. ಹೀಗೆ ಹಿಂದೂಗಳು ಕೋಟ್ಯಂತರ ನಾಮಗಳಿಂದ, ಹೆಸರುಗಳಿಂದ ಆ ಚೈತನ್ಯವನ್ನು ಕಾಣುತ್ತಾರೆ ಹಾಗೂ ಕರೆಯುತ್ತಾರೆ.

ನಾವುಗಳೆಲ್ಲ ಚೈತನ್ಯ ಸ್ವರೂಪದವರಾಗಿದ್ದೇವೆ. ಪರಮಾತ್ಮ ನಮ್ಮೆಲ್ಲರ ಹೃದಯವಾಸಿಯಾಗಿದ್ದಾನೆ. ಈ ನೈಜ ತಿಳುವಳಿಕೆಯನ್ನು ಧರ್ಮ ಎನ್ನಬಹುದು. ಈ ಸತ್ಯವನ್ನು ತಿಳಿಯದವನು ಅಧರ್ಮಿಯಾಗುತ್ತಾನೆ. ಯಾವಾಗ ಧರ್ಮವು ಎಂದರೆ ವ್ಯಕ್ತಿಯು ತಾನು ಚೈತನ್ಯ ಸ್ವರೂಪ ಎಂಬುದನ್ನು ಮರೆಯುತ್ತಾನೋ, ಆಗ ಆತನು ಅಧರ್ಮಿಯಾಗುತ್ತಾನೆ. ಅದನ್ನೇ ಧರ್ಮದ ಹಾನಿ ಎನ್ನಬಹುದು. ವ್ಯಕ್ತಿ ಅಧರ್ಮಿಯಾಗುವುದು ಎಂದರೆ ಕಣ್ಣಿಗೆ ಕಾಣುವ ಶರೀರ, ನಾಮ, ರೂಪ, ಅನುಷ್ಠಾನವಿಲ್ಲದ ಕೇವಲ ಬಾಹ್ಯ ಆಚರಣೆ ನಿಜವೆಂದು ನಂಬುವುದಾಗಿದೆ. ಯಾವಾಗ ನಮ್ಮ ಹೃದಯಲ್ಲಿ ಜ್ಞಾನದ ಅವತಾರ ಹುಟ್ಟುವುದೋ, ಅಂದರೆ ನಾನು ಅಧರ್ಮಿಯಲ್ಲ, ನಾನು ವಾಸ್ತವದಲ್ಲಿ ಧರ್ಮರೂಪವಾದ ಚೈತನ್ಯವೆಂದು ಅರಿಯಲ್ಪಡುವುದೋ, ಆಗ ಆತನಿಗೆ ಎಲ್ಲೆಲ್ಲೂ ಚೈತನ್ಯ ದರ್ಶನವೇ ಕಾಣುತ್ತದೆ. ವೇದಾಂತದಲ್ಲಿ ಈ ಚೈತನ್ಯವನ್ನು 'ಬ್ರಹ್ಮ'ಎಂದು ಕರೆದಿದ್ದಾರೆ. ಈ ವಾಸ್ತವ ಅರಿವಾದಾಗ ದುಷ್ಟರು ಹೊರಗಿಲ್ಲ ಎಂಬುದು ಅರಿವಾಗುತ್ತಾದೆ. ಆ ಕ್ಷಣದಲ್ಲಿ ಆತನಲ್ಲಿದ್ದ ರಾಕ್ಷಸನೂ ನಾಶವಾಗಿ, ಒಳಗೆ ಅವಿತಿದ್ದ ಸಾಧುವು ಪ್ರಕಟವಾಗುತ್ತಾನೆ. ಇದು ನಿಜವಾಗಿಯೂ ಅವತಾರದ ರಹಸ್ಯವೆನ್ನಬಹುದು. ನಾವು ಈ ಪ್ರಪಂಚದಲ್ಲಿ ಜೀವಿಸುವಾಗ, ಪ್ರತಿಯೊಬ್ಬನೂ ನಮ್ಮ ಆತ್ಮಸ್ವರೂಪವೆ ಎಂದು ಅರಿತರೆ ಈ ಭೂಮಿಯು ಸ್ವರ್ಗವಾಗುತ್ತದೆ. ಒಬ್ಬ ಜ್ಞಾನಿ ಈ ಜಗತ್ತಿನಲ್ಲಿ ಹೇಗೆ ಜೀವಿಸುತ್ತಾನೆ ಎಂಬುದನ್ನು ಡಿ.ವಿ.ಜಿ. ಹೀಗೆ ವಿವರಿಸಿದ್ದಾರೆ.

ಬ್ರಹ್ಮಾನುಸಂಧಾನ ಲೋಕಸಂಧಾನದಲಿ
ಬ್ರಹ್ಮದರ್ಶನವೆಲ್ಲ ಜೀವರೂಪದಲಿ ।
ಬ್ರಹ್ಮಾನುಭವ ದೇಹ ಕರುಣಾನುಭವಗಳಲಿ
ಮರ್ಮವಿದು ಮುಕ್ತಿಗೆಲೊ - ಮಂಕುತಿಮ್ಮ ॥

ನಾವು ಆ ಚೈತನ್ಯವನ್ನು ಪ್ರತಿಯೊಬ್ಬರಲ್ಲಿ ಕಾಣಬೇಕು. ನಮ್ಮ ದೇಹ ಇಂದ್ರಿಯಗಳ ಮುಖಾಂತರ ಅನುಭವಿಸುವ ಎಲ್ಲ ಅನುಭವಗಳನ್ನು ಆ ಚೈತನ್ಯದನುಭವವೆಂದು ಅರಿತರೆ ಅದೇ ಮುಕ್ತಿ.

ಪತ್ರ ಮಿತ್ರ

ಮೋದಿಯವರು ಶಾಂತಿದೂತರಾಗಲಿ

ಅಮೆರಿಕಾ- ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವನ್ನು ನಿಲ್ಲಿಸಲು ಭಾರತದ ಪ್ರಧಾನಿ ಮೋದಿ ಮಧ್ಯಸ್ಥಿಕೆಯನ್ನು ವಹಿಸಬೇಕು ಎಂಬ ಮಾತುಗಳು ಇತ್ತೀಚೆಗೆ ಬಹಳವಾಗಿ ಕೇಳಿಬಂದವು. ಮೋದಿಯವರು ಶಾಂತಿದೂತರಾಗಲು ಸರಿಯಾದ ವ್ಯಕ್ತಿ ಎಂಬ ಅಭಿಪ್ರಾಯ ಎಲ್ಲರದು. ಈ ವಿಷಯದ ಕುರಿತು ಫಿನ್‌ಲೆಂಡ್ ಅಧ್ಯಕ್ಷ ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಮೋದಿಯವರು ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸಬೇಕು ಎಂದರು. ಯುಎಸ್ ರಾಯಭಾರಿ ಕೂಡಾ "ಮೋದಿಯವರ ಒಂದು ಮಾತು ಯುದ್ಧ ನಿಲ್ಲಿಸಬಲ್ಲದು" ಎಂದು ಹೇಳಿದರು. ಇನ್ನೂ ಕೆಲವು ಮುಖಂಡರು ಇದೇ ರೀತಿಯ ಅಭಿಪ್ರಾಯ ಸೂಚಿಸಿದ್ದಾರೆ.

ಇಂದು, ಮೋದಿಯವರು ವಿಶ್ವದಲ್ಲೇ ಅತಿ ಹೆಚ್ಚು ಜನಪ್ರಿಯ ನಾಯಕ. ಭಾರತವು ವಿಶ್ವದ ಹೆಚ್ಚಿನ ದೇಶಗಳೊಡನೆ ಉತ್ತಮ ಸ್ನೇಹ ಸಂಬಂಧ ಹೊಂದಿದೆ. ಪ್ರಸ್ತುತ ಯುದ್ಧನಿರತರಾಗಿರುವ ಅಮೆರಿಕಾ, ಇರಾನ್, ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳೊಡನೆ ಭಾರತದ ಸಂಬಂಧ ಉತ್ತಮವಾಗಿದೆ. ಮೋದಿಯವರು ಈ ಎಲ್ಲಾ ದೇಶಗಳ ಮುಖಂಡರೊಡನೆ ಸೌಹಾರ್ದ ಸ್ನೇಹ ಹೊಂದಿದ್ದಾರೆ. ಎಲ್ಲರೊಡನೆ ಸಂಬಂಧ ಸುಧಾರಿಸುವಲ್ಲಿ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಇರಾನ್‌ಗೆ ಬಹಿರಂಗ ಬೆಂಬಲ ಸೂಚಿಸದಿದ್ದರೂ, ಭಾರತ ಮತ್ತು ಇರಾನ್ ಸಂಬಂಧ ಹಾಳಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಇರಾನ್ ಜತೆ ನಡೆದ ಮಾತುಕತೆಯ ಪರಿಣಾಮವಾಗಿ ಅಲ್ಲಿಂದಲೂ ತೈಲ ತರಿಸುವಲ್ಲಿ ಯಶಸ್ಸು ಹೊಂದಿದ್ದಾರೆ.

ಅಮೆರಿಕಾ ಅಧ್ಯಕ್ಷ ಟ್ರಂಪ್ ಅವರ ವಿಚಿತ್ರ ವರ್ತನೆಯ ನಡುವೆಯೂ, ಮೋದಿ ಚಾಣಾಕ್ಷತೆಯಿಂದ ಎಲ್ಲವನ್ನೂ ನಿಭಾಯಿಸುವಲ್ಲಿ ಯಶಸ್ಸು ಪಡೆಯುತ್ತಿದ್ದಾರೆ. ವಿಭಿನ್ನ ದೇಶಗಳ ನಡುವಿನ ಸಂಬಂಧದಲ್ಲಿ ಸ್ಥಿರತೆ ತರುವಲ್ಲೂ, ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ತನ್ನ ದೂರದೃಷ್ಟಿಯಿಂದ ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ ಕ್ಷಮತೆ, ಬದ್ಧತೆ, ಪ್ರಾಮಾಣಿಕತೆ ಮೋದಿಯವರಲ್ಲಿದೆ ಎಂಬುದು ಮನದಟ್ಟಾಗಿರುವುದರಿಂದ ಅವರ ಉದ್ದೇಶವನ್ನು ಯಾರೂ ಅನುಮಾನಿಸುತ್ತಿಲ್ಲ.

ಕೊಲ್ಲಿ ಸಮರ ನಿಲ್ಲಿಸುವಲ್ಲಿ, ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡುವಲ್ಲಿ ಮೋದಿಯವರು ಪ್ರಧಾನ ಪಾತ್ರ ವಹಿಸುವುದು ಒಳ್ಳೆಯದು ಎಂಬುದು ಭಾರತೀಯರ ಆಶಯ.

-ಶಂಕರನಾರಾಯಣ ಭಟ್, ಮಾಡಗೇರಿ

ಕಣ್ಗಾವಲು ಅಗತ್ಯ

ಪಡಿತರ ವ್ಯವಸ್ಥೆಯಲ್ಲಿನ ಅಕ್ರಮಗಳು ಬಡವರ ಹಸಿವಿನೊಂದಿಗೆ ನಡೆಯುತ್ತಿರುವ ಕ್ರೂರತನಕ್ಕೆ ಸಾಕ್ಷಿ. ಇದನ್ನು ತಡೆಯಲು ಅಕ್ಕಿ ಗೋದಾಮುಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಕೆ ಮತ್ತು ಸಾಗಣೆಕೆ ವಾಹನಗಳಿಗೆ ಜಿಪಿಎಸ್ ಅಳವಡಿಕೆ ಅತ್ಯಗತ್ಯ. ಇವು ವ್ಯವಸ್ಥಿತವಾಗಿ ಪಡಿತರ ಗೋದಾಮುಗಳಲ್ಲಿ ನಡೆಯುತ್ತಿರುವ ಮಹಾ ಲೂಟಿ ತಡೆಯಲು ಇದು ಅನಿವಾರ್ಯ.

ಸಾರ್ವಜನಿಕರ ತೆರಿಗೆ ಹಣದಲ್ಲಿ ಖರೀದಿಸಿದ ಅಕ್ಕಿ ಕಾಳಸಂತೆಗೆ ಮಾರಾಟವಾಗುತ್ತಿರುವುದು ವ್ಯವಸ್ಥೆಯ ನೈತಿಕ ಪತನಕ್ಕೆ ಸಾಕ್ಷಿ. ಕೇವಲ ಕ್ಯಾಮೆರಾ ಇಟ್ಟರೆ ಸಾಲದು, ಪ್ರತಿಯೊಂದು ಪಡಿತರ ಚೀಲಕ್ಕೂ ಆರ್‌ಎಫ್‌ಐಡಿ ಟ್ಯಾಗ್ ಅಳವಡಿಸಿ ಗೋದಾಮಿನಿಂದ ಹೊರಬಂದ ಪ್ರತಿ ಕ್ಷಣವನ್ನೂ ಟ್ರ್ಯಾಕ್ ಮಾಡಬೇಕು. ಈ ದತ್ತಾಂಶವನ್ನು ಸಾರ್ವಜನಿಕ ಡ್ಯಾಶ್‌ಬೋರ್ಡ್‌ನಲ್ಲಿ ಲಭ್ಯವಾಗುವಂತೆ ಮಾಡಿ ಡಿಜಿಟಲ್ ಆಡಿಟ್ ನಡೆಸಬೇಕು. ತಂತ್ರಜ್ಞಾನದ ಈ ಕಠಿಣ ಬೇಲಿ ಇಲ್ಲದಿದ್ದರೆ ಭ್ರಷ್ಟರ ಕೈಯಲ್ಲಿ ಸರ್ಕಾರದ ಯೋಜನೆಗಳು ಕೇವಲ ಕಾಗದದ ಮೇಲಿನ ಅಂಕಿಅಂಶಗಳಾಗಿ ಉಳಿಯುತ್ತವೆ. ಬಡವರ ಹಕ್ಕು ರಕ್ಷಿಸಲು ತಂತ್ರಜ್ಞಾನದ ಹರಿತ ಆಯುಧಗಳನ್ನು ಅಳವಡಿಸುವುದು ಅಗತ್ಯ.

-ಡಾ.ವಿಜಯಕುಮಾರ ಎಚ್.ಕೆ., ರಾಯಚೂರು

ಕುತೂಹಲವಿದೆ

"ಶಿಯಾ ಮುಸ್ಲಿಮರು ಇರಾನನ್ನು ಅಷ್ಟು ಪ್ರೀತಿಸುವವರಾದರೆ ಇರಾನಿಗೇ ಹೋಗಲಿ" ಎಂಬುದಾಗಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಮುನೀರ್ ಇತ್ತೀಚೆಗೆ ಹೇಳಿದ್ದಾರೆ. ಇದು ಸಹಜವಾಗಿಯೇ ಅಲ್ಲಿನ ಶಿಯಾ ಮುಸ್ಲಿಮ್ ಮುಖಂಡರಿಗೆ ರೋಷ ಬರಿಸಿದೆ. ಸೌದಿ ಅರೇಬಿಯಾದೊಂದಿಗೆ ಮಾಡಿಕೊಂಡ ಮಿಲಿಟರಿ ಒಪ್ಪಂದದ ಅನ್ವಯ ಇರಾನಿನ ವಿರುದ್ಧ ದಾಳಿ ನಡೆಸಬೇಕಾದ ಅನಿವಾರ್ಯತೆಯಲ್ಲಿ ಪಾಕಿಸ್ತಾನ ಸಿಲುಕಿಕೊಂಡಿದೆ. ಅಮೆರಿಕಕ್ಕೂ ಸಹಕಾರ ನೀಡಬೇಕಾದ ಒತ್ತಡದ ಸ್ಥಿತಿ ಅದರದು. ಆದರೆ ಸ್ವದೇಶದಲ್ಲಿರುವ ಶಿಯಾ ಮುಸ್ಲಿಮರು ಇರಾನನ್ನು ಬೆಂಬಲಿಸುತ್ತಿದ್ದಾರೆ. ಪಾಕಿಸ್ತಾನವು ಅಮೆರಿಕಕ್ಕೆ ಬೆಂಬಲ ನೀಡುವುದನ್ನು ಅವರು ಒಪ್ಪುತ್ತಿಲ್ಲ. ಆದರೂ ಸೇನಾ ಮುಖ್ಯಸ್ಥರು ತಮ್ಮ ದೇಶದ ಶಿಯಾ ಮುಸ್ಲಿಮರನ್ನೇ ಎದುರು ಹಾಕಿಕೊಳ್ಳಲು ತಯಾರಾಗಿದ್ದಾರೆ.

ಇಂತಿರುವಾಗ, ಮುಸ್ಲಿಮ್ ರಾಷ್ಟ್ರಗಳೆಂಬ ಕಾರಣಕ್ಕೆ ಇರಾನ್ ಮತ್ತು ಪಾಕಿಸ್ತಾನಗಳೆರಡನ್ನೂ ಪ್ರೀತಿಸುವ ಇಲ್ಲಿನ ಕೆಲವು ಮಂದಿ ಈ ಬೆಳವಣಿಗೆಗೆ ಯಾವ ರೀತಿ ಪ್ರತಿಕ್ರಿಯಿಸುತ್ತಾರೆಂಬ ಕುತೂಹಲ ನಮಗಿದೆ. ಪ್ಯಾಲೆಸ್ತೀನ್ ಮೇಲೆ ನಡೆಯುವ ದಾಳಿಯನ್ನು ಖಂಡಿಸುವ ಇವರು, ಅಫ್ಘಾನಿಸ್ತಾನದ ಆಸ್ಪತ್ರೆ ಮೇಲೆ ಪಾಕಿಸ್ತಾನವು ದಾಳಿ ಮಾಡಿ ನೂರಾರು ಮಂದಿ ಅಮಾಯಕರ ಸಾವಿಗೆ ಕಾರಣವಾಗಿರುವುದರ ಬಗ್ಗೆ ಸೊಲ್ಲೆತ್ತುವುದಿಲ್ಲ!

-ನವೀನ ಚಂದ್ರ, ಮೈಸೂರು

ವಿಪಕ್ಷಗಳ ವರಸೆ

ಭಾರತವು ಕೊಲ್ಲಿ ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸಬೇಕಾಗಿತ್ತು ಎಂದು ವಿರೋಧ ಪಕ್ಷಗಳು ಸರ್ವಪಕ್ಷ ಸಭೆಯಲ್ಲಿ ಆಗ್ರಹಿಸಿದ ಪ್ರಸಂಗ ನಡೆದಿದೆ. ಪಾಕಿಸ್ತಾನವನ್ನು ನೋಡಿ ಕಲಿಯಿರಿ ಎಂಬಂತಹ ಉಪದೇಶವೂ ಸಿಕ್ಕಿದೆ. ಅದಕ್ಕೆ ವಿದೇಶಾಂಗ ಸಚಿವ ಜೈಶಂಕರ್‌ರವರು "ಮಧ್ಯಸ್ಥಿಕೆ ವಹಿಸಲು ಭಾರತವು ದಲ್ಲಾಳಿ ರಾಷ್ಟ್ರವಲ್ಲ" ಎಂದು ಸೂಕ್ತ ಉತ್ತರವನ್ನೆ ನೀಡಿದ್ದಾರೆ.

ಒಂದು ವೇಳೆ ನಿಜವಾಗಿಯೂ ಭಾರತವು ಮಧ್ಯಸ್ಥಿಕೆ ವಹಿಸಲು ಮುಂದಾಗಿದ್ದರೆ ಇದೇ ವಿರೋಧ ಪಕ್ಷಗಳ ಪ್ರತಿಕ್ರಿಯೆ ಹೇಗಿರುತ್ತಿತ್ತು? ಆಗ ಅವುಗಳ ವರಸೆಯೇ ಬದಲಾಗುತ್ತಿತ್ತು. ಭಾರತಕ್ಕೆ ಇಂತಹ ಉಸಾಬರಿ ಏಕೆ ಬೇಕು, ಭಾರತದ ವಿದೇಶಾಂಗ ನೀತಿಯೇ ಸರಿಯಿಲ್ಲ ಎಂದು ಟೀಕಿಸುತ್ತಿದ್ದವೇನೋ. ಮಧ್ಯಸ್ಥಿಕೆ ವಹಿಸಲು ಮುಂದಾಗಿ ಅದು ಸಫಲವಾಗದಿದ್ದರಂತೂ 'ಮೋದಿಯವರು ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ವಹಿಸಲು ಅಸಮರ್ಥರು, ಆದ್ದರಿಂದ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸುತ್ತಿದ್ದುದು ಖಂಡಿತ.

-ಶೈಲೇಶ್ ಆಚಾರ್ಯ, ಉಡುಪಿ



ಭಾರತ ಸೇರಿ 5 ದೇಶಕ್ಕೆ ಹಾರ್ಮುಜ್ ಮುಕ್ತ

• ಟೆಹ್ರಾನ್: ಆಯಕಟ್ಟಿನ ಹಾರ್ಮುಜ್ ಜಲಸಂಧಿಯ ಮೂಲಕ ವಾಣಿಜ್ಯ ಹಡಗುಗಳ ಸಂಚಾರ ನಡೆಸಲು ಭಾರತ ಸೇರಿದಂತೆ ಐದು ರಾಷ್ಟ್ರಗಳಿಗೆ ಇರಾನ್ ಸರ್ಕಾರ ಅನುಮತಿ ನೀಡಿದೆ.

ಚೀನಾ, ರಷ್ಯಾ, ಭಾರತ, ಇರಾಕ್ ಮತ್ತು ಪಾಕಿಸ್ತಾನ ದೇಶಗಳಿಗೆ ಈ ಜಲಸಂಧಿಯ ಮೂಲಕ ಸಂಚರಿಸಲು ಅವಕಾಶ ನೀಡಲಾಗಿದೆ ಎಂದು ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಘೋಷಿಸಿದ್ದಾರೆ. ಇರಾನ್ ಸರ್ಕಾರ ಈ ರಾಷ್ಟ್ರಗಳನ್ನು 'ಸ್ನೇಹಿ ರಾಷ್ಟ್ರಗಳು' ಎಂದು ವರ್ಗೀಕರಿಸಿದೆ. ಪರ್ಷಿಯನ್ ಗಲ್ಫ್ ಮತ್ತು ಓಮಾನ್ ಗಲ್ಫ್ ನಡುವಿನ ಈ ಕಿರಿದಾದ ಸಮುದ್ರ ಮಾರ್ಗವನ್ನು ಇರಾನ್ ನಿರ್ಬಂಧಿಸಿದ ಬೆನ್ನಲ್ಲೇ ಜಾಗತಿಕ ತೈಲ ಮತ್ತು ಅನಿಲ ಬೆಲೆಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ಜಾಗತಿಕ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಶೇ.20 ರಷ್ಟು ವಹಿವಾಟು ಈ ಮಾರ್ಗದ ಮೂಲಕವೇ ನಡೆಯುತ್ತದೆ.

ಸಂಚಾರ ನಿರ್ಬಂಧಗಳು: ಇರಾನ್‌ನ ವಿರೋಧಿ ರಾಷ್ಟ್ರಗಳು ಅಥವಾ ಅವುಗಳ ಮಿತ್ರರಾಷ್ಟ್ರಗಳಿಗೆ ಸೇರಿದ ಹಡಗುಗಳ ಸಂಚಾರವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಪ್ರಸ್ತುತ ಈ ಪ್ರದೇಶವನ್ನು ಯುದ್ಧ ವಲಯವೆಂದು ಘೋಷಿಸಲಾಗಿದ್ದು, ಯುದ್ಧದ ಸಂದರ್ಭದಲ್ಲಿ ಶತ್ರು ಹಡಗುಗಳಿಗೆ ಸಂಚಾರಕ್ಕೆ ಅವಕಾಶ ನೀಡಲು ಯಾವುದೇ ಕಾರಣವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ರಾಜತಾಂತ್ರಿಕ ಹಿನ್ನೆಲೆ: ವಾಣಿಜ್ಯ ಹಡಗುಗಳ ಸಂಚಾರಕ್ಕೆ ಅಡ್ಡಿಯುಂಟಾಗಿರುವುದು ಜಾಗತಿಕ ಕಳವಳಕ್ಕೆ ಕಾರಣವಾಗಿದೆ. ಈ ಜಲಸಂಧಿಯನ್ನು ಪೂರ್ಣವಾಗಿ ಮುಕ್ತಗೊಳಿಸದಿದ್ದರೆ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಪಶ್ಚಿಮ ಏಷ್ಯಾದ ಸಂಘರ್ಷವನ್ನು ಶೀಘ್ರವಾಗಿ ಅಂತ್ಯಗೊಳಿಸಲು ಮತ್ತು ಇಂಧನ ಪೂರೈಕೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಲು ಭಾರತ ರಾಜತಾಂತ್ರಿಕ ಪ್ರಯತ್ನಗಳನ್ನು ನಡೆಸುತ್ತಿದೆ.

ಆರ್ಥಿಕ ಪರಿಣಾಮ: ದಕ್ಷಿಣ ಏಷ್ಯಾದ ಮಾರುಕಟ್ಟೆಗಳ ಮೇಲೆ ಈ ಬೆಳವಣಿಗೆ ಮಿಶ್ರ ಪರಿಣಾಮ ಬೀರಲಿದೆ. ಭಾರತ ಮತ್ತು ಪಾಕಿಸ್ತಾನಕ್ಕೆ ಇಂಧನ ಪೂರೈಕೆ ಸುಗಮವಾಗುವುದರಿಂದ ಮಾರುಕಟ್ಟೆಯಲ್ಲಿ ಸ್ಥಿರತೆ ನಿರೀಕ್ಷಿಸಬಹುದು. ಆದರೆ, ಇತರ ರಾಷ್ಟ್ರಗಳಿಗೆ ನಿರ್ಬಂಧ ಮುಂದುವರಿದಿರುವುದರಿಂದ ಜಾಗತಿಕ ತೈಲ ಬೆಲೆ ಏರಿಕೆ ಮತ್ತು ಪೂರೈಕೆ ಸರಪಳಿಯ ವ್ಯತ್ಯಯ ಈ ವಲಯದ ಆಮದು ವೆಚ್ಚವನ್ನು ಹೆಚ್ಚಿಸಿ, ಹಣದುಬ್ಬರಕ್ಕೆ ಕಾರಣವಾಗುವ ಭೀತಿ ಇದೆ.

ಯುದ್ಧ ತೀವ್ರಗೊಳಿಸಿದರೆ ಬಾಬ್ ಜಲಸಂಧಿ ಬಂದ್!

ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಇರಾನ್‌ನ ಖರ್ಗ್ ಸೇರಿದಂತೆ ವಿವಿಧ ದ್ವೀಪಗಳ ಮೇಲೆ ದಾಳಿ ನಡೆಸಿ ಯುದ್ಧವನ್ನು ತೀವ್ರಗೊಳಿಸಿದರೆ ಸೂಯೆಜ್ ಕಾಲುವೆಗೆ ಸಂಪರ್ಕ ಕಲ್ಪಿಸುವ ಬಾಬ್ ಅಲ್-ಮಾಂಡೆಬ್ ಜಲಸಂಧಿಯನ್ನು ಬಂದ್ ಮಾಡುವುದಾಗಿ ಇರಾನ್ ಎಚ್ಚರಿಸಿದೆ.

ವಿಶ್ವದ ನಾಲ್ಕನೇ ಅತಿದೊಡ್ಡ ಹಡಗು ಮಾರ್ಗವೆಂದು ಗುರುತಿಸಲ್ಪಟ್ಟಿರುವ ಬಾಬ್ ಅಲ್-ಮಾಂಡೆಬ್ ಮೂಲಕ ಜಾಗತಿಕ ಸಮುದ್ರಯಾನದ ಶೇ.12 ರಷ್ಟು ತೈಲ ಸರಬರಾಜು ನಡೆಯುತ್ತದೆ. ಕೆಂಪು ಸಮುದ್ರ ಮತ್ತು ಏಡನ್ ಕೊಲ್ಲಿಯನ್ನು ಸಂಪರ್ಕಿಸುವ ಈ ಮಾರ್ಗದಲ್ಲಿ ಅಡಚಣೆಯುಂಟಾದರೆ ಜಾಗತಿಕ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ, ಎಂದು ಅಂದಾಜಿಸಲಾಗಿದೆ.

ಹೌತಿ ಬಂಡುಕೋರರ ಬೆಂಬಲ : ಅರೇಬಿಯನ್ ಪರ್ಯಾಯ ದ್ವೀಪದ ದಕ್ಷಿಣ ತುದಿಯಲ್ಲಿರುವ ಬಾಬ್ ಅಲ್-ಮಾಂಡೆಬ್ ಜಲಸಂಧಿಯನ್ನು ನಿಯಂತ್ರಿಸಲು ಯೆಮನ್ ಮೂಲದ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಸಂಪೂರ್ಣ ಸಿದ್ಧತೆ ನಡೆಸಿದ್ದಾರೆ. 2023 ರ ಅಕ್ಟೋಬರ್‌ನಲ್ಲಿ ಇಸ್ರೇಲ್ ಮತ್ತು

ಅಮೆರಿಕ ಇಸ್ರೇಲ್‌ಗೆ ಇರಾನ್ ಎಚ್ಚರಿಕೆ



ಗಾಜಾ ಸಂಘರ್ಷದ ಸಮಯದಲ್ಲಿ ಹೌತಿ ಪಡೆಗಳು ಹಡಗುಗಳ ಮೇಲೆ ದಾಳಿ ನಡೆಸುವ ಮೂಲಕ ಕೆಂಪು ಸಮುದ್ರದ ಸಂಚಾರ ನಿಯಂತ್ರಿಸಿದ್ದವು. ಇರಾನ್‌ನ ಖರ್ಗ್ ದ್ವೀಪವನ್ನು ವಶಪಡಿಸಿಕೊಳ್ಳಲು ಶತ್ರು ರಾಷ್ಟ್ರಗಳು ಪ್ರಯತ್ನಿಸಿದರೆ ಆ ದೇಶದ ಪ್ರಮುಖ ಮೂಲಸೌಕರ್ಯಗಳ ಮೇಲೆ ನಿರಂತರ ದಾಳಿ ನಡೆಸಲಾಗುವುದು, ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ತಿಳಿಸಿದ್ದಾರೆ.

2 ತಿಂಗಳಿಗಾಗುವಷ್ಟು ಇಂಧನ ಇದೆ

• ಹೊಸದಿಲ್ಲಿ : 60 ದಿನಗಳಿಗೆ ಬೇಕಾಗುವಷ್ಟು ಇಂಧನ ದಾಸ್ತಾನು ಭಾರತದ ಬಳಿ ಇದೆ. ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆಯೇ ಇಲ್ಲ ಎಂದು ಘೋಷಿಸಿರುವ ಕೇಂದ್ರ ಸರ್ಕಾರ, ಜನರು ಆತಂಕದಿಂದ ಖರೀದಿಗೆ ಮುಗಿಬೀಳುವಂತೆ ಮಾಡಲು, ಉದ್ದೇಶಪೂರ್ವಕವಾಗಿ ಕೊರತೆಯ ತಪ್ಪು ಮಾಹಿತಿಯನ್ನು ಹರಡಲಾಗುತ್ತಿದೆ ಎಂದು ವಿಶದಪಡಿಸಿದೆ. ಅಂತೆಯೇ 8 ಲಕ್ಷ ಟನ್ ಎಲ್‌ಪಿಜಿ ಸಂಗ್ರಹವಿದೆ ಎಂದು ಕೇಂದ್ರ ಹೇಳಿದೆ.

ದೇಶದ ಎಲ್ಲಾ ಪೆಟ್ರೋಲ್ ಪಂಪ್‌ಗಳಲ್ಲೂ ಪೆಟ್ರೋಲ್ ,ಡೀಸೆಲ್ ದಾಸ್ತಾನು ಸಾಕಷ್ಟಿದ್ದು, ಇವು ಎಂದಿನಂತೆ ಸಹಜವಾಗಿ ಕಾರ್ಯನಿರತವಾಗಿವೆ. ಪೆಟ್ರೋಲ್‌ಗಾಗಿ ಕ್ಯೂ ನಿಲ್ಲೋ ಅಗತ್ಯವೇ ಇಲ್ಲ, ಜಗತ್ತಿನ ಚತುರ್ಥ ಬೃಹತ್ ರಿಫೈನರಿಯಾಗಿರುವ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಪಂಚಮ ಬೃಹತ್ ರಫ್ತುಗಾರ ರಾಷ್ಟ್ರವಾಗಿರುವ ಭಾರತ , ದೇಶೀಯವಾಗಿ ಇಂಧನಗಳ ಸಾಕಷ್ಟು ಲಭ್ಯತೆ ಬಗ್ಗೆ ಕ್ರಮಬದ್ಧ ಆಶ್ವಾಸನೆ ನೀಡಿದೆ. ಸಂಸ್ಕರಿತ ಇಂಧನಗಳನ್ನು ಮುಂದೆಯೂ 150ಕ್ಕೂ ಅಧಿಕ ರಾಷ್ಟ್ರಗಳಿಗೆ ಪೂರೈಸಲಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಹೇಳಿಕೆಯಲ್ಲಿ ತಿಳಿಸಿದೆ. ಕಚ್ಚಾತೈಲವನ್ನು ಪೆಟ್ರೋಲ್, ಡೀಸೆಲ್‌ಗಳಾಗಿ ಪರಿವರ್ತಿಸುವ ಪ್ರತಿಯೊಂದು ಭಾರತೀಯ ರಿಫೈನರಿಗಳು ಶೇ.100 ಮೀರಿ ಬಳಕೆ ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಮುಂದಿನ 60ದಿನಗಳವರೆಗೂ ಕಚ್ಚಾತೈಲ ಪೂರೈಕೆಗೆ ಭಾರತೀಯ ತೈಲ ಕಂಪೆನಿಗಳು ಸಮ್ಮತಿಸಿವೆ. ಹಾಗಾಗಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಿಲ್ಲ . ಭಾರತವು 74ದಿನಗಳಿಗೆ ಸಾಕಾಗುವಷ್ಟು ಒಟ್ಟು ಕಚ್ಚಾತೈಲ ಮತ್ತು ಇಂಧನ ದಾಸ್ತಾನು ಸಾಮರ್ಥ್ಯ ಹೊಂದಿದೆ.



ಕಚ್ಚಾತೈಲ ಪೂರೈಕೆಗೆ ಯಾವುದೇ ಸಮಸ್ಯೆಯಿಲ್ಲ ; ಮಧ್ಯಪ್ರಾಚ್ಯ ಬಿಕ್ಕಟ್ಟಿಗೀಗ 27ನೇ ದಿನ ತುಂಬಿದರೂ, ಭಾರತದಲ್ಲಿ ಕಚ್ಚಾತೈಲ ದಾಸ್ತಾನು, ಉತ್ಪನ್ನಗಳ ದಾಸ್ತಾನು ಸಹಿತ 60ದಿನಗಳಿಗೆ ಬೇಕಾಗುವಷ್ಟು ದಾಸ್ತಾನಿದೆ. ಜಾಗತಿಕವಾಗಿ ಏನೇ ಸಂಭವಿಸಿದರೂ ದೇಶದ ಪ್ರತಿಯೋರ್ವ ನಾಗರಿಕನಿಗೂ ಸತತ ಎರಡು ತಿಂಗಳ ಕಾಲ ನಿರಂತರ ಇಂಧನ ಪೂರೈಸಲು ದೇಶ ಶಕ್ತವಿದೆ. ಎರಡು ತಿಂಗಳಿಗೆ ಅಗತ್ಯ ಕಚ್ಚಾತೈಲ ದಾಸ್ತಾನು ಬಗ್ಗೆ ತುಂಬು ಖಾತರಿಯಿರುವಂತೆ, ಮುಂದಿನ ಹಲವು ತಿಂಗಳ ಕಾಲವೂ ಕಚ್ಚಾತೈಲ ಪೂರೈಕೆ ವಿಚಾರದಲ್ಲಿ ದೇಶವು ಸಂಪೂರ್ಣ ಸುಸ್ಥಿರ ಸ್ಥಿತಿಯಲ್ಲಿದೆ.

ಎಲ್‌ಪಿಜಿ ಪೂರೈಕೆ ಕೂಡ ಅಬಾಧಿತ: ಹೋರ್ಮುಜ್ ಜಲಸಂಧಿಯಲ್ಲಿನ ಉದ್ವಿಗ್ನತೆಗಳ ಹೊರತೂ, ಕಚ್ಚಾತೈಲ ಪೂರೈಕೆ ಸ್ಥಿರವಾಗಿದೆ. ಬದಲಿ ಮೂಲಗಳಿಂದ ಅತ್ಯಧಿಕ ಪ್ರಮಾಣದಲ್ಲಿ ಸರಬರಾಜಾಗುತ್ತಿರುವ ಕಚ್ಚಾತೈಲಗಳಿಂದಾಗಿ ಸಮಸ್ಯೆಯಾಗಿಲ್ಲ, ಭಾರತದ ರಿಫೈನರಿಗಳು ತಮ್ಮ ಸಂಪೂರ್ಣ ಸಾಮರ್ಥ್ಯ ಮೀರಿ ಕಾರ್ಯನಿರತವಾಗಿವೆ. ಮುಂದಿನ 60ದಿನಗಳಿಗೆ ಅಗತ್ಯ ಕಚ್ಚಾತೈಲ ಪೂರೈಕೆಗೆ ಯಾವುದೇ ತೊಂದರೆಯಿಲ್ಲ, ದೇಶದಲ್ಲಿ ಎಲ್‌ಪಿಜಿ ಪೂರೈಕೆ ಕೂಡ ಧಾರಾಳ ಸ್ಥಿತಿಯಲ್ಲಿದೆ. ದೇಶೀಯವಾಗಿ ಅನಿಲೋತ್ಪಾದನೆ ಹೆಚ್ಚಿರುವ ಕಾರಣ ಆಮದು ಅನಿವಾರ್ಯತೆ ಕುಗ್ಗಿದೆ. ಬೇರೆ ಬೇರೆ ದೇಶಗಳಿಂದ ಹೆಚ್ಚುವರಿ ಅನಿಲ ಸರಕುಗಳನ್ನು ಸರಕಾರ ತರಿಸಿಕೊಂಡಿದ್ದು, ಜನರಿಗೆ ನಿರಂತರವಾಗಿ ಎಲ್‌ಪಿಜಿ ಲಭಿಸಲಿದೆ.

ಜನರನ್ನು ಅನಗತ್ಯವಾಗಿ ಆತಂಕಕ್ಕೊಡ್ಡಲು ಕಚ್ಚಾತೈಲ, ಇಂಧನ ,ಅನಿಲ ಕೊರತೆಯ ತಪ್ಪು ಮಾಹಿತಿ ಮತ್ತು ತಿರುಚಿದ ಮಾಹಿತಿಗಳನ್ನು ಜಾಲತಾಣಗಳಲ್ಲಿ ಹರಿಯಬಿಡಲಾಗುತ್ತಿದೆ. ಇದರ ಹಿಂದಿರುವವರನ್ನು ಬಿಡದೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸರಕಾರ ಎಚ್ಚರಿಸಿದೆ.

ಇರಾನ್ ನೌಕಾಪಡೆ ಮುಖ್ಯಸ್ಥನ ಹತ್ಯೆ

ಹಾರ್ಮುಜ್ ಜಲಸಂಧಿ ಮುಚ್ಚಿಸಿದ್ದ ಪ್ರಮುಖ ಅಧಿಕಾರಿಯಾಗಿದ್ದ ಇರಾನಿನ ರೆವಲ್ಯೂಷನರಿ ಗಾರ್ಡ್‌ನ ನೌಕಾಪಡೆ ಮುಖ್ಯಸ್ಥ ಕಮಾಂಡರ್ ಅಲಿರೇಜಾ ಟ್ಯಾಂಗ್‌ಸಿರಿಯನ್ನು ಕೊಂದಿರುವುದಾಗಿ ಇಸ್ರೇಲ್ ಗುರುವಾರ ಹೇಳಿದೆ. ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಅವರು ಇತರ ಹಿರಿಯ ನೌಕಾ ಕಮಾಂಡರ್‌ಗಳೊಂದಿಗೆ ರಾತ್ರೋರಾತ್ರಿ ದಾಳಿಯಲ್ಲಿ ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. ಟ್ಯಾಂಗ್‌ಸಿರಿಯ ಹತ್ಯೆ ಬಗ್ಗೆ ಇನ್ನೂ ಇರಾನ್ ಕಡೆಯಿಂದ ಯಾವುದೇ ಸ್ಪಷ್ಟನೆ ಇಲ್ಲ.

ಅಬುಧಾಬಿಯಲ್ಲಿ ಭಾರತೀಯ ಸಾವು

ಕ್ಷಿಪಣಿಯ ಅವಶೇಷಗಳು ಬಿದ್ದ ಪರಿಣಾಮ ಇರಾನ್ ದಾಳಿ ನಡುವೆ ಯುಎಇ ರಾಜಧಾನಿ ಅಬುಧಾಬಿಯ ರಸ್ತೆಯೊಂದರಲ್ಲಿ ಭಾರತೀಯ ಪ್ರಜೆ ಸೇರಿದಂತೆ ಇಬ್ಬರು ಮೃತಪಟ್ಟಿದ್ದು, ಘಟನೆಯಲ್ಲಿ ಮೂವರು ಗಾಯಗೊಂಡಿದ್ದಾರೆ. ಯುನೈಟೆಡ್ ಅರಬ್ ಎಮಿರೇಟ್ಸ್ ರಕ್ಷಣಾ ಸಚಿವಾಲಯವು ಇರಾನ್‌ನಿಂದ ನಿರಂತರ ವೈಮಾನಿಕ ಬೆದರಿಕೆಗಳಿಗೆ ಪ್ರತಿಕ್ರಿಯಿಸುವುದನ್ನು ಮುಂದುವರಿಸಿದೆ. ಹೀಗಾಗಿ ಕ್ಷಿಪಣಿ ಅವಶೇಷಗಳು ಬಿದ್ದು ಈ ದುರಂತ ಸಂಭವಿಸಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಲ್ಲಿ ಭಾರತೀಯ ಪ್ರಜೆಗಳ ಸಾವಿನ ಸಂಖ್ಯೆ ಈಗ ಏಳಕ್ಕೆ ಏರಿದೆ.

ಕಿರುಸುದ್ದಿ

ಜಿ7 ಶೃಂಗಸಭೆ: ಮೋದಿ ಭಾಗಿ

• ಹೊಸದಿಲ್ಲಿ: ಜೂ.15ರಿಂದ 17ರವರೆಗೆ ಫ್ರಾನ್ಸ್ ಆತಿಥ್ಯ ವಹಿಸಲಿರುವ ಮುಂಬರುವ ಜಿ7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಯುರೋಪ್ ಮತ್ತು ವಿದೇಶಾಂಗ ವ್ಯವಹಾರಗಳ ಫ್ರೆಂಚ್ ಸಚಿವ ಜೀನ್-ನೋಯೆಲ್ ಬ್ಯಾರೋಟ್ ಅವರು ಅಬ್ಬಾಯೆ ಡೆಸ್ ವಾಕ್ಸ್-ಡಿ-ಸೆರ್ನೇಯಲ್ಲಿ ನಡೆದ ಜಿ7 ವಿದೇಶಾಂಗ ಸಚಿವರ ಸಭೆಯ ಸಂದರ್ಭದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಿದ ಬೆನ್ನಲ್ಲೇ ಈ ಮಾಹಿತಿ ಬಹಿರಂಗಗೊಂಡಿದೆ.

6 ನಕ್ಸಲರ ಶರಣಾಗತಿ

• ಕಾಂಕೇರ್: ಛತ್ತೀಸ್‌ಗಢದ ಕಾಂಕೇರ್ ಜಿಲ್ಲೆಯಲ್ಲಿ ಆರು ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ. ಇತ್ತೀಚೆಗೆ ಈ ನಕ್ಸಲರು ಮುಖ್ಯವಾಹಿನಿಗೆ ಸೇರುವುದಾಗಿ ಶರಣಾಗುವುದಾಗಿ ಹೇಳಿಕೊಂಡಿದ್ದರು ಎಂದು ಕಾಂಕೇರ್ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ರಾಖೇಚಾ ತಿಳಿಸಿದ್ದಾರೆ. ಸೆಲ್ಫ್ ಲೋಡೆಡ್ ರೈಫಲ್ ಮತ್ತು ಎರಡು 3.3 ರೈಫಲ್‌ಗಳನ್ನು ಶರಣಾದ ನಕ್ಸಲರು ಪೊಲೀಸರ ಮುಂದೆ ಒಪ್ಪಿಸಿದ್ದಾರೆ. ಈ ಪ್ರದೇಶದ ಇತರ ಸಕ್ರಿಯ ಕಾರ್ಯಕರ್ತರೊಂದಿಗೆ ಸಂಪರ್ಕವನ್ನು ಸ್ಥಾಪಿಸಲು ಮತ್ತು ಹಿಂಸಾಚಾರವನ್ನು ತ್ಯಜಿಸಲು ಮತ್ತು ಮುಖ್ಯವಾಹಿನಿಗೆ ಸೇರಲು ಅವರನ್ನು ಪ್ರೋತ್ಸಾಹಿಸಲು ಪ್ರಯತ್ನಗಳು ನಡೆಯುತ್ತಿವೆ.

ಗಣತಿ: ಕರ್ತವ್ಯ ಲೋಪಕ್ಕೆ ಮೂರು ವರ್ಷ ಜೈಲು ಶಿಕ್ಷೆ

• ಹೊಸದಿಲ್ಲಿ: ದೇಶದ ಬಹು ಮಹತ್ವದ ಜನಗಣತಿ 2027 ಶೀಘ್ರ ಆರಂಭವಾಗಲಿದ್ದು, ಇದಕ್ಕೂ ಮುನ್ನ ಗಣತಿದಾರರು ಪಾಲಿಸಬೇಕಾದ ಕಟ್ಟುನಿಟ್ಟಿನ ಕ್ರಮಗಳ ಬಗ್ಗೆ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಕರ್ತವ್ಯ ಲೋಪ, ಅಸಭ್ಯ ವರ್ತನೆ ಅಥವಾ ದಾಖಲೆಗಳ ದುರುಪಯೋಗ ಕಂಡುಬಂದರೆ ಗರಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ಹಾಗೂ 1,000 ರೂ. ದಂಡ ವಿಧಿಸಲಾಗುವುದಾಗಿ ಎಚ್ಚರಿಕೆ ನೀಡಲಾಗಿದೆ. ಭಾರತದ ರಿಜಿಸ್ಟ್ರಾರ್ ಜನರಲ್ ಮೃತ್ಯುಂಜಯ ಕುಮಾರ್ ನಾರಾಯಣ್ ಅವರು ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನೀಡಿರುವ ನಿರ್ದೇಶನದಲ್ಲಿ, ಗಣತಿಗಾರರ ಕರ್ತವ್ಯಗಳನ್ನು ವಿವರವಾಗಿ ಸೂಚಿಸಲಾಗಿದೆ. ಮನೆಗಳು ಬೀಗ ಹಾಕಿದ್ದರೂ ಒಂದೇ ಸಲ ಭೇಟಿ ನೀಡಿ ಹಿಂತಿರುಗದೆ, ಅಗತ್ಯವಿದ್ದರೆ ಹಲವು ಬಾರಿ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಜತೆಗೆ, ಮನೆಮನೆಗೆ ಭೇಟಿ ನೀಡುವ ವೇಳೆ ಸೌಜನ್ಯಪೂರ್ಣ ವರ್ತನೆ ಕಡ್ಡಾಯ ಎಂದು ಒತ್ತಿ ಹೇಳಲಾಗಿದೆ. ನಿರ್ದೇಶನದ ಪ್ರಕಾರ, ಪ್ರತಿಯೊಂದು ಕಟ್ಟಡಕ್ಕೂ ಸಂಖ್ಯೆ ನೀಡುವುದು, ಪ್ರತಿಯೊಂದು ಮನೆಗೂ ಗಣತಿ ಸಂಖ್ಯೆ ಗುರುತಿಸುವುದು, ಲೇಔಟ್ ನಕ್ಷೆಯಲ್ಲಿ ಪ್ರಮುಖ ಗುರುತುಗಳನ್ನು ದಾಖಲಿಸುವುದು, ಹಾಗೂ ಗುರುತಿನ ಚೀಟಿ ಮತ್ತು ನೇಮಕಾತಿ ಪತ್ರವನ್ನು ಹೊತ್ತಿರಬೇಕು ಎಂಬ ನಿಯಮಗಳಿವೆ. ಮನೆಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವಾಗ ಮೊಬೈಲ್ ಆ್ಯಪ್‌ನಲ್ಲಿ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ದಾಖಲಿಸುವುದು ಕಡ್ಡಾಯವಾಗಿದೆ. ಜನಗಣತಿ ಕಾಯ್ದೆ, 1948ರ ಸೆಕ್ಷನ್ 11 ಅನ್ವಯದಲ್ಲಿ, ಕರ್ತವ್ಯ ನಿರಾಕರಣೆ, ಅಸಭ್ಯ ಪ್ರಶ್ನೆಗಳು, ಅಥವಾ ಗಣತಿ ದಾಖಲೆಗಳನ್ನು ಹಾನಿಗೊಳಿಸುವುದು, ಅಡಗಿಸುವುದು ಅಥವಾ ತಿದ್ದುಪಡಿ ಮಾಡುವಂತಹ ಕೃತ್ಯಗಳಿಗೆ ಶಿಕ್ಷೆ ವಿಧಿಸಲಾಗುತ್ತದೆ.

ಐಸಿಸ್, ಅಲ್-ಖೈದಾ ನಂಟು: 12 ಮಂದಿ ಸೆರೆ

• ವಿಜಯವಾಡ: ಆಂಧ್ರಪ್ರದೇಶ ಪೊಲೀಸರು ನಡೆಸಿದ ಸಂಘಟಿತ ಕಾರ್ಯಾಚರಣೆಯಲ್ಲಿ ಐಸಿಸ್ ಮತ್ತು ಅಲ್-ಖೈದಾ ಸೇರಿದಂತೆ ನಿಷೇಧಿತ ಉಗ್ರಗಾಮಿ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದ ಶಂಕೆಯ ಮೇಲೆ 12 ಮಂದಿಯನ್ನು ಬಂಧಿಸಲಾಗಿದೆ. ಬಿಹಾರ, ದಿಲ್ಲಿ, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ರಾಜಸ್ಥಾನಗಳಲ್ಲಿ ವಿಶೇಷ ತಂಡಗಳನ್ನು ನಿಯೋಜಿಸಿ ಈ ಬಂಧನ ಪ್ರಕ್ರಿಯೆ ನಡೆಸಲಾಗಿದೆ. ಆಂಧ್ರಪ್ರದೇಶದ ವಿಜಯವಾಡದ ನಿವಾಸಿಗಳಾದ ಮೊಹಮ್ಮದ್ ರಹಮತುಲ್ಲಾ ಷರೀಫ್, ಮಿರ್ಜಾ ಸೊಹೈಲ್ ಬೇಗ್ ಮತ್ತು ಮೊಹಮ್ಮದ್ ದ್ಯಾನಿಶ್ ಎಂಬುವವರನ್ನು ಬಂಧಿಸಲಾಗಿದೆ. ಬಂಧಿತರು ಉಗ್ರಗಾಮಿ ಸಿದ್ಧಾಂತಗಳನ್ನು ಪ್ರಚಾರ ಮಾಡುವ ಮತ್ತು ನಿಷೇಧಿತ ಸಂಘಟನೆಗಳ ಚಟುವಟಿಕೆಗಳನ್ನು ಸಂಯೋಜಿಸುವ ಆರೋಪ ಎದುರಿಸುತ್ತಿದ್ದಾರೆ. ಆರೋಪಿಗಳು 'ಅಲ್ ಮಲಿಕ್ ಇಸ್ಲಾಮಿಕ್ ಯೂತ್' ಎಂಬ ಗುಂಪನ್ನು ರಚಿಸಿಕೊಂಡು ಯುವಕರನ್ನು ಉಗ್ರಗಾಮಿ ಸಿದ್ಧಾಂತಕ್ಕೆ ಪ್ರೇರೇಪಿಸುತ್ತಿದ್ದರು ಎಂದು ತನಿಖೆಯಿಂದ ತಿಳಿದುಬಂದಿದೆ. ಬಂಧಿತರು ಅಲ್-ಖೈದಾ (ಎಕ್ಯೂಐಎಸ್) ಮತ್ತು ಐಸಿಸ್ ಸಂಘಟನೆಗಳ ವಿದೇಶಿ ಹ್ಯಾಂಡ್ಲರ್‌ಗಳ ಸೂಚನೆಯಂತೆ ಕಾರ್ಯನಿರ್ವಹಿಸುತ್ತಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ರಾಷ್ಟ್ರಧ್ವಜವನ್ನು ಅವಮಾನಿಸುವುದು ಮತ್ತು ಉಗ್ರಗಾಮಿ ಪರ ವಿಡಿಯೋಗಳನ್ನು ಹಂಚಿಕೊಳ್ಳುವ ಮೂಲಕ ಯುವಕರನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದರು. ಶಂಕಿತರು ಮುಂದಿನ ಒಂದು ತಿಂಗಳೊಳಗೆ ತರಬೇತಿಗಾಗಿ ಪಾಕಿಸ್ತಾನಕ್ಕೆ ಪ್ರಯಾಣಿಸಲು ಸಿದ್ಧತೆ ನಡೆಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪಾರ ಮೌಲ್ಯದ ಅಕ್ರಮ ವಸ್ತು ವಶ

• ಹೊಸದಿಲ್ಲಿ: ಕಳೆದ ಒಂದು ತಿಂಗಳ ಅವಧಿಯಲ್ಲಿ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಮತದಾರರ ಮೇಲೆ ಪ್ರಭಾವ ಬೀರಲು ಸಂಗ್ರಹಿಸಲಾಗಿದ್ದ 408 ಕೋಟಿ ರೂ.ಗೂ ಅಧಿಕ ಮೌಲ್ಯದ ಅಕ್ರಮ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ಗುರುವಾರ ತಿಳಿಸಿದೆ. ವಶಪಡಿಸಿಕೊಂಡ ವಸ್ತುಗಳಲ್ಲಿ 17.44 ಕೋಟಿ ರೂ. ನಗದು, 37.68 ಕೋಟಿ ರೂ. ಮೌಲ್ಯದ ಮದ್ಯ ಮತ್ತು 167.38 ಕೋಟಿ ರೂ. ಮೌಲ್ಯದ ಡ್ರಗ್ಸ್ ಸೇರಿವೆ. ಫೆ.26ರಂದು ಎಲೆಕ್ಟ್ರಾನಿಕ್ ಸೀಜರ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಸಕ್ರಿಯಗೊಳಿಸಿದ ನಂತರ ಜಾರಿ ಸಂಸ್ಥೆಗಳು 23 ಕೋಟಿ ರೂ. ಮೌಲ್ಯದ ಬೆಲೆಬಾಳುವ ಲೋಹಗಳು ಮತ್ತು 163.30 ಕೋಟಿ ರೂ. ಮೌಲ್ಯದ ಉಚಿತ ಉಡುಗೊರೆಗಳನ್ನು ಜಪ್ತಿ ಮಾಡಿವೆ. ಸಿವಿಜಿಲ್ ಅಪ್ಲಿಕೇಶನ್ ಮೂಲಕ ಮಾರ್ಚ್ 15 ರಿಂದ 25 ರ ನಡುವೆ 70,944 ದೂರುಗಳು ದಾಖಲಾಗಿವೆ. ಈ ಪೈಕಿ ಶೇ.95.8ರಷ್ಟು ದೂರುಗಳನ್ನು ಅಧಿಕಾರಿಗಳು 100 ನಿಮಿಷಗಳ ಒಳಗಾಗಿ ಪರಿಹರಿಸಿದ್ದಾರೆ. ಸಾರ್ವಜನಿಕರು 1950 ಸಹಾಯವಾಣಿ ಸಂಖ್ಯೆಯ ಮೂಲಕವೂ ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದು ಆಯೋಗ ತಿಳಿಸಿದೆ.

ತಪಾಸಣೆಯ ವೇಳೆ ಸಾಮಾನ್ಯ ನಾಗರಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಜಿಲ್ಲಾ ಕುಂದುಕೊರತೆ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಪುದುಚೇರಿ ಮತ್ತು ಕೇರಳದಲ್ಲಿ ಮುಂದಿನ ತಿಂಗಳು ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಮಾರ್ಚ್ 15 ರಂದು ಅಧಿಕೃತವಾಗಿ ಘೋಷಣೆಯಾಗಿದೆ.

ಸೂರ್ಯ ಮಂದಿರದ ಮೇಲೆ ಧ್ವಜಾರೋಹಣ



• ಅಯೋಧ್ಯೆ : ಚೈತ್ರ ನವರಾತ್ರಿಯ ಅಷ್ಟಮಿಯ ದಿನದಂದು ಶ್ರೀ ರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿರುವ ಸೂರ್ಯ ಮಂದಿರದ ಮೇಲೆ ವೈದಿಕ ವಿಧಿವಿಧಾನಗಳ ಮೂಲಕ ಧ್ವಜಾರೋಹಣ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಖಜಾಂಚಿಗಳಾದ ಗೋವಿಂದ ದೇವ ಗಿರಿ ಮಹಾರಾಜ, ವಿಶ್ವ ಹಿಂದು ಪರಿಷತ್ತಿನ ಕೇಂದ್ರೀಯ ಕಾರ್ಯದರ್ಶಿಗಳಾದ ಗೋಪಾಲ ಜಿ, ಪೊಲೀಸ್ ವರಿಷ್ಠಾಧಿಕಾರಿ ಬಲರಾಮಚಾರಿ ದುಬೆ ಭಾಗವಹಿಸಿದ್ದರು. ಶ್ರೀ ರಾಮ ನವಮಿಯ ನಿಮಿತ್ತವಾಗಿ ಶುಕ್ರವಾರ ಬೆಳಗ್ಗೆ 5:30 ರಿಂದ ರಾತ್ರಿ 11:00 ಗಂಟೆಯವರೆಗೆ ಸಾಮಾನ್ಯ ದರ್ಶನಕ್ಕೆ ಅವಕಾಶವಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಟ್ರಸ್ಟಿಗಳಾದ ಅನಿಲ ಮಿಶ್ರಾ ತಿಳಿಸಿದ್ದಾರೆ.

ಆಂಧ್ರದಲ್ಲಿ ಅಪಘಾತ: ಹೊತ್ತಿ ಉರಿದ ಬಸ್, ಟಿಪ್ಪರ್ ಲಾರಿ

14 ಪ್ರಯಾಣಿಕರ ಸಜೀವ ದಹನ

• ಮಾರ್ಕಾಪುರಂ: ಆಂಧ್ರಪ್ರದೇಶದ ಮಾರ್ಕಾಪುರಂ ಜಿಲ್ಲೆಯಲ್ಲಿ ಗುರುವಾರ ಮುಂಜಾನೆ ಖಾಸಗಿ ಪ್ರಯಾಣಿ ಬಸ್ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದು ಬೆಂಕಿಗೆ ಆಹುತಿಯಾಗಿ 14 ಮಂದಿ ಮೃತಪಟ್ಟಿದ್ದು, 25 ಮಂದಿ ಗಾಯಗೊಂಡಿದ್ದಾರೆ. ಬಸ್ ಮತ್ತು ಟಿಪ್ಪರ್ ಎರಡೂ ಸಂಪೂರ್ಣ ಸುಟ್ಟು ಕರಕಲಾಗಿವೆ. ಗಾಯಾಳುಗಳನ್ನು ಮಾರ್ಕಾಪುರಂನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ. ಹೈದರಾಬಾದ್‌ನಿಂದ ಪಾಮೂರು ಕಡೆಗೆ ಸಂಚರಿಸುತ್ತಿದ್ದ ಬಸ್ ಪಲಕಲಾಸ್ಯಾರಿಗಳ ಬಳಿ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದಿದೆ.

ಅಪಘಾತದ ವೇಳೆ ಬಸ್‌ನಲ್ಲಿ 41 ಜನರಿದ್ದರು. ಘಟನೆ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಘಟನೆಗೆ ಸಂತಾಪ ಸೂಚಿಸಿದ್ದಾರೆ.

ಮೃತರ ಕುಟುಂಬಸ್ಥರಿಗೆ ಪಿಎಂಎನ್‌ಆರ್‌ಎಫ್‌ನಿಂದ 2 ಲಕ್ಷ ರೂ. ಪರಿಹಾರ ಗಾಯಾಳುಗಳಿಗೆ 50,000 ರೂ.ಗಳನ್ನು ಪ್ರಧಾನಿ ಮೋದಿ ಘೋಷಿಸಿದರು.

ಪುತ್ರನ ಜೀವ ಉಳಿಸಿದ ತಾಯಿ: ಹೃದಯ ವಿದ್ರಾವಕ



ಘಟನೆಯಲ್ಲಿ ತಾಯಿಯೊಬ್ಬಳು ತನ್ನ ಪುತ್ರನನ್ನು ರಕ್ಷಿಸಿ ತಾನು ಜೀವ ಬಿಟ್ಟ ಘಟನೆ ಸಂಭವಿಸಿದೆ. ಬಸ್‌ಗೆ ಬೆಂಕಿ ತಗುಲುತ್ತಿದೆ ಎಂಬ ಸೂಚನೆ ದೊರಕಿದ ಕೂಡಲೇ ತಾಯಿ ತನ್ನ ಪುತ್ರನನ್ನು ಬಸ್ ಕಿಟಕಿಯಿಂದ ಹೊರ ಹಾಕಿ ಪುತ್ರನ ಜೀವ ಉಳಿಸಿ ಮರುಜನ್ಮ ನೀಡಿದ್ದಾಳೆ. ಆದರೇ ತಾಯಿ ರಮಾದೇವಿ ಬೆಂಕಿಗೆ ಆಹುತಿಯಾಗಿದ್ದಾರೆ.

ನದಿಗೆ ಉರುಳಿದ ಬಸ್ 24 ಮಂದಿ ಸಾವು

• ಢಾಕಾ: ಪ್ರಯಾಣಿಕರನ್ನು ಹೊತ್ತೊಯ್ಯುವ ಸಾರಿಗೆ ದೋಣಿಗೆ ಏರುವ ವೇಳೆ ಬಾಂಗ್ಲಾದೇಶದಲ್ಲಿ ಸಾರಿಗೆ ಬಸ್ ನದಿಗೆ ಉರುಳಿ ಕನಿಷ್ಠ 24 ಮಂದಿ ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ. ಸೈಯುತ್ವ ಜಿಲ್ಲೆ ರಾಜ್ಬರಿ ದೌಲತ್‌ದಿಯಾ ಟರ್ಮಿನಲ್‌ನಲ್ಲಿ ಬುಧವಾರ ಸಂಜೆ 5.15ರ ಸುಮಾರಿಗೆ ಬಸ್ ಪದ್ಮಾ ನದಿಗೆ ಉರುಳಿದೆ. ಢಾಕಾಕ್ಕೆ ತೆರಳುತ್ತಿದ್ದ ಬಸ್‌ನಲ್ಲಿ ಹಲವಾರು ಮಕ್ಕಳು ಸೇರಿದಂತೆ ಸುಮಾರು 40 ಪ್ರಯಾಣಿಕರಿದ್ದರು, ಅವರಲ್ಲಿ ಹೆಚ್ಚಿನವರು ತಮ್ಮ ಈದ್ ರಜಾದಿನಗಳ ನಂತರ ರಾಜಧಾನಿಗೆ ಮರಳುತ್ತಿದ್ದರು. 11 ಪ್ರಯಾಣಿಕರು ಈಜಿ ಕೊಂಡು ಹಾಗೂ ಸ್ಥಳೀಯರ ನೆರವಿನಿಂದ ದಡಕ್ಕೆ ಬಂದು ಜೀವ ಉಳಿಸಿಕೊಂಡಿದ್ದಾರೆ. ಬಸ್ ಇದ್ದಂತಹ ಲಾಂಚ್‌ಗೆ ಬೇರೊಂದು ಸಣ್ಣ ಲಾಂಚ್ ಡಿಕ್ಕಿಯಾಗಿದ್ದು, ಈ ವೇಳೆ ಬಸ್ ಚಾಲಕ ನಿಯಂತ್ರಣ ಕಳೆದುಕೊಂಡಿದ್ದರಿಂದ ಈ ಘಟನೆ ಸಂಭವಿಸಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರತೀ ವರ್ಷದಂತೆ ಸಂಭ್ರಮಾಚರಣೆ

ಮತಕ್ಕಾಗಿ ಟಿಎಂಸಿ ರಾಮನವಮಿ ಆಚರಣೆ!

• ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರತೀ ವರ್ಷದಂತೆ ಈ ಬಾರಿಯೂ ರಾಮ ನವಮಿ ಆಚರಿಸಿತು. ವಿಚಿತ್ರವೆಂದರೆ ಹಿಂದು-ಹಿಂದುತ್ವ ವಿರೋಧಿ ಟಿಎಂಸಿ, ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾನೂ ರಾಮನವಮಿ ಆಚರಿಸುವ ಮುಖೇನ ಅಚ್ಚರಿ ಮೂಡಿಸಿದೆ.

ಕೋಲ್ಕತ್ತಾದಾದ್ಯಂತ ಮತ್ತು ಹಲವಾರು ಜಿಲ್ಲೆಗಳಲ್ಲೂ ಗುರುವಾರ ಎಲ್ಲಾ ಬೀದಿ ಬೀದಿಗಳು, ಓಣಿಕೇರಿಗಳು ಸಾವಿರಾರು ಕೇಸರಿ ಧ್ವಜಗಳ ರಂಗಿನಿಂದ ಶೋಭಾಯಮಾನವಾಗಿತ್ತು. ನೆರೆ ಜಿಲ್ಲೆಗಳಿಂದಲೂ ಸಾಗಿಬಂದ ನೂರಾರು ಶೋಭಾಯಾತ್ರೆಗಳಲ್ಲಿ ಪಾಲ್ಗೊಂಡಿದ್ದ ಪ್ರವಾಹೋಪಾದಿ ಜನರ ಜೈಶ್ರೀರಾಮ್ ಘೋಷಣೆ ಪರಿಸರವಿಡೀ ಅನುರಣಿಸಿತ್ತು. ಬಂಗಾಳದಲ್ಲಿ ಹಿಂದೆಂದೂ ಇಷ್ಟೊಂದು ಗೌಜಿಗದ್ದಲದೊಂದಿಗೆ ಶ್ರೀರಾಮ ನವಮಿ ಆಚರಣೆಯಾಗಿದ್ದಿಲ್ಲ ಅಥವಾ ತೀರಾ ಸರಳವಾಗಿ ಆಚರಣೆಯಾಗುತ್ತಿತ್ತು. ಈ ಬಾರಿ ಟಿಎಂಸಿ ಕೂಡ ಶ್ರೀರಾಮ ಭಕ್ತಿ ಮೆರೆದದ್ದು ವಿಪರ್ಯಾಸವೆಂದು ವಿಶ್ಲೇಷಿಸಲಾಗಿದೆ.

ಬಿಜೆಪಿ ಆಯೋಜಿಸಿರುವ ಎರಡು ದಿನಗಳ ಶ್ರೀರಾಮ ನವಮಿ ಕಾರ್ಯಕ್ರಮಗಳಲ್ಲಿ ಬರೋಬ್ಬರಿ 1ಕೋಟಿ ಜನರು ಸೇರುವ ನಿರೀಕ್ಷೆಯಿದೆ. ಇದು ಭಕ್ತಿ-ಶ್ರದ್ಧೆಯ ವಿಚಾರವಾದರೂ ರಾಜಕೀಯ ವಿಶ್ಲೇಷಕರು ಇದನ್ನು ಬೇರೇ ರೀತಿ ವಿಶ್ಲೇಷಿಸಿದ್ದಾರೆ. 2016ರಿಂದೀಚೆಗೆ ರಾಜ್ಯ ರಾಜಕೀಯ ರಂಗದಲ್ಲಿ ಬಿಜೆಪಿ ಬಲ ನಿರಂತರವಾಗಿ ವರ್ಧಿಸುತ್ತಿದೆ. ಈ ನಿಟ್ಟಿನಲ್ಲಿ ಹಿಂದು ಅಸ್ಮಿತೆಯನ್ನು ಬಿಂಬಿಸಲು ಮತ್ತು ಜನಬೆಂಬಲವನ್ನು ಮತ್ತಷ್ಟು ಗಟ್ಟಿಗೊಳಿಸಲು ಉತ್ಸವವನ್ನು ಗೌಜಿಯಿಂದ ಆಯೋಜಿಸಲಾಗಿದೆ ಎಂಬುದು ವಿಶ್ಲೇಷಕರ ಟೀಕಾಸ್ತ್ರ.

ಇನ್ನು, ಕಳೆದ ಕೆಲವು ವರ್ಷಗಳಿಂದ ಟಿಎಂಸಿಯ ಹಲವು ನಾಯಕರು



ರಾಮನವಮಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಶುರುವಿಟ್ಟಿದ್ದಾರೆ ಅಥವಾ ಸ್ಥಳೀಯವಾಗಿ ಮೆರವಣಿಗೆಗಳನ್ನು ಆಯೋಜಿಸಲು ತೊಡಗಿದ್ದಾರೆ. ಬಿಜೆಪಿಯ ಹಿಂದುತ್ವ ಸಿದ್ಧಾಂತವನ್ನು ಮಟ್ಟಹಾಕುವುದು ಟಿಎಂಸಿಯ ಹೊಸ ರಾಮಭಕ್ತಿ ಹಿಂದಿನ ಉದ್ದೇಶವೆಂಬುದು ರಾಜಕೀಯ ವಿಶ್ಲೇಷಕರ ವ್ಯಾಖ್ಯಾನ. ಶ್ರೀರಾಮ ಯಾವುದೇ ರಾಜಕೀಯ ಪಕ್ಷಕ್ಕೆ ಸೀಮಿತನಲ್ಲ, ಪ್ರತಿಯೋರ್ವರಿಗೂ ಸೇರಿದವನು ಎಂದು ಮುಖ್ಯಮಂತ್ರಿ ಮಮತಾಬ್ಯಾನರ್ಜಿ ಈಚೆಗೆ ವ್ಯಂಗ್ಯ ನುಡಿಯಾಡಿದ್ದು ಉಲ್ಲೇಖಾರ್ಹ. ಶ್ರೀರಾಮ ನವಮಿ ಉತ್ಸವಕ್ಕೆ ಬಿಜೆಪಿ ಭರದ ಸಿದ್ಧತೆ ನಡೆಸುತ್ತಿದ್ದಾಗ ಮಮತಾ ಈ ತೆರ ಹೇಳಿದ್ದರು.

ಬಿಜೆಪಿ ಉತ್ತರ ಭಾರತದ ಹಿಂದುತ್ವ ರಾಜನೀತಿಯನ್ನು ಬಂಗಾಳಕ್ಕೆ ಆಮದು ಮಾಡಿಕೊಳ್ಳಲು ಶ್ರಮಿಸುತ್ತಿದೆ ಎಂದು ವಾಮಪಂಥೀಯರು ಮತ್ತು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ.

ಶೇ.20 ರಷ್ಟು ಕಚ್ಚಾ ವಸ್ತು ಹೆಚ್ಚಳ | ಖರೀದಿಗೆ ಮುಂದಾಗದ ನೇಕಾರರು

ಯುದ್ಧ ಪರಿಣಾಮಕ್ಕೆ ನೇಯ್ಗೆ ಬಂದ್ ಸಾಧ್ಯತೆ

▸ ಮಲ್ಲಿಕಾರ್ಜುನ ತುಂಗಳ

ದಿಗಂತ ವಿಶೇಷ

• **ರಬಕವಿ-ಬನಹಟ್ಟಿ:** ಕಳೆದೊಂದು ತಿಂಗಳಿಂದ ನಡೆಯುತ್ತಿರುವ ಗಲ್ಫ್ ಯುದ್ಧ ಪರಿಣಾಮ ಇದೀಗ ಪೆಟ್ರೋಲಿಯಂ ಪದಾರ್ಥಗಳ ಬೆಲೆ ಶೇ.20 ರಷ್ಟು ಏರಿಕೆ ಕಂಡಿದ್ದು, ಪಾಲಿಸ್ಟರ್, ಜರಿ ಸೇರಿದಂತೆ ಇತರೆ ಕಚ್ಚಾ ವಸ್ತುಗಳ ಬೆಲೆ ಗಗನಕ್ಕೇರಿದೆ. ಇದರಿಂದ ನೇಕಾರರು ಸೀರೆ ಉತ್ಪಾದನೆಗೆ ಕಚ್ಚಾ ಸಾಮಗ್ರಿ ಖರೀದಿಗೆ ಮುಂದಾಗದ ಕಾರಣ ನೇಕಾರರು ಸೀರೆ ನೇಯ್ಗೆ ಮಾಡುವುದನ್ನೇ ಸ್ಥಗಿತಗೊಳಿಸುವ ಆತಂಕ ಶುರುವಾಗಿದೆ.

ಗಲ್ಫ್ ಯುದ್ಧ ಮುನ್ನ ಸಾಮಾನ್ಯವಾಗಿ ಪಾಲಿಸ್ಟರ್ ವಸ್ತುಗಳು 200 ರಿಂದ 300 ರೂ.ಗಳಿಗೆ ದೊರಕುತ್ತಿದ್ದವು. ಇದೀಗ 250 ರಿಂದ 350 ರೂ.ಗಳವರೆಗೆ ಏರಿಕೆ ಕಂಡಿದೆ. ಜರಿ ವಸ್ತುವೂ ಸಹಿತ 350 ರೂ.ಗಳವರೆಗೆ ದೊರಕುತ್ತಿದ್ದವು. ಇದೀಗ 400 ರೂ.ಗಳ ಗಡಿ ದಾಟಿದೆ. ಹೀಗಾಗಿ ನೇಯ್ಗೆಗೆ ಅವಶ್ಯವಾಗಿರುವ ಕಚ್ಚಾ ಸಾಮಗ್ರಿಗಳ ಏರಿಕೆಯಿಂದ ನೇಕಾರರು ತೀವ್ರ ಕಂಗಾಲಾಗುವಲ್ಲಿ ಕಾರಣವಾಗಿದೆ.

ದರ ಹೆಚ್ಚಳದಿಂದ ವ್ಯವಹಾರ ಸ್ಥಗಿತ: ನಿರಂತರ ಆಮದು ಮಾಡಿಕೊಳ್ಳುವ ತಾಲೂಕಿನ ಏಳೆಂಟು ಪಾಲಿಸ್ಟರ್ ಹಾಗೂ ಜರಿ ವ್ಯಾಪಾರಿಗಳು ದರ ಏರಿಕೆಯ ಬಿಸಿಗೆ ಆಮದು ಮಾಡುವಲ್ಲಿ ಹಿಂದೇಟು ಹಾಕುತ್ತಿದ್ದಾರೆ.

ಅಷ್ಟೇ ಪರಿಣಾಮವಾಗಿ ನೇಯ್ಗೆಯ ನೇಕಾರರೂ ಸಹಿತ ಖರೀದಿಗೆ ಮುಂದಾಗುತ್ತಿಲ್ಲ. ಇದರಿಂದ ಜವಳಿ ವ್ಯಾಪಾರ-ವಹಿವಾಟು ತಾತ್ಕಾಲಿಕ ಸ್ಥಗಿತಗೊಳ್ಳುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ.

ಮುಂದಿನ ತಿಂಗಳು ಭಾರಿ ಪರಿಣಾಮ: ಸದ್ಯ ಹಳೆಯ ಕಚ್ಚಾವಸ್ತುಗಳು ಮಗ್ಗಗಳ ಮೇಲಿದ್ದು, ನೇಯ್ಗೆಗೆ ಅಷ್ಟೊಂದು ಪರಿಣಾಮವಾಗಿಲ್ಲ. ಇದೀಗ ಒಂದೊಂದಾಗಿ ಹೊಸ ಕಚ್ಚಾ ವಸ್ತುಗಳಿಂದ ಬೀಮ್‌ಗಳನ್ನು ಮಗ್ಗಗಳಿಗೆ ಅಳವಡಿಕೆ ಮಾಡುವಲ್ಲಿ ನೇಕಾರ ಮಾಲೀಕರು ಮುಂದಾಗುತ್ತಿಲ್ಲ. ಕ್ರಮೇಣ ನೇಕಾರರು ನೇಯ್ಗೆಯಿಲ್ಲದೆ ಉದ್ಯೋಗದಿಂದ ವಂಚಿತರಾಗುವವಲ್ಲಿ ಕಾರಣವಾಗುತ್ತಿದೆ. ಇದೇ ಸಮಸ್ಯೆ ಮುಂದುವರೆದಲ್ಲಿ ಭೀಕರ ನಿರುದ್ಯೋಗ ಸಮಸ್ಯೆ ನೇಕಾರ ವಲಯದಲ್ಲಿ ತಲ್ಲಣವುಂಟು ಮಾಡಲಿದೆಯೆಂಬುದು ತಜ್ಞರ ಅಭಿಪ್ರಾಯ.



ಮಾರುಕಟ್ಟೆಯಿಲ್ಲ: ದರ ಸಮರದಲ್ಲಿಯೇ ಸವಾಲಾಗಿ ಮುನ್ನಡೆಯುತ್ತಿರುವ ರಬಕವಿ-ಬನಹಟ್ಟಿ ಸೀರೆಗಳಿಗೆ ಇತ್ತೀಚಿನ ವರ್ಷಗಳಲ್ಲಿ ದೇಶಾದ್ಯಂತ ಆದರಲ್ಲೂ ಆಂಧ್ರ, ತೆಲಂಗಾಣ, ತಮಿಳನಾಡು ಹಾಗೂ ಮಹಾರಾಷ್ಟ್ರ ರಾಜ್ಯಗಳನ್ನೇ ನಂಬಿರುವ ಪ್ರದೇಶಗಳಲ್ಲಿ ಮಾರುಕಟ್ಟೆಯಿಲ್ಲದೆ ನೇಕಾರ ಮಾಲೀಕರು ಕಂಗಾಲಾಗಿದ್ದಾರೆ.

ಉತ್ತರ ಭಾರತದಿಂದ ಹಲವಾರು ನೇಯ್ಗೆ ಪ್ರದೇಶದಿಂದ ಇದೀಗ ರಬಕವಿ-ಬನಹಟ್ಟಿ ಸೀರೆಗೆ ದರ ಸಮರದಲ್ಲಿ ತೀವ್ರ ಪೈಪೋಟಿಯೊಡ್ಡಿರುವುದರಿಂದ ಮಾರುಕಟ್ಟೆಯಲ್ಲಿ ನೆಲೆ ಕಾಣುವಲ್ಲಿ ಸಂಪೂರ್ಣ ವಿಫಲವಾಗುತ್ತಿದೆ. ಇವೆಲ್ಲದರ ಮಧ್ಯೆ ಸದ್ಯ ಕಚ್ಚಾ ವಸ್ತುಗಳ ಬೆಲೆ ಹೆಚ್ಚಳದಿಂದ ಮತ್ತೇ ತಯಾರಾದ ಸೀರೆಗಳ ಬೆಲೆ ಹೆಚ್ಚಳವಾದಲ್ಲಿ ಮಾರುಕಟ್ಟೆಯಲ್ಲಿ ಮತ್ತಷ್ಟು ಮಾರಾಟ ಬಿಕ್ಕಟ್ಟು ಎದುರಾಗಲಿದೆಯೆಂಬುದು ಸಗಟು ವ್ಯಾಪಾರಿ ಹಾಗೂ ನೇಕಾರ ಮಾಲೀಕರ ಅಭಿಪ್ರಾಯ. ಇವೆಲ್ಲದರ ಕಾರಣದಿಂದ ಸದ್ಯ ದಿಢೀರ್ ಹೆಚ್ಚಳಗೊಂಡಿರುವ ಕಚ್ಚಾ ವಸ್ತು ಖರೀದಿಗೆ ಮುಂದಾಗದಿರುವದು ಪ್ರಮುಖ ಕಾರಣವೆನ್ನಲಾಗಿದೆ.

ಬೆಲೆಯಲ್ಲಿ ದಾಖಲೆ ಹೆಚ್ಚಳ: ಕಚ್ಚಾ ವಸ್ತುಗಳ ಬೆಲೆ ಹೆಚ್ಚಳ ಸಾಮಾನ್ಯವಾಗಿ ಶೇ.3 ರಿಂದ 5 ರಷ್ಟು ಹೆಚ್ಚಳಗೊಳ್ಳುತ್ತ ವರ್ಷದಿಂದ ವರ್ಷಕ್ಕೆ ಸಾಮಾನ್ಯವಾಗುತ್ತಿತ್ತು. ಈ ಬಾರಿ ಐತಿಹಾಸಿಕ ಶೇ.20 ರಷ್ಟು ಹೆಚ್ಚಳಗೊಂಡಿರುವದು ನೇಕಾರ ವಲಯದಲ್ಲಿ ತೀವ್ರ ಗಾಬರಿಯಾಗುವಲ್ಲಿ ಕಾರಣವಾಗಿದ್ದು, ಹಿಂದೆಂದೂ ಕಂಡರಿಯದ ಬೆಲೆ ಏರಿಕೆಯು ಬಿಸಿ ನೇಕಾರ ವಲಯದಲ್ಲಿ ತಲ್ಲಣ ಸೃಷ್ಟಿಸಿದೆ.

> ಯುದ್ಧ ನಿಲ್ಲದಿದ್ದಲ್ಲಿ ಮತ್ತಷ್ಟು ಬೆಲೆ ಏರಿಕೆ ಬಿಸಿ ತಪ್ಪಲಿದೆ. ಸರ್ಕಾರ ಮಧ್ಯಸ್ಥಿಕೆಯಿಂದ ನೇಕಾರರಿಗೆ ಪರಿಹಾರ ವ್ಯವಸ್ಥೆಯಾಗಲಿ. ಬೆಲೆ ನಿಯಂತ್ರಣಕ್ಕೆ ಹೊಸ ನಿಯಮ ಜಾರಿಗೊಳಿಸಬೇಕು.
> ■ **ಶಂಕರ ಸೊರಗಾಂವಿ,** ಮಾಜಿ ಉಪಾಧ್ಯಕ್ಷ, ರಾಷ್ಟ್ರೀಯ ನೂಲಿನ ಗಿರಣಿ ಮಹಾಮಂಡಳ.

> ಸ್ಪೈನಿಂಗ್ ಹಾಗೂ ಮಗ್ಗದ ಕಾರ್ಖಾನೆ ಘಟಕಗಳಿಗೆ ಬೆಲೆ ಏರಿಕೆ ಬಿಸಿ ತೀವ್ರವಾಗಿದೆ. ಕಚ್ಚಾ ಸಾಮಗ್ರಿ ಬೆಲೆ ಕಡಿಮೆಯಾದಲ್ಲಿ ನೇಕಾರರಿಗೆ ಉಳಿಗಾಲ. ಇಲ್ಲವಾದಲ್ಲಿ ಭೀಕರ ದಿನಗಳು ಪ್ರಾರಂಭವಾಗಲಿವೆ.
> ■ **ಬ್ರಿಜ್‌ಮೋಹನ ಡಾಗಾ,** ಅಧ್ಯಕ್ಷರು, ಸ್ಪೈನಿಂಗ್ ಘಟಕ ಮಾಲೀಕರ ಸಂಘ

ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ

ಅಂತ್ಯ ಹಾಡುವುದಕ್ಕೆ ಸಿದ್ಧವಾದ ಕನ್ನಡಿಗರು

• **ಬೆಳಗಾವಿ:** ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಪರಿಹಾರಕ್ಕೆ ಮಹಾಜನ ವರದಿಯೇ ಅಂತಿಮ ಹಾಗೂ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಹೇಳಿದರು.

ಗುರುವಾರ ಇಲ್ಲಿನ ಮಹಾನಗರ ಪಾಲಿಕೆಗೆ ತೆರಳಿ ನೂತನವಾಗಿ ಆಯ್ಕೆಯಾಗಿರುವ ಕನ್ನಡಿಗರು ಮೇಯರ್ ಉಪಮೇಯರ್ ಅವರಿಗೆ ಅಭಿನಂದನೆ ಸಲ್ಲಿಸಿ ಹೂಗುಚ್ಛ ನೀಡಿ ಅಭಿನಂದನೆ ಸಲ್ಲಿಸಿದ ಬಳಿಕ ಪಾಲಿಕೆಯ ಮೇಯರ್ ಉಪಮೇಯರ್ ಜೊತೆಗೆ ಕನ್ನಡಪರ ಸಂಘಟನೆಯ 20ಕ್ಕೂ ಹೆಚ್ಚು ಕನ್ನಡಪರ ಸಂಘಟನೆಗಳು ಸದಸ್ಯರುಗಳು ಸೇರಿ ಸಭೆ ನಡೆಸಿದರು.

2005ರ ಅಕ್ಟೋಬರ್ 27ರಂದು ಬೆಳಗಾವಿ ಪಾಲಿಕೆಯು ಬಹುಮತದಿಂದ ಅಂಗೀಕರಿಸಿದ, ಮಹಾರಾಷ್ಟ್ರ ಪರ ಗೊತ್ತುವಳಿಯನ್ನು ಮಹಾರಾಷ್ಟ್ರ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ತಾನು ದಾಖಲಿಸಿರುವ ದಾವೆಯಲ್ಲಿ ಪೂರಕ ದಾಖಲೆಯಾಗಿ ಸೇರ್ಪಡೆ ಮಾಡಿದ ಹಿನ್ನೆಲೆಯಲ್ಲಿ ಕನ್ನಡ ಸಂಘಟನೆಗಳು ಈ ಬೇಡಿಕೆ ಮಂಡಿಸಿವೆ.

ಗ್ರಾಮವನ್ನು ಘಟಕವನ್ನಾಗಿ ಪರಿಗಣಿಸಿ, ಗಡಿಭಾಗದ ಮರಾಠಿಗರ ಇಚ್ಛೆಯ ಅನುಸಾರ ಬೆಳಗಾವಿ ಸಹಿತ ಇತರ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು 2005ರಲ್ಲಿ ಪಾಲಿಕೆಯು ಬಹುಮತದಿಂದ ನಿರ್ಣಯ ಅಂಗೀಕರಿಸಿದ್ದಲ್ಲದೆ ಬೆಳಗಾವಿ, ನಿಪ್ಪಾಣಿ, ಕಾರವಾರ, ಬೀದರ, ಭಾಲ್ಕಿಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಸುಪ್ರೀಂಕೋರ್ಟ್‌ನ್ನು ಕೋರಲು ನಿರ್ಣಯಿಸಲಾಗಿತ್ತು ಎಂದು ಅಂದಿನ ಇತಿಹಾಸವನ್ನು ಅಶೋಕ ಚಂದರಗಿ ಅವರು ಬಿಚ್ಚಿಟ್ಟರು. ಅಂದಿನ ನಿರ್ಣಯ ಸದ್ಯ ಸುಪ್ರೀಂಕೋರ್ಟ್‌ನಲ್ಲಿ ಮಹಾರಾಷ್ಟ್ರದ ದಾವೆಯ ಒಂದು ಭಾಗವಾಗಿದೆ. ಈಗ ಬೆಳಗಾವಿ ಪಾಲಿಕೆಯಲ್ಲಿ ಕರ್ನಾಟಕದ ಪರವಾಗಿರುವ ಸದಸ್ಯರ ಸಂಖ್ಯೆ ಅತ್ಯಧಿಕ ಪ್ರಮಾಣದಲ್ಲಿದೆ. ಒಟ್ಟು 58 ಸದಸ್ಯರಲ್ಲಿ 55 ಸದಸ್ಯರು ನಮ್ಮವರೇ ಆಗಿದ್ದಾರೆ. ನೂತನ ಮೇಯರ್ ಉಪಮೇಯರ್ ಅಪ್ಪಟ ಕನ್ನಡಿಗರಾಗಿದ್ದಾರೆ. ಈ ಸುವರ್ಣ ಅವಕಾಶ ಬಳಸಿಕೊಂಡು ಕರ್ನಾಟಕದ, ವಿಶೇಷವಾಗಿ ಬೆಳಗಾವಿ ಹಿತಾಸಕ್ತಿಯನ್ನು ಸುಪ್ರೀಂಕೋರ್ಟ್‌ನಲ್ಲಿ ರಕ್ಷಿಸಲು ನಿರ್ಣಯಗಳನ್ನು ಅಂಗೀಕರಿಸಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯಿತು.



ಕನ್ನಡ ಸಂಘಟನೆಗಳ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಮೇಯರ್ ಪ್ರೀತಿ ಕಾಮಕರ ಮತ್ತು ಉಪಮೇಯರ್ ಹಣಮಂತ ಕೊಂಗಾಲಿ ಅವರು ಶೀಘ್ರವೇ ಈ ಬಗ್ಗೆ ಕ್ರಮ ಕೈಕೊಳ್ಳುವ ಭರವಸೆ ನೀಡಿದರು.

ಕಿತ್ತೂರು ಕರ್ನಾಟಕ ಸೇನೆಯ ರಾಜ್ಯಾಧ್ಯಕ್ಷ ಮಹಾದೇವ ತಳವಾರ, ನಾಮನಿರ್ದೇಶಿತ ಪಾಲಿಕೆ ಸದಸ್ಯ ರಮೇಶ ಸೊಂಟಕ್ಕಿ, ಸರ್ವೋದಯ ಸಂಘದ ಅಧ್ಯಕ್ಷ ಶ್ರೀನಿವಾಸ ತಾಳೂಕರ, ಕರ್ನಾಟಕ ರಕ್ಷಣಾ ವೇದಿಕೆಯ (ಶಿವರಾಮೇಗೌಡ ಜಿಲ್ಲಾಧ್ಯಕ್ಷ ವಾಜಿದ ಹಿರೇಕೋಡಿ, ಗಡಿನಾಡು ಕನ್ನಡಿಗರ ಸೇನೆಯ ರಾಜ್ಯಾಧ್ಯಕ್ಷ ಬಲರಾಮ ಮಾಸೇನಟ್ಟಿ, ಕನ್ನಡ ಹೋರಾಟಗಾರರ ಹುಚ್ಚರೆಡ್ಡಿ ಶಿವರೆಡ್ಡಿ, ಮೈನೋದ್ದಿನ ಮಕಾನದಾರ, ಮಹೇಶ ಶೀಗಿಹಳ್ಳಿ, ಪ್ರೇಮ್ ಚೌಗುಲಾ ಸೇರಿದಂತೆ ಹಲವು ಕನ್ನಡಪರ ಸಂಘಟನೆಯ ಕಾರ್ಯಕರ್ತರು ಭಾಗಿಯಾಗಿದ್ದರು.

ಕಿರುಸುದ್ದಿ

ಕಾಂಗ್ರೆಸ್ ಗೆಲುವು ಖಚಿತ: ಸಚಿವ ತಿಮ್ಮಾಪುರ

• **ಜಮಖಂಡಿ:** ಈ ಬಾರಿ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಖಚಿತವಾಗಿದೆ. ಜಿಲ್ಲೆ ಕಾಂಗ್ರೆಸ್ ಭದ್ರ ಕೋಟೆಯಂತಾಗಿದೆ ಎಂದು ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗಲು ನಗರಕ್ಕೆ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ದಿ.ಎಚ್.ವೈ.ಮೇಟಿಯವರು ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಅಂತಹ ವ್ಯಕ್ತಿಯ ಕುಟುಂಬದ ಸದಸ್ಯರನ್ನು ಗೆಲ್ಲಿಸಿದಾಗ ಮಾತ್ರ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದರು.

ಜನರು ಅವರಿಗೆ ಐದು ವರ್ಷಗಳ ಅವಧಿ ನೀಡಿದ್ದರೂ, ಅವರು ಯಾವಾಗಲೂ ಜನರ ಸೇವೆಯಲ್ಲೇ ತೊಡಗಿಸಿಕೊಂಡು ಕಾರ್ಯಕರ್ತರ ಋಣ ತೀರಿಸಲು ಪ್ರಯತ್ನಿಸುತ್ತಿದ್ದರು. ಮೇಟಿ ಅವರ ಕನಸಾಗಿದ್ದ ಮೆಡಿಕಲ್ ಕಾಲೇಜು ಸ್ಥಾಪನೆ ಕಾರ್ಯ ಇದೀಗ ಆರಂಭವಾಗುತ್ತಿರುವುದು ಸಂತಸದ ವಿಷಯ. ಇದು ಮಧ್ಯಮ ವರ್ಗ ಹಾಗೂ ಬಡವರಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ದೊರಕಲು ಸಹಾಯಕವಾಗಲಿದೆ ಎಂದರು.

ಟಿಕೆಟ್ ವಿತರಣೆ ಪ್ರಕ್ರಿಯೆ ಕುರಿತು ಮಾತನಾಡಿದ ಅವರು, ಹೈಕಮಾಂಡ್ ವರದಿ ಆಧಾರದ ಮೇಲೆ ಯೋಗ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಿರಿಯ ನಾಯಕರು ಹಲವು ಆಯಾಮಗಳನ್ನು ಪರಿಗಣಿಸಿ ತೀರ್ಮಾನ ಕೈಗೊಳ್ಳುತ್ತಾರೆ ಎಂದರು. ಕುಟುಂಬದೊಳಗಿನ ಸ್ಪರ್ಧೆ ಸಹಜವಾಗಿದ್ದು, ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರೂ ತಮ್ಮ ಅವಕಾಶವನ್ನು ಕೇಳುವುದು ತಪ್ಪಲ್ಲ ಎಂದು ಹೇಳಿದರು.

ಒಳ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಸಂವಿಧಾನಬದ್ಧವಾಗಿ ಕ್ರಮ ಕೈಗೊಂಡಿದ್ದು, ವಿಧಾನಸಭೆಯಲ್ಲಿ ಪಾಸ್ ಮಾಡಿ ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ. ಆದರೆ, ಬಿಜೆಪಿ ಈ ವಿಚಾರದಲ್ಲಿ ಗೊಂದಲ ಸೃಷ್ಟಿಸಿದ್ದು, ದಲಿತರಿಗೆ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು. ಎಲ್ಲ ಜಾತಿಗಳಿಗೂ ನ್ಯಾಯ ಸಿಗುವಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು.

ಅಜ್ಜಿ ಕೊಲೆ ಪ್ರಕರಣ: ಆರೋಪಿ ಬಂಧನ

• **ಬಳ್ಳಾರಿ:** ಹಣ, ಆಸ್ತಿಯ ವ್ಯಾಮೋಹಕ್ಕಾಗಿ ಸ್ವಂತ ಅಜ್ಜಿಯನ್ನೇ ಮಾರಕಾಸ್ತ್ರಗಳಿಂದ ಕೊಲೆ ಮಾಡಿದ ಆರೋಪಿಯನ್ನು ಪರಮದೇವನ ಹಳ್ಳಿ (ಪಿಡಿ ಹಳ್ಳಿ) ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ. ಸಿರುಗುಪ್ಪ ತಾಲೂಕಿನ ಹಾಗಲೂರು ಗ್ರಾಮದ ಎಂ.ವೀರೇಂದ್ರ(21) ಬಂಧಿತ ಆರೋಪಿ. ಬಳ್ಳಾರಿ ತಾಲೂಕಿನ ಕಾರೆಕಲ್ಲು ಗ್ರಾಮದ ವೀರಮ್ಮ (62) ಹತ್ಯೆಯಾದವರು. ಕಳೆದ ಮಾ.21ರಂದು ವೀರಮ್ಮ ಅವರು ತಮ್ಮ ಮನೆಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ವ್ಯಾಪ್ತಿಯ ಪಿ.ಡಿ.ಹಳ್ಳಿ ಪೊಲೀಸ್ ಠಾಣೆಯಲ್ಲಿ ಇದು ಅನುಮಾನಾಸ್ಪದ ಸಾವು ಎಂದು ಪ್ರಕರಣ ದಾಖಲಾಗಿತ್ತು. ಮಾ.24ರಂದು ಬಂದ ಮರಣೋತ್ತರ ಪರೀಕ್ಷೆಯಲ್ಲಿ ಹರಿತವಾದ ಆಯುಧಗಳಿಂದ ಕತ್ತು ಸೀಳಿ ಕೊಲೆ ಮಾಡಿರುವುದು ವರದಿಯಲ್ಲಿ ದೃಢಪಟ್ಟಿತ್ತು. ಕೂಡಲೇ ಪೊಲೀಸ್ ಅಧಿಕಾರಿಗಳು ತನಿಖೆಯನ್ನು ಚುರುಕುಗೊಳಿಸಿದ್ದರು. ಕೊಲೆಯಾದ ಸ್ಥಳಕ್ಕೆ ಎಸ್ಪಿ ಡಾ.ಸುಮನ್ ಡಿ.ಪನ್ನೇಕರ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹಣ ಹಾಗೂ ಚಿನ್ನಾಭರಣಗಳನ್ನು ದೋಚುವ ಉದ್ದೇಶದಿಂದ ಆರೋಪಿ ಕಳೆದ ಮಾ.20ರಂದು ರಾತ್ರಿ ಅಜ್ಜಿ ವಾಸವಿದ್ದ ಮನೆಯಲ್ಲೇ ಉಳಿದುಕೊಂಡಿದ್ದ. ತಡರಾತ್ರಿ ನಿದ್ದೆಯಲ್ಲಿದ್ದ ಅಜ್ಜಿಯ ಕತ್ತನ್ನು ಚಾಕುವಿನಿಂದ ಕೊಯ್ದು ಕೊಲೆ ಮಾಡಿದ್ದ ಎನ್ನಲಾಗಿದೆ.

ಮನೆಯ ಅಲ್ಮಾರಾದಲ್ಲಿದ್ದ 23 ಸಾವಿರ ಹಣ ಹಾಗೂ 80 ಗ್ರಾಂ. ನಕಲಿ ಚಿನ್ನಾಭರಣ ದೋಚಿದ್ದ. ಸಾಕ್ಷ್ಯ ನಾಶಪಡಿಸಲು ಅಜ್ಜಿಯ ಶವವನ್ನು ಪೆಟ್ರೋಲ್ ಸುರಿದು ಸುಟ್ಟಿದ್ದ. ನಂತರ ತಲೆಮರೆಸಿಕೊಂಡಿದ್ದ. ಆರೋಪಿ ಪತ್ತೆಗಾಗಿ ಡಿವೈಎಸ್ಪಿ ಮಾಲತೇಶ್ ಕೊಣಬೇವು, ಸಿಪಿಐ ಸುಭಾಷ್ ಚಂದ್ರ, ಪಿಎಸ್ಐಗಳಾದ ಸುರೇಶಪ್ಪ, ತಿಮ್ಮಾರೆಡ್ಡಿ ಸೇರಿದಂತೆ ವಿವಿಧ ಅಧಿಕಾರಿಗಳ ನೇತೃತ್ವದ ತಂಡ ರಚಿಸಲಾಗಿತ್ತು ಎಂದು ಎಸ್ಪಿ ಡಾ.ಸುಮನ್ ಡಿ.ಪನ್ನೇಕರ್ ತಿಳಿಸಿದ್ದಾರೆ.

ಅಧಿಕಾರಿಗಳಿಂದ ಮಾಹಿತಿ ಪಡೆದ ಡಾ.ಟಿ.ಶ್ಯಾಮ್ ಭಟ್

• **ರಾಯಚೂರು:** ಚಿಕಿತ್ಸೆ ಫಲಿಸದೆ ಬಾಣಂತಿ, ಮಗು ಸಾವು, ಕಲುಷಿತ ಆಹಾರ ಸೇವಿಸಿ ವಸತಿ ನಿಲಯದ ಮಕ್ಕಳು ಅಸ್ವಸ್ಥ, ಅಮಾಯಕರ ಬಲಿ ಪಡೆದ ರಸ್ತೆ ಗುಂಡಿ ಸೇರಿದಂತೆ ನಾನಾ ಕುಂದುಕೊರತೆಗಳ ಪತ್ರಿಕಾ ವರದಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶ್ಯಾಮ್ ಭಟ್ ಹಾಗೂ ಆಯೋಗದ ನ್ಯಾಯಿಕ ಸದಸ್ಯ ಎಸ್.ಕೆ.ವಂಟಿಗೋಡಿ ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ಕೇಳಿದರು.

ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಕರಣಗಳ ವಿಲೇವಾರಿ ಹಾಗೂ ಸಾರ್ವಜನಿಕ ಅಹವಾಲು ಸ್ವೀಕಾರ ಮತ್ತು ದೂರುಗಳ ವಿಚಾರಣೆ ಸಭೆ ನಡೆಸಿದ ಅಧ್ಯಕ್ಷರು ಹಾಗು ಸದಸ್ಯರು, ಹಲವಾರು ದಿನಪತ್ರಿಕೆಗಳಲ್ಲಿ 2022ರಿಂದ ಇದುವರೆಗೆ ವಿವಿಧ ದಿನಪತ್ರಿಕೆಗಳಲ್ಲಿ ವರದಿಯಾದ ಕುಂದುಕೊರತೆಗಳನ್ನು ಉಲ್ಲೇಖಿಸಿ ಅಧಿಕಾರಿಗಳಿಂದ ವರದಿ ಕೇಳಿದರು.

ಅರಕೇರಾ ವಸತಿ ನಿಲಯದ ಅವ್ಯವಸ್ಥೆಗೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿದ ಸಂಬಂಧಪಟ್ಟ ಅಧಿಕಾರಿ ಮತ್ತು ವಾರ್ಡನ್‌ಗೆ ನೋಟಿಸ್ ಕೊಡಲಾಗಿದೆ. ದೇವದುರ್ಗ ತಾಲೂಕಿನ ಮನೆಯೊಂದರಲ್ಲಿ 80ಕ್ಕೂ ಹೆಚ್ಚು ನ್ಯಾಯಬೆಲೆ ಅಂಗಡಿಯ ಅಕ್ಕಿ ಚೀಲಗಳು ಪತ್ರಿಕಾ ವರದಿಯ ಸಂಬಂಧಿಸಿದಂತೆ ಇಲಾಖೆಯಿಂದ ಎಚ್ಚರಿಕೆಯ ನೋಟಿಸ್ ನೀಡಿದ್ದೇವೆ. ಲಿಂಗಸೂರ ಪುರಸಭೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಹಾವಳಿ ವರದಿಯ ಕುರಿತಂತೆ ಸಂತ್ರಸ್ತರಿಗೆ 5 ಲಕ್ಷ ಪರಿಹಾರ ನೀಡಿದ್ದೇವೆ ಎಂದು ಪುರಸಭೆ ಅಧಿಕಾರಿಗಳು ಹೇಳಿದರೆ, ಆರ್.ಟಿ.ಪಿ.ಎಸ್‌ನಲ್ಲಿ ಕರೆಂಟ್ ಶಾಕ್ ಕಾರ್ಮಿಕ ಸಾವು ಪ್ರಕರಣದಲ್ಲಿ ಪರಿಹಾರ ನೀಡಲಾಗಿದೆ ಎಂದು ತಿಳಿಸಿದ ಅಧಿಕಾರಿಗಳು ತಿಳಿಸಿದರು.



ಕಲುಷಿತ ನೀರುಸೇವಿಸಿ ಸಿಂದನೂರ ತಾಲೂಕಿನ ಗ್ರಾಮವೊಂದರಲ್ಲಿ 40 ಜನ ಅಸ್ವಸ್ಥ ಘಟನೆ ಕುರಿತು ಗ್ರಾಮದಲ್ಲಿ ಶುಚಿತ್ವ ಕಾರ್ಯ ನಡೆಸಲಾಗಿದೆ. ಜಿಲ್ಲೆಯಲ್ಲಿ ಬಾಲ ಗರ್ಭಿಣಿಯರು ಎಂಬ ಪತ್ರಿಕಾ ವರದಿ ಗಂಭೀರವಾಗಿ ಪರಿಗಣಿಸಿದ್ದು, ಎಲ್ಲ ತಾಲೂಕುಗಳಲ್ಲಿ ಕಿಶೋರಿ ತರಬೇತಿ ಕೇಂದ್ರ ತೆರೆದು ಅಲ್ಲಿ ಜಾಗೃತಿ ಕಾರ್ಯಕ್ರಮ, ಚೈಲ್ಡ್ ಮ್ಯಾರೇಜ್ ತಡೆಗೆ ಜಾಗೃತಿ ಕಾರ್ಯಕ್ರಮ ರೂಪಿಸಿದ್ದೇವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಹೇಳಿಸಿದರು.

ಸಿಂಧನೂರು ತಾಲೂಕಿನ ಕುರಕುಂದ ಶಾಲೆಯಲ್ಲಿ ವಿದ್ಯುತ್ ಹರಿದು ಬಾಲಕಿ ಸಾವು ದುರ್ಘಟನೆ ಸಂಬಂಧ ಶಾಲಾ ಮುಖ್ಯ ಶಿಕ್ಷಕರ ಮೇಲೆ ಎಫ್‌ಐಆರ್ ದಾಖಲಾಗಿ, ಅಮಾನತು ಮಾಡಲಾಗಿದೆ. ಚಾರ್ಜ್‌ಶೀಟ್ ಲೋಪವಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.

ಸುಳ್ಳು ದಾಖಲೆ ಸೃಷ್ಟಿಸಿ ಲೋಪ ಎಸಗಿದ ಸಿರವಾರ ಹೋಬಳಿಯ ಗ್ರಾಮ ಸೇವಕ ಸಿದ್ದಪ್ಪ ಎಂಬುವರನ್ನು ಅಮಾನತು ಮಾಡಲಾಗಿದೆ. ದೇವದುರ್ಗ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಸಕಾಲಕ್ಕೆ ಚಿಕಿತ್ಸೆ ಸಿಗದೇ ಬಾಣಂತಿ ಮತ್ತು ಮಗು ಸಾವಿನ ಬಗ್ಗೆ ವೈದ್ಯರ ಲೋಪದ ಬಗ್ಗೆಯೂ ಪರಿಶೀಲಿಸಬೇಕು ಎಂದರು.

ಜಿಲ್ಲೆಯಲ್ಲಿ 59 ಪ್ರಕರಣಗಳ ವಿಚಾರಣೆ ಮಾಡಲಾಗಿದೆ ಸಂಬಂಧಿಸಿದ ಇಲಾಖೆಗಳು ಸಕಾಲಕ್ಕೆ ಆಯೋಗಕ್ಕೆ ವರದಿ ಸಲ್ಲಿಸಬೇಕು ಎಂದು ಅಧ್ಯಕ್ಷರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ನಿತೀಶ.ಕೆ., ಜಿ.ಪಂ ಸಿಇಒ ಈಶ್ವರ ಕಾಂದೂ, ಎಸ್ಪಿ ಅರುಣಾಂಗ್ಶು ಗಿರಿ ಸೇರಿದಂತೆ ಇತರರಿದ್ದರು.

ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನಕ್ಕೆ ಸಿಎಂಗೆ ಆಹ್ವಾನ

• **ಹುಬ್ಬಳ್ಳಿ:** ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಪದಾಧಿಕಾರಿಗಳು ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ನಗರದಲ್ಲಿ ನಡೆಯುವ ಇನ್‌ಕಾಮೆಕ್ಸ್-2026 ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನದ ಉದ್ಘಾಟನಾ ಸಮಾರಂಭಕ್ಕೆ ಆಹ್ವಾನಿಸಿದರು.

ಈ ಸಂದರ್ಭದಲ್ಲಿ, ಇನ್‌ಕಾಮೆಕ್ಸ್-2026 ಪ್ರದರ್ಶನದ ಉದ್ದೇಶಗಳು, ರಾಜ್ಯದ ಕೈಗಾರಿಕಾ ವಲಯಕ್ಕೆ ದೊರೆಯಲಿರುವ ಉತ್ತೇಜನ, ಸಣ್ಣ, ಮಧ್ಯಮ ಮತ್ತು ದೊಡ್ಡ ಉದ್ಯಮಿಗಳಿಗೆ ಸಿಗಲಿರುವ ಅವಕಾಶಗಳು, ಹೂಡಿಕೆ ಆಕರ್ಷಣೆ ಹಾಗೂ ಉದ್ಯೋಗ ಸೃಷ್ಟಿಯಲ್ಲಿ ಈ ಕಾರ್ಯಕ್ರಮದ ಪಾತ್ರ ಕುರಿತು ಸಮಗ್ರವಾಗಿ ವಿವರಿಸಲಾಯಿತು.

ಇದರ ಜೊತೆಗೆ, ಈ ಮಹತ್ವಾಕಾಂಕ್ಷಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲು ಕರ್ನಾಟಕ ರಾಜ್ಯ ಸರ್ಕಾರದಿಂದ ಅಗತ್ಯವಿರುವ ಎಲ್ಲಾ ರೀತಿಯ ಸಹಕಾರ ಮತ್ತು ಬೆಂಬಲವನ್ನು ನೀಡುವಂತೆ ವಿನಂತಿಸಲಾಯಿತು. ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿ ಸರ್ಕಾರದಿಂದ ಬೇಕಾಗುವ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಸಂಸ್ಥೆಯ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ, ಉಪಾಧ್ಯಕ್ಷ ಸಿದ್ದೇಶ್ವರ ಕಮ್ಮಾರ, ಗೌರವ ಕಾರ್ಯದರ್ಶಿ ಉದಯ ರೇವಣಕರ ಹಾಗೂ ಜೊತೆ ಗೌರವ ಕಾರ್ಯದರ್ಶಿ ಪ್ರಕಾಶ ಶೃಂಗೇರಿ ಇದ್ದರು.



ಆಲಿಕಲ್ಲು ಮಳೆಗೆ ನೆಲಕಚ್ಚಿದ 120 ಎಕರೆ ಕಲ್ಲಂಗಡಿ



• **ವಿರಹಟ್ಟಿ:** ಕಳೆದ 4-5 ದಿನಗಳಿಂದ ತಾಲೂಕಿನಾದ್ಯಂತ ಗಾಳಿ, ಗುಡುಗು, ಮಿಂಚು ಮಿಶ್ರಿತ ಅಕಾಲಿಕ ಆಲಿಕಲ್ಲು ಮಳೆ ಸುರಿದಿದ್ದರಿಂದ ತಾಲೂಕಿನ ಮಾಗಡಿ ಗ್ರಾಮದ ರೈತರ ಜಮೀನುಗಳಲ್ಲಿ ಬೆಳೆದು ನಿಂತಿದ್ದ 120 ಎಕರೆ ಕಲ್ಲಂಗಡಿ ಹಾಗೂ 30 ಎಕರೆ ಪಪ್ಪಾಯಿ ಮರಗಳು ಮುರಿದು ಬಿದ್ದಿದ್ದು, ರೈತರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಕೂಡಲೇ ಕಂದಾಯ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾನಿ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಬೆಳೆಹಾನಿ ಪರಿಹಾರ ಕೊಡಿಸುವಂತೆ ಆಗ್ರಹಿಸಿ ತಹಶೀಲ್ದಾರ್‌ಗೆ ರೈತರು ಮನವಿ ಸಲ್ಲಿಸಿದರು.

ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ಚನ್ನಪ್ಪ ಷಣ್ಮುಖಿ ಮಾತನಾಡಿ, 2025-26ರ ಬೇಸಿಗೆ ಹಂತದಲ್ಲಿ ಬೆಳೆದ ತೋಟಗಾರಿಕೆ ಬೆಳೆಯಾದ ಕಲ್ಲಂಗಡಿ ಬೆಳೆಯನ್ನು ಬೆಳೆದಿದ್ದು, ಇತ್ತೀಚೆಗೆ ಸುರಿದ ಅಕಾಲಿಕ ಆಲಿಕಲ್ಲು ಮಳೆಯಿಂದ ಬೆಳೆ ಸಂಪೂರ್ಣ ಹಾಳಾಗಿದ್ದು ಅಧಿಕಾರಿಗಳು ಕೂಡಲೇ ರೈತರ ಜಮೀನುಗಳಿಗೆ ಭೇಟಿ ನೀಡಿ ಬೆಳೆ ಪರಿಹಾರ ಕೊಡಿಸಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಈಗಾಗಲೇ ಕೆಲವೊಂದು ಬೆಳೆಗಳಿಗೆ ಹಂತ, ಕೆಲವೊಂದು ಕಟಾವಿಗೆ ಬಂದಿದ್ದ ಬೆಳೆ ರೈತರ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಕಲ್ಲಂಗಡಿ ಮತ್ತು ಪಪ್ಪಾಯಿ ಬೆಳೆಯು ಹಾಳಾಗಿ ಹೋಗಿದೆ. ಕಲ್ಲಂಗಡಿ ಹಣ್ಣು ಸಂಪೂರ್ಣ ಕೊಳೆತು ಹೋಗಿದ್ದು ಮಾರುಕಟ್ಟೆಯಲ್ಲಿ ಬೆಳೆಗೆ ಬೆಲೆ ಸಿಗದಂತಾಗಿದೆ ಎಂದರು. ರೈತರಾದ ಬಸವರಾಜ ಚನ್ನಪ್ಪ ಬಡ್ನಿ, ದೇವಪ್ಪ ಮಾಡಳ್ಳಿ, ವಿನೋದರೆಡ್ಡಿ ವೆಂಕರೆಡ್ಡಿ, ಮಲ್ಲಪ್ಪ ಗಾಣಿಗೇರ, ಫಕೀರಪ್ಪ ವೆಂಕಪ್ಪ ಈಳಗೇರ, ಫಕೀರೇಶ ಕೋಳಿವಾಡ, ಭೀಮಪ್ಪ ಭರಮಗೌಡ್ರ, ಕರಣ ಅಂಗಡಿ, ಫಕೀರಸಾಬ ರಾಜೇಸಾಬ ನದಾಫ್, ಬಸವರಾಜ ಹನುಮಪ್ಪ ಮಲಿಗೋಡ, ಮಂಜುನಾಥ ಬಂಡಿ ಇತರರಿದ್ದರು.

ಪಕ್ಕದ ತಾಲೂಕಿನ ಹಳ್ಳಿಗಳಿಗೆ ಗೊಬ್ಬರ ಮಾರಾಟ: ಆರೋಪ

• **ಮುಂಡಗೋಡ:** ತಾಲೂಕಿನ ಹುನಗುಂದ ಗ್ರಾಮದ ಶ್ರೀ ವೀರೇಶ್ವರ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದವರು ಸ್ಥಳೀಯ ರೈತರಿಗೆ ಯೂರಿಯಾ ಗೊಬ್ಬರ ವಿತರಣೆ ಮಾಡದೆ ಪಕ್ಕದ ತಾಲೂಕಿನ ಹಳ್ಳಿಗಳಿಗೆ ಗೊಬ್ಬರ ಮಾರಾಟ ಮಾಡುತ್ತಿದ್ದಾರೆ ಎಂಬ ಆರೋಪ ಗ್ರಾಮದ ರೈತರಿಂದ ಕೇಳಿ ಬಂದಿದೆ.

ಕಳೆದ ಜನವರಿಯಲ್ಲಿ 3 ಲೋಡ್ ಯೂರಿಯಾ ಗೊಬ್ಬರ ಗೋಡೌನ್‌ನಲ್ಲಿ ದಾಸ್ತಾನು ಇತ್ತು ಆದರೆ ಈಗ ನೋಡಿದರೆ ಗೋಡೌನ್ ಖಾಲಿಯಾಗಿದೆ. ಪಕ್ಕದ ಕಲಘಟಗಿ ತಾಲೂಕಿನ ಬಮ್ಮಿಗಟ್ಟಿ, ತಾವರಗೇರಿ ಗ್ರಾಮಗಳ ರೈತರಿಗೆ ಯೂರಿಯಾ ಗೊಬ್ಬರ ಮಾರಾಟ ಮಾಡುತ್ತಿದ್ದಾರೆ.

ಹುನಗುಂದ, ಅರಶಿಣಗೇರಿ, ಅತ್ತಿವೇರಿ, ಆಗಡಿ ಗ್ರಾಮದ ರೈತರಿಗೆ ಗೊಬ್ಬರ ವಿತರಣೆ ಮಾಡುವುದು ಬಿಟ್ಟು ಬೇರೆ ತಾಲೂಕಿನ ರೈತರಿಗೆ ಗೊಬ್ಬರ ಮಾರಾಟ ಮಾಡುತ್ತಿದ್ದಾರೆ ಎಂದು ಕೆಲವು ರೈತರು ವಿರೋಧ ವ್ಯಕ್ತಪಡಿಸಿದರು. ಆದರೂ ನಮ್ಮ ಕಣ್ಣು ಮುಂದೆಯೇ ಬಮ್ಮಿಗಟ್ಟಿಗೆ ಗೊಬ್ಬರದ ಲೋಡ್ ಕಳುಹಿಸಿದರು ಎಂದು ರೈತರಾದ ಮೌಲಾಲಿ ಬುಡ್ನಸವರ ಹೇಳಿದರು.



ರೈತರಾದ ಮರಿಯಪ್ಪ, ಚನ್ನಪ್ಪ ನಡಮನಿ, ಸಿದ್ದನಗೌಡ್ರು, ಈರನಗೌಡ್ರು, ಬಸವರಾಜ ತಾವರಗೇರಿ, ಹಜರೇಸಾಬ ಗೋರಿ, ನೂರ್ ಕುಸ್ನೂರ, ಹನುಮಂತಗೌಡ ಪಾಟೀಲ, ಬಶೀರ ಅರಳಿಕಟ್ಟಿ, ಮೌಲಾಲಿ ಅರಳಿಕಟ್ಟಿ, ತುಮಸಾಬ್ ಮತ್ತಿಗಟ್ಟಿ ಹಾಗೂ ಇತರರು ಇದ್ದರು.

> ಬೇರೆ ತಾಲೂಕಿನ ರೈತರಿಗೆ ಗೊಬ್ಬರ ವಿತರಣೆ ಮಾಡಿದ ವಿಷಯ ನನಗೆ ಗೊತ್ತಿರಲಿಲ್ಲ, ರೈತರು ಬಂದು ಕೇಳಿದಾಗ ಬಮ್ಮಿಗಟ್ಟಿಯವರು ಅಲ್ಲ ಆಗಡಿ ಗ್ರಾಮದ ರೈತರು ಎಂದು ಹೇಳಿದರು. ನೀವು ಬಮ್ಮಿಗಟ್ಟಿಯವರು ಆದರೆ ನಿಮಗೆ ಗೊಬ್ಬರ ಕೊಡುವುದಿಲ್ಲ ಎಂದು ಹೇಳಿ ಕಳುಹಿಸಿದ್ದೇನೆ.
> ■ **ಸಾದಿಕ್ ಆಗಡಿ,** ಶ್ರೀ ವೀರೇಶ್ವರ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಕಾರ್ಯದರ್ಶಿ

ಪೆಟ್ರೋಲ್ ಕಳ್ಳತನ

• **ಜಮಖಂಡಿ:** ಕೊಲ್ಲಿ ಯುದ್ಧದ ಭೀತಿಯಿಂದ ನಗರದಲ್ಲಿ ಪೆಟ್ರೋಲ್ ಕಳ್ಳತನ ಹಾಗೂ ಮನೆ ಮುಂದೆ ನಿಲ್ಲಿಸಿದ್ದ ವಾಹನಗಳನ್ನು ಕೆಡವುತ್ತಿರುವ ಘಟನೆಗಳು ಬೆಳಕಿಗೆ ಬಂದಿವೆ. ಈ ಸಂಬಂಧ ದೃಶ್ಯಗಳು ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ರಾತ್ರಿ ಸಮಯದಲ್ಲಿ ಮನೆಯ ಹೊರಗಡೆ ನಿಲ್ಲಿಸಿದ ದ್ವಿಚಕ್ರ ವಾಹನಗಳ ಪೆಟ್ರೋಲ್ ಕದಿಯುವ ಅವುಗಳನ್ನು ನೆಲಕ್ಕೆ ಕೆಡುವ ವಿಡಿಯೋ ಸಹ ವೈರಲ್ ಆಗಿದ್ದರಿಂದ ಸಾರ್ವಜನಿಕರು ಭಯಭೀತರಾಗಿದ್ದಾರೆ. ನಗರದ ಸಾರ್ವಜನಿಕರು ಕಿಡಿಗೇಡಿಗಳನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

2.8 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣವಾದ ಕ್ರೀಡಾ ಸಂಕೀರ್ಣ ಶೀಘ್ರ ಆರಂಭ

▸ ವಿಜಯಕುಮಾರ ಬೆಳ್ಳೇರಿಮಠ

ದಿಗಂತ ವಿಶೇಷ

• **ಹುಬ್ಬಳ್ಳಿ:** ಕ್ರೀಡೆ ಹಾಗೂ ಕ್ರೀಡಾ ಸ್ಪರ್ಧೆಗಳ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಇಲ್ಲಿಯ ಗದಗ ರಸ್ತೆಯ ರೈಲ್ವೆ ಆಫೀಸರ್ಸ್ ಕ್ಲಬ್ ಆವರಣದಲ್ಲಿ ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದಿಂದ ಸುಮಾರ 2.8 ಕೋಟಿ ವೆಚ್ಚದಲ್ಲಿ 3500 ಚ.ಮೀ. ವಿಸ್ತೀರ್ಣದ ಜಾಗದಲ್ಲಿ (ಸ್ಪೋರ್ಟ್ಸ್ ಅರೆನಾ ಆರ್ ಒಸಿ ಎಸ್‌ಡಬ್ಲ್ಯುಆರ್) ಕ್ರೀಡಾ ಸಂಕೀರ್ಣವನ್ನು ನಿರ್ಮಿಸಲಾಗಿದೆ.



ಯಾವ ಅಂಕಣಗಳಿವೆ?: ಕ್ರೀಡಾ ಸಂಕೀರ್ಣ ಕಾಮಗಾರಿ 2025 ಸೆಪ್ಟೆಂಬರ್‌ನಲ್ಲಿ ಆರಂಭಗೊಂಡಿದ್ದು, ಕೇವಲ 90 ದಿನದಲ್ಲಿ ಸಂಪೂರ್ಣ ಮುಗಿಸಿ ಮಾದರಿ ಕ್ರೀಡಾ ಸಂಕೀರ್ಣವನ್ನು ಅಭಿವೃದ್ಧಿಪಡಿಸಿದ್ದಾರೆ. ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ಎಂಜಿನಿಯರ್‌ಗಳು ನಿರ್ವಹಿಸಿದ್ದಾರೆ. ಈಗಾಗಲೇ ಕ್ರೀಡಾ ಸಂಕೀರ್ಣ ಡಿಸೆಂಬರ್ 30ರಂದು ಉದ್ಘಾಟನೆಗೊಂಡಿದೆ. ಬ್ಯಾಡ್ಮಿಂಟನ್, ಸ್ಕ್ವಾಷ್, ವಾಲಿಬಾಲ್, ಟೇಬಲ್ ಟೆನಿಸ್, ಬ್ಯಾಸ್ಕೆಟ್‌ಬಾಲ್, ಪಿಕಲ್ ಬಾಲ್, ಫುಟ್‌ಬಾಲ್, ಬಾಕ್ಸ್ ಕ್ರಿಕೆಟ್, 2 ಕ್ರಿಕೆಟ್ ನೆಟ್ಸ್ ಹಾಗೂ ಈಜುಕೊಳ ಅಂಕಣಗಳನ್ನು ವೈಜ್ಞಾನಿಕವಾಗಿ ನಿರ್ಮಿಸಲಾಗಿದೆ.

ಬಾಲಾಜಿ ವೆಂಚರ್ಸ್ ಕಂಪನಿ ಅವರಿಗೆ ನಿರ್ವಹಣೆಗೆ ನೀಡಿದ್ದು, ಶೀಘ್ರದಲ್ಲಿಯೇ ಕ್ರೀಡಾ ಸಂಕೀರ್ಣ ಆರಂಭವಾಗಲಿದೆ. ಬೆಳಗ್ಗೆ 6 ಗಂಟೆಯಿಂದ 9 ರ ವರೆಗೆ ಹಾಗೂ ಸಂಜೆ 6ರಿಂದ ರಾತ್ರಿ 9ರ ವರೆಗೆ ರೈಲ್ವೆ ಅಧಿಕಾರಿಗಳಿಗೆ ಅವಕಾಶವಿದೆ. ಉಳಿದ ಅವಧಿಯಲ್ಲಿ ಸಾರ್ವಜನಿಕರಿಗೆ ನೀಡಲು ನಿರ್ಧರಿಸಲಾಗಿದೆ. ಪ್ಲೇ ಆ್ಯಪ್ ಅಭಿವೃದ್ಧಿ ಪಡಿಸಲಾಗಿದ್ದು, ಸಾರ್ವಜನಿಕ ಇಲ್ಲಿ ನೋಂದಣಿ ಮಾಡಿ ಕ್ರೀಡಾ ಸಂಕೀರ್ಣದ ಸದುಪಯೋಗ ಪಡೆಯಬಹುದು. ರಿಯಾಯಿತಿ ದರದಲ್ಲಿ ನೀಡಲಾಗುವುದು ಎಂದು ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗೀಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಎಸ್.ಪಿ.ಪ್ರವೀಣ ತಿಳಿಸಿದರು.

ನೈರುತ್ಯ ರೈಲ್ವೆ ವ್ಯಾಪ್ತಿಯಲ್ಲಿ ಎಲ್ಲಿಯೂ ಇಂತಹ ಕ್ರೀಡಾ ಸಂಕೀರ್ಣವಿಲ್ಲ. ಕ್ರೀಡೆ ಪ್ರೋತ್ಸಾಹಿಸಲು ಹಾಗೂ ಹೆಚ್ಚು ಆದಾಯ ಗಳಿಸುವ ಉದ್ದೇಶದಿಂದ ಕ್ರೀಡಾ ಸಂಕೀರ್ಣ ನಿರ್ಮಿಸಲಾಗಿದೆ. ಬಾಲಾಜಿ ವೆಂಚರ್ಸ್ ಕಂಪನಿ ನಿರ್ವಹಣೆ ಮಾಡಲಿದ್ದು, ವರ್ಷಕ್ಕೆ 6 ಲಕ್ಷ ರೂ. ಆದಾಯ ಬರುವ ನಿರೀಕ್ಷೆ ಇದೆ ಎಂದರು.

ರೈಲ್ವೆ ಇಲಾಖೆಯಿಂದ ಅಂತರ ವಲಯ ಕ್ರೀಡಾ ಸ್ಪರ್ಧೆಗಳು ನಡೆಯುತ್ತವೆ. 8ಕ್ಕೂ ಹೆಚ್ಚು ಕ್ರೀಡೆಗಳ ಅಂಕಣಗಳು ಒಂದೇ ಕಡೆ ಇರುವುದರಿಂದ ಸ್ಪರ್ಧೆಗಳ ನಡೆಸಲು ಹೆಚ್ಚು ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿ ಹೆಚ್ಚು ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.

2 ಕೋಟಿ ವೆಚ್ಚದಲ್ಲಿ ಪೆವಿಲಿಯನ್ ಅಭಿವೃದ್ಧಿ

ಗದಗ ರಸ್ತೆಯಲ್ಲಿರುವ ರೈಲ್ವೆ ಕ್ರಿಕೆಟ್ ಮೈದಾನದಲ್ಲಿ 2 ಕೋಟಿ ವೆಚ್ಚದಲ್ಲಿ ಪೆವಿಲಿಯನ್ ಅಭಿವೃದ್ಧಿ ಪಡಿಸಲಾಗುತ್ತಿದೆ. ಮೈದಾನದ ನಾಲ್ಕು ದಿಕ್ಕಿನಲ್ಲಿ ಕ್ಯಾಮೆರಾಗಳ ಅಳವಡಿಕೆ. ವಿಶ್ರಾಂತಿ ಹಾಗೂ ಡ್ರೆಸ್ಸಿಂಗ್ ಕೊಠಡಿ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ನೈರುತ್ಯ ರೈಲ್ವೆಯ ಹುಬ್ಬಳ್ಳಿಯ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

CHANGE OF NAME

I, **SIDRAMESH JAMBANNA BELERI** (old name) Resident of Beleri, 32, Rama Nagar, Yelbarga, Koppal, Karnataka, 583236, have changed my name as **SIDRAMESH** (new name) henceforth I will be called and recognized by new name for all future purposes, dated: 26/03/2026.

CHANGE OF NAME

I, **INNUS KHAN BETAGERI** (Old Name) Resident of 2nd Cross Gudihal Road, U K T Hill, Hubli, Hubli - 580024 Dist: Dharwad, Karanataka State (address), have changed my name as **MOHAMMED YOUNUS BETAGERI** (New Name) for all purposes affidavit Dtd.: 21-03-2026 sworn before notary **Patil V. H.**

CHANGE OF NAME

I, **SOMASHEKHAR ANEPPANAVAR** (Old Name) Resident of 43/, Tangadagi Road, P K Nagar, Muddebihal Pin - 586212, have changed my name as **SOMASHEKHAR SANGAPPA ANEPPANAVAR** (New Name) for all purposes, vide affidavit dated: 26/03/2026 before notary **S. S. Malagatti** of Muddebihal.

KARNATAKA RURAL INFRASTRUCTURE DEVELOPMENT LTD.
(Formerly Karnataka Land Army Corporation Limited)
No.1106, 10th Main Road, RPC Layout, Vijayanagar, Bengaluru - 560040

ಸಂ: [illegible]/2025-26/1341 ದಿನಾಂಕ:26.03.2026

ಇ-ಟೆಂಡರ್ ಅಧಿಸೂಚನೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (KRIDL) [illegible] BBMP [illegible] ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ [illegible] ಇ-ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ಸೂಚನೆ ಸಂಖ್ಯೆ (KRIDL/2025-26/RD/WORK_INDENT 38, 39 and 44) [illegible] ರೂ.995.00 ಲಕ್ಷಗಳು ಹಾಗೂ EMD ಮೊತ್ತ ರೂ.13.50 ಲಕ್ಷಗಳು [illegible] KPPP ವೆಬ್‌ಸೈಟ್ https://kppp.karnataka.gov.in ಮೂಲಕ [illegible] ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿ ಕೆಳಗಿನಂತಿದೆ:

ಟೆಂಡರ್ ಪ್ರಕಟಣೆಯ ದಿನಾಂಕ	26.03.2026
ಆನ್‌ಲೈನ್ ಪ್ರಶ್ನೆಗಳಿಗಾಗಿ ಕೊನೆಯ ದಿನಾಂಕ	02.04.2026, 17:30
ಪ್ರಿ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	07.04.2026, 11:30
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	15.04.2026, 15:00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	18.04.2026, 15:30
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	27.04.2026, 15:30

ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಿ

ಸಹಿ/- ಕಾರ್ಯಪಾಲಕ ಅಭಿಯಂತರರು-4, ಕೆಆರ್‌ಐಡಿಎಲ್, ಬೆಂಗಳೂರು

CHANGE OF NAME

I, **MANJUNATH PATIL** (old name) Resident of H No: 186, Mylasandra, Begur Hobli, Lokas Layout, Bangalore South, Post: Begur, Bengaluru - 560068, Karnataka, India, have changed my name as **MANJUNATHA RAMANAGOUDA PATIL** (new name) henceforth I will be called and recognized by new name for all future purposes, dated: 26/03/2026.

CHANGE OF NAME

I, **SUNIL CHAVANNAVAR** (old name) Resident of 164, Shettar Oni, Karlawad, Dharwad - 582208, Karnataka, India have changed my name as **SUNIL PANDUREDDI CHAVANNAVAR** (new name) henceforth I will be called and recognized by new name for all future purposes, dated: 26/03/2026.

CHANGE OF NAME

I, **AMRUTH VASUDEV HAVALAD (Old Name)** R/o Ashok Road, Health Camp, Betageri, Gadag have changed my name to **AMRUTA HAVALAD (New Name)** Vide Affidavit Sworn Before Notary M.M. Hiremath on 26-03-2026

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಚೇರಿ (ಬ.ನಿ.ಯೋ.), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

[illegible] ದಿನಾಂಕ: 25-03-2026

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) 2ನೇ ಕರೆ

ಬೆಂಗಳೂರು ಜಲಮಂಡಳಿಯು [illegible] ಟೆಂಡರ್ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಬೆಂಗಳೂರು [illegible] ಕಾಮಗಾರಿಗೆ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್‌ಗಿಟ್ಟ ಮೊತ್ತ: ₹ 375.90 ಲಕ್ಷಗಳು, ಇಎಂಡಿ: ₹ 5.64 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 04-04-2026ರ ಸಂಜೆ 5:00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ 06-04-2026ರ ಬೆಳಗ್ಗೆ 11:00 ಗಂಟೆಗೆ ತೆರೆಯಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ [illegible] ವೆಬ್‌ಸೈಟ್ https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ [illegible] ಸಂಪರ್ಕಿಸಬಹುದು.

ಸಹಿ/-
ಮುಖ್ಯ ಅಭಿಯಂತರರು (ಬ.ನಿ.ಯೋ.)

ವಾ.ಸಾ.ಸಂ.[illegible]/2025-26

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ [illegible] ಜಾಹೀರಾತು ವ್ಯವಸ್ಥಾಪಕರು

ಜಿಲ್ಲಾ ಪಂಚಾಯತ್ ಧಾರವಾಡ

ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ – 580001.
ದೂರವಾಣಿ: 0836-2442316 ಇ-ಮೇಲ್: zpeddwd@rediffmail.com

ಸಂಖ್ಯೆ: ಪಂ.ರಾ.ಇಂ.ವಿ.ಧಾ/ಕ.ಇಂ.-2/2025-26/5227 ದಿನಾಂಕ: 20-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ–46/2025–26 (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: No.FD 876 Exp-12/2017, Bangalore, Dated: 15-09-2017 ರನ್ವಯ [illegible] ಕಾಮಗಾರಿಗಳ ಬಗ್ಗೆ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ [illegible] ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1, KW-2 & KW-3 ರಲ್ಲಿನ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000 ರನ್ವಯ ಇ-ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers :

General : **23970/Call-2, 19944/Call-3, 19388/Call-2, 18445/Call-3, 16773/Call-2, 16698/Call-3, 25733**
CAT-1 : **24145/Call-2, 16682/Call-2**
SC Category : **24418/Call-2, 17720/Call-2**
Category-II(A) : **16768/Call-2**

ಟೈಂ ಟೇಬಲ್ ಆಫ್ ಇವೆಂಟ್ಸ್: 1) ಟೆಂಡರ್ ದಾಖಲೆಗಳನ್ನು ದಿನಾಂಕ: **30-03-2026** ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **08-04-2026** ರಂದು ಸಂಜೆ **4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **09-04-2026** ರಂದು ಸಂಜೆ **4.30** ಗಂಟೆಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **13-04-2026** ರಂದು ಬೆಳಗ್ಗೆ **11.00** ಗಂಟೆಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು / ಗುತ್ತಿಗೆದಾರರ ಅರ್ಹತೆ / ಟೆಂಡರ್ ನಿಯಮ / ಟೆಂಡರ್ ಷರತ್ತುಗಳು / ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ / ಇ.ಎಂ.ಡಿ ಮೊತ್ತ ಇತ್ಯಾದಿ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಆರ್.ಎಂ. ಸೊಪ್ಪಿಮಠ)
ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ, ಧಾರವಾಡ.

ಖಜಾನೆ ಇಲಾಖೆ

ಉಪ ನಿರ್ದೇಶಕರ ಕಾರ್ಯಾಲಯ, ಜಿಲ್ಲಾ ಖಜಾನೆ,
ಕೋಲಾರ.:08152-222016 e-mail:dd.kolar@karnataka.gov.in

ಸಂಖ್ಯೆ:[illegible]/2026-27
ದಿನಾಂಕ:20.03.2026

: ಇ-ಟೆಂಡರ್ ಅಧಿಸೂಚನೆ :

ವಿಷಯ: ಜಿಲ್ಲಾ ಖಜಾನೆ ಕೋಲಾರ ಕಛೇರಿ ಹಾಗೂ ವ್ಯಾಪ್ತಿಯ ಉಪ ಖಜಾನೆಗಳಿಗೆ 05 ಗ್ರೂಪ್ 'ಡಿ' ಹಾಗೂ ಒಂದು ದತ್ತಾಂಶ ನಮೂದು ಸಹಾಯಕರನ್ನು (DEO) ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ. ಉಲ್ಲೇಖ: (1) ಕರ್ನಾಟಕ ಸರ್ಕಾರದ ಸಚಿವಾಲಯ ಅಧಿಸೂಚನೆ ಸಂಖ್ಯೆ:ಕಾಇ411 ಎಲ್‌ಡಬ್ಲ್ಯು2023 ದಿನಾಂಕ:11.04.2025 (ಕನಿಷ್ಠ ವೇತನ ಕಾಯ್ದೆ 1948ರ ಕಲಂ 5 (1) ಎ ಹಾಗೂ 5 (1) (ಬಿ) ರಡಿ) (2) ಮಾನ್ಯ ಆಯುಕ್ತರು ಖಜಾನೆ ಆಯುಕ್ತರ ಕಾರ್ಯಾಲಯ ಬೆಂಗಳೂರು ರವರ ಕಛೇರಿ ಸುತ್ತೋಲೆ ಸಂಖ್ಯೆ: DOT/BUD/BUD/20/2025E-2097192 (PART 1776718) ದಿನಾಂಕ: 07.03.2026. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026–27ನೇ ಸಾಲಿನ ಏಪ್ರಿಲ್–2026 ರಿಂದ ಮಾರ್ಚ್–2027ರ ವರೆಗೆ ಜಿಲ್ಲಾ ಖಜಾನೆ ಕೋಲಾರ ಕಛೇರಿ ಹಾಗೂ ವ್ಯಾಪ್ತಿಯ ಉಪ ಖಜಾನೆಗಳಾದ, ಮಾಲೂರು, ಮುಳಬಾಗಿಲು, ಬಂಗಾರಪೇಟೆ ಮತ್ತು ರಾಬರ್ಟ್‌ಸನ್‌ಪೇಟೆ ಕೆಜಿಎಫ್ ಕಛೇರಿಗಳಲ್ಲಿ ಖಾಲಿ ಇರುವ 05 ಗ್ರೂಪ್ 'ಡಿ' ಹುದ್ದೆಗಳು ಹಾಗೂ ಜಿಲ್ಲಾಖಜಾನೆ ಕೋಲಾರ ಕಛೇರಿಗೆ 01 ದತ್ತಾಂಶ ನಮೂದು ಸಹಾಯಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಲುವಾಗಿ ಇ-ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಿವರ: (1) ಟೆಂಡರ್ ಅಂದಾಜು ಮೌಲ್ಯ: **15,83,628.00** (2) ಟೆಂಡರ್ ಪ್ರಕಟಣೆಯ **ದಿನಾಂಕ: 20.03.2026** (3) ಇ. ಎಂ.ಡಿ: 31673.00 (4) ಟೆಂಡರ್ ಪ್ರಾರಂಭದ **ದಿನಾಂಕ: 20.03.2026** (5) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ **ಕೊನೆಯ ದಿನಾಂಕ: 04.04.2026** (6) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06.04.2026** (7) ಆರ್ಥಿಕ ಬಿಡ್ ತೆರೆಯುವ ದಿನಾಂಕ: As per e-Portal. ಹೆಚ್ಚಿನ ವಿವರಗಳನ್ನು **htpp://kppp.karanataka.gov.in** ಹಾಗೂ ಕಛೇರಿ ವೇಳೆಯಲ್ಲಿ ಉಪ ನಿರ್ದೇಶಕರು, ಜಿಲ್ಲಾ ಖಜಾನೆ ಕೋಲಾರ ಕಛೇರಿಯಲ್ಲಿ ಸಂಪರ್ಕಿಸುವುದು (08152–222016) ನಿಗದಿಪಡಿಸಿರುವ ಕೊನೆಯ ದಿನ ಆಕಸ್ಮಿಕವಾಗಿ ಸರ್ಕಾರಿ ರಜಾ ದಿನವೆಂದು ಘೋಷಣೆಯಾದಲ್ಲಿ, ಮುಂದಿನ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು ಸಂಬಂಧಿಸಿದಂತೆ ಪ್ರತ್ಯೇಕ ಪ್ರಕಟಣೆ ಹೊರಡಿಸಿರುವುದಿಲ್ಲ ಹಾಗೂ ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು.

ಸಹಿ/- ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಕೋಲಾರ

ವಾ.ಸಾ.ಸಂ./ಕೋಲಾರ/ಆರ್.ಓ.ಸಂಖ್ಯೆ:554/ಕೆಎಸ್‌ಎಂಸಿಎ/2025–26

ಜಾಹೀರಾತಿಗಾಗಿ ಸಂಪರ್ಕಿಸಿ
8892497927

ಕರ್ನಾಟಕ ಸರ್ಕಾರ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ –585401.

Email: eokvafsu@gmail.com, ಕಛೇರಿ ದೂರವಾಣಿ: 08482-245361

ಸಂಖ್ಯೆ:[illegible]/ಟಿ.ನಂ.147/ಕಾಮಗಾರಿ/2025–26 ದಿನಾಂಕ:25.03.2026

ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

1) ಕಾಮಗಾರಿ ವಿವರ Carrying out civil/electrical works at different campuses of KVAFSU, Bidar, 2) ಕಾಮಗಾರಿ ಅಂದಾಜು ಮೊತ್ತ **Rs.2,43,26,566.00**, 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ 4) ಕಾಮಗಾರಿ ಟೆಂಡರ ಮೊತ್ತದ ವಿವರ **Rs.2,43,26,566.00**, 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ **27.04.2026 up to 5.00 PM**, 7) ತಾಂತ್ರಿಕ ಬಿಡ (ಫ್ರೀ ಬಿಡ್ ಲಕೋಟೆ ಟೆಂಡರ) ತೆರೆಯುವ ದಿನಾಂಕ **29.04.2026 at 11.30 AM**, 8) ಪೈನಾನ್ಸಿಯಲ ಬಿಡ (ಫ್ರೀ ಬಿಡ್ ಲಕೋಟೆ ಟೆಂಡರ) ಟೆಂಡರ ತೆರೆಯುವ ದಿನಾಂಕ **04.05.2026 at 11.30 AM**, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ:ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ, 08482-245446, 10) ಅಂತರ್ಜಾಲ ತಾಣದ ವಿಳಾಸ e-procurement portal- www.eproc.karnataka.gov.in

ಸಹಿ/- ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ.

ವಾ.ಸಾ.ಸಂ.ಇ/ಬೀದರ/371/ಕೆಎಸ್‌ಎಂಸಿಎ/2025–26

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ತೋಟಗಾರಿಕೆ, ಸರ್ ಸಿದ್ದಪ್ಪ ಕಂಬಳಿ ರಸ್ತೆ, ಹುಬ್ಬಳ್ಳಿ – 580023.

ಸಂ:[illegible]2505/ಇ-ಟೆಂಡರ್–/2025–26/ತೋಟಗಾರಿಕೆ. ದಿನಾಂಕ: 26–03–2026.

ಕಾರ್ಯನಿರ್ವಾಹಕ ಅಭಿಯಂತರರು (ತೋಟಗಾರಿಕೆ)
ಇ–ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸನ್ 2025–26ನೇ ಸಾಲಿನ [illegible] ಕಾಮಗಾರಿಗಳಿಗೆ, ಕರ್ನಾಟಕ [illegible] ಪಾರದರ್ಶಕ ಆದೇಶ 1999-2000ರ ಪ್ರಕಾರ [illegible] 2000 [illegible] ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ [illegible] PWD ಇಲಾಖೆಯಲ್ಲಿ [illegible] ಅರ್ಹ ಗುತ್ತಿಗೆದಾರರಿಗೆ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು:
1) ಇಂಡೆಂಟ್ ನಂ- **DMA/2025-26/OW/WORK_INDENT56782**, ರೂ. 33.95 ಲಕ್ಷ, (12 ತಿಂಗಳು)
2) ಇಂಡೆಂಟ್ ನಂ- **DMA/2025-26/OW/WORK_INDENT56784**, ರೂ. 46.45 ಲಕ್ಷ, (12 ತಿಂಗಳು)
3) ಇಂಡೆಂಟ್ ನಂ- **DMA/2025-26/OW/WORK_INDENT56785**, ರೂ. 46.70 ಲಕ್ಷ, (12 ತಿಂಗಳು)

ಈ ಮೇಲಿನ ಕಾಮಗಾರಿಗಳಿಗೆ ಸಂಬಂಧಿಸಿದ ಹೆಸರು, ಇ.ಎಮ್.ಡಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು http://www.kppp.karnataka.gov.in ದಲ್ಲಿ ಪಡೆಯಬಹುದು. ಸದರಿ ಟೆಂಡರ್ ದಾಖಲೆಗಳನ್ನು ಪೋರ್ಟಲ್‌ನಲ್ಲಿ ದಿನಾಂಕ 27–03–2026 ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 10–04–2026 ರಂದು ಸಾಯಂಕಾಲ 4.00 ಗಂಟೆ ವರೆಗೆ
ಟೆಂಡರ್ ತೆರೆಯುವ ದಿನಾಂಕ 13–04–2026 ರಂದು ಬೆಳಗ್ಗೆ 11.00 ಗಂಟೆ ನಂತರ

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು (ತೋಟಗಾರಿಕೆ)
ಹು–ಧಾ ಮಹಾನಗರ ಪಾಲಿಕೆ
ಹುಬ್ಬಳ್ಳಿ

ವಾ.ಸಾ.ಸ./ಧಾರವಾಡ/1393/[illegible]/2025–26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

Phone 2-238782 Fax No. 08372-237268 E.Mail : eepwdgad@gmail.com

ಸಂ:[illegible]- 1 2 3 4 :[illegible]: 2025–26/5821 ದಿನಾಂಕ: 25–03–2026

ಟೆಂಡರ್ ಪ್ರಕಟಣೆ ಹಾಗೂ ಅವಧಿ ವಿಸ್ತರಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು **540.00** ಲಕ್ಷ ಮೊತ್ತದಲ್ಲಿ ಒಟ್ಟು **07** ಕಾಮಗಾರಿಗೆ (ಕನಿಷ್ಠ ಮೊತ್ತ ರೂ: **5.00** ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: **200.00** ಲಕ್ಷ) ಕೆಪಿಪಿ **(kppp)** ನಲ್ಲಿ ನೋಂದಣಿ ಮಾಡಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿ **(kppp)** ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ **6** ಮಾಡ್ಯೂ-1, 3, ಹಾಗೂ **4** ರ ಪ್ರಕಾರ ಬಾಬಂದಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp. Karnataka. gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No:- Part-1 34879, 33032, 33031, 29101/Call-3 and 34529

ಮೇಲಿನ ಕಾಮಗಾರಿಗಳ ಟೆಂಡರ್ ವಿವರ ಪ್ರಕಟಿಸ್ಪಡ್ ದಿನಾಂಕ:- **04–04–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:- **06–04–2026** ಮಧ್ಯಾಹ್ನ **4.00** ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:- **07–04–2026**, ಆರ್ಥಿಕ ಬಿಡ್ ತೆರೆಯುವ ದಿನಾಂಕ:- **08–04–2026**.

Work Indent No:- Part-2 32157-ST/call-2 and 34835

ಮೇಲಿನ ಕಾಮಗಾರಿಗಳ ಟೆಂಡರ್ ವಿವರ ಪ್ರಕಟಿಸ್ಪಡ್ ದಿನಾಂಕ:- **8–04–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:- **10–04–2026** ಮಧ್ಯಾಹ್ನ **4.00** ಗಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ:- **13–04–2026** ಆರ್ಥಿಕ ಬಿಡ್ ತೆರೆಯುವ ದಿನಾಂಕ:- **15–04–2026**.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ [illegible] ಜಾತಿ ಪ್ರಮಾಣ ಪತ್ರ, **10** ವರ್ಷದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ವಿಭಾಗ ಕಚೇರಿ, ಎಂ.ಜಿ ರಸ್ತೆ, ಕಾರವಾರ–581301
Email: eekuwsdbkwr@gmail.com ದೂರವಾಣಿ ಸಂಖ್ಯೆ: 08382201080

ಮ್ಯಾನುಯಲ್ ಟೆಂಡರ್ ಅಧಿಸೂಚನೆ

ಈ ಕೆಳಗೆ ತಿಳಿಸಿರುವ ಯೋಜನೆಯಡಿಯಲ್ಲಿ ಭಟ್ಕಳ ಪಟ್ಟಣಕ್ಕೆ ಒಳಚರಂಡಿ ಕಲ್ಪಿಸುವ ಯೋಜನೆಯಡಿಯಲ್ಲಿ ಜೆಟ್ಟಿಂಗ್ ಕಮ್ ಸಕ್ಕಿಂಗ್ ಯಂತ್ರ, ಡಿ-ಸಿಲ್ಟಿಂಗ್ ಯಂತ್ರ ಮತ್ತು ಸೀವರ್ ರಾಡಿಂಗ್ ಯಂತ್ರಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ 4 ತಿಂಗಳುಗಳ ಕಾಲ ಮಾನವಶಕ್ತಿ ಸೇವೆಗಳನ್ನು ಒದಗಿಸುವ ಕಾಮಗಾರಿಯ ಟೆಂಡರ್‌ನ್ನು ಈ ಕೆಳಗೆ ನಮೂದಿಸಿರುವ ಆರ್ಥಿಕ ಮತ್ತು ತಾಂತ್ರಿಕ ಅರ್ಹತೆಯ ಮಾನದಂಡವನ್ನು ಪೂರೈಸುವ ಗುತ್ತಿಗೆದಾರರು/ಏಜೆನ್ಸಿಯವರಿಂದ ಮೊಹರಾದ ಬಾಬಂದಾರು ಟೆಂಡರನ್ನು (ಮ್ಯಾನುಯಲ್ ಟೆಂಡರ್) ಆಹ್ವಾನಿಸಲಾಗಿದೆ.

ನಂ: ಕಉಮ/ಕಾಕಾ/ಕಾಅ–ಕಾ/ಕಾಸ/ಸಹ/ಭಟ್ಕಳ ಒ.ಚ.ಯೋ/2171/2025–26. ದಿನಾಂಕ: 25/03/2026.

ಕಾಮಗಾರಿಯ ಹೆಸರು: ಭಟ್ಕಳ ಪಟ್ಟಣಕ್ಕೆ ಒಳಚರಂಡಿ ಕಲ್ಪಿಸುವ ಯೋಜನೆಯಡಿಯಲ್ಲಿ ಜೆಟ್ಟಿಂಗ್ ಕಮ್ ಸಕ್ಕಿಂಗ್ ಯಂತ್ರ, ಡಿ-ಸಿಲ್ಟಿಂಗ್ ಯಂತ್ರ ಮತ್ತು ಸೀವರ್ ರಾಡಿಂಗ್ ಯಂತ್ರಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ 4 ತಿಂಗಳುಗಳ ಕಾಲ ಮಾನವಶಕ್ತಿ ಸೇವೆಗಳನ್ನು ಒದಗಿಸುವ ಕಾಮಗಾರಿ. ಟೆಂಡರ್‌ಗಿಟ್ಟ ಅಂದಾಜು ಮೊತ್ತ: ರೂ. 4,57,782/– (ಜಿ.ಎಸ್.ಟಿ ಹೊರತುಪಡಿಸಿ), ಬಿಡ್ ಭದ್ರತೆ: ರೂ. 14,000=00, ಬಿಡ್ ದಾಖಲೆಯ ಬೆಲೆ: ರೂ. 1,500.00 ಜಿಎಸ್‌ಟಿ ಸೇರಿದಂತೆ. ಕಾಲಾವಧಿ: 04 ತಿಂಗಳು, ತಾಂತ್ರಿಕ ಅರ್ಹತೆ: (1) ಗುತ್ತಿಗೆದಾರರು ವಿದ್ಯುತ್ ಕಾಮಗಾರಿ ಕೈಗೊಳ್ಳಲು ಪರವಾನಿಗೆಯನ್ನು ಹೊಂದಿರಬೇಕು. (2) ಕಳೆದ 5 ಆರ್ಥಿಕ ವರ್ಷಗಳಲ್ಲಿನ ಯಾವುದಾದರೂ ಒಂದು ವರ್ಷದಲ್ಲಿ ಅ) ಕನಿಷ್ಠ ರೂ. 2.70 ಲಕ್ಷ ಮೊತ್ತಕ್ಕಿಂತ ಕಡಿಮೆ ಇರದ ಇದೇ ತರಹದ ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ಬ) ಟರ್ನ್ ಓವರ್ ಟೆಂಡರ್ ಗಿಟ್ಟ ಮೊತ್ತಕ್ಕಿಂತ ಹೆಚ್ಚಿರಬೇಕು.

ಟೆಂಡರ್ ಕಾರ್ಯಸೂಚಿ: (1) ಮಾಹಿತಿ ಸ್ವೀಕಾರದ ಕೊನೆಯ ದಿನಾಂಕ: 27/03/2026 ರಿಂದ 04/04/2026 ರ 17:00 ಗಂಟೆಯವರೆಗೆ. (2) ಖಾಲಿ ಟೆಂಡರ್ ದಾಖಲೆಗಳನ್ನು ವಿತರಿಸುವ ದಿನಾಂಕ: 04/04/2026 ರಿಂದ 08/04/2026 ರ 17:30 ಗಂಟೆಯವರೆಗೆ. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10/04/2026 ರ 16.30 ಗಂಟೆಯವರೆಗೆ. (4) ಟೆಂಡರ್‌ನ್ನು ತೆರೆಯುವ ದಿನಾಂಕ: 13/04/2026 ರಂದು 11:00 ಗಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಳಚರಂಡಿ ಮಂಡಳಿ, ವಿಭಾಗ, ಕಾರವಾರ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರು,
ಕನನೀಸ ಮತ್ತು ಒಳಚರಂಡಿ ಮಂಡಳಿ, ವಿಭಾಗ, ಕಾರವಾರ

DIPR/KWR/KSMCA/1253/25-26 dt. 26.03.2026

CHANGE OF NAME

I, **PRASANNA KULKARNI** (old name) Resident of # Main Road, Adur, Taluk: Hanagal, Dist: Haveri - 581101, Karnataka, India, have changed my name as **PRASANNA RAVEENDRARAO KULKARNI** (new name) henceforth I will be called and recognized by new name for all future purposes, dated: 26/03/2026.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಬ್ಬಳ್ಳಿ,

ಹುಬ್ಬಳ್ಳಿ–ಧಾರವಾಡ ರಸ್ತೆ, ಅಮರಗೋಳ, ಹುಬ್ಬಳ್ಳಿ–580025
ಕಛೇರಿ/ಟೆಲಿಫ್ಯಾಕ್ಸ್ : 0836-2322251, 2324426 ಇ-ಮೇಲ್ : apmchubli@gmail.com

ಸಂ:ಕೃಮಾಸ/ಕೃಉಮಾಸ(ಹು):ಲೀ&ಲೈ:2799:2025–26 ದಿನಾಂಕ : 26/03/2026

ಪ್ರಕಟಣೆ

ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ವಿವಿಧ ಕಟ್ಟಡಗಳನ್ನು ಹಾಗೂ ಗೋದಾಮುಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿನ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಾವಳಿಗಳು–2004 ರ ನಿಯಮ 14 ರನ್ವಯ ಆಸಕ್ತಿಯುಳ್ಳವರಿಂದ ಕೋಷ್ಟಕ–1 ರಲ್ಲಿ ಕಾಣಿಸಿದ ಕಟ್ಟಡಗಳನ್ನು ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ಮತ್ತು ನಿಯಮ 13 ರನ್ವಯ ಕೋಷ್ಟಕ–2 ರಲ್ಲಿ ಕಾಣಿಸಿದ ಗೋದಾಮುಗಳನ್ನು ಕೃಷಿ ಮಾರಾಟ ಇಲಾಖೆಯಿಂದ / ಈ ಸಮಿತಿಯಿಂದ ಲೈಸೆನ್ಸ್ ಪಡೆದು ಘೋಷಿತ ಕೃಷಿ ಹುಟ್ಟುವಳಿಗಳ ವ್ಯಾಪಾರ ವಹಿವಾಟು ನಡೆಸುತ್ತಿರುವ ಜೇಟಿ ಕಾರ್ಯಕರ್ತರಿಂದ 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳಿಗೆ ಶೇ. 5 ರಷ್ಟು ಲೀಜ್ ಅಂಡ್ ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸುವ ಮತ್ತು ಸಮಿತಿಯು ವಿಧಿಸುವ ಷರತ್ತು–ಹಾ–ನಿಬಂಧನೆಗಳಿಗೆ ಒಳಪಟ್ಟು ಗರಿಷ್ಠ 55 ತಿಂಗಳ ಅವಧಿಗೆ ಲೀಜ್ & ಲೈಸೆನ್ಸ್ ಶುಲ್ಕದಆಧಾರದ ಮೇಲೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ವಿವರಗಳು ಈ ಕೆಳಗಿನಂತಿದೆ:

ಕೋಷ್ಟಕ–1
(ನಿಯಮ–14 ರನ್ವಯ ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡಬೇಕಾದ ಕಟ್ಟಡಗಳು)

ಕ್ರ. ಸಂ.	ಕಟ್ಟಡದ ಹೆಸರು	ಕಟ್ಟಡದ ಸಂಖ್ಯೆ	ಸಹಾಯಕ ಕಾರ್ಯನಿರ್ವಾಹಕರು ನಿಗದಿಪಡಿಸಿದ ಮಾಸಿಕ ಲೀಜ್ & ಲೈಸೆನ್ಸ್ ಶುಲ್ಕ (ರೂ.ಗಳಲ್ಲಿ)(ಪ್ರತಿಯೊಂದಕ್ಕೆ)	ಡಿ.ಡಿ ಮೂಲಕ ಪಾವತಿಸಬೇಕಾದ ಇ.ಎಮ್.ಡಿ ಮೊತ್ತ	ಮೀಸಲಾತಿ
1	2	3	4	5	6
01	ಚಿಕ್ಕಮಳಿಗೆಗಳು–10	03	4,300–00	15000–00	ಸಾಮಾನ್ಯ
		13	4,300–00	15000–00	ಸಾಮಾನ್ಯ
		14	4,300–00	15000–00	ಸಾ.ಮಹಿಳೆ
		15	4,300–00	15000–00	ಸಾಮಾನ್ಯ
		16	4,300–00	15000–00	ಸಾಮಾನ್ಯ
		17	4,300–00	15000–00	ಪ.ಜಾತಿ
		18	4,300–00	15000–00	ಸಾಮಾನ್ಯ
		19	4,300–00	15000–00	ಸಾಮಾನ್ಯ
		20	4,300–00	15000–00	ಎಫ್.ಪಿ.
		30	4,300–00	15000–00	ಪ.ಪಂಗಡ
02	ರೈತ ಭವನ ಪಕ್ಕದ ಹೊಸ ಚಿಕ್ಕಮಳಿಗೆಗಳು–06	01	11,500–00	30000–00	ಎಫ್.ಪಿ.
		03	10,860–00	30000–00	ಸಾಮಾನ್ಯ
		04	10,860–00	30000–00	ಸಾ.ಮಹಿಳೆ
		05	10,860–00	30000–00	ಸಾಮಾನ್ಯ
		06	10,860–00	30000–00	ಸಾಮಾನ್ಯ
		10	10,860–00	30000–00	ಪರಿಶಿಷ್ಟ ಜಾತಿ
03	ಕೆನರಾ ಬ್ಯಾಂಕಿನ ಕೆಳಭಾಗದ ಹಳೆಯ ಉಪಹಾರ ಗೃಹ	01	46,210–00	1,00,000–00	ಸಾಮಾನ್ಯ

ಕೋಷ್ಟಕ–2
ನಿಯಮ–13 ರನ್ವಯ ಜೇಷ್ಠತೆ ಆಧಾರದ ಮೂಲಕ ಜೇಟಿ ಕಾರ್ಯಕರ್ತರುಗಳಿಗೆ ಹಂಚಿಕೆ ಮಾಡಬೇಕಾದ ಕಟ್ಟಡಗಳು

ಕ್ರ. ಸಂ.	ಕಟ್ಟಡದ ಹೆಸರು	ಕಟ್ಟಡದ ಸಂಖ್ಯೆ	ಸಹಾಯಕ ಕಾರ್ಯನಿರ್ವಾಹಕರು ನಿಗದಿಪಡಿಸಿದ ಮಾಸಿಕ ಲೀಜ್ & ಲೈಸೆನ್ಸ್ ಶುಲ್ಕ (ರೂ.ಗಳಲ್ಲಿ)(ಪ್ರತಿಯೊಂದಕ್ಕೆ)	ಡಿ.ಡಿ ಮೂಲಕ ಪಾವತಿಸಬೇಕಾದ ಇ.ಎಮ್.ಡಿ ಮೊತ್ತ	ಮೀಸಲಾತಿ
1	2	3	4	5	6
01	ಧಾನ್ಯದ ಸಂತೆಗಾಗಿ ನಿರ್ಮಿಸಿದ ಮಳಿಗೆಗಳು–14	01	3000–00	6000–00	ಸಾಮಾನ್ಯ ಮಹಿಳೆ
		02	3000–00	6000–00	ಪರಿಶಿಷ್ಟ ಜಾತಿ
		03	3000–00	6000–00	ಸಾಮಾನ್ಯ
		04	3000–00	6000–00	ಸಾಮಾನ್ಯ
		05	4000–00	8000–00	ಪರಿಶಿಷ್ಟ ಜಾತಿ ಮಹಿಳೆ
		06	4000–00	8000–00	ಸಾಮಾನ್ಯ
		07	4000–00	8000–00	ಎಫ್.ಪಿ.
		08	4000–00	8000–00	ಪರಿಶಿಷ್ಟ ಜಾತಿ
		09	4000–00	8000–00	ಸಾಮಾನ್ಯ ಅಂಗವಿಕಲ
		10	4000–00	8000–00	ಎಫ್.ಪಿ. ಮಹಿಳೆ
		11	4000–00	8000–00	ಸಾಮಾನ್ಯ
		12	4000–00	8000–00	ಪರಿಶಿಷ್ಟ ಜಾತಿ
		13	4000–00	8000–00	ಸಾಮಾನ್ಯ
		14	4000–00	8000–00	ಪರಿಶಿಷ್ಟ ಪಂಗಡ
02	ಆರ್.ಕೆ.ವಿ.ವಾಯ್ ಯೋಜನೆ ಅಡಿ ನಿರ್ಮಿಸಿದ ತಲಾ 100 ಮೆ.ಟನ್ ಸಾಮರ್ಥ್ಯದ 02 ಸಂಖ್ಯೆ ನವೀನ ಮಾದರಿ ಗೋದಾಮುಗಳು (SCP)	01	31,800–00	63,600–00	ಸಾ.ಮಹಿಳೆ
		02	31,800–00	63,600–00	ಪರಿಶಿಷ್ಟ ಜಾತಿ
03	ಅಂಗಡಿ ವ ಗೋದಾಮು (ಬಿ–14)	01	1,09,750–00	2,19,500–00	ಸಾಮಾನ್ಯ
04	WIF ಯೋಜನೆಯಡಿಯಲ್ಲಿ ನಿರ್ಮಿಸಿದ ಈರುಳ್ಳಿ ಸಂಗ್ರಹಣಾ ಗೋದಾಮು	01	5,18,000–00	10,36,000–00	ಸಾಮಾನ್ಯ
05	ಹಣ್ಣುಹಂಪಲ ವಿಕ್ರೇತರಿಗಾಗಿ ಮೀಸಲಿರಿಸಿದ ಕಟ್ಟಡ (ಸೊಂಡಾಣೆಕಟ್ಟಡ)	01	15,200–00	30,400–00	ಸಾಮಾನ್ಯ
06	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಕೆ.ವಿ.ವಾಯ್ ಯೋಜನೆ ಅಡಿ ನಿರ್ಮಿಸಿದ 5000 ಮೆ.ಟನ್ ಸಾಮರ್ಥ್ಯದ 01 ಗೋದಾಮಿನ 3 ಭಾಗದಲ್ಲಿಯ 3ನೇ ಭಾಗ	01	3,07,200–00	6,14,400–00	ಸಾಮಾನ್ಯ
07	ಈರುಳ್ಳಿ ಸಂಗ್ರಹಣ ಗೋದಾಮು ಹತ್ತಿರದಲ್ಲಿರುವ ಮುಖ್ಯ ಮಾರುಕಟ್ಟೆ ಪಂಡಿತ್ ಗೋದಾಮು ಕಟ್ಟಡಗಳು	01	1,13,050–00	2,26,100–00	ಸಾಮಾನ್ಯ
		02	1,13,050–00	2,26,100–00	ಪರಿಶಿಷ್ಟ ಪಂಗಡ
08	1000 ಎಂಟಿ ಸಾಮರ್ಥ್ಯದ ಗೋದಾಮು	01	1,28,400–00	2,56,800–00	ಸಾಮಾನ್ಯ

ಷರತ್ತು ಮತ್ತು ನಿಬಂಧನೆಗಳು : (1) ಖಾಲಿ ಟೆಂಡರ್ ಫಾರ್ಮಗಾಗಿ ಅರ್ಜಿ ಸಲ್ಲಿಸುವವರು ವ್ಯವಹರಿಸುವ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅಧಿಕೃತ ಪ್ರಮಾಣ ಪತ್ರದೊಂದಿಗೆ, ಈ ಕಚೇರಿಯಲ್ಲಿ ರೂ. **500**/– ಗಳನ್ನು ಪಾವತಿಸಿ ನೋಂದಣಿ ಮಾಡಿಸಿ, ಅರ್ಜಿಯನ್ನು ದಿನಾಂಕ : **10/04/2026**ರ ಒಳಗಾಗಿ ಸಲ್ಲಿಸತಕ್ಕದ್ದು (ಕ್ಯಾಂಟೀನ್ ಕಟ್ಟಡಕ್ಕೆ ಅರ್ಜಿ ಸಲ್ಲಿಸಲು ಮಹಾನಗರ ಪಾಲಿಕೆಯಿಂದ ಕ್ಯಾಂಟೀನ್ ನಡೆಸಲು ಅನುಮತಿ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು). (2) ಖಾಲಿ ಟೆಂಡರ್ ಫಾರ್ಮ್‌ಗಳನ್ನು ಸಮಿತಿಯಿಂದ ದಿನಾಂಕ : **15/04/2026** ರಿಂದ ದಿನಾಂಕ : **24/04/2026** ರವರೆಗೆ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು. (3) ಭರ್ತಿ ಮಾಡಿದ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ : **30/04/2026**ರ ಮಧ್ಯಾಹ್ನ 03.30 ಘಂಟೆ ಒಳಗಾಗಿ ಮುಂಗಡ ಠೇವಣಿ ಮೊತ್ತದ ಡಿ.ಡಿ.ಯನ್ನು "ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಬ್ಬಳ್ಳಿ" ಇವರ ಹೆಸರಿಗೆ ಪಡೆದು ಭರ್ತಿ ಮಾಡಿದ ಅರ್ಜಿ ಫಾರ್ಮ್‌ನೊಂದಿಗೆ ಸಲ್ಲಿಸತಕ್ಕದ್ದು. [illegible] ಕೋಷ್ಟಕ–1 ರಲ್ಲಿನ ಕಟ್ಟಡಗಳನ್ನು ಟೆಂಡರ್–ಕಂ–ಬಹಿರಂಗ ಹರಾಜು ದಿನಾಂಕ [illegible] ಘಂಟೆಗೆ [illegible]. (4) ಕೋಷ್ಟಕ–2 ರಲ್ಲಿನ ಕಟ್ಟಡಗಳ (ನಿಯಮ–13 ರಡಿಯಲ್ಲಿ) ಅರ್ಜಿ ಸಲ್ಲಿಸಿದ ಅರ್ಜಿದಾರರ ಜೇಷ್ಠತಾ ಪಟ್ಟಿಯನ್ನು ದಿನಾಂಕ : **07/05/2026**ರಂದು ಸೂಚನಾ ಫಲಕದ ಮೇಲೆ ಪ್ರಕಟಿಸಲಾಗುವುದು. (4) ಸದರ ಮೀಸಲಾತಿ ಪಡೆಯಲು ಇಚ್ಛಿಸುವವರು ಸಂಬಂಧಪಟ್ಟ ಮೀಸಲಾತಿ [illegible] ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸತಕ್ಕದ್ದು. (5) ಯಾವುದೇ ಅಥವಾ ಎಲ್ಲಾ ಟೆಂಡರ್ ಫಾರ್ಮ್ ಹಾಜರಾತಿಯ ಬೇಡಿಕೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ಮಾಹಿತಿ ಹಾಗೂ ಷರತ್ತು–ಹಾ–ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ ಈ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ, ಕೃಉಮಾ.ಸ. ಹುಬ್ಬಳ್ಳಿ ಸಹಿ/– ಆಡಳಿತಾಧಿಕಾರಿಗಳು, ಕೃಉಮಾ.ಸ. ಹುಬ್ಬಳ್ಳಿ

ವಾ.ಸಾ.ಸಂ./ಧಾರವಾಡ/ಕೆಎಸ್‌ಎಂಸಿಎ/1394/2025–26

ಬಿಸಿಲಿಗೆ ಜನ, ಜಾನುವಾರು ತತ್ತರ

▸ ಶಿವಮೂರ್ತಿ ಇಟಗಿ

• **ಯಲಬುರ್ಗಾ:** ಬ್ಯಾಗ್ನಲ್ಲಿ ಕಳೆಯೋದು ತುಂಬಾ ತ್ರಾಸ್ ಬತ್ರಿ. ಸೂರ್ಯನ ಕಿರಣಗಳು ಮೈಯಲ್ಲಾ ಸುಡುತ್ತವೆ. ಇನ್ನೂ ತುಂಬಾ ಸೆಕೆಯೋ ಸೆಕೆ ನಿದ್ದೆನೂ ಬರುತ್ತಿಲ್ಲ, ಮನಸ್ಸಿಗೆ ನೆಮ್ಮದಿಯೂ ಸಿಗುತ್ತಿಲ್ಲ.

ತಾಲೂಕಿನಾದ್ಯಂತ ಬೇಸಿಗೆ ಬಗ್ಗೆ ಜನಸಾಮಾನ್ಯರಿಂದ ಕೇಳಿ ಬರುತ್ತಿರುವ ನಿಟ್ಟುಸಿರಿನ ನುಡಿಗಳಿವು. ಉಷ್ಣಾಂಶ ಕೆ.35 ಡಿಗ್ರಿ ಸೆಲ್ಸಿಯಸ್ ದಾಟಿದ್ದು, ಮುಂದಿನ ದಿನಗಳಲ್ಲಿ 40ತಲುಪುವ ಸಾಧ್ಯತೆ ಇದೆ. ಏರುತ್ತಿರುವ ತಾಪಮಾನದಿಂದ ಜನ ಹಾಗೂ ಜಾನುವಾರುಗಳು ತತ್ತರಿಸುವಂತಾಗಿದೆ.

ಬಿಸಿಲಿನ ತಾಪ ತಾಳದ ಜನತೆ: ಬೆಳಗ್ಗೆಯಿಂದ ಉರಿ ಬಿಸಿಲು ಹೊತ್ತೇರಿದಂತೆ ಬಿಸಿಲಿನ ತಾಪವೂ ಹೆಚ್ಚುತ್ತಾ ಹೋಗುತ್ತಿದೆ. ಬೇಸಿಗೆ ಮುಗಿಯುವ ಹಂತ ಸಮೀಪಿಸುತ್ತಿದ್ದರೂ, ಈಗ ಗಮನಿಸಿದರೆ ಇನ್ನೂ ಬಿಸಿಲು ಈಗ ತಾನೇ ಪ್ರಾರಂಭವಾಗಿದೆಯೋ ಅನ್ನುವಂತೆ ದಿನದಿಂದ ದಿನಕ್ಕೆ ಹೆಚ್ಚು ಕಂಡು ಬರುತ್ತಿದೆ. ಹೀಗಾದರೆ ಮುಂದಿನ ದಿನಗಳನ್ನು ಕಳೆಯುವುದು ಹೇಗೆ ಎಂಬ ಚಿಂತೆ ಸಾರ್ವಜನಿಕರನ್ನು ಕಾಡುತ್ತಿದೆ. ಬಿಸಿಲು ಮಳೆಗೆ ಅಂಜದ ರೈತರೂ ಸಹ ಬಿಸಿಲಿನ ತಾಪದ ಪಾಕಂಡು ದಂಗಾಗಿದ್ದಾರೆ. ಬೆಳಗ್ಗೆ 11ರೊಳಗೆ ಕೃಷಿ ಕಾರ್ಯ ಪೂರೈಸಿ ಮನೆಗೆ ಮರಳುತ್ತಿರುವದೃಶ್ಯ ಸರ್ವೇ ಸಾಮಾನ್ಯವಾಗಿದೆ. ಸುಡುಬಿಸಿಲಿನ ತಾಪಕ್ಕೆ ಊಟವೂ ಸೇರದು, ನಿದ್ದೆಯೂ ಬಾರದು. ಕೇವಲ ನೀರು ಕುಡಿದರೆ ಹೊಟ್ಟೆ ತುಂಬಿದಂತಾಗುತ್ತದೆ. ಹಸಿವೆಯೂ ಆಗುವುದಿಲ್ಲ ಎಂಬ ಅಳಲು ಜನರದ್ದು. ಅಷ್ಟೇ ಯಾಕೆ ಪಟ್ಟಣದಲ್ಲಿ ಪ್ರತಿನಿತ್ಯ ಕನಿಷ್ಠ 20 ತಾಸು ವಿದ್ಯುತ್ ನೀಡಲಾಗುತ್ತಿದೆ. ಆದರೆ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಕೇವಲ 10-12ಗಂಟೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಈ ತಾರತಮ್ಯ ಏಕೆ.? ನಮಗೂ ಪಟ್ಟಣದಷ್ಟೇ ನೀಡುವಷ್ಟು ವಿದ್ಯುತ್ ನೀಡಿ ಎಂಬುದು ಗ್ರಾಮೀಣ ಭಾಗದ ನಾಗರಿಕರ ಒತ್ತಾಯ. ಮಳೆ ಇಲ್ಲ, ಹೆಚ್ಚಿನ ಬಿಸಿಲು: ಪಟ್ಟಣ ಹೊರತುಪಡಿಸಿ ತಾಲೂಕಿನಾದ್ಯಂತ ದಿನದಿಂದ ದಿನಕ್ಕೆ ಬಿಸಿಲಿನ ಪ್ರಖರತೆ ಹೆಚ್ಚುತ್ತಿದ್ದರಿಂದ ಜನತೆ ಬೇಸಿಗೆ ಕಾಲ ಯಾವಾಗ ಹೋದೀತು ಎಂದು ಹಿಡಿಶಾಪ ಹಾಕುತ್ತಿದ್ದಾರೆ.



ದಿಗಂತ ವಿಶೇಷ

ವಿದ್ಯುತ್ ಕಡಿತ ಬಿಸಿ

ವಿಪರೀತ ಸೆಕೆಯಿಂದ ಬಳಲುತ್ತಿರುವಾಗ ವಿದ್ಯುತ್ ಕಡಿತ ಮಾಡುತ್ತಿರುವುದು ಗಾಯದ ಮೇಲೆ ಬರೆ ಎಳೆದಂತಾಗುತ್ತಿದೆ. ವಿದ್ಯುತ್ ಇಲ್ಲದಿರುವುದರಿಂದ ಫ್ಯಾನ್ ಬಳಸಲು ಸಾಧ್ಯವಾಗುತ್ತಿಲ್ಲ, ಹೀಗಾಗಿ ಸೆಕೆ ಜೊತೆ ಸೊಳ್ಳೆ ಕಾಟವೂ ಹೆಚ್ಚುತ್ತಿದೆ.

ಗಗನಕ್ಕೇರಿದ ಎಳೆನೀರು ಬೆಲೆ

ನೆತ್ತಿ ಸುಡುವ ಬಿಸಿಲಿನಿಂದಾಗಿ ಹಣ್ಣು, ತಂಪು ಪಾನೀಯಗಳ ಬೆಲೆ ಗಗನಕ್ಕೇರಿದೆ. ಕಲ್ಲಂಗಡಿ ಹಣ್ಣು 25-30 ದೊರೆಯುತ್ತಿದ್ದರೆ. ಎಳೆನೀರು 30 ರೂ.ಗಳಾಗಿವೆ. ಐಸ್ ಕ್ರೀಂ,ಬ ದಾಮಿ ಹಾಲು, ಜೀರಾ ಕೋಲ್ಡ್‌ಡ್ರಿಂಕ್ಸ್ ದರದಲ್ಲೂ ಹೆಚ್ಚಳವಾಗಿದೆ.

ಬೆಳಗ್ಗೆ 11ರಿಂದ ಸಂಜೆ 5-30ರವರೆಗೆ ರಸ್ತೆಗಳಲ್ಲಿ ಜನಸಂಚಾರ ವಿರಳವಾಗುತ್ತಿದೆ. ಬಿಸಿಲಿನಿಂದ ರಕ್ಷಿಸಿಕೊಳ್ಳಲು ಕೆಲವರು ಕೊಡೆಯ ಮೊರೆ ಹೋಗಿದ್ದಾರೆ. ಈ ಹಿಂದೆ ಜನರ ದಾಹ ನೀಗಿಸಲು ಅಲ್ಲಲ್ಲಿ ಅರವಟ್ಟಿಗೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಿದ್ದವು. ಈ ಸಾರಿ ಅರವಟ್ಟಿಗೆಗಳ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು ಸಮಸ್ಯೆ ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ.

ಮನೆ ಬಿಟ್ಟು ಹೋದ ಸೊಸೆ ಹೃದಯಾಘಾತದಿಂದ ಮಾವ ಸಾವು

• **ಕೊಪ್ಪಳ:** ಸೊಸೆ ಮನೆ ಬಿಟ್ಟು ಹೋಗಿರುವ ಆಘಾತದಿಂದ ಮಾವ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟ ಘಟನೆ ಕೊಪ್ಪಳ ನಗರದಲ್ಲಿ ನಡೆದಿದೆ.

ಕೊಪ್ಪಳ ನಗರದ ಗೌರಿ ಅಂಗಳ ನಿವಾಸಿ ನಾಗರಾಜ್ ಅವರು ಫೆ.8ರಂದು ರಾಯಚೂರು ಜಿಲ್ಲೆಯ ಸಿಂಧನೂರಿನ ಸಂಜನಾ ಅವರೊಂದಿಗೆ ಹಿರಿಯರ ಒಪ್ಪಿಗೆ ಮೇರೆಗೆ ವಿವಾಹವಾಗಿದ್ದರು. ಮಾರ್ಚ್ 21ರಂದು ನಾಗರಾಜ್ ಅವರು ಮೆಡಿಕಲ್ ಶಾಪ್‌ಗೆ ಹೋಗಿದ್ದ ವೇಳೆ, ಸಂಜನಾ ಮನೆ ಬಿಟ್ಟು ನಾಪತ್ತೆಯಾಗಿದ್ದಾರೆ ಎಂದು ತಿಳಿದುಬಂದಿದೆ.

ಪತ್ನಿ ಕಾಣೆಯಾಗಿರುವುದರಿಂದ ಆತಂಕಗೊಂಡ ನಾಗರಾಜ್ ಅವರು, ಸಂಜನಾ ಸಹೋದರ ರವಿ ಜತೆಗೂಡಿ ಕೊಪ್ಪಳ, ರಾಯಚೂರು, ಹೊಸಪೇಟೆ ಹಾಗೂ ಹುಲಗಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಹುಡುಕಾಟ ನಡೆಸಿದರೂ ಯಾವುದೇ ಸುಳಿವು ಸಿಕ್ಕಿಲ್ಲ. ಈ ಘಟನೆಗೆ ಸಂಬಂಧಿಸಿದಂತೆ ಮಾನಸಿಕವಾಗಿ ನೊಂದ ನಾಗರಾಜ್ ಅವರ ತಂದೆ ಖಂಡೆಪ್ಪ ಅವರು ಅದೇ ದಿನ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಪ್ರಕರಣ ದಾಖಲು: ಪತ್ನಿಯನ್ನು ಹುಡುಕಿ ಕೊಡಬೇಕೆಂದು ನಾಗರಾಜ್ ಅವರು ಕೊಪ್ಪಳ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಸಂಜನಾ ತವರು ಮನೆಗೂ ತೆರಳಿಲ್ಲ ಎಂದು ತಿಳಿದು ಬಂದಿದ್ದು, ಆಕೆಯ ಸಹೋದರ ರವಿ ಕೂಡ ಹುಡುಕಾಟ ನಡೆಸುತ್ತಿದ್ದಾರೆ. ದೂರಿನಲ್ಲಿ ಸಂಜನಾ ಕೈಯಲ್ಲಿ 'ರವಿ' ಎಂಬ ಟ್ಯಾಟೂ ಇರುವುದಾಗಿ ನಾಗರಾಜ್ ಉಲ್ಲೇಖಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸಂಜನಾ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಪತಿಯಿಂದಲೇ ಪತ್ನಿಯ ಭೀಕರ ಹತ್ಯೆ

• **ಕಲಬುರಗಿ:** ಜಿಲ್ಲೆಯ ಅಫಜಲಪುರ ತಾಲೂಕಿನ ಬಳ್ಳೂರ್ಗಿ ಗ್ರಾಮದ ಬಳಿ ಪತಿಯಿಂದಲೇ ಪತ್ನಿಯನ್ನ ನಡುರಸ್ತೆಯಲ್ಲಿ ಚಾಕು ಚುಚ್ಚಿ ಭೀಕರವಾಗಿ ಹತ್ಯೆ ಮಾಡಿದ ಘಟನೆ ನಡೆದಿದೆ. ಮೃತ ಮಹಿಳೆಯನ್ನು ಸಾನ್ವಿ (28) ಎಂದು ಗುರುತಿಸಲಾಗಿದ್ದು, ಇವರು ಮಹಾರಾಷ್ಟ್ರಮೂಲದವರಾಗಿದ್ದಾರು.



ಆರೋಪಿಯಾಗಿರುವ ಪತಿ ಲಕ್ಷ್ಮಣ್ ತನ್ನ ಪತ್ನಿಯನ್ನು ಎರ್ಟಿಗಾ ಕಾರಿನಲ್ಲಿ ಕರೆದುಕೊಂಡು ಬಂದು ಬಳ್ಳೂರ್ಗಿ ಗ್ರಾಮದ ಬಳಿ ಬಲವಂತವಾಗಿ ಕಾರಿನಿಂದ ಕೆಳಗಿಳಿಸಿ, ನಡು ರಸ್ತೆಯಲ್ಲೇ ಚಾಕು ಚುಚ್ಚಿ ಕೊಲೆ ಮಾಡಿದ್ದಾನೆ ಎಂದು ತಿಳಿದುಬಂದಿದೆ. ಈ ಹತ್ಯೆಯ ದೃಶ್ಯವನ್ನು ಸ್ಥಳೀಯರೊಬ್ಬರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಘಟನೆ ಸಂಬಂಧ ಅಫಜಲಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಹತ್ಯೆಗೆ ಕಾರಣಗಳ ಬಗ್ಗೆ ಪೊಲೀಸರು ತನಿಖೆ ಮುಂದುವರಿಸಿದ್ದು, ಈ ಘಟನೆ ಕಲಬುರಗಿ ಜಿಲ್ಲೆಯಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಸಾರ್ವಜನಿಕರಲ್ಲಿ ಭಯ ಮತ್ತು ಆಕ್ರೋಶವನ್ನು ಉಂಟುಮಾಡಿದೆ.

> **ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯ ಮೂವರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ. ಬಂಧಿತರು ಮಹಾರಾಷ್ಟ್ರದ ಬಾರಾಮತಿ ಜಿಲ್ಲೆಯವರು ಎಂದು ತಿಳಿದುಬಂದಿದೆ. ಮೃತ ದಂಪತಿಗೆ ನಾಲ್ಕು ವರ್ಷಗಳ ಹಿಂದೆ ಮದುವೆಯಾಗಿತ್ತು. ಪ್ರಾಥಮಿಕ ಮಾಹಿತಿಯ ಪ್ರಕಾರ ಪತಿಯೇ ಪತ್ನಿಯನ್ನು ಕೊಲೆ ಮಾಡಿರುವುದು ಸ್ಪಷ್ಟವಾಗಿದೆ. ಪತಿಯ ಅಕ್ರಮ ಸಂಬಂಧದ ಅನುಮಾನ ಹಿನ್ನೆಲೆ ಈ ಕೃತ್ಯ ನಡೆದಿರುವ ಸಾಧ್ಯತೆ ಕುರಿತು ಕೂಡ ಮಾಹಿತಿ ಕಲೆ ಹಾಕಲಾಗುತ್ತಿದೆ. ಪ್ರಕರಣ ಸಂಬಂಧ ಇನ್ನಷ್ಟು ತನಿಖೆ ಮುಂದುವರಿದಿದೆ.**
>
> ■ ಅಡ್ಡೂರು ಶ್ರೀನಿವಾಸುಲು, ಪೊಲೀಸ್ ವರಿಷ್ಠಾಧಿಕಾರಿ,ಕಲಬುರಗಿ

ಮೃತ ಗೋವುಗಳಿಗೆ ಮುಸ್ಲಿಂನಿಂದ ಮುಕ್ತಿ

• **ಧಾರವಾಡ:** ತಾಲೂಕಿನ ಉಪ್ಪಿನಬೆಟಗೇರಿ ಗ್ರಾಮದಲ್ಲಿ ಮೃತಪಟ್ಟ ನಾಲ್ಕು ಆಕಳುಗಳ ಅಂತ್ಯಸಂಸ್ಕಾರವನ್ನು ಮುಸ್ಲಿಂ ವ್ಯಕ್ತಿ ನೆರವೇರಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಘಟನೆಯ ವಿವರ: ಉಪ್ಪಿನಬೆಟಗೇರಿ ಗ್ರಾಮದ ಹೊರವಲಯದಲ್ಲಿ 4 ಆಕಳು ಮೃತಪಟ್ಟು, ಅವುಗಳ ಕಳೇಬರಹ ಅನಾಥವಾಗಿ ಬಿದ್ದಿದ್ದು, ಅವುಗಳನ್ನು ದುರ್ವಾಸನೆ ಜನರಿಗೆ ತೊಂದರೆ ಉಂಟಾಗಿತ್ತು. ಹಲವು ಗಂಟೆಗಳಲ್ಲಿ ಬಿಸಿಲಿನಲ್ಲಿ ಬಿದ್ದಿದ್ದ ಗೋವುಗಳ ಮೃತದೇಹ ಕಂಡ, ಮುಸ್ಲಿಂ ವ್ಯಕ್ತಿ ಜುಬೇರ್ ಬಸ್ತಿ ಸ್ವಯಂಪ್ರೇರಿತವಾಗಿ ಹೂಳುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಪ್ರಾಣಿಗಳಲ್ಲಿ ದೈವತ್ವ ಕಾಣುವ ಸಂಸ್ಕೃತಿ ನಮ್ಮದು. ಜೀವ ಹೋದ ನಂತರ ಅವು ಕೇವಲ ದೇಹಗಳಲ್ಲ, ಗೌರವಯುತ ಅಂತ್ಯಸಂಸ್ಕಾರ ಹಕ್ಕು ಹೊಂದಿವೆ ಎಂಬ ಸಂದೇಶ ಸಾರಿದ್ದಾರೆ. ಈ ಕಾರ್ಯ ಕಂಡ ಗ್ರಾಮದ ಹಿರಿಯರು ಮತ್ತು ಯುವಕರು ಮುಸ್ಲಿಂ ವ್ಯಕ್ತಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಪುರಸಭೆಗೆ ಲೋಕಾ ಅಧಿಕಾರಿಗಳ ಭೇಟಿ

• **ಬಾದಾಮಿ:** ರಾಜ್ಯ ಲೋಕಾಯುಕ್ತರ ನಿರ್ದೇಶನದಂತೆ ನಗರದ ಪುರಸಭೆ ಕಾರ್ಯಾಲಯಕ್ಕೆ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇ-ಸ್ವತ್ತು, ಎನ್‌ಓಸಿ ಮತ್ತು ಕಟ್ಟಡ ಕಟ್ಟಲು ಅನುಮತಿ ನೀಡುವದರಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರು ಲಂಚ ಕೇಳಿ ಭ್ರಷ್ಟಾಚಾರ ಮಾಡುವದು ಮತ್ತು ಕೆಲಸ ಮಾಡಿಕೊಡುವಲ್ಲಿ ವಿಳಂಬ ಮಾಡಿ ಸಾರ್ವಜನಿಕರಿಗೆ ತೊಂದರೆ ಮಾಡುತ್ತಿದ್ದ ಬಗ್ಗೆ ದೂರುಗಳ ನೀಡಿದ ಹಿನ್ನೆಲೆಯಲ್ಲಿ ಗುರುವಾರ ನಗರದ ಪುರಸಭೆ ಕಾರ್ಯಾಲಯದ ಮೇಲೆ ದಾಳಿ ಮಾಡಿ ಶೋಧನೆ ಕೈಗೊಂಡರು. ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಬಿ.ಸಂಕದಾಳ ಮಾರ್ಗದರ್ಶನದಲ್ಲಿ ಬಾಗಲಕೋಟೆ ಲೋಕಾಯುಕ್ತ ಪೊಲೀಸ್ ಠಾಣೆಯ ಸುರೇಶ ರೆಡ್ಡಿ, ಎಮ್.ಎಸ್. ಡಿಎಸ್‌ಪಿ, ಬಿ ಎ ಬಿರಾದಾರ, ಪೊಲೀಸ್ ಇನ್ಸ್‌ಪೆಕ್ಟರ್-1, ಎಮ್ ಬಿ ಬಿರಾದಾರ, ಪೊಲೀಸ್ ಇನ್ಸ್‌ಪೆಕ್ಟರ್-2, ಎಸ್ ಆರ್ ಹಿರೇಮಠ, ಪಿಐ-3 ಹಾಗೂ ಸಿಬ್ಬಂದಿಯವರು ಕೂಡಿ ನಗರದ ಪುರಸಭೆ ಕಾರ್ಯಾಲಯದ ಮೇಲೆ ದಾಳಿ ಮಾಡಿ ಶೋಧನೆ ಕೈಗೊಂಡು ದಾಖಲಾತಿಗಳನ್ನು ಪರಿಶೀಲನೆ ಮಾಡಿದರು.

ಶ್ರೀಮಂತ ಲೀಗ್ ಸಂಪೂರ್ಣ ವೇಳಾಪಟ್ಟಿ | 12 ಮೈದಾನದಲ್ಲಿ ಮಿಂಚಲು ಆಟಗಾರರು ಸಜ್ಜು

ಇನ್ಮುಂದೆ ಐಪಿಎಲ್ ಹವಾ



• **ಮುಂಬೈ:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಶುರುವಿಗೆ ಕೇವಲ ಒಂದು ದಿನ ಮಾತ್ರ ಬಾಕಿ ಇರುವಾಗಲೇ ಎರಡನೇ ಹಂತದ ವೇಳಾಪಟ್ಟಿ ಗುರುವಾರದಂದು ಪ್ರಕಟಗೊಂಡಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದ ರಾಬಾದ್ ನಡುವಿನ ಪಂದ್ಯದೊಂದಿಗೆ ಮಹಾಕೂಟ ಶುರುವಾಗಲಿದೆ. ಪಂಚರಾಜ್ಯ ಚುನಾವಣೆ ಬೆನ್ನಲ್ಲೇ ಈ ಹಿಂದೆ ಕೇವಲ 20 ಪಂದ್ಯಗಳ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ಚುನಾವಣೆ ದಿನಾಂಕ ಘೋಷಿಸಲಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಪಂದ್ಯಾವಳಿಯ ಎರಡನೇ ಭಾಗದ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ಹಳೆಯ ವೇಳಾಪಟ್ಟಿಯಲ್ಲಿ 20 ಪಂದ್ಯಗಳಿದ್ದವು. ಈಗಿನ ವೇಳಾಪಟ್ಟಿಯಲ್ಲಿ 50 ಪಂದ್ಯಗಳಿವೆ. ಅಂದರೆ ಒಟ್ಟು ಕೂಟದ ಪಂದ್ಯಗಳು ಇದರಲ್ಲಿ ಸೇರಿಸಲಾಗಿದೆ. 4 ನಾಕೌಟ್ ಪಂದ್ಯಗಳ ವೇಳಾಪಟ್ಟಿ ಮುಂದಿನ ದಿನಗಳಲ್ಲಿ ಬಿಡಲಾಗುವುದು ಎಂದು ಬಿಸಿಸಿಐ ತಿಳಿಸಿದೆ.

74 ಪಂದ್ಯಗಳು: ಲೀಗ್ ಹಂತದಲ್ಲಿ ಎಲ್ಲಾ 10 ತಂಡಗಳು ತಲಾ 14 ಪಂದ್ಯಗಳನ್ನಾಡಲಿವೆ. 7 ತವರು, 7 ತವರಲ್ಲದ ಪಂದ್ಯಗಳನ್ನಾಡುತ್ತವೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 5 ಪಂದ್ಯಗಳನ್ನು ಮಾತ್ರ ತವರಲ್ಲಿ ಆಡಲಿದೆ. ಮುಂದಿನ 2 ಪಂದ್ಯಗಳನ್ನು ರಾಯ್ಪುರದಲ್ಲಿ ಆಡುವುದಾಗಿ ಘೋಷಣೆ ಮಾಡಿದೆ. ಕಳೆದ ವರ್ಷ ಬಿಸಿಸಿಐ 19ನೇ ಆವೃತ್ತಿಯಲ್ಲಿ 84 ಪಂದ್ಯಗಳನ್ನು ಆಡಿಸಬಹುದು ಎಂದು ಹೇಳಲಾಗಿತ್ತು. ಆದರೆ ಈ ಬಾರಿ 70 ಲೀಗ್, 4 ನಾಕೌಟ್ ಪಂದ್ಯಗಳನ್ನು ಆಡಿಸುವುದಾಗಿ ತಿಳಿಸಲಾಗಿದೆ.

ಏಪ್ರಿಲ್ 13ಕ್ಕೆ ಶುರು: ಎರಡನೇ ಹಂತದ ವೇಳಾಪಟ್ಟಿ ಪ್ರಕಾರ ಪಂದ್ಯಗಳು ಏಪ್ರಿಲ್ 13ಕ್ಕೆ ಶುರುವಾಗಲಿವೆ. ಮೊದಲ ಹಂತದ ವೇಳಾಪಟ್ಟಿ ಪ್ರಕಾರ ಏಪ್ರಿಲ್ 12ಕ್ಕೆ ಕೊನೆಯ ಪಂದ್ಯ ನಡೆಯಬೇಕಿತ್ತು. ಎರಡನೇ ಹಂತದ ಪಂದ್ಯಗಳು ಏಪ್ರಿಲ್ 13ಕ್ಕೆ ಶುರುವಾಗಲಿವೆ. ಹೈದರಾಬಾದ್ ಹಾಗೂ ರಾಜಸ್ಥಾನ ತಂಡಗಳು 21ನೇ ಪಂದ್ಯದಲ್ಲಿ ಆಡಲಿವೆ. ಮೇ 24ರಂದು ಫೈನಲ್ ಪಂದ್ಯ ನಡೆಯಲಿದೆ.

12 ಕ್ರೀಡಾಂಗಣದಲ್ಲಿ ಪಂದ್ಯ: ಈ ಬಾರಿಯ ಐಪಿಎಲ್ ಪಂದ್ಯಗಳು 12 ಕ್ರೀಡಾಂಗಣಗಳಲ್ಲಿ ನಡೆಯಲಿವೆ. ರಾಯ್ಪುರ, ಧರ್ಮಶಾಲಾ, ಜೈಪುರದಲ್ಲೂ ಪಂದ್ಯಗಳು ನಡೆಯುತ್ತಿರುವುದು ವಿಶೇಷ.

- ಈ ಬಾರಿ ನಡೆಯಲ್ಲ ಐಪಿಎಲ್ ಉದ್ಘಾಟನಾ ಸಮಾರಂಭ
- ಕಾಲ್ತುಳಿತದಲ್ಲಿ ಮೃತಪಟ್ಟವರ ಸ್ಮರಣಾರ್ಥ ರದ್ದು

ಐಪಿಎಲ್ ಸಂಪೂರ್ಣ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಮಾ.28	ಆರ್‌ಸಿಬಿ V/S ಹೈದರಾಬಾದ್	ಬೆಂಗಳೂರು	ಸಂಜೆ 7:30
ಮಾ. 29	ಮುಂಬೈ V/S ಕೋಲ್ಕತ್ತಾ	ಮುಂಬೈ	ಸಂಜೆ 7:30
ಮಾ. 30	ರಾಜಸ್ಥಾನ V/S ಚೆನ್ನೈ	ಗುವಾಹಟಿ	ಸಂಜೆ 7:30
ಮಾ. 31	ಪಂಜಾಬ್ V/S ಗುಜರಾತ್	ಚಂಡೀಗಢ	ಸಂಜೆ 7:30
ಏ. 1	ಲಖನೌ V/S ಡೆಲ್ಲಿ	ಲಖನೌ	ಸಂಜೆ 7:30
ಏ. 2	ಕೋಲ್ಕತ್ತಾ V/S ಹೈದರಾಬಾದ್	ಕೋಲ್ಕತ್ತಾ	ಸಂಜೆ 7:30
ಏ. 3	ಚೆನ್ನೈ V/S ಪಂಜಾಬ್	ಚೆನ್ನೈ	ಸಂಜೆ 7:30
ಏ. 4	ಡೆಲ್ಲಿ V/S ಮುಂಬೈ	ಡೆಲ್ಲಿ	ಮಧ್ಯಾಹ್ನ 3:30
ಏ. 4	ಗುಜರಾತ್ V/S ರಾಜಸ್ಥಾನ	ಅಹಮದಾಬಾದ್	ಸಂಜೆ 7:30
ಏ. 5	ಹೈದರಾಬಾದ್ V/S ಲಖನೌ	ಹೈದರಾಬಾದ್	ಮಧ್ಯಾಹ್ನ 3:30
ಏ. 5	ಆರ್‌ಸಿಬಿ V/S ಚೆನ್ನೈ	ಬೆಂಗಳೂರು	ಸಂಜೆ 7:30
ಏ. 6	ಕೋಲ್ಕತ್ತಾ V/S ಪಂಜಾಬ್	ಕೋಲ್ಕತ್ತಾ	ಸಂಜೆ 7:30
ಏ. 7	ರಾಜಸ್ಥಾನ V/S ಮುಂಬೈ	ಗುವಾಹಟಿ	ಸಂಜೆ 7:30
ಏ. 8	ಡೆಲ್ಲಿ V/S ಗುಜರಾತ್	ಡೆಲ್ಲಿ	ಸಂಜೆ 7:30
ಏ. 9	ಕೋಲ್ಕತ್ತಾ V/S ಲಖನೌ	ಕೋಲ್ಕತ್ತಾ	ಸಂಜೆ 7:30
ಏ. 10	ರಾಜಸ್ಥಾನ V/S ಆರ್‌ಸಿಬಿ	ಗುವಾಹಟಿ	ಸಂಜೆ 7:30
ಏ. 11	ಪಂಜಾಬ್ V/S ಹೈದರಾಬಾದ್	ಚಂಡೀಗಢ	ಮಧ್ಯಾಹ್ನ 3:30
ಏ. 11	ಚೆನ್ನೈ V/S ಡೆಲ್ಲಿ	ಚೆನ್ನೈ	ಸಂಜೆ 7:30
ಏ. 12	ಲಖನೌ V/S ಗುಜರಾತ್	ಲಖನೌ	ಮಧ್ಯಾಹ್ನ 3:30
ಏ. 12	ಮುಂಬೈ V/S ಆರ್‌ಸಿಬಿ	ಮುಂಬೈ	ಸಂಜೆ 7:30
ಏ. 13	ಹೈದರಾಬಾದ್ V/S ರಾಜಸ್ಥಾನ	ಹೈದರಾಬಾದ್	ಸಂಜೆ 7:30
ಏ. 14	ಚೆನ್ನೈ V/S ಕೋಲ್ಕತ್ತಾ	ಚೆನ್ನೈ	ಸಂಜೆ 7:30
ಏ. 15	ಆರ್‌ಸಿಬಿ V/S ಲಖನೌ	ಬೆಂಗಳೂರು	ಸಂಜೆ 7:30
ಏ. 16	ಮುಂಬೈ V/S ಪಂಜಾಬ್	ಮುಂಬೈ	ಸಂಜೆ 7:30
ಏ. 17	ಗುಜರಾತ್ V/S ಕೋಲ್ಕತ್ತಾ	ಅಹಮದಾಬಾದ್	ಸಂಜೆ 7:30
ಏ. 18	ಆರ್‌ಸಿಬಿ V/S ಡೆಲ್ಲಿ	ಬೆಂಗಳೂರು	ಮಧ್ಯಾಹ್ನ 3:30
ಏ. 18	ಹೈದರಾಬಾದ್ V/S ಚೆನ್ನೈ	ಹೈದರಾಬಾದ್	ಸಂಜೆ 7:30
ಏ. 19	ಕೋಲ್ಕತ್ತಾ V/S ರಾಜಸ್ಥಾನ	ಕೋಲ್ಕತ್ತಾ	ಮಧ್ಯಾಹ್ನ 3:30
ಏ. 19	ಪಂಜಾಬ್ V/S ಲಖನೌ	ನ್ಯೂ ಚಂಡೀಗಢ	ಸಂಜೆ 7:30
ಏ. 20	ಗುಜರಾತ್ V/S ಮುಂಬೈ	ಅಹಮದಾಬಾದ್	ಸಂಜೆ 7:30
ಏ. 21	ಹೈದರಾಬಾದ್ V/S ಡೆಲ್ಲಿ	ಹೈದರಾಬಾದ್	ಸಂಜೆ 7:30
ಏ. 22	ಲಖನೌ V/S ರಾಜಸ್ಥಾನ	ಲಖನೌ	ಸಂಜೆ 7:30
ಏ. 23	ಮುಂಬೈ V/S ಚೆನ್ನೈ	ಮುಂಬೈ	ಸಂಜೆ 7:300
ಏ. 24	ಆರ್‌ಸಿಬಿ V/S ಗುಜರಾತ್	ಬೆಂಗಳೂರು	ಸಂಜೆ 7:30
ಏ. 25	ಡೆಲ್ಲಿ V/S ಪಂಜಾಬ್	ಡೆಲ್ಲಿ	ಮಧ್ಯಾಹ್ನ 3:30
ಏ. 25	ರಾಜಸ್ಥಾನ V/S ಹೈದರಾಬಾದ್	ಜೈಪುರ	ಸಂಜೆ 7:30
ಏ. 26	ಗುಜರಾತ್ V/S ಚೆನ್ನೈ	ಅಹಮದಾಬಾದ್	ಮಧ್ಯಾಹ್ನ 3:30
ಏ. 26	ಲಖನೌ V/S ಕೋಲ್ಕತ್ತಾ	ಲಖನೌ ಸಂಜೆ	7:30
ಏ. 27	ಡೆಲ್ಲಿ V/S ಆರ್‌ಸಿಬಿ	ಡೆಲ್ಲಿ	ಸಂಜೆ 7:30
ಏ. 28	ಪಂಜಾಬ್ V/S ರಾಜಸ್ಥಾನ	ಚಂಡೀಗಢ	ಸಂಜೆ 7:30
ಏ. 29	ಮುಂಬೈ V/S ಹೈದರಾಬಾದ್	ಮುಂಬೈ	ಸಂಜೆ 7:30
ಏ. 30	ಗುಜರಾತ್ V/S ಆರ್‌ಸಿಬಿ	ಅಹಮದಾಬಾದ್	ಸಂಜೆ 7:30
ಮೇ 1	ರಾಜಸ್ಥಾನ V/S ಡೆಲ್ಲಿ	ಜೈಪುರ	ಸಂಜೆ 7:30
ಮೇ 2	ಚೆನ್ನೈ V/S ಮುಂಬೈ	ಚೆನ್ನೈ	ಸಂಜೆ 7:30
ಮೇ 3	ಹೈದರಾಬಾದ್ V/S ಕೋಲ್ಕತ್ತಾ	ಹೈದರಾಬಾದ್	ಮಧ್ಯಾಹ್ನ 3:30
ಮೇ 3	ಗುಜರಾತ್ V/S ಪಂಜಾಬ್	ಅಹಮದಾಬಾದ್	ಸಂಜೆ 7:30
ಮೇ 4	ಮುಂಬೈ V/S ಲಖನೌ	ಮುಂಬೈ	ಸಂಜೆ 7:30
ಮೇ 5	ಡೆಲ್ಲಿ V/S ಚೆನ್ನೈ	ಡೆಲ್ಲಿ	ಸಂಜೆ 7:30
ಮೇ 6	ಹೈದರಾಬಾದ್ V/S ಪಂಜಾಬ್	ಹೈದರಾಬಾದ್	ಸಂಜೆ 7:30
ಮೇ 7	ಲಖನೌ V/S ಆರ್‌ಸಿಬಿ	ಲಖನೌ	ಸಂಜೆ 7:30
ಮೇ 8	ಡೆಲ್ಲಿ V/S ಕೋಲ್ಕತ್ತಾ	ಡೆಲ್ಲಿ	ಸಂಜೆ 7:30
ಮೇ 9	ರಾಜಸ್ಥಾನ V/S ಗುಜರಾತ್	ಜೈಪುರ	ಸಂಜೆ 7:30
ಮೇ 10	ಚೆನ್ನೈ V/S ಲಖನೌ	ಚೆನ್ನೈ	ಮಧ್ಯಾಹ್ನ 3:30
ಮೇ 10	ಆರ್‌ಸಿಬಿ V/S ಮುಂಬೈ	ರಾಯ್ಪುರ	ಸಂಜೆ 7:30
ಮೇ 11	ಪಂಜಾಬ್ V/S ಡೆಲ್ಲಿ	ಧರ್ಮಶಾಲಾ	ಸಂಜೆ 7:30
ಮೇ 12	ಗುಜರಾತ್ V/S ಹೈದರಾಬಾದ್	ಅಹಮದಾಬಾದ್	ಸಂಜೆ 7:30
ಮೇ 13	ಆರ್‌ಸಿಬಿ V/S ಕೋಲ್ಕತ್ತಾ	ರಾಯ್ಪುರ	ಸಂಜೆ 7:30
ಮೇ 14	ಪಂಜಾಬ್ V/S ಮುಂಬೈ	ಧರ್ಮಶಾಲಾ	ಸಂಜೆ 7:30
ಮೇ 15	ಲಖನೌ V/S ಚೆನ್ನೈ	ಲಖನೌ	ಸಂಜೆ 7:30
ಮೇ 16	ಕೋಲ್ಕತ್ತಾ V/S ಗುಜರಾತ್	ಕೋಲ್ಕತ್ತಾ	ಸಂಜೆ 7:30
ಮೇ 17	ಪಂಜಾಬ್ V/S ಆರ್‌ಸಿಬಿ	ಧರ್ಮಶಾಲಾ	ಮಧ್ಯಾಹ್ನ 3:30
ಮೇ 17	ಡೆಲ್ಲಿ V/S ರಾಜಸ್ಥಾನ	ಡೆಲ್ಲಿ	ಸಂಜೆ 7:30
ಮೇ 18	ಚೆನ್ನೈ V/S ಹೈದರಾಬಾದ್	ಚೆನ್ನೈ	ಸಂಜೆ 7:30
ಮೇ 19	ರಾಜಸ್ಥಾನ V/S ಲಖನೌ	ಜೈಪುರ	ಸಂಜೆ 7:30
ಮೇ 20	ಕೋಲ್ಕತ್ತಾ V/S ಮುಂಬೈ	ಕೋಲ್ಕತ್ತಾ	ಸಂಜೆ 7:30
ಮೇ 21	ಚೆನ್ನೈ V/S ಗುಜರಾತ್	ಚೆನ್ನೈ	ಸಂಜೆ 7:30
ಮೇ 22	ಹೈದರಾಬಾದ್ V/S ಆರ್‌ಸಿಬಿ	ಹೈದರಾಬಾದ್	ಸಂಜೆ 7:30
ಮೇ 23	ಲಖನೌ V/S ಪಂಜಾಬ್	ಲಖನೌ	ಸಂಜೆ 7:30
ಮೇ 24	ಮುಂಬೈ V/S ರಾಜಸ್ಥಾನ	ಮುಂಬೈ	ಮಧ್ಯಾಹ್ನ 3:30
ಮೇ 24	ಕೋಲ್ಕತ್ತಾ V/S ಡೆಲ್ಲಿ	ಕೋಲ್ಕತ್ತಾ	ಸಂಜೆ 7:30

ಆರ್‌ಸಿಬಿ ಹೆಸರು ಬದಲಿಲ್ಲ



• **ಬೆಂಗಳೂರು:** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಟೈಮ್ಸ್ ಆಫ್ ಇಂಡಿಯಾ ಅಂತಹ ಕಂಪೆನಿಗಳಿರುವ ಬಿರ್ಲಾ ಒಕ್ಕೂಟ ಖರೀದಿ ಮಾಡಿದೆ. 16,700 ಕೋಟಿ ರೂ.ಗೆ ತಂಡವನ್ನು ಖರೀದಿಸಿರುವ ಬಿರ್ಲಾ ಹೆಚ್ಚಿನ ಬದಲಾವಣೆಗಳನ್ನು ಮಾಡದೆ ಮುನ್ನಡೆಸುವ ತೀರ್ಮಾನಕ್ಕೆ ಬಂದಂತಿದೆ.

ಆರ್‌ಸಿಬಿ ತಂಡವನ್ನು ಮಾರಾಟಕ್ಕಿಟ್ಟ ನಂತರ ಹಳೆಯ ರಾಯಲ್ ಚಾಲೆಂಜರ್ಸ್ ಹೆಸರು ಬದಲಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿತ್ತು. ಆದರೆ ಬಿರ್ಲಾ ಕಂಪೆನಿಯ ಮಾಲೀಕರಲ್ಲಿ ಒಬ್ಬರಾದ ಅನನ್ಯ ಬಿರ್ಲಾ ತಂಡದ ಹೆಸರಲ್ಲಿ ಯಾವುದೇ ಬದಲಾವಣೆ ಮಾಡಲಾಗಲ್ಲ ಎಂದು ಸುಳಿವು ನೀಡಿದ್ದಾರೆ. ತಂಡ ಖರೀದಿಸಿರುವ ಬಗ್ಗೆ ತಮಗೆ ಬಂದ ಅಭಿನಂದನೆಗಳಿಗೆ ಧನ್ಯವಾದ ತಿಳಿಸುತ್ತಾ ಅವರು, ಆರ್‌ಸಿಬಿ ಹೆಸರು ಬದಲಾಗಲ್ಲ ಎಂಬ ಪೋಸ್ಟ್ ಅನ್ನು ಸಾಮಾಜಿಕ ಜಾಲತಾಣದ ಸ್ಟೋರಿಯಲ್ಲಿ ಹಾಕಿಕೊಂಡಿದ್ದಾರೆ.

ಭದ್ರತೆಗಾಗಿ 2 ಸಾವಿರ ಪೊಲೀಸರ ನಿಯೋಜನೆ



• **ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯಕ್ಕಾಗಿ 2 ಸಾವಿರ ಪೊಲೀಸರ ನಿಯೋಜನೆ ಮಾಡಲಾಗಿದೆ. ಶನಿವಾರದ ಪಂದ್ಯಕ್ಕೂ ಮುನ್ನ ಪೊಲೀಸ್ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು ಸಿವಿಲ್ ಡಿಫೆನ್ಸ್, ಎಸ್‌ಎಸ್‌ಬಿ ಮತ್ತು ಜಿಬಿಎ ಅಧಿಕಾರಿಗಳೊಂದಿಗೆ ಜಂಟಿಯಾಗಿ ಯಶಸ್ವಿ ಮಾಕ್ ಡ್ರಿಲ್ ನಡೆಸಲಾಗಿದೆ. ಈ ಹಿಂದೆ ಮಾ.23 ರಂದು ಕೂಡ ಒಮ್ಮೆ ತಾಲೀಮು ನಡೆಸಲಾಗಿತ್ತು.

ಮೈದಾನದ ಗೇಟ್ ಮತ್ತು ಪಾರ್ಕಿಂಗ್ ವ್ಯವಸ್ಥೆಯನ್ನು ಬದಲಾಯಿಸಲಾಗಿದೆ. ಭದ್ರತೆ ದೃಷ್ಟಿಯಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ತಿಳಿಸಿದರು. ತೆಗೆದುಕೊಂಡ ಕ್ರಮಗಳ ಬಗ್ಗೆ ಮಾತನಾಡುತ್ತಾ ಅವರು, ಭದ್ರತೆಗಾಗಿ 6 ಮಂದಿ ಡಿಸಿಪಿಗಳು, 15 ಕ್ಕೂ ಹೆಚ್ಚು ಎಸಿಪಿಗಳು, ಪಿಐ, ಎಚ್‌ಸಿ, ಪಿಸಿ ಮತ್ತು ಹೋಮ್ ಗಾರ್ಡ್ಸ್ ಸೇರಿದಂತೆ 2 ಸಾವಿರ ಜನ ಪೊಲೀಸರನ್ನು ನಿಯೋಜಿಸಲಾಗಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಟಿಕೆಟ್ ಇಲ್ಲದವರಿಗೆ ಪ್ರವೇಶ ನಿಷೇಧ: ಕ್ರೀಡಾಂಗಣದ ಸುತ್ತಮುತ್ತ ಜನದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಟಿಕೆಟ್ ಇಲ್ಲದವರು ಕ್ರೀಡಾಂಗಣದ ಹತ್ತಿರ ಬರದಂತೆ ಮನವಿ ಮಾಡಲಾಗಿದ್ದು, ಅಂತಹವರನ್ನು ನಿಯಂತ್ರಿಸಲು 7 ವಿಶೇಷ ತಂಡಗಳನ್ನು ರಚಿಸಲಾಗಿದೆ. ಪ್ರತಿ ತಂಡದಲ್ಲಿ 20 ಸಿಬ್ಬಂದಿ ಇರಲಿದ್ದು, ಟಿಕೆಟ್ ಇಲ್ಲದೆ ಅನಗತ್ಯವಾಗಿ ಓಡಾಡುವವರನ್ನು ನಿರ್ಬಂಧಿಸಲಾಗುತ್ತದೆ. ಮುಖ್ಯವಾಗಿ ಕಬ್ಬನ್ ರೋಡ್, ಕ್ವೀನ್ಸ್ ರೋಡ್, ಲಿಂಕ್ ರೋಡ್ ಹಾಗೂ ಎಂ.ಜಿ. ರಸ್ತೆಗಳಲ್ಲಿ ಟಿಕೆಟ್ ಇದ್ದವರಿಗೆ ಮಾತ್ರ ಪ್ರವೇಶ ನೀಡಲಾಗುತ್ತದೆ. ಸಾರ್ವಜನಿಕರು ಸಂಚಾರ ದಟ್ಟಣೆ ತಪ್ಪಿಸಲು ಮೆಟ್ರೋ ಮತ್ತು ಬಿಎಂಟಿಸಿ ಬಸ್‌ಗಳನ್ನು ಬಳಸುವಂತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕರಿಸುವಂತೆ ಆಯುಕ್ತರು ವಿನಂತಿಸಿದ್ದಾರೆ.

ಐಪಿಎಲ್ ಪಂದ್ಯಕ್ಕೆ ಭದ್ರತೆ ನೀಡಲು ಪೊಲೀಸ್ ಪಡೆ ಸನ್ನದ್ಧ

ಮೈದಾನದಲ್ಲೂ ಹಲವಾರು ಬದಲಾವಣೆ: ಕ್ರೀಡಾಂಗಣದಲ್ಲಿ ಹಲವಾರು ಬದಲಾವಣೆಗಳನ್ನು ತರಲಾಗಿದೆ. ಮೊದಲ ಬಾರಿ ನಗಿಂತಲೂ ವಿಭಿನ್ನವಾದ ಪ್ರವೇಶದ್ವಾರಗಳನ್ನು ಸ್ಥಾಪಿಸಲಾಗಿದೆ. ಪ್ರವೇಶದ ರೀತಿಗಳು ಬದಲಾಗಿವೆ. ಈ ಮೊದಲು ಅಭ್ಯಾಸ ನಡೆಸಲಾಗುತ್ತಿದ್ದ 13ನೇ ಗೇಟ್ ಹತ್ತಿರದ ಹೊರವಲಯವನ್ನು ಈಗ ಒಳಗೇಟ್ ಆಗಿ ಕಾರ್ಯ ನಿರ್ವಹಿಸಲಿದೆ. ಮೈದಾನದ ಹೊರಗೆಲ್ಲಾ ಕ್ರೀಡಾಂಗಣದ ಬ್ಲ್ಯೂ ಪ್ರಿಂಟ್ ಬಗ್ಗೆ ಅಚ್ಚುಕಟ್ಟಾದ ಮಾಹಿತಿ ನೀಡಲಾಗಿದೆ.

ಬೆಂಗಳೂರಲ್ಲಿ 2 ಅಂತಾರಾಷ್ಟ್ರೀಯ ಪಂದ್ಯ

• **ಮುಂಬೈ:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮರಳಿದ ಖುಷಿಯಲ್ಲಿರುವ ಕರ್ನಾಟಕದ ಸಮಸ್ತ ಕ್ರಿಕೆಟ್ ಅಭಿಮಾನಿಗಳಿಗೆ ಖುಷಿ ಪಡುವುದಕ್ಕೆ ಮತ್ತೊಂದು ಕಾರಣ ಸಿಕ್ಕಿದೆ. ಸರ್ಕಾರದಿಂದ ನಿರ್ಬಂಧ ಎದುರಿಸಿದ್ದ ಚಿನ್ನಸ್ವಾಮಿ ಕ್ರೀಡಾಂಗಣ ಐಪಿಎಲ್ ಜೊತೆಗೆ ಅಂತಾರಾಷ್ಟ್ರೀಯ ಪಂದ್ಯಗಳನ್ನೂ ಆಯೋಜಿಸಲು ಅನುಮತಿ ಪಡೆದಿದ್ದು, 2026–27ರ ಭಾರತ ಸೀನಿಯರ್ ತಂಡದ ಕ್ಯಾಲೆಂಡರ್‌ನಲ್ಲಿ ಒಂದು ಏಕದಿನ ಮತ್ತು ಒಂದು ಟಿ20 ಪಂದ್ಯ ಆಯೋಜಿಸುವ ಅವಕಾಶ ಪಡೆದಿದೆ.

ಮುಂಬರಲಿರುವ ವರ್ಷದಲ್ಲಿ ಭಾರತ ಆಡಲಿರುವ ತವರು ದ್ವಿಪಕ್ಷೀಯ ಸರಣಿಯ ವೇಳಾಪಟ್ಟಿಯನ್ನು ಬಿಸಿಸಿಐ ಗುರುವಾರದಂದು ಪ್ರಕಟಿಸಿದೆ. ವಿಂಡೀಸ್ ಅಂತಹ ತಂಡಗಳು ಪಂದ್ಯಗಳನ್ನಾಡುವುದಕ್ಕೆ ಭಾರತಕ್ಕೆ ಪ್ರಯಾಣಿಸಲಿವೆ. ಟೆಸ್ಟ್, ಏಕದಿನ ಹಾಗೂ ಟಿ20 ಮಾದರಿಯಲ್ಲಿ ಒಟ್ಟು 22 ಪಂದ್ಯಗಳನ್ನು ಆಡಲಿದೆ. 17 ನಗರಗಳು ಅಂತಾರಾಷ್ಟ್ರೀಯ ಪಂದ್ಯಗಳಿಗೆ ಆತಿಥ್ಯ ನೀಡಲಿವೆ. 2 ವರ್ಷಕ್ಕೊಮ್ಮೆ ನಡೆಯುವ ಬಾರ್ಡರ್ ಗವಾಸ್ಕರ್ ಟ್ರೋಫಿ ಸರಣಿಗೆ ವೇಳಾಪಟ್ಟಿ ಬಿಡುಗಡೆಯಾಗಿದೆ.

4 ತಂಡಗಳ ಪ್ರವಾಸ: ಸೆಪ್ಟೆಂಬರ್‌ನಲ್ಲಿ ವಿಂಡೀಸ್ ಪ್ರವಾಸದೊಂದಿಗೆ ತವರು ಸರಣಿಗಳು ಶುರುವಾಗಲಿವೆ. ಏಕದಿನ ಹಾಗೂ ಟಿ20 ಮಾದರಿಯ ದೊಡ್ಡ ಸರಣಿ ಆಡುವುದಕ್ಕೆ ವೆಸ್ಟ್ ಇಂಡೀಸ್ ಬರಲಿದೆ. ಸರಣಿಯಲ್ಲಿ 3 ಏಕದಿನ ಪಂದ್ಯಗಳು ನಡೆಯಲಿವೆ. 5 ಟಿ20 ಪಂದ್ಯಗಳೂ ನಡೆಯಲಿವೆ. ಡಿಸೆಂಬರ್‌ನಲ್ಲಿ ಶ್ರೀಲಂಕಾದೊಂದಿಗೆ ಭಾರತ ತವರು ಸರಣಿ ಆಡಲಿದ್ದು, 3 ಏಕದಿನ ಹಾಗೂ 3 ಟಿ20 ಇರಲಿವೆ. ಜಿಂಬಾಬ್ವೆ ವಿರುದ್ಧ 3 ಪಂದ್ಯಗಳ ಏಕದಿನ ಸರಣಿ ನಡೆಯಲಿದೆ.

ಬೆಂಗಳೂರಲ್ಲಿ 2 ಪಂದ್ಯ: ಕಾಲ್ತುಳಿತ ನಂತರ ಸರ್ಕಾರದ ನಿರ್ಬಂಧನೆಯ ನಂತರ ಬೆಂಗಳೂರು ಮಹಿಳೆಯರ ಏಕದಿನ ವಿಶ್ವಕಪ್ ಸೇರಿದಂತೆ ಪ್ರಮುಖ ಪಂದ್ಯಗಳನ್ನು ಕಳೆದುಕೊಂಡಿತ್ತು. ಬದಲಿಯಾಗಿ ಭಾರತ ಈ ಬಾರಿ ಎರಡು ಪಂದ್ಯಗಳನ್ನು ಬೆಂಗಳೂರಿನಲ್ಲಿ ಆಡಲಿದೆ ಎಂದು ಬಿಸಿಸಿಐ ಘೋಷಿಸಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಂಡೀಸ್ ವಿರುದ್ಧದ ಕೊನೆಯ ಟಿ20 ಪಂದ್ಯಕ್ಕೆ ಬೆಂಗಳೂರು ಆತಿಥ್ಯ ನೀಡಲಿದೆ. ಡಿಸೆಂಬರ್‌ನಲ್ಲಿ ಶ್ರೀಲಂಕಾ ಸರಣಿಯಲ್ಲಿ ಬೆಂಗಳೂರು ಏಕದಿನ ಪಂದ್ಯಕ್ಕೆ ಆತಿಥ್ಯ ನೀಡಲಿದೆ.

ವೇಳಾಪಟ್ಟಿ

ದಿನಾಂಕ	ಮಾದರಿ	ಸ್ಥಳ
ವೆಸ್ಟ್ ಇಂಡೀಸ್		
ಸೆ.27	ಏಕದಿನ	ತ್ರಿವೇಂದ್ರಮ್
ಸೆ.30	ಏಕದಿನ	ಗುವಾಹಟಿ
ಅ.3	ಏಕದಿನ	ಚಂಡೀಗಢ
ಅ.6	ಟಿ20	ಲಖನೌ
ಅ.9	ಟಿ20	ರಾಂಚಿ
ಅ.11	ಟಿ20	ಇಂದೋರ್
ಅ.14	ಟಿ20	ಹೈದರಾಬಾದ್
ಅ.17	ಟಿ20	ಬೆಂಗಳೂರು
ಶ್ರೀಲಂಕಾ ಸರಣಿ		
ಡಿ.13	ಏಕದಿನ	ದಿಲ್ಲಿ
ಡಿ.16	ಏಕದಿನ	ಬೆಂಗಳೂರು
ಡಿ.19	ಏಕದಿನ	ಅಹಮದಾಬಾದ್
ಡಿ.22	ಟಿ20	ರಾಜ್‌ಕೋಟ್
ಡಿ.24	ಟಿ20	ಕಟಕ್
ಡಿ.27	ಟಿ20	ಪುಣೆ
ಜಿಂಬಾಬ್ವೆ (ಏಕದಿನ)(2027)		
ಜ.3	ಏಕದಿನ	ಕೋಲ್ಕತ್ತಾ
ಜ.6	ಏಕದಿನ	ಹೈದರಾಬಾದ್
ಜ.9	ಏಕದಿನ	ಮುಂಬೈ
ಬಾರ್ಡರ್ ಗವಾಸ್ಕರ್ ಟ್ರೋಫಿ		
ಮೊದಲ ಟೆಸ್ಟ್	ಜ.21	ನಾಗ್ಪುರ
ಎರಡನೇ ಟೆಸ್ಟ್	ಜ.29	ಚೆನ್ನೈ
ಮೂರನೇ ಟೆಸ್ಟ್	ಫೆ.11	ಗುವಾಹಟಿ
ನಾಲ್ಕನೇ ಟೆಸ್ಟ್	ಫೆ.23	ರಾಂಚಿ
ಐದನೇ ಟೆಸ್ಟ್	ಮಾ.3	ಅಹಮದಾಬಾದ್

ಭಾರತ ತಂಡಕ್ಕೆ ಗುಲ್ವೀರ್ ನಾಯಕ

• **ಬೆಂಗಳೂರು:** ಭಾರತದ 10,000 ಮೀ ಮತ್ತು 5,000 ಮೀ ರಾಷ್ಟ್ರೀಯ ದಾಖಲೆದಾರ ಗುಲ್ವೀರ್ ಸಿಂಗ್, ಏಪ್ರಿಲ್ 26ರಂದು ನಡೆಯಲಿರುವ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನ 18ನೇ ಆವೃತ್ತಿಯಲ್ಲಿ ಭಾರತೀಯ ಎಲೈಟ್ ತಂಡವನ್ನು ಮುನ್ನಡೆಸಲಿದ್ದಾರೆ. ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ಮಾನ್ಯತೆ ಪಡೆದ ಈ ರೇಸ್, ಪ್ರತಿ ವರ್ಷ ವಿಶ್ವದ ಶ್ರೇಷ್ಠ ದೂರ ಓಟಗಾರರನ್ನು ಆಕರ್ಷಿಸುವುದರ ಜೊತೆಗೆ, ಭಾರತೀಯ ಆಟಗಾರರಿಗೆ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ತಮಗೆ ತಾವು ಸವಾಲು ಹಾಕಿಕೊಳ್ಳುವ ವೇದಿಕೆಯಾಗುತ್ತಿದೆ. ಗುಲ್ವೀರ್ ಸಿಂಗ್ ಉತ್ತಮ ಲಯದಲ್ಲಿದ್ದು, ಇತ್ತೀಚೆಗೆ ನಡೆದ ನ್ಯೂಯಾರ್ಕ್ ಸಿಟಿ ಹಾಫ್ ಮ್ಯಾರಥಾನ್‌ನಲ್ಲಿ 59:42 ಸಮಯದಲ್ಲಿ ಮೂರನೇ ಸ್ಥಾನ ಪಡೆದಿದ್ದರು. ಇದು ಭಾರತೀಯ ಓಟಗಾರರೊಬ್ಬ ದಾಖಲಿಸಿದ ಅತ್ಯುತ್ತಮ ಹಾಫ್ ಮ್ಯಾರಥಾನ್ ಸಮಯವಾಗಿದೆ.

ಗುಲ್ವೀರ್ ಪ್ರದರ್ಶನ: 10,000 ಮೀ (27:00.22) ಮತ್ತು 5,000 ಮೀ (12:59.77) ವಿಭಾಗಗಳಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಅವರು, 2025ರಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದರು. ಜೊತೆಗೆ ಟಾಟಾ ಸ್ಟೀಲ್ ವರ್ಲ್ಡ್ 25ಕೆ ಕೋಲ್ಕತಾ ಸ್ಪರ್ಧೆಯಲ್ಲಿ 1:12:06 ಸಮಯದೊಂದಿಗೆ ದಾಖಲೆ ನಿರ್ಮಿಸಿದ್ದರು.

ಸ್ಪರ್ಧೆಗೆ ಉತ್ಸಾಹ: ಗುಲ್ವೀರ್: ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ದೇಶದ ಅತ್ಯಂತ ಸ್ಪರ್ಧಾತ್ಮಕ ರಸ್ತೆ ಓಟಗಳಲ್ಲಿ ಒಂದಾಗಿದೆ. ಇಲ್ಲಿ ಮತ್ತೆ ಸ್ಪರ್ಧಿಸಲು ಉತ್ಸಾಹವಾಗುತ್ತಿದೆ, ಎಂದು ಗುಲ್ವೀರ್ ಸಿಂಗ್ ತಿಳಿಸಿದ್ದಾರೆ. ಈ ವರ್ಷದ ಸ್ಪರ್ಧೆಯಲ್ಲಿ ಉಗಾಂಡಾದ ಹರ್ಬರ್ಟ್ ಕಿಬೆಟ್, ಕೀನ್ಯಾದ ವಿನ್ಸೆಂಟ್ ಲಂಗಾಟ್, ಇಥಿಯೋಪಿಯಾದ ಗೆಮೆಚು ಡಿಡಾ ಮತ್ತು ಎರಿಟ್ರಿಯಾದ ಸ್ಯಾಮುಯೆಲ್ ಹಾಬ್ಟೆ ಸೇರಿದಂತೆ ಅಂತಾರಾಷ್ಟ್ರೀಯ ಆಟಗಾರರು ಭಾಗವಹಿಸಲಿದ್ದಾರೆ. ಇಂತಹ ಸ್ಪರ್ಧೆಗಳು ಭಾರತೀಯ ಆಟಗಾರರನ್ನು ಇನ್ನಷ್ಟು ಉತ್ತಮ ಪ್ರದರ್ಶನ ನೀಡಲು ಪ್ರೇರೇಪಿಸುತ್ತವೆ. ಯುವ ಪ್ರತಿಭೆಗಳಿಗೆ ಸ್ಫೂರ್ತಿಯಾಗುತ್ತದೆ, ಎಂದು ಅವರು ಹೇಳಿದ್ದಾರೆ.

ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5935

5934 ಉತ್ತರ

ಎಡದಿಂದ ಬಲಕ್ಕೆ:
2.ಯಜಮಾನಿಕೆ 4.ಬಾಳು
5.ವಕೀಲ 6.ನಡೆವಳಿ
8.ಹಕ್ಕು 9.ಧಾಮ
14.ಸಮಾರೋಪ
16.ರೋಚಕ 17.ಅಂಗ
18.ನಡತೆಗಳು

ಮೇಲಿನಿಂದ ಕೆಳಕ್ಕೆ:
1.ನಡಾವಳಿ 3.ಮಾಧವ
4.ಬಾಲಗ್ರಹ 6.ನಗು
7.ಅಕ್ಕಿ 10.ಮಲರೋಗ
11.ಸಮೀಕರಣ 12.ಧ್ವಂಸ
13.ತಾಪ 15.ಮಾನ್ಯತೆ

ಎಡದಿಂದ ಬಲಕ್ಕೆ
3.ಒಳ್ಳೆಯ ನಡತೆ–ಸದಾಚಾರವಿದು (3)
4.ಹಿತದಿಂದ ಹೊರತಾದುದು (3)
5.ಉಪ್ಪುನೀರಿನ ವಿಶಾಲ ಜಲರಾಶಿ ತಿರುಗಿದೆ (3)
6.ಮಂದಹಾಸದ ಸಮಾನಪದ (4)
8.ಒಂದೇ ರೀತಿಯ–ತುಲನಾತ್ಮಕವಾದುದು (3)
10.ಎಲ್ಲ ಭಾಗಗಳನ್ನೂ ಒಳಗೊಂಡಿದ್ದು (3)
11.ನ್ಯಾಯಕ್ಕಾಗಿ ವಾದ ಮಾಡುವ ಉದ್ಯೋಗ (4)
14.ಸಭೆಯ ನಡಾವಳಿಯೂ ಹೌದು–ಕಾರ್ಯಸೂಚಿಯೂ ಹೌದು (3)
16.ಮಿಕ್ಕಿದ್ದು–ಹೆಚ್ಚು ಎಂಬರ್ಥದ ಶಬ್ದ (3)
17.ವಿಶ್ವಾಮಿತ್ರನ ಪೂರ್ವನಾಮ (3)

ಮೇಲಿನಿಂದ ಕೆಳಕ್ಕೆ
1.ಒಪ್ಪದೇ "ಇಲ್ಲ" ಎನ್ನುವುದು (3)
2.ಅವನತಿಯ ಹಾದಿಯಲ್ಲಿರುವುದು (3)
3.ಇದು ಒಳ್ಳೆಯ ಮನಸ್ಸು (3)
4.ಇದು ಹಣ್ಣುಗಳ ಮಿಶ್ರಣ (4)
7.ಗುಣಿಸಲಾಗುವ ಸಂಖ್ಯೆಯಿದು (3)
9. ಕೃಷ್ಣನ ಒಂದು ಹೆಸರು (3)
10.ಸವೆದು ಹೋಗಿ ಚಲಾವಣೆಯಾಗದ್ದು (4)
12.ಕ್ರಿಯೆಯನ್ನು ಮಾಡುವ ಸಾಧನ (3)
13.ಯುಕ್ತದ ಸೇರೆ–ಕಟ್ಟಿಗಳು ತಲೆಕೆಳಗಾಗಿವೆ (3)
15.ಮಂತ್ರವನ್ನು ಉಚ್ಚರಿಸುತ್ತಿರು (3)

ಭಾರತಕ್ಕೆ ಮತ್ತೊಂದು ಪದಕ ಖಚಿತ

• **ಹೊಸದಿಲ್ಲಿ:** ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಸ್ಟೇಜ್–1 ಆರ್ಚರಿ ಟೂರ್ನಿಯಲ್ಲಿ ಭಾರತ ಮತ್ತೊಂದು ಪದಕ ಖಚಿತಪಡಿಸಿಕೊಂಡಿದೆ. ಚಿಕಿತಾ ತನಿಪರ್ತಿ ಮತ್ತು ರಾಜುಬ್ ಚೌಹಾಣ್ ಕಾಂಪೌಂಡ್ ಮಿಶ್ರ ತಂಡ ವಿಭಾಗದ ಫೈನಲ್‌ಗೆ ಪ್ರವೇಶಿಸಿದ್ದಾರೆ. ಅಗ್ರ ಶ್ರೇಯಾಂಕದ ಈ ಜೋಡಿ ಮೊದಲ ಸುತ್ತಿನಲ್ಲಿ ಬೈ ಪಡೆದು, ನಂತರ ಚೈನೀಸ್ ತೈಪೆ ವಿರುದ್ಧ 159–155 ಹಾಗೂ ಕಜಕಿಸ್ತಾನ್ ವಿರುದ್ಧ 157–153 ಅಂತರದಲ್ಲಿ ಗೆದ್ದು ಮಲೇಷ್ಯಾ ವಿರುದ್ಧ ಫೈನಲ್‌ಗೆ ತಲುಪಿದೆ. ಇದೇ ವೇಳೆ ರಿಕರ್ವ್ ಮಿಶ್ರ ತಂಡ ವಿಭಾಗದಲ್ಲಿ ರಿಧಿ ಫೋರ್ ಮತ್ತು ದೇವಾಂಗ್ ಗುಪ್ತಾ ಜೋಡಿ ಮೊದಲ ಸುತ್ತಿನಲ್ಲಿ ಬೈ ಪಡೆದರೂ, ವಿಯೆಟ್ನಾಂ ವಿರುದ್ಧ 06 ಅಂತರದಲ್ಲಿ ಸೋತು ಹೊರಬಿದ್ದಿದೆ.

ಸ್ಕೀಟ್ ಶೂಟರ್‌ಗಳಿಗೆ ಕಠಿಣ ಸವಾಲು

• **ಹೊಸದಿಲ್ಲಿ:** ಮೊರೊಕ್ಕೊದ ಟ್ಯಾಂಜಿಯರ್‌ನಲ್ಲಿ ಶುಕ್ರವಾರದಿಂದ ಆರಂಭವಾಗುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವರ್ಲ್ಡ್ ಕಪ್‌ನಲ್ಲಿ ಭಾರತೀಯ ಸ್ಕೀಟ್ ಶೂಟರ್‌ಗಳಿಗೆ ಕಠಿಣ ಸ್ಪರ್ಧೆ ಎದುರಾಗಲಿದೆ. ಮೊದಲ ದಿನ ಪುರುಷರು ಮತ್ತು ಮಹಿಳೆಯರು ತಲಾ 75 ಗುರಿಗಳನ್ನು ಹೊಡೆಯಲಿದ್ದು, ನಂತರ 50 ಟಾರ್ಗೆಟ್ ಹಾಗೂ ಭಾನುವಾರ ಫೈನಲ್ ನಡೆಯಲಿದೆ. ಭಾರತ ಪುರುಷ, ಮಹಿಳಾ ವಿಭಾಗಗಳಲ್ಲಿ ಗರಿಷ್ಠ ಆರು ಆಟಗಾರರನ್ನು ಕಣಕ್ಕಿಳಿಸಿದೆ. ಜೊತೆಗೆ ರ್‍ಯಾಂಕಿಂಗ್ ಅಂಕಗಳಿಗಾಗಿ ಪ್ರತ್ಯೇಕವಾಗಿ ಇಬ್ಬರು ಆಟಗಾರರು ಭಾಗವಹಿಸಲಿದ್ದಾರೆ. ಮಹಿಳಾ ವಿಭಾಗದಲ್ಲಿ ಒಲಿಂಪಿಕ್ ಚಾಂಪಿಯನ್ ಚಿಲಿಯ ಫ್ರಾನ್ಸಿಸ್ಕಾ ಕ್ರೋವೆಟ್ಟೊ ಚಾಡಿದ್, ಅಮೆರಿಕದ ವಿಶ್ವ ಚಾಂಪಿಯನ್ ಸಮಾಂಥಾ ಸಿಮೊಂಟನ್, ಇಟಲಿಯ ಡಿಯಾನಾ ಬಕೋಸಿ ಸೇರಿದಂತೆ ಹಲವು ಶ್ರೇಷ್ಠ ಶೂಟರ್‌ಗಳು ಸ್ಪರ್ಧಿಸಲಿದ್ದಾರೆ.

ಫುಟ್‌ಬಾಲ್: ಪಾಕ್‌ಗೆ ಭಾರತ ಕಿಕ್

• **ಮಾಲೆ(ಮಾಲ್ಡೀವ್ಸ್):** ಜಗತ್ತಿನ ಎಲ್ಲಾ ಕ್ಷೇತ್ರದ ಎಲ್ಲಾ ವಿಭಾಗಗಳಲ್ಲೂ ಪಾಕಿಸ್ತಾನ ಭಾರತದ ಮುಂದೆ ಮಂಡಿಯೂರುತ್ತಿರುವ ಮಧ್ಯೆ ಗುರುವಾರ ನಡೆದ ಸ್ಯಾಫ್ ಅಂಡರ್–20 ಫುಟ್‌ಬಾಲ್ ಪಂದ್ಯಾವಳಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ ಮತ್ತೊಮ್ಮೆ ಪ್ರಾಬಲ್ಯ ಸಾಧಿಸಿದೆ.

ಮಾಲ್ಡೀವ್ಸ್‌ನ ಮಾಲೆಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ಭಾರತೀಯ ಹುಡುಗರು ಪಾಕಿಗಳ ಬೇಟೆಯಾಡಿದರು. ಯಾವುದೇ ಕ್ಷಣಕ್ಕೂ ಮುನ್ನಡೆ ಬಿಟ್ಟುಕೊಡದೆ, ಗೆಲುವಿನ ಮಾರ್ಗದಲ್ಲೇ ಇದ್ದು ಗೆದ್ದು ಬೀಗಿತು. ಇದರೊಂದಿಗೆ ಪಾಕ್ ತಂಡವನ್ನು 3–0ರಿಂದ ಸೋಲಿಸಿ ಪಂದ್ಯಾವಳಿಯಿಂದ ಓಡಿಸಿತು ಭಾರತ. ಪಂದ್ಯದಲ್ಲಿ ಮೊದಲಿನಿಂದಲೂ ಪಾಕ್ ಪಾಲಿಗೆ ಭಾರತೀಯರು ದುಃಸ್ವಪ್ನವಾಗಿ ಕಾಡಿದರು. ಮೂರನೇ ನಿಮಿಷದಲ್ಲಿ ಪಾಕ್ ಡಿಫೆನ್ಸ್ ಅನ್ನು ಛಿದ್ರಗೊಳಿಸಿದ ವಿಶಾಲ್ ಯಾದವ್ ಗೋಲು ಬಾರಿಸಿ ಮುನ್ನಡೆ ತಂದುಕೊಟ್ಟರು. ಮುಂದೆ ಪಾಕ್ ಮಾಡಿದ ಹಲವು ಪ್ರಯತ್ನಗಳನ್ನು ಸಲೀಸಾಗಿ ತಡೆಯೊಡ್ಡಿದ ಭಾರತ 64ನೇ ನಿಮಿಷದಲ್ಲಿ ಎರಡನೇ ಗೋಲು ಬಾರಿಸಿತು. 20 ನಿಮಿಷ ಒಂದೇ ಗೋಲಿಗೆ ಪರದಾಡಿದ ಪಾಕ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿತು. 84ನೇ ನಿಮಿಷದಲ್ಲಿ ಮೂರನೇ ಗೋಲು ಬಾರಿಸಿದ ಭಾರತ ಗೆಲುವಿನ ನಗೆ ಬೀರಿತು. ಪಾಕಿಸ್ತಾನ ನೋಡುತ್ತಲೇ ನಿಂತಿತು. ಪ್ರಯತ್ನ ಪಟ್ಟು ಸೊರಗಿತು, ಸೋತು ಸುಣ್ಣಾಯಿತು.

- ಸ್ಯಾಫ್ ಅಂಡರ್–20 ಪಂದ್ಯಾವಳಿ
- 3–0ರಿಂದ ಭಾರೀ ಗೆಲುವು
- ಸೆಮಿಫೈನಲ್‌ಗೆ ಬ್ಲ್ಯೂ ಬಾಯ್ಸ್



ಮಹಾತ್ಮಾಗಾಂಧಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅಂದರೆ ರಾಮನ ಆದರ್ಶ ಗುಣಗಳನ್ನು ಅವರು ಗುರುತಿಸಿದ್ದರು. ಆದರೆ ನಮ್ಮ ದುರ್ದೈವಕ್ಕೆ, ನಮ್ಮ ರಾಜಕಾರಣಿಗಳಿಗೆ ಇವು ಯಾವುವೂ ಬೇಡ.

ಶ್ರೀರಾಮನೆಂದರೆ ಅಮಿತಾನಂದಸ್ವರೂಪೀ

▶ ಗ.ನಾ.ಭಟ್ಟ

ಶ್ರೀರಾಮನವಮಿಯೆಂದರೆ ಭಾರತೀಯರಿಗೆ ಸಂತಸದ ಹೊನಲು ಹರಿಯುವ ಬಹು ದೊಡ್ಡ ಹಬ್ಬ. ಅದಕ್ಕೆ ಶ್ರೀರಾಮನ ಘನವಾದ ವ್ಯಕ್ತಿತ್ವವೇ ಕಾರಣ. ಆ ದಿನದಂದು ಭಾರತಾದ್ಯಂತ ರಘುನಾಥತಿಲಕ ರಾಮನಿಗೆ ಪೂಜೆ-ಪುನಸ್ಕಾರ ಅತ್ಯಂತ ವೈಭವದಿಂದ ನಡೆಯುತ್ತದೆ. ಅದರ ಅಂಗವಾಗಿ ಎಷ್ಟೋ ಮನೆಗಳಲ್ಲಿ ಶ್ರೀರಾಮಾಯಣ ಪಾರಾಯಣ, ಪ್ರವಚನ ಜರುಗುತ್ತದೆ. ಸಂಗೀತೋತ್ಸವ, ನಾಟ್ಯ-ನಾಟಕಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಪನ್ನಗೊಳ್ಳುತ್ತವೆ. ಯುವಕರು ರಸ್ತೆಗಳಲ್ಲಿ ಪಾನಕ, ಪನಿವಾರ, ಕೋಸಂಬರಿ ಹಂಚುತ್ತಾರೆ. ಇವೆಲ್ಲವೂ ಶ್ರೀರಾಮನ ಮಹಿಮೆಯ ಫಲಶ್ರುತಿಗಳು.

ರಾಮನೆಂದರೆ ಆನಂದಸ್ವರೂಪೀ; ಅವನು ಮೋಕ್ಷದಾಯಕ. ರಾಮ ಎಂಬ ಒಂದೇ ನಾಮ ಮಹಾವಿಷ್ಣುವಿನ ಸಾವಿರ ನಾಮಗಳಿಗೆ ಸಮಾನ ಎಂದು ಹೇಳುತ್ತಾರೆ. ಅವನು ಚೆಲುವಿಗೂ ಚೆಲುವು; ನೀಲಮೇಘಶ್ಯಾಮ; ಮುದ್ದು ಮುದ್ದಾದ ರೂಪ; ಕಣ್ಣು ತಣಿಯದ ಚೆಲುವು. ಅವನು ನಿಂತರೂ ಚೆಂದ; ಕೂತರೂ ಚೆಂದ; ಮಲಗಿದರೂ ಚೆಂದ; ನಡೆದರೂ ಚೆಂದ; ನಿಂತರೂ ಚೆಂದ. ಮಾತಂತೂ ಸುಮನೋಹರ. 'ವಕ್ತಾ ವಾಚಸ್ಪತಿರ್ಯಥಾ'-ಮಾತಿನಲ್ಲಿ ಬೃಹಸ್ಪತಿಯಿದ್ದಂತೆ. ಹೀಗೆ ಕೊಂಡಾಡಿದವನು ವಾಲ್ಮೀಕಿಮಹರ್ಷಿ. ರಾಮನೆಂದರೆ ಅವನು ಕೇವಲ ದಾಶರಥಿ ರಾಮನಲ್ಲ, ಅವನು ಪರಬ್ರಹ್ಮನೂ ಹೌದು. ಅದನ್ನು ಸಾರುವ ಉಕ್ತಿಯೊಂದು ಹೇಳುತ್ತದೆ-

ರಮಂತೇ ಯೋಗಿನೋಽನಂತೇ ನಿತ್ಯಾನಂದೇ ಚಿದಾತ್ಮನಿ ।
ಇತಿ ರಾಮಪದೇನಾಸೌ ಪರಂ ಬ್ರಹ್ಮಾಭಿಧೀಯತೇ ॥

"ಪರಬ್ರಹ್ಮವಾಚಕವಾದ ಈ ರಾಮ ಪದದಿಂದ ಯೋಗಿಗಳು ಅನಂತವಾದ, ನಿತ್ಯಾನಂದವಾದ ಚಿದಾತ್ಮದಲ್ಲಿ, ಸದಾ ರಮಿಸುತ್ತಾರೆ" ಎಂಬ ಈ ಮಾತು ರಾಮನ ವ್ಯಕ್ತಿಸೌಂದರ್ಯವನ್ನು ಹೇಳುವುದರೊಂದಿಗೆ ಅವನ ಪರಬ್ರಹ್ಮತ್ವವನ್ನೂ ಸಾಬೀತುಪಡಿಸುತ್ತದೆ. ರಾಮ ಭಕ್ತರ ಅಂತರಂಗಪ್ರವೃತ್ತಿಯಂತೆ ದೇವರಾಗಬಲ್ಲ; ಧರ್ಮಸಂಕಟದ ವೇಳೆಯಲ್ಲಿ ಗುರುವಾಗಬಲ್ಲ; ಏಕಾಂತಧ್ಯಾನದಲ್ಲಿ ಪರಬ್ರಹ್ಮವಾಚಕನಾಗಬಲ್ಲ. 'ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ'. ಹೀಗೆ ಶ್ರೀರಾಮನ ಭವ್ಯ ವ್ಯಕ್ತಿತ್ವವನ್ನು ಕೊಂಡಾಡುವ ಸಾವಿರಾರು ಶ್ಲೋಕಗಳು ಇವೆ. ಅಂತಹವುಗಳಲ್ಲಿ ಹೃದಯಾನಂದಕರವಾದ ಇನ್ನೊಂದು ಶ್ಲೋಕ ಹೀಗೆ ವರ್ಣಿಸುತ್ತದೆ.

ಕೌಸಲ್ಯಾ ನಯನೋತ್ಸವೋ ದಶರಥಸ್ಯೋದ್ಯತ್ತಪಸ್ಯಾ ಫಲಂ ।
ವಿಶ್ವಾಮಿತ್ರಮನೋರಥೋ ಜನಕಭೂಪಾಲಸ್ಯ ಭಾಗ್ಯೋದಯಃ ॥
ವೈದೇಹೀವದನಾರವಿಂದಮಧುಪಃ ಕೋದಂಡಝುಂಕಾರಭೂಃ ।
ಧರ್ಮಸ್ಯೈಕಪರಾಯಣೋ ವಿಜಯತೇ ಶ್ರೀರಾಮಚಂದ್ರಪ್ರಭುಃ ॥

"ಕೌಸಲ್ಯೆಯ ಕಣ್ಣಿಗೆ ಹಬ್ಬವನ್ನುಂಟುಮಾಡಿದವನೂ, ದಶರಥನ ತಪಸ್ಸಿನ ಫಲವಾಗಿ ಉದಿಸಿದವನೂ, ವಿಶ್ವಾಮಿತ್ರರ ಮನೋರಥವನ್ನು ನೆರವೇರಿಸಿದವನೂ, ಜನಕಮಹಾರಾಜನ ಭಾಗ್ಯಸಂಪತ್ತೂ ಆದ, ವೈದೇಹಿಯ ವದನಾರವಿಂದಕ್ಕೆ ಭ್ರಮರಪ್ರಾಯನೂ ಆದ ಮತ್ತು ಆ ಭ್ರಮರಕ್ಕೆ ಕೋದಂಡದ ಝುಂಕಾರವೇ ಭ್ರಮರದ ಗುಂಜಾರವವಾಗಿ ಪರಿಣಮಿಸಿದ, ಧರ್ಮವನ್ನೇ ತನ್ನ ಉಸಿರಾಗಿಸಿಕೊಂಡ, ಧರ್ಮಪರಾಯಣನಾದ ಆ ಶ್ರೀರಾಮಚಂದ್ರನು ವಿಜಯಿಯಾಗಲಿ" ಎಂದು ಆಶಿಸಿ ಮಾಡಿಕೊಳ್ಳುವ ಈ ಶ್ಲೋಕ ದಿಟಕ್ಕೂ ಹೃದಯಾನಂದಕರ. "ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್"-" ಸದ್ಯಕ್ಕೆ ಈ ವರ್ತಮಾನ ಕಾಲದಲ್ಲಿ ಗುಣವಂತರಲ್ಲಿ, ವೀರರಲ್ಲಿ ಮೊದಲಿಗನಾಗಿ ಪರಿಗಣಿಸಬೇಕಾದ ವ್ಯಕ್ತಿ ಯಾವನಿದ್ದಾನೆ?" ಎಂದು ಹದಿನಾರು ಗುಣಗಳ ಪಟ್ಟಿಯನ್ನೇ ನಾರದರ ಮುಂದಿಟ್ಟ ವಾಲ್ಮೀಕಿಮಹರ್ಷಿಗೆ ನಾರದರು ನೀಡಿದ ಉತ್ತರದಲ್ಲಿ ಒಂದು ಹೀಗಿದೆ-

ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ ।
ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ ॥
ಬಾಲಕಾಂಡಃ : 1-8, 15

"ಅಂಥವನೊಬ್ಬ ನಮ್ಮ ಕಾಲದಲ್ಲೇ ಇದ್ದಾನೆ. ಅವನನ್ನು ಎಲ್ಲೂ ಹುಡುಕಬೇಕಿಲ್ಲ, ಈ ಭೂಮಿಯಲ್ಲೇ ಇದ್ದಾನೆ. ಅವನೇ ಇಕ್ಷ್ವಾಕುವಂಶದ ರಾಜ ರಾಮಚಂದ್ರ. ನೀನು ಕೇಳಿದ ಎಲ್ಲಾ ಸದ್ಗುಣಗಳೂ ಅವನಲ್ಲಿ ಇವೆ. ಅದಕ್ಕಾಗಿಯೇ ಅತ 'ಸರ್ವಲೋಕಪ್ರಿಯಃ' ಬರಿಯ ಭೂಮಿಯ ಜನರಷ್ಟೇ ಅಲ್ಲ, ಸ್ವರ್ಗದ ದೇವತೆಗಳೂ ಅವನನ್ನು ಗೌರವಿಸುತ್ತಾರೆ. ಇಂತಹ ಗುಣವುಳ್ಳವನಾದರೂ ಅವನು ಸಾಧು ಅನ್ನಿಸಿಕೊಂಡಿದ್ದಾನೆ. ಸೌಜನ್ಯದ ಮೂರ್ತಿ; ಸಜ್ಜನಿಕೆಯ ಪ್ರತೀಕ; ಸದ್ಗುಣಗಳ ಗಣಿಯಾಗಿದ್ದಾನೆ. ರಾಮನಲ್ಲಿ ಅಹಂಕಾರದ ಸುಳಿವಿಲ್ಲ, ಸಾಧು ಎಂದಮಾತ್ರಕ್ಕೆ ಎಲ್ಲರ ಮುಂದೆಯೂ ತಲೆಬಾಗಿ, ಹಲ್ಲುಕಿರಿಯುವ ಸ್ವಭಾವ ಅವನದಲ್ಲ, ಅವನು ಅದೀನಾತ್ಮಾ-ಯಾರ ಮುಂದೆಯೂ ಡೊಗ್ಗು ಸಲಾಮು ಹೊಡೆಯುವವನಲ್ಲ, ದೀನನಾಗಿ ನಡೆದುಕೊಳ್ಳುವವನೂ ಅಲ್ಲ, ಸಂದರ್ಭ ಬಂದರೆ ಅವನು ಕಠಿಣನೂ ಆಗಬಲ್ಲ; ಮೃದುವೂ ಆಗಬಲ್ಲ. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ'. ಸಾಮಾನ್ಯವಾಗಿ ಜನರಲ್ಲಿ ದೈನ್ಯ ಅಥವಾ ಅಹಂಕಾರ-ಈ ಎರಡರಲ್ಲಿ ಒಂದು ಇದ್ದೇ ಇರುತ್ತದೆ. ಒಂದೋ ದೈನ್ಯ, ಇಲ್ಲ ಅಹಂಕಾರ. ಎರಡನ್ನೂ ಮೀರಿ ನಡೆದುಕೊಳ್ಳುವುದು ಅನೇಕರಿಗೆ ಗೊತ್ತೇ ಇರುವುದಿಲ್ಲ, ರಾಮ ಇದಕ್ಕೆ ಅಪವಾದ. ಏಕೆಂದರೆ ಅವನು ವಿಚಕ್ಷಣ. ಎಲ್ಲರದ ಬಗ್ಗೆ ಎಲ್ಲವನ್ನೂ ತಿಳಿದ ಮೇಧಾವಿ. ಎಲ್ಲಿ, ಹೇಗೆ ನಡೆದುಕೊಳ್ಳಬೇಕೆಂದು ತಿಳಿದ ಪ್ರಾಜ್ಞ. ಇಂತಹ ರಾಮನ ಆಡಳಿತವೂ ಆದರ್ಶಪ್ರಾಯವಾಗಿತ್ತು. ರಾಜಕೀಯ ವ್ಯವಸ್ಥೆ, ಅರ್ಥನೀತಿ ಎಲ್ಲವೂ ಸುದೃಢವಾಗಿತ್ತು. ಮಂತ್ರಿಗಳು, ಅಮಾತ್ಯರು ಎಲ್ಲರೂ ರಾಜನಷ್ಟೇ ಶೂರರೂ, ವಿದ್ಯಾವಂತರೂ, ಇಂದ್ರಿಯಗಳ ಮೇಲೆ ಹಿಡಿತವಿದ್ದವರೂ, ಪ್ರಜೆಗಳ ಮನಸ್ಸನ್ನು ಅರಿಯಬಲ್ಲವರೂ ಆಗಿದ್ದರು. ಸಾವಿರ ಮೂರ್ಖರಿಗಿಂತ ಜ್ಞಾನವಂತನಾದ ಒಬ್ಬನೇ ಮಂತ್ರಿ ಸಾಕು ಅನ್ನುವುದು ರಾಮನ ರಾಜನೀತಿಯಾಗಿತ್ತು. 'ಕಚ್ಚಿತ್ ಸಹಸ್ರಮೂರ್ಖಾಣಾಂ ಏಕಮಿಚ್ಛಸಿ ಪಂಡಿತಮ್'-(ಅಯೋಧ್ಯಾ:100-22)

ಇಂದಿನ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಇಂತಹ ಆದರ್ಶವನ್ನು ಕಾಣುವುದು ದುರ್ಲಭವೇ ಆಗಿದೆ. ಮಂತ್ರಿಸಂಪುಟದಲ್ಲಿ ಎಲ್ಲೆಲ್ಲೂ ಮೂರ್ಖರೇ ತುಂಬಿಕೊಂಡಿರುವುದನ್ನು ನಾವು ಪ್ರತಿದಿನ ಕಾಣುತ್ತಿರುತ್ತೇವೆ. ಬೆಳಗಾಗೆದ್ದರೆ ದ್ವೇಷ ರಾಜಕಾರಣ ಮಾಡುವುದು, ಪರಸ್ಪರ ನಿಂದಿಸುವುದು, ರಾಷ್ಟ್ರದ್ರೋಹ ಕೆಲಸ ಮಾಡುವುದು, ತನ್ನ ಖಾತೆಯ ಬಗ್ಗೆ ಯೋಚಿಸದೆ, ಅಧ್ಯಯನ ಮಾಡದೆ, ದೇಶದ ಪ್ರಗತಿಗೆ ಶ್ರಮಿಸದೆ ಇರುವ ಸಾವಿರ ಸಾವಿರ ಮಂತ್ರಿಗಳನ್ನು ನಾವು ಇಂದು ಕಾಣಬಹುದು. ಅರ್ಹತೆಗೆ, ತಿಳುವಳಿಕೆಗೆ ಯಾವ ಮನ್ನಣೆಯೂ ಇಲ್ಲದೆ ಜಾತಿಪ್ರಾತಿನಿಧ್ಯ, ಪ್ರಾದೇಶಿಕ ಪ್ರಾತಿನಿಧ್ಯ ಅನ್ನುತ್ತಾ ಅನರ್ಹರನ್ನೇ ಮಂತ್ರಿಗಳನ್ನಾಗಿ ಮಾಡುವುದು ಇಂದಿನ ರಾಜಕಾರಣದಲ್ಲಿ ಬಗೆಹರಿಸಲಾಗದ ಅನಿಷ್ಟ. ಸುದೈವಕ್ಕೆ ಕೇಂದ್ರ ಸರಕಾರದಲ್ಲಿ ಇಂತಹ ಮಂತ್ರಿಗಳು ಇಲ್ಲ ಅನ್ನುವುದೇ ಸಮಾಧಾನಕರ ಸಂಗತಿ.



ನಾಲ್ಪಸನ್ನಿಚಯಃ ಕಶ್ಚಿದಾಸೀತ್ತಸ್ಮಿನ್ ಪುರೋತ್ತಮೇ ।
ಕುಟುಂಬೀ ಯೋ ಹ್ಯಸಿದ್ಧಾರ್ಥೋಽಗವಾಶ್ವಧನಧಾನ್ಯವಾನ್ ॥
ಕಾಮೀ ವಾ ನ ಕದರ್ಯೋ ವಾ ನೃಶಂಸಃ ಪುರುಷಃ ಕ್ವಚಿತ್ ।
ದ್ರಷ್ಟುಂ ಶಕ್ಯಮಯೋಧ್ಯಾಯಾಂ ನಾವಿದ್ವಾನ್ನ ಚ ನಾಸ್ತಿಕಃ ॥
ಬಾಲಕಾಂಡಃ 6-7, 8

"ರಾಮರಾಜ್ಯದಲ್ಲಿ ಸ್ವಲ್ಪಮಾತ್ರವೇ ಹಣಕಾಸುಳ್ಳ ಯಾವ ಗೃಹಸ್ಥನೂ ಇರಲಿಲ್ಲ, ಇಷ್ಟಾರ್ಥ ಸಿದ್ಧಿಸದೆ ಆಶಾಭಂಗ ಹೊಂದಿದವನಾಗಲೀ, ಕುದುರೆ, ಹಸು, ಧನಧಾನ್ಯಗಳಿಲ್ಲದವನಾಗಲೀ ಒಬ್ಬನೂ ಇರಲಿಲ್ಲ, ಕಾಮುಕರು, ಜಿಪುಣರು, ಕ್ರೂರಿಗಳು, ವಿದ್ಯಾವಿಹೀನರು, ನಾಸ್ತಿಕರು ಯಾರೂ ಇರಲಿಲ್ಲ" ಎಂದು ಕವಿ ದಾಖಲಿಸುತ್ತಾನೆ. ಎಂತಹ ಅಪರೂಪದ ಮಾತಿದು. ರಾಮರಾಜ್ಯದಲ್ಲಿ "ಧನಧಾನ್ಯವಿಲ್ಲದ, ಅಶ್ವಸಂಪತ್ತು-ಗೋಸಂಪತ್ತು ಇಲ್ಲದವವನು ಒಬ್ಬನೂ ಇರಲಿಲ್ಲ" ಅನ್ನುತ್ತಾನೆ. ನಮ್ಮನ್ನು ಆಳುವವರಿಗೆ ಇಂತಹ ಒಂದು ಸುಂದರ ಪರಿಕಲ್ಪನೆ ಇದೆಯೋ? ಅವರು ಎಂದಾದರೂ ಇಂತಹ ಮಹಾಕಾವ್ಯವನ್ನು ಓದಿದ್ದಾರೆಯೋ.

ಕವಿ ವಾಲ್ಮೀಕಿ ನಮ್ಮ ಕಣ್ಣನ್ನು ತೆರೆಸುವ ಇನ್ನೊಂದು ಅದ್ಭುತ ಮಾತನ್ನು ಹೇಳುತ್ತಾನೆ. ರಾಮರಾಜ್ಯದಲ್ಲಿ ನಾಸ್ತಿಕರೇ ಇರಲಿಲ್ಲವಂತೆ. 'ನ ಚ ನಾಸ್ತಿಕಃ'. ನಮ್ಮ ದುರ್ದೈವ ನೋಡಿ. ಭಾರತದ ಎಷ್ಟೋ ರಾಜ್ಯಗಳಲ್ಲಿ ನಾಸ್ತಿಕ ಸರ್ಕಾರವೇ ಇದೆ. ದೀಪಾವಳಿ, ಯುಗಾದಿಯಂತಹ ಹಿಂದು ಹಬ್ಬಗಳಂದು ಹಿಂದೂಗಳಿಗೆ ಯಾವ ಶುಭಾಶಯಗಳನ್ನೂ ಕೋರದೆ ಇತರ ಮತೀಯರ ಹಬ್ಬದಂದು ಅವರನ್ನು ಓಲೈಸುತ್ತಾ, ಅವರ ವೇಷಭೂಷಣ ಧರಿಸಿಕೊಂಡು, ಅವರ ಜೊತೆಗೇ ಊಟ ಮಾಡುತ್ತಾ ಸಂಭ್ರಮದಿಂದ ಬೀಗುವುದನ್ನು ಕಂಡಾಗ ಅವರು ಆಸ್ತಿಕರು ಎಂದು ಅನ್ನಿಸುತ್ತದೆಯೋ? ಖಂಡಿತ ಇಲ್ಲ. ಆಹಾರದ ವಿಷಯದಲ್ಲಿ ಸಸ್ಯಾಹಾರ ಅಥವಾ ಮಾಂಸಾಹಾರ ಅನ್ನುವುದು ಅವರವರಿಗೆ ಸಂಬಂಧಪಟ್ಟಿದ್ದು. ಸ್ವತಃ ಶ್ರೀರಾಮಚಂದ್ರನೇ ಮಾಂಸಾಹಾರಿಯಾಗಿದ್ದ. ಡಾ॥ ರಾಜಕುಮಾರ್ ರಾಘವೇಂದ್ರ ಸ್ವಾಮಿಗಳ ಪಾತ್ರ ಮಾಡುವಾಗ ಮಾಂಸವನ್ನು ಸೇವಿಸುತ್ತಿರಲಿಲ್ಲವಂತೆ. ಹಾಗೆಯೇ ಎನ್.ಟಿ.ಆರ್ ಕೂಡಾ ಶ್ರೀರಾಮನ ಪಾತ್ರ ಮಾಡುವಾಗ ಮಾಂಸಾಹಾರವನ್ನು ಮುಟ್ಟುತ್ತಿರಲಿಲ್ಲವಂತೆ. ಇದು ಶಿಷ್ಟಾಚಾರ. ಅಷ್ಟರಮಟ್ಟಿಗೆ ಅವರಲ್ಲಿ ದೇವರ ಬಗ್ಗೆ ಗೌರವವಿತ್ತು.

ಮಹಾತ್ಮಾಗಾಂಧಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅಂದರೆ ಇಂತಹ ಗುಣಗಳನ್ನು ಅವರು ಗುರುತಿಸಿದ್ದರು. ಆದರೆ ನಮ್ಮ ದುರ್ದೈವಕ್ಕೆ, ನಮ್ಮ ದುಷ್ಟರಾಜಕಾರಣಿಗಳಿಗೆ ಇವು ಯಾವುವೂ ಬೇಡ. 'ತ್ಯಾಗೇನೈಕೇ ಅಮೃತತ್ವಮಾನಶುಃ'-"ತ್ಯಾಗದಿಂದ ಬರುವ ಸುಖವೇ ನಿಜವಾದ ಸುಖ" ಎಂಬುದು ಶ್ರೀರಾಮನ ಆದರ್ಶವಾಗಿತ್ತು. ಅರಸು ಪದವಿ, ಆಡಳಿತ ಪೀಠ, ಧರ್ಮಸಂರಕ್ಷಣೆಯ ಹೊಣೆ ಹೊತ್ತ ಧರ್ಮಪ್ರಭುವಿನ ತ್ಯಾಗಕ್ಷೇತ್ರ ಮಾತ್ರ, ಅದು ಸ್ವ-ವೈಭವೀಕರಣದ ಭೋಗದ ಸ್ಥಾನವಲ್ಲ ಎಂದು ತೋರಿಸಿಕೊಟ್ಟ ಮಹಾನುಭಾವ ಶ್ರೀರಾಮಚಂದ್ರ. ಭೋಗ್ಯಕಾತರರಾದ ಇಂದಿನ ಬಹುಪಾಲು ರಾಜಕಾರಣಿಗಳಿಗೆ ಇದು ಅರ್ಥವಾಗುವುದಿಲ್ಲ.

ಶ್ರೀ ರಾಮನು ಮಾನವ ಕುಲಕ್ಕೆ ಆದರ್ಶ ಏಕೆ?

▶ ವಿದ್ವಾನ್ ನರಸಿಂಹ ಭಟ್ಟ

ಎಲ್ಲರಿಗೂ ಬಂದ ಜಿಜ್ಞಾಸೆ ಇದು. ಏಕೆಂದರೆ ರಾಮನವಮಿ ಒಂದು ಶ್ರೇಷ್ಠವಾದ ಪರ್ವ. ಈ ಪರ್ವವು ನಮ್ಮನ್ನು ಶ್ರೀರಾಮನ ಆದರ್ಶದ ಕಡೆ ಕೊಂಡೊಯ್ಯುತ್ತದೆ. ಹಾಗಾಗಿ ಇಂದು ರಾಮನನ್ನು ಪರಂಪರೆಯಾಗಿ ನೆನಪಿಸಿಕೊಳ್ಳುವ ಶ್ರೇಷ್ಠವಾದ ಪವಿತ್ರವಾದ ಪರ್ವ. ಅದಾವ ಕಾಲದ ಇತಿಹಾಸದಲ್ಲಿ ಬರುವ ಒಬ್ಬ ವ್ಯಕ್ತಿಯನ್ನು ನಾವು ಏಕೆ ಸ್ಮರಿಸಿಕೊಳ್ಳಬೇಕು? ಅವನ ನಡೆ, ಅವನ ನುಡಿಯನ್ನು ಅದೇಕೆ ಅನುಸರಿಸಬೇಕು? ಅನುಕರಿಸಬೇಕು? ಎಂಬುದು ನಮಗೆ ಬರುವ ಸಾಮಾನ್ಯ ಪ್ರಶ್ನೆಯಾಗಿದೆ. ಹೀಗೊಂದು ಮಾತು - "ನ ದೇವಚರಿತಂ ಚರಿತಂ ಚರೇತ್" ಎಂಬುದಾಗಿ. ಅಂದರೆ ದೇವರು ಮಾಡಿದಂತೆ ಮಾಡಬಾರದು ಎಂಬುದಾಗಿ. ಇನ್ನೊಂದು ಮಾತು - "ರಾಮಾದಿವತ್ ವರ್ತಿತವ್ಯಂ ನ ತು ರಾವಣಾದಿವತ್" ರಾಮನಂತೆ ಇರಬೇಕು; ರಾವಣನಂತೆ ಅಲ್ಲ ಎಂಬುದಾಗಿ. ಎರಡು ಮಾತುಗಳು ಪರಸ್ಪರ ವಿರೋಧದಂತೆ ಕಾಣುತ್ತವೆ. ವಾಸ್ತವವಾಗಿ ಇವೆರಡೂ ವಿರೋಧದಂತೆ ಭಾಸವಾಗುತ್ತದೆ; ಆದರೆ ವಿರೋಧವಿಲ್ಲ. ಹಾಗಾದರೆ ನಾವು ರಾಮನಂತೆ ನಡೆಯಬಾರದೇ? ರಾಮನಂತೆ ನುಡಿಯಬಾರದೇ? ಎಂಬ ಪ್ರಶ್ನೆಯೂ ಇದರ ಜೊತೆಯಲ್ಲಿ ಸಹಜವಾಗಿ ಬರುತ್ತದೆ. ಹಾಗಾಗಿ ಈ ಎಲ್ಲಾ ವಿಷಯಗಳನ್ನು ಇಟ್ಟುಕೊಂಡು ರಾಮನನ್ನು ಸ್ವಲ್ಪ ನೆನಪಿಸಿಕೊಳ್ಳೋಣ.

ಶ್ರೀಮದ್ ರಾಮಾಯಣದಲ್ಲಿ ವಾಲ್ಮೀಕಿಗಳು ನಾರದರಿಗೆ ಕೇಳುವ ಪ್ರಶ್ನೆ. ಅನೇಕ ಗುಣಗಳನ್ನು ಪಟ್ಟಿ ಮಾಡಿ ಇಂತಹ ಗುಣವಿಶಿಷ್ಟನಾದ ಯಾವನಾದರೂ ಒಬ್ಬ ವ್ಯಕ್ತಿ ಇದ್ದಾನೆಯೇ? ಎಂದು. ಅದಕ್ಕೆ ದಶರಥನಂದನ, ರಘುಕುಲತಿಲಕ, ಸರ್ವಜನಪ್ರಿಯ ವೇದ-ವೇದಾಂಗ-ತತ್ತ್ವಜ್ಞ, ಸ್ಮಿತಪೂರ್ವಭಾಷೀ, ಏಕಪತ್ನೀವ್ರತಸ್ಥ ಇತ್ಯಾದಿ ಅನೇಕ ಗುಣಗಳನ್ನು ಪಟ್ಟಿ ಮಾಡಿ ಶ್ರೀರಾಮನ ಆದರ್ಶದ ವ್ಯಕ್ತಿತ್ವವನ್ನು ಎಲ್ಲರೂ ಮನಗಾಣುವಂತೆ ವಿವರಿಸುವುದನ್ನು ನಾವು ಕಾಣಬಹುದು. ಅಂದರೆ ಶ್ರೀರಾಮನು ಒಬ್ಬ ಅವತಾರಿ. ಅವನ ಸಂಕಲ್ಪವು ಮಾನವನ ಅವತಾರರೂಪವಾದದ್ದು. ರಾವಣನ ಸಂಹಾರಕ್ಕೆಂದೇ ಅವತರಿಸಿದ ಯುಗಪುರುಷ. ರಾವಣನ ವರ ಫಲಿಸಬೇಕಾದರೆ ಮಾನವನರೂಪದಲ್ಲಿ ಅವತರಿಸಬೇಕಾದದ್ದು ಅತ್ಯಂತ ಅನಿವಾರ್ಯವಾಗಿತ್ತು. ಹಾಗಾಗಿ ಶ್ರೀರಾಮನು ತನ್ನ ದೇವತ್ವವನ್ನು ಎಲ್ಲೂ ಪ್ರಕಟಪಡಿಸದೇ ಮಾನವನಾಗಿಯೇ ತನ್ನ ಬದುಕಿನ ಕೊನೆಯವರೆಗೂ ವ್ಯವಹರಿಸಿದ. ಅತಿಮಾನುಷವಾದ ಯಾವ ಪವಾಡವನ್ನೂ ಮಾಡಿಲ್ಲ, ಮಾನವನ ಪರಿಮಿತಿಗೆ ಮೀರಿದ ಅದಾವ ಕಾರ್ಯವೂ ಅವನಿಂದಾಗಿಲ್ಲ, ಒಬ್ಬ ಸಾಮಾನ್ಯ ಮಾನವನಾಗಿ ಹೇಗೆ ಬದುಕಿ, ಬಲಿಷ್ಠನಾದ ರಾವಣನಂತಹ ಶತ್ರುವನ್ನು ಸಂಹರಿಸಬಹುದು? ಎಂಬುದಾಗಿ ಬದುಕಿ ತೋರಿಸಿದ. ಹಾಗಾಗಿ ಶ್ರೀರಾಮನ ಚರಿತೆ ನಮಗೆ ಅನುಕರಣೀಯ. ಇನ್ನೊಂದು ಮಾತು ನ ದೇವಚರಿತಂ ಚರೇತ್ ಎಂಬ ಮಾತಿಗೆ ಇದು ವಿರುದ್ಧವಲ್ಲವೇ? ಎಂದರೆ ಶ್ರೀರಾಮನು ಎಲ್ಲೂ ತನ್ನ ದೇವತ್ವವನ್ನು ಪ್ರದರ್ಶಿಸಿಲ್ಲ, ತನ್ನ ಅವತಾರ ಸ್ವರೂಪವಾದ ಮಾನುಷರೂಪವನ್ನೇ ಎಲ್ಲೆಡೆ ನಿರೂಪಿಸಿದ. ಹಾಗಾಗಿ ಶ್ರೀರಾಮನದ್ದು ಮಾನವಜೀವನವೇ ಹೊರತು, ದೇವಜೀವನ ಅಲ್ಲ. ಆದ್ದರಿಂದ ಶ್ರೀರಾಮನ ಚರಿತೆ ಅನುಕರಣೀಯ ಮತ್ತು ಅನುಸರಣೀಯ. ಇಂತಹ ವಿಶಿಷ್ಟ ಗುಣಸಂಪನ್ನನಾದ ರಾಮನು ನಮಗೆಲ್ಲರಿಗೂ ಆದರ್ಶ.

ಈ ಹಿಂದೆ ಹೇಳಿದಂತೆ ಅವನು ಬಾಲ್ಯದಿಂದ ಹಿಡಿದು ನಿರ್ಯಾಣದವರೆಗೆ ಅನೇಕ ಆದರ್ಶಗುಣಗಳನ್ನು ಪ್ರಕಟಪಡಿಸಿದ. ತಂದೆಗೆ ಮಗನಾಗಿ ಯಾವ ರೀತಿ ಇರಬೇಕು? ಎಂಬುದನ್ನು ತೋರಿಸಿದ. ತಂದೆಗೆ ಅನೇಕ ಪತ್ನಿಯರಿದ್ದರೂ ಅವರೆಲ್ಲರನ್ನು ತನ್ನ ಸ್ವಂತ ತಾಯಿಯಂತೆ ಹೇಗೆ ಪರಿಗಣಿಸಬಹುದು ಎಂಬ ಉದಾತ್ತಭಾವವನ್ನು ಬಿತ್ತರಿಸಿದ. ಒಬ್ಬನೇ ತಂದೆಗೆ ಮೂವರು ಪತ್ನಿಯರಲ್ಲಿ ಹುಟ್ಟಿದ ನಾಲ್ಕು ಜನ ಅಣ್ಣತಮ್ಮಂದಿರು ಹೇಗೆ ಅನ್ಯೋನ್ಯವಾಗಿ ಬದುಕಬಹುದು ಎಂಬುದನ್ನು ತೋರಿಸಿಕೊಟ್ಟ. ಹೇಗೆ ಗುರುವಿಗೆ ತಕ್ಕ ಶಿಷ್ಯ ಎಂಬುದನ್ನು ವಿಶ್ವಾಮಿತ್ರನ ಯಜ್ಞಸಂರಕ್ಷಣೆಯ ನೆಪದಲ್ಲಿ ನೆನಪಿಸಿದ. ತಾನು ಆಡಿದಂತೆ ಮಾಡುವೆನು ಎಂಬ ಸತ್ಯಸಂಧತೆಯನ್ನು ರಾಮಾಯಣದ ಬುಡದಿಂದ ತುದಿಯವರೆಗೆ ಅರುಹಿದ. ಸುಗ್ರೀವನ ಜೊತೆ ಸಖ್ಯವನ್ನು ಬೆಳೆಸಿ ಹೇಗೆ ಮೈತ್ರಿಯನ್ನು ಮಾಡಬೇಕು? ಎಂಬುದನ್ನು ಜಾಹೀರಪಡಿಸಿದ. ಶತ್ರುವಿನ ಪಾಳೆಯದಲ್ಲಿ ಇದ್ದು ಶರಣಾಗತನಾಗಿ ಬಂದರೆ ಅವರನ್ನು ಹೇಗೆ ಸ್ವೀಕರಿಸಬೇಕು? ಎಂಬುದನ್ನು ತೋರಿಸಿ ಶರಣಾಗತ-ವತ್ಸಲನಾದ ಎಂಬುದನ್ನು ವಿಭೀಷಣ ಶರಣಾಗತಿಯ ಪ್ರಕರಣದಲ್ಲಿ ಜಗತ್ತಿಗೆ ತಿಳಿಸಿದ. ವೈರವು ವ್ಯಕ್ತಿಗತವಾದದ್ದಲ್ಲ; ವ್ಯಕ್ತಿಯಲ್ಲಿರುವ ದೋಷಗತವಾದದ್ದು ಎಂಬುದನ್ನು ತಿಳಿಸಲು ಮರಣಾಂತಾನಿ



ವೈರಾಣಿ ಎಂಬಂತೆ ರಾವಣನ ಮತ್ತು ವಾಲಿಯ ಮರಣದ ಅನಂತರ ಸ್ವತಃ ತಾನೇ ಇದ್ದು ಅವರಿಬ್ಬರಿಗೂ ಅಂತ್ಯಕ್ರಿಯೆಯನ್ನು ಮಾಡಿಸಿದ್ದು ಅವನೆಂತಹ ಸಮತ್ವ ಉಳ್ಳವನು!? ಎಂಬುದನ್ನು ತಿಳಿಸಿದ. ಹೀಗೆ ಅವನ ಪ್ರತಿ ಹೆಜ್ಜೆಯೂ ಆದರ್ಶ. ಅವನ ಪ್ರತಿ ನುಡಿಯೂ ಆದರ್ಶ. ರಾಮನೆಂದೂ ತಪ್ಪನ್ನು ಮಾಡಲಿಲ್ಲ; ತಪ್ಪನ್ನು ಆಡಿಲ್ಲ, ಏಕೆಂದರೆ ಅವನೊಬ್ಬ ಧರ್ಮಪುರುಷ. ಧರ್ಮವೇ ಅವತರಿಸಿದರೆ ಅದು ರಾಮನಾಗುವುದು ತಾನೆ! ಧರ್ಮವಾದಲ್ಲಿ ಎಂದಾದರೂ ತಪ್ಪು ನಡೆಯಲು ಸಾಧ್ಯವೇ? ಹಾಗಾಗಿ ನಮ್ಮ ಬುದ್ಧಿಗೆ ಶ್ರೀರಾಮನು ತಪ್ಪಾಗಿ ಕಂಡರೆ, ಅದು ನಮ್ಮ ಬುದ್ಧಿಯ ದೋಷದಿಂದ ಅಷ್ಟೇ, ಹೊರತು ಶ್ರೀರಾಮನ ತಪ್ಪಲ್ಲ, ಅಲ್ಲಿ ತಪ್ಪು ಅಸಾಧ್ಯ. ಏಕೆಂದರೆ ಅವನು ಧರ್ಮಮೂರ್ತಿ. ಹೀಗೆ ಧರ್ಮಸ್ವರೂಪನಾಗಿ, ಗುಣಪರಿಪೂರ್ಣನಾಗಿ, ಆದರ್ಶ ಮಾನವನಾಗಿ ಬೆಳಗಿದ.

ಅಷ್ಟೇ ಅಲ್ಲ, ಇಂದ್ರಿಯಗಳಿಗೂ ಅತಿ ವಿಷಯನಾದ, ತನ್ನ ನಡೆಯಿಂದ ಸಾಮಾನ್ಯರಿಗೂ ಅನುಕರಣೀಯನಾದ. ಯಾರು ಅಂತರಂಗದಲ್ಲಿ ಕಾಣಲು ಸಮರ್ಥರೋ ಅವರಿಗೂ ಶ್ರೀರಾಮನು ದೇವನಾಗಿ ಕಂಡ. ಯಾರು ಇನ್ನೂ ಒಳಗೆ ಕಾಣಬಲ್ಲರೋ ಅವರಿಗೆ ಆತ್ಮಾರಾಮನಾಗಿ ಗೋಚರಿಸಿದ. ಇದಕ್ಕೆ ಶ್ರೀರಂಗ ಮಹಾಗುರುಗಳ ಒಂದು ಮಾತು ಸಾಕು ಶ್ರೀರಾಮನ ಅಸಾಧಾರಣತ್ವವನ್ನು ಅರ್ಥಮಾಡಿಕೊಳ್ಳಲು. "ನಾರಾಯಣನು ನರನಾಗಿ ಅವತರಿಸಿ ನರರೊಡನೆ ಕರೆದುಕೊಂಡು ಹೋಗಲು ಇಳಿದು ಬಂದವನೇ ಶ್ರೀರಾಮ" ಎಂಬ ಮಾತು ಶ್ರೀರಾಮನ ಪರಿಪೂರ್ಣ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತೆ. ಕೇವಲ ಪರ್ವಕಾಲದಲ್ಲಿ ಮಾತ್ರವಲ್ಲ, ಯಾವಾಗಲೂ ಶ್ರೀರಾಮನ ಆದರ್ಶ ವ್ಯಕ್ತಿತ್ವವನ್ನು ನಾವು ಸ್ಮರಿಸಬೇಕು ಎಂಬುದಾಗಿ ಭಾವಿಸುತ್ತೇನೆ.

ಕಿರುಸುದ್ದಿ

ಉಚಿತ ತಪಾಸಣೆ ಶಿಬಿರ

• **ಗದಗ:** ನಗರದ ಡಾ.ಮಹಾರವಾಡೆ ಕಣ್ಣಿನ ಆಸ್ಪತ್ರೆಯಲ್ಲಿ, ಗ್ಲುಕೋಮಾ ಜಾಗೃತಿ ವಾರದ ಅಂಗವಾಗಿ ಉಚಿತ ಕಣ್ಣು ತಪಾಸಣೆ ಶಿಬಿರ ಆಯೋಜಿಸಲಾಯಿತು. ಲಯನ್ಸ್ ಕ್ಲಬ್ ಮತ್ತು ಮಾ ಕುಷ್ಮಾಂಡಾ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಕಣ್ಣಿನ ಒತ್ತಡ ಪರೀಕ್ಷೆ, ದೃಷ್ಟಿ ಪರೀಕ್ಷೆ ಹಾಗೂ ನೇತ್ರ ತಜ್ಞರ ಸಲಹೆಗಳನ್ನು ನೀಡಲಾಯಿತು.

ಮಾಂಸ ಮಾರಾಟ ನಿಷೇಧ

• **ಗದಗ:** ಮಹಾವೀರ ಜಯಂತಿ ಅಂಗವಾಗಿ ಮಾ.31 ರಂದು ಜಾನುವಾರುಗಳ ವಧೆ ಹಾಗೂ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ನಗರಸಭೆ ವ್ಯಾಪ್ತಿಯ ಖಸಾಯಿಖಾನೆಗಳಲ್ಲಿ ಪ್ರಾಣಿವಧೆ ಮಾಡುವ ಹಾಗೂ ಮಾಂಸ ಮಾರಾಟಗಾರರಿಗೆ ತಿಳಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದಲ್ಲಿ ಅಂಥವರ ಲೈಸನ್ಸನ್ನು ರದ್ದು ಮಾಡಲಾಗುವುದು ಎಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ನವೋದಯ ಶಾಲೆಗೆ ಆಯ್ಕೆ

• **ಗಜೇಂದ್ರಗಡ:** ತಾಲೂಕಿನ ಲಕ್ಕಲಕಟ್ಟಿ ಗ್ರಾಮದ ಸರ್ಕಾರಿ ದ್ವಿಭಾಷಾ ಮಾಧ್ಯಮ ಪ್ರಾಥಮಿಕ ಶಾಲೆಯ 5ನೇ ತರಗತಿಯ ವಿದ್ಯಾರ್ಥಿ ಸಾತ್ವಿಕ ಮ್ಯಾಗೇರಿ ಇವರು 2026–27ನೇ ಸಾಲಿನ ಜವಾಹಾರ ನವೋದಯ ವಿದ್ಯಾಲಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯ್ಕೆಯಾಗಿದ್ದಾರೆ ಎಂದು ಶಾಲೆಯ ಮುಖ್ಯ ಶಿಕ್ಷಕ ಎ. ಆರ್. ಚವಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅವಿರೋಧ ಆಯ್ಕೆ

• **ಗದಗ:** ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಯುವ ಘಟಕದ ಅಧ್ಯಕ್ಷರನ್ನಾಗಿ ಶಿವರಾಜಗೌಡ ಹಿರೇಮನಿಪಾಟೀಲ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮಂಜುನಾಥ ಮ್ಯಾಗೇರಿ ಅವರ ನಿಧನದಿಂದಾಗಿ ತೆರವಾಗಿದ್ದ ಸ್ಥಾನಕ್ಕೆ ಉಮೇಶ ಪೂಜಾರ ಅವರನ್ನು ಕಾರ್ಯಕಾರಿ ಮಂಡಳಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ. ಮಹಾಸಭಾದ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದ್ದು ಈ ಕುರಿತು ಜಿಲ್ಲಾ ಅಧ್ಯಕ್ಷರು ನೇಮಕಾತಿ ಆದೇಶ ನೀಡಿದ್ದಾರೆ ಎಂದು ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ ತಿಳಿಸಿದ್ದಾರೆ.



ನಿಧನಸುದ್ದಿ

ಗೂಳಪ್ಪ ಆಯಟ್ಟಿ

• **ನರಗುಂದ:** ಪಟ್ಟಣದ ದಂಡಾಪೂರ ಪೇಠ ನಿವಾಸಿ ನಿವೃತ್ತ ಶಿಕ್ಷಕ ಗೂಳಪ್ಪ ಫಕೀರಪ್ಪ ಆಯಟ್ಟಿ (94) ಬುಧವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ, ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಯಲ್ಲಮ್ಮ ಹಾದಿಮನಿ

• **ಶಿರಹಟ್ಟಿ:** ಪಟ್ಟಣದ ವಿಜಯ ನಗರ ಬಡಾವಣೆಯ ನಿವಾಸಿ ಶತಾಯುಷಿ ಯಲ್ಲಮ್ಮ ಯಲ್ಲಪ್ಪ ಹಾದಿಮನಿ (104) ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	3249-7558
ಅಜವಾನ	7369-8670
ಅಲಸಂದಿಕಾಳು	4069-6311
ಕಡಲೆ	1019-5425
ಉದ್ದು	3412-3412
ಹವೀಜ	8911-8911
ಹತ್ತಿ	7600-7600
ಹೆಸರು	1244-7809
ಹುರಳಿ	1869-4059
ಜೋಳ	1359-4553
ಸಾಸವಿ	4219-5069
ಕುಸಬಿ	4260-5232
ಸೂರ್ಯಕಾಂತಿ	6430-6700
ತೊಗರಿ	4444-5412
ಗೋಧಿ	1244-4857
ಗೋವಿನಜೋಳ	1700-1700



ಮುಂಡರಗಿ: ಕರ್ನಾಟಕ ಸರ್ಕಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರಿನ ರವೀಂದ್ರ ಕಲಾ ಭವನದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಮಾರಂಭದಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡು ನಾಡು, ನುಡಿ ಸೇವೆ ಮಾಡುತ್ತಿರುವ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಜಂತಲಿ-ಶಿರೂರು ಗ್ರಾಮದ ಭಾಗ್ಯಶ್ರೀ ಗವಿಸಿದ್ಧಯ್ಯ ಹಳ್ಳಿಕೇರಿಮಠ ಅವರಿಗೆ 2026ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪಂಪ ಪ್ರತಿಷ್ಠಾನ ರಚನೆಗೆ ಶಾಂತಲಿಂಗ ಶ್ರೀ ಹರ್ಷ

ನರಗುಂದ: ಕನ್ನಡ ಸಾಹಿತ್ಯದ ಮೇರು ಕವಿ, ಆದಿಕವಿ ಪಂಪನ ಜನ್ಮ ಸ್ಥಳ ಅಣ್ಣಿಗೇರಿಯಲ್ಲಿ, ಕರ್ನಾಟಕ ಸರ್ಕಾರ ಪಂಪ ಪ್ರತಿಷ್ಠಾನ ರಚನೆ ಮಾಡಿರುವುದು ಸಂತಸದ ಸಂಗತಿಯಾಗಿದೆ ಎಂದು ಭೈರನಹಟ್ಟಿ-ಶಿರೋಳ ಮಠದ ಪೀಠಾಧಿಪತಿ ಶಾಂತಲಿಂಗ ಸ್ವಾಮೀಜಿ ಹರ್ಷ ವ್ಯಕ್ತಪಡಿಸಿದರು. ಲಿಂ ಜಗದ್ಗುರು ಡಾ.ತೋಂಟದ ಸಿದ್ಧಲಿಂಗ ಶ್ರೀಗಳ ಕನಸನ್ನು ಕರ್ನಾಟಕ ಸರ್ಕಾರ ಸಾಕಾರಗೊಳಿಸಿದೆ. ಆದಿಕವಿ ಪಂಪ ಅವರಿಗೆ ಗೌರವ ಸಲ್ಲಿಸಿದಂತಾಗಿದೆ. ವಿಕ್ರಮಾರ್ಜುನ ವಿಜಯ ಕೃತಿಯ ಮೂಲಕ ಜಾತಿ ಸಂಕೋಲೆಗೆ ತಿಲಾಂಜಲಿ ನೀಡಿದ ಆದಿಕವಿ ಪಂಪರ ಕುರಿತು ಮತ್ತಷ್ಟು ಸಂಶೋಧನೆ ಮಾಡಲು ಪ್ರೋತ್ಸಾಹ ನೀಡಿದಂತಾಗಿದೆ. ಕನ್ನಡ ಭಾಷೆಯಲ್ಲಿ ಹಿಡಿತ ಉಳ್ಳವರಾಗಿದ್ದ ಪಂಪ ಸಾಹಿತ್ಯದ ಮೂಲಕ ಆರಂಕುಶವಿಟ್ಟೊಡ ನೆನೆಯುವುದೆನ್ನ ಮನ ಬನವಾಸಿ ದೇಶಂ ಎಂದು ಬಣ್ಣಿಸಿದಿರುವುದು ಅವರ ದೇಶಪ್ರೇಮಕ್ಕೆ ಸಾಕ್ಷಿಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಮುಖ್ಯ ಕಾರ್ಯಾಲಯದ ಮುಖ್ಯದ್ವಾರದಲ್ಲಿ, ಪಂಪನ ನಾಣ್ನುಡಿಯನ್ನು ಅಳವಡಿಸಿ ಸರ್ವರೂ ಒಂದೇ ಎಂಬ ಭಾವನೆಯನ್ನು ಮೂಡಿಸಲಾಗಿದೆ. ಅಂತಹ ಶ್ರೇಷ್ಠ ಕವಿಯ ಪುಣ್ಯಭೂಮಿ ಧಾರವಾಡ ಜಿಲ್ಲೆಯ ಅಣ್ಣಿಗೇರಿಯಲ್ಲಿ ಪಂಪ ಪ್ರತಿಷ್ಠಾನ ರಚನೆ ಮಾಡಿರುವುದು ಸಂತೋಷದ ವಿಷಯ. ಪಂಪರ ಕುರಿತು ಈ ಮೂಲಕ ಇನ್ನಷ್ಟು ಸಂಶೋಧನೆಗಳು ನಡೆಯಲಿ ಎಂದರು.



ಲಕ್ಷ್ಮೇಶ್ವರ: ಪಟ್ಟಣದ ಬಜಾರ ರಸ್ತೆಯಲ್ಲಿರುವ ಎಂ.ಬಿ.ಹತ್ತಿಕಾಳ ಅವರ ವಾಣಿಜ್ಯ ಸಂಕೀರ್ಣದಲ್ಲಿ ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಶ್ರೀ ವೀರಪುಲಕೇಶಿ ಕೋ-ಆಪರೇಟಿವ್ ಬ್ಯಾಂಕ್‌ನ 14ನೇ ಶಾಖೆಯನ್ನು ಶಿರಹಟ್ಟಿ ಸಂಸ್ಥಾನಮಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಉದ್ಘಾಟಿಸಿದರು. ಬ್ಯಾಂಕಿನ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕರುಗಳಾದ ಜಿ.ಎಸ್.ಗಡ್ಡದೇವರಮಠ, ರಾಮಣ್ಣ ಲಮಾಣಿ ಮಾತನಾಡಿದರು. ಬ್ಯಾಂಕಿನ ಉಪಾಧ್ಯಕ್ಷ ಡಾ. ಡಿ.ಎಂ. ಪೈಲ ಇತರರಿದ್ದರು.

ಮುಂಡರಗಿ ಪುರಸಭೆ ಉಳಿತಾಯ ಬಜೆಟ್ ಮಂಡಿಸಿದ ಆಡಳಿತಾಧಿಕಾರಿ ಗಂಗಪ್ಪ

₹15.78 ಕೋಟಿ ಆದಾಯ ನಿರೀಕ್ಷೆ

• **ಮುಂಡರಗಿ:** ಇಲ್ಲಿನ ಪುರಸಭೆಯ 2026–27ನೇ ಸಾಲಿನಲ್ಲಿ 1 ಕೋಟಿ 89ಲಕ್ಷದ 25 ಸಾವಿರ ರೂ. ಉಳಿತಾಯ ಬಜೆಟನ್ನು ಗುರುವಾರ ಪುರಸಭೆಯ ಆಡಳಿತಾಧಿಕಾರಿ ಮತ್ತು ಗದಗ ಉಪವಿಭಾಗಾಧಿಕಾರಿ ಎಂ. ಗಂಗಪ್ಪ ಮಂಡಿಸಿದರು.

ಅವರು ಪುರಸಭೆಯ ಸಭಾಭವನದಲ್ಲಿ ಬಜೆಟ್ ಮಂಡನೆಯ ವೇಳೆಯಲ್ಲಿ ತಿಳಿಸಿದರು. ತೆರಿಗೆ ಆದಾಯಗಳಿಂದ 2 ಕೋಟಿ 80ಲಕ್ಷ 14ಸಾವಿರ ರೂ., ತೆರಿಗೆಯೇತರ ಆದಾಯಗಳಿಂದ 2ಕೋಟಿ 96 ಲಕ್ಷದ 15 ಸಾವಿರ ರೂ., ಎಸ್‌ಎಫ್‌ಸಿ ಮುಕ್ತ ನಿಧಿ ಅನುದಾನ, 15–16ನೇ ಹಣಕಾಸು ಅನುದಾನ, ಎಸ್‌ಎಫ್‌ಸಿ ವಿಶೇಷ ಅನುದಾನ, ಎಸ್‌ಎಫ್‌ಸಿ ವಿಶೇಷ ಅನುದಾನ, ಕುಡಿಯುವ ನೀರು ಸಮಸ್ಯೆ ಪರಿಹಾರ ಅನುದಾನ ಇತರೆ ಸೇರಿ ಒಟ್ಟು 15ಕೋಟಿ 78ಲಕ್ಷ 64 ಸಾವಿರ ರೂ. ಆದಾಯ ನಿರೀಕ್ಷಿಸಲಾಗಿದೆ ಎಂದರು.

ಆಡಳಿತ ಮತ್ತು ಕಚೇರಿ ವೆಚ್ಚ ಹಾಗೂ ಇನ್ನಿತರೆ ಖರ್ಚು ಸೇರಿ 6 ಕೋಟಿ 62ಲಕ್ಷದ 15ಸಾವಿರ ರೂ., ನೀರು ಸರಬರಾಜು ನಿರ್ವಹಣೆಗೆ 1ಕೋಟಿ 32ಲಕ್ಷ 36 ಸಾವಿರ ರೂ., ಬೀದಿ ದೀಪ ನಿರ್ವಹಣೆಗೆ 3ಕೋಟಿ 10 ಲಕ್ಷ 12ಸಾವಿರ ರೂ., ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ 1ಕೋಟಿ 64ಲಕ್ಷ 21ಸಾವಿರ ರೂ., ಕಟ್ಟಡ ಕಾಮಗಾರಿ, ಯಂತ್ರೋಪಕರಣಗಳು, ರಸ್ತೆಗಳು ಕಲ್ಲು ಹಾಸುಗಳು ಮತ್ತು ಪಾದಚಾರಿ ಮಾರ್ಗಗಳು, ಇನ್ನಿತರೆ ಪಟ್ಟಣದ ಅಭಿವೃದ್ಧಿ ಕೆಲಸಕ್ಕೆ ಒಟ್ಟು 36 ಕೋಟಿ 12ಲಕ್ಷದ 10ಸಾವಿರ ರೂ.ಗಳ ಖರ್ಚು ಅಂದಾಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪುರಸಭೆ ನಿಧಿಯಲ್ಲಿ ಎಸ್ಸಿ, ಎಸ್ಟಿ ಕಲ್ಯಾಣ ಕಾರ್ಯಕ್ರಮ, ಬಡಜನರ ಕಲ್ಯಾಣಕ್ಕಾಗಿ, ಅಂಗವಿಕಲರ ಕಲ್ಯಾಣಕ್ಕಾಗಿ, ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು 3ಲಕ್ಷದ 64ಸಾವಿರ ರೂ. ಹಾಗೂ ಎಸ್‌ಎಫ್‌ಸಿ ಮುಕ್ತ ನಿಧಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಲ್ಯಾಣಕ್ಕಾಗಿ 17ಲಕ್ಷದ 57ಸಾವಿರ ರೂ., ಇತರೆ ಬಡಜನರ ಕಲ್ಯಾಣಕ್ಕೆ, ಅಂಗವಿಕಲರ ಕಲ್ಯಾಣಕ್ಕೆ 8 ಲಕ್ಷದ 92ಸಾವಿರ ರೂ. ಮೀಸಲಿರಿಸಲಾಗಿದೆ ಎಂದರು.

ಕಟ್ಟಡ ಕಾಮಗಾರಿಗಳಿಗೆ 65 ಲಕ್ಷ 78 ಸಾವಿರ ರೂಗಳು, ಯಂತ್ರೋಪಕರಣಗಳಿಗಾಗಿ 27 ಲಕ್ಷ 59 ಸಾವಿ ರೂಗಳು, ರಸ್ತೆಗಳು, ಕಲ್ಲು ಹಾಸುಗಳು, ಪಾದಚಾರಿ ಮಾರ್ಗಗಳು, ಮತ್ತು ಇನ್ನಿತರ ಮೂಲಭೂತ ಸೌಕರ್ಯಗಳಿಗಾಗಿ 3 ಕೋಟಿ 82 ಲಕ್ಷ ರೂ.ಗಳು, ಚರಂಡಿ ಮತ್ತು ಸ್ಲ್ಯಾಬ್ ಕಾಮಗಾರಿಗಳಿಗೆ 50 ಲಕ್ಷ 41 ಸಾವಿರ ರೂ.ಗಳು, ನೈರ್ಮಲ್ಯ ಹಾಗೂ ಘನತ್ಯಾಜ್ಯ ನಿರ್ವಹಣೆಗಾಗಿ 19 ಲಕ್ಷ 67 ಸಾವಿರ ರೂ.ಗಳು, ಉದ್ಯಾನವನಗಳಿಗಾಗಿ 82 ಲಕ್ಷ 29 ಸಾವಿರ ರೂ.ಗಳು, ನಾಗರಿಕ ವಿನ್ಯಾಸಗಳಿಗಾಗಿ 36 ಲಕ್ಷ 29 ಸಾವಿರ ರೂ.ಗಳು, ನೀರು ಸರಬರಾಜು ಹಾಗೂ ಇನ್ನಿತರೆ ಆಸ್ತಿ ಸೃಜನೆಗೆ 6 ಕೋಟಿ 66 ಲಕ್ಷ 68 ಸಾವಿರ ರೂ.ಗಳಂತೆ ಒಟ್ಟು 12 ಕೋಟಿ 49 ಲಕ್ಷ 88 ಸಾವಿರ ಅಂದಾಜು ನಿರೀಕ್ಷಿಸಲಾಗಿದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಸ್ವಾಗತಿಸಿದರು. ವ್ಯವಸ್ಥಾಪಕ ರಮೇಶ ಗೊಂದಕರ್, ಸಿಬ್ಬಂದಿ ಇತರರಿದ್ದರು.



> ಮುಂಡರಗಿ ಪುರಸಭೆಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಆಸ್ತಿ ತೆರಿಗೆ, ಟ್ರೇಡ್ ಲೈಸೆನ್ಸ್, ಮಳಿಗೆ ಬಾಡಿಗೆ ವಸೂಲಾತಿಯನ್ನು ಫೆ-2026 ರ ಅಂತ್ಯಕ್ಕೆ ಶೇ 100ರಷ್ಟು ವಸೂಲಾತಿ ಮಾಡಿರುವುದು ಶ್ಲಾಘನೀಯ.
>
> ■ ಎಂ. ಗಂಗಪ್ಪ, ಪುರಸಭೆ ಆಡಳಿತಾಧಿಕಾರಿ

ಹೆಚ್ಚು ಬಂಡವಾಳ ಆಸ್ತಿ ಸೃಜನೆ ಗುರಿ

ಮುಂಡರಗಿ ಪಟ್ಟಣಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹೆಚ್ಚಿನ ಆದ್ಯತೆ ನೀಡಿ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಕಟ್ಟುನಿಟ್ಟಿನ ಕ್ರಮ ಅಳವಡಿಸಿ ಹೆಚ್ಚು ಬಂಡವಾಳ ಆಸ್ತಿಗಳನ್ನು ಸೃಜಿಸುವುದೇ ಪುರಸಭೆ ಗುರಿ. ಪಟ್ಟಣವನ್ನು ಸ್ವಚ್ಛ ಮತ್ತು ಸುಂದರವನ್ನಾಗಿಸಲು ಎಲ್ಲ ಕ್ರಮಗಳನ್ನು ಆಯ-ವ್ಯಯದಲ್ಲಿ ಪ್ರಾತಿನಿಧ್ಯತೆ ನೀಡಲಾಗಿದೆ ಎಂದು ಪುರಸಭೆ ಆಡಳಿತಾಧಿಕಾರಿ ಎಂ. ಗಂಗಪ್ಪ ಹೇಳಿದರು.

ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ

• **ಗದಗ:** ನಗರದ ಜಿಲ್ಲಾ ಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ವಿಭಾಗದ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಿಷನ್ ಏಡ್ಸ್ ಸುರಕ್ಷಾ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯು ಜರುಗಿತು.

ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಮಾತನಾಡಿ, ಹೆಚ್.ಐ.ವಿ. ಲಕ್ಷಣಗಳನ್ನು ಗುರುತಿಸಿ, ಕ್ಯೂ-ಆರ್ ಕೋಡ್‌ನ್ನು ಸ್ಕ್ಯಾನ್ ಮಾಡಿ, ಹೆಚ್.ಐ.ವಿ. ಸ್ಥಿತಿಯನ್ನು ತಿಳಿದುಕೊಳ್ಳ ಹಾಗೂ ಹೆಚ್.ಐ.ವಿ. ಸೋಂಕಿತರಿಗೆ ಆತ್ಮ ಸ್ಥೈರ್ಯ, ಮಾನಸಿಕ ಬೆಂಬಲದ ಜೊತೆಗೆ ಧೈರ್ಯ ತುಂಬುವ ಕೆಲಸ ಮಾಡಬೇಕು. ಶಾಲಾ ಕಾಲೇಜುಗಳಲ್ಲಿ ಹೆಚ್.ಐ.ವಿ. ಕುರಿತು ಅರಿವು ಕಾರ್ಯಕ್ರಮಗಳನ್ನು ಮಾಡಬೇಕು. ಹೆಚ್.ಐ.ವಿ ಪೀಡಿತರಿಗೆ ತಾರತಮ್ಯವಿಲ್ಲದೆ ಬದುಕಲು ಸಹಾಯ ಮಾಡುವುದು, ಉದ್ಯೋಗ ಮತ್ತು ಶಿಕ್ಷಣಕ್ಕೆ ಬೆಂಬಲ ನೀಡಬೇಕೆಂದು ಹೇಳಿದರು.

ಹೆಚ್.ಐ.ವಿ., ಸಿಫಿಲಿಸ್, ಹೆಪಟೈಟಿಸ್ ತ್ರಿವಳಿ ರೋಗಗಳು ತಾಯಿಯಿಂದ ಮಗುವಿಗೆ ಹರಡುವುದನ್ನು ಕಡ್ಡಾಯಗೊಳಿಸಲಾಗಿದ್ದು, ಈ ರೋಗದ ಬಗ್ಗೆ ತಪ್ಪು ಕಲ್ಪನೆಗಳಿದ್ದು ಅವುಗಳನ್ನು ನಿವಾರಿಸಲು ಜಾಗೃತಿ ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ತಿಳಿಸಿದರು. ಹೆಚ್.ಐ.ವಿ. ರೋಗವನ್ನು ತಡೆಗಟ್ಟಲು ಸೋಂಕಿತರಿಗೆ ಮಾನವೀಯತೆ ತೋರುವುದೇ ಮುಖ್ಯ ಉದ್ದೇಶವಾಗಿದ್ದು ಡಿಸೆಂಬರ್ ಅಂತ್ಯದವರೆಗೆ ಜಿಲ್ಲೆಯ ಎಲ್ಲ ಸೋಂಕಿತರ ವಿವರ ಪಡೆದು ಚಿಕಿತ್ಸೆ ಪಡೆಯುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಹೊಸ ಸೋಂಕನ್ನು ಪತ್ತೆ ಹಚ್ಚಲು ಕ್ಯೂ-ಆರ್ ಕೋಡ್ ಬಳಸಿ ನಿಮ್ಮ ಹೆಚ್.ಐ.ವಿ. ಸ್ಥಿತಿಯನ್ನು ತಿಳಿದುಕೊಳ್ಳಿ ಎನ್ನುವಂತೆ ಎಲ್ಲ ಹೆಚ್.ಆರ್.ಜಿ. ಮತ್ತು ಸಮುದಾಯವನ್ನು ಹೆಚ್.ಐ.ವಿ. ತಪಾಸಣೆ ಮಾಡಿಸುವಂತೆ ಮನವೊಲಿಸಲು ತಿಳಿಸಿದರು.

ರಾಜ್ಯ ಎಸ್.ವಿ.ಯಾಪ್.ಎಂ. ಸಂಯೋಜಕ ಡಾ.ದೀಪಕ ಅವರು, ಮಿಷನ್ ಏಡ್ಸ್ ಸುರಕ್ಷಾ ಕಾರ್ಯಕ್ರಮದ ಕುರಿತು ವಿವರವಾದ ಮಾಹಿತಿ ನೀಡಿದರು. ಜಿಲ್ಲಾಧಿಕಾರಿಗಳು ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ-2026ರ ನಿಮ್ಮ ಹೆಚ್.ಐ.ವಿ. ಸ್ಥಿತಿಯನ್ನು ತಿಳಿದುಕೊಳ್ಳಿ ಎನ್ನುವ ಕ್ಯೂ-ಆರ್ ಕೋಡ್ ಪೋಸ್ಟರನ್ನು ಬಿಡುಗಡೆ ಮಾಡಿದರು. ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ. ಬಿ.ಸಿ. ಕರಿಗೌಡರ, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಅರುಂಧತಿ ಕೆ., ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ ಕೆ.ಎಸ್., ಮೆಡಿಕಲ್ ಕಾಲೇಜಿನ ಡಾ. ರಮೇಶ ಇತರರಿದ್ದರು.



ಜನರಿಗೆ ಸತ್ಯ ತಿಳಿಸುವ ಜವಾಬ್ದಾರಿ ಪತ್ರಕರ್ತರದ್ದು

• **ಶಿರಹಟ್ಟಿ:** ಸರ್ಕಾರದ ಕಾರ್ಯವೈಖರಿ, ಜನಪ್ರತಿನಿಧಿಗಳ ಕೆಲಸ, ಅಧಿಕಾರಿಗಳ ಜವಾಬ್ದಾರಿ ಮತ್ತು ಪ್ರಚಲಿತ ವಿದ್ಯಮಾನಗಳ ಸತ್ಯ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸುವ ಮಹತ್ವದ ಜವಾಬ್ದಾರಿ ಪತ್ರಕರ್ತರದ್ದಾಗಿದೆ ಎಂದು ಕಾಂಗ್ರೆಸ್ ಪಕ್ಷದ ಯುವ ಮುಖಂಡ ವಿರೂಪಾಕ್ಷಪ್ಪ ನಂದೆಣ್ಣವರ ಹೇಳಿದರು.

ಸ್ಥಳೀಯ ಶಿಕ್ಷಕರ ಸಭಾಭವನದಲ್ಲಿ ಕೆ.ಎಚ್. ಪಾಟೀಲ ಹಾಗೂ ಆನಂದಸ್ವಾಮಿ ಗಡ್ಡದೇವರಮಠ ಅಭಿಮಾನಿ ಬಳಗದ ವತಿಯಿಂದ ನೂತನ ಪತ್ರಕರ್ತ ಪದಾಧಿಕಾರಿಗಳಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಸರ್ಕಾರ ಮತ್ತು ಸಮಾಜದ ನಡುವೆ ಸೇತುವೆಯಾಗಿ ಪತ್ರಿಕಾರಂಗ ಶ್ರಮಿಸುತ್ತಿದೆ. ರಾಜಕಾರಣಿಗಳ ನಿರ್ಧಾರಗಳು, ಯೋಜನೆಗಳು ಹಾಗೂ ಕಾರ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಜನರಿಗೆ ಸರಳವಾಗಿ ಮತ್ತು ಸ್ಪಷ್ಟವಾಗಿ ತಿಳಿಸುತ್ತಾರೆ. ಇದರಿಂದ ಜನರು ರಾಜ್ಯ ಮತ್ತು ದೇಶದ ರಾಜಕೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಮುಖಂಡರಾದ ಪವನ ಕಳಗೇರ, ಗಿರೀಶ ಶೆಟರೆಡ್ಡಿ ಮಾತನಾಡಿ, ಸಮಾಜದಲ್ಲಿನ ನೈಜ ಸ್ಥಿತಿಯನ್ನು ಹೊರತಂದು ಸತ್ಯವನ್ನು ಜನರ ಮುಂದೆ ಇಡುವುದು ಪತ್ರಕರ್ತರ ಪ್ರಮುಖ ಜವಾಬ್ದಾರಿಯಾಗಿದೆ. ನೈಜ ಘಟನೆಗಳ ವರದಿ, ಸಮಾಜದಲ್ಲಿ ನಡೆಯುವ ಅನ್ಯಾಯ, ಭ್ರಷ್ಟಾಚಾರ, ಸಮಸ್ಯೆಗಳು ಮುಂತಾದವುಗಳನ್ನು ಜನರಿಗೆ ತಿಳಿಸಬೇಕು. ಸತ್ಯದ ಅನ್ವೇಷಣೆ ಯಾವುದೇ ವಿಷಯವನ್ನು ಪರಿಶೀಲಿಸಿ, ನಿಖರವಾದ ಮಾಹಿತಿಯನ್ನು ನೀಡುವುದು ಪ್ರಮುಖವಾಗಿದೆ. ಜನರಲ್ಲಿ ಅರಿವು ಮೂಡಿಸಿ ಸಮಾಜದಲ್ಲಿ ಬದಲಾವಣೆ ತರಲು ಸಹಾಯ ಮಾಡುವುದು. ನ್ಯಾಯಕ್ಕೆ ಧ್ವನಿ ನೀಡುವುದು, ಬಲಹೀನರು ಮತ್ತು ಹಿಂದುಳಿದವರ ಪರವಾಗಿ ನಿಲ್ಲುವುದು. ಇದನ್ನು ಪರಿಣಾಮಕಾರಿಯಾಗಿ ಮಾಡಲು ಪತ್ರಕರ್ತರು ನೈತಿಕತೆ, ನಿಷ್ಪಕ್ಷಪಾತತೆ ಮತ್ತು ಜವಾಬ್ದಾರಿ ಇವುಗಳನ್ನು ಪಾಲಿಸಬೇಕು ಎಂದರು.

ಈ ವೇಳೆ ಆನಂದ ಕೋಳಿ, ಸಂಜೀವರೆಡ್ಡಿ ವೆಂಕರಡ್ಡಿ, ಅಜರ್ ಹೆಸರೂರು, ಉದಯ ಕೆ. ಮಾಗಡಿ, ಮಲ್ಲಿಕಾರ್ಜುನ ಪಾಟೀಲ್, ಭರಮರಡ್ಡಿ ಗೋವಣ್ಣವರ, ಪಾಲಾಕ್ಷಪ್ಪ ಇಳಿಗೇರ, ಮಲ್ಲಿಕ್ ನಗಾರಿ, ಚನ್ನಪ್ಪ ಮರೀಗೌಡ್ರ, ಅಬ್ಬು ಮುಳಗುಂದ, ಸುನೀಲ ಜಾಧವ, ರಾಘವೇಂದ್ರ ಕುಲಕರ್ಣಿ, ನಿಂಗಪ್ಪ ಹಮ್ಮಿಗಿ, ಪ್ರದೀಪ ಗೊಡಚಪ್ಪನವರ, ಭರಮಪ್ಪ ಬಳೂಟಗಿ, ಗೌರೀಶ ನಾಗಶೆಟ್ಟಿ, ವೀರೇಶ ಉಮನಾಬಾದಿ ಇದ್ದರು.



ಹಿರಿಯ ನಾಗರಿಕರ ಜೀವನಾನುಭವ ನಾಗರಿಕ ಸಮಾಜಕ್ಕೆ ದಾರಿದೀಪ: ಬೆನ್ನೂರ

• **ಲಕ್ಷ್ಮೇಶ್ವರ:** ಹಿರಿಯ ನಾಗರಿಕರ ಜೀವನಾನುಭವ, ಜ್ಞಾನಾನುಭವ, ಬದುಕಿನ ರೀತಿ ನಾಗರಿಕ ಸಮಾಜಕ್ಕೆ ದಾರಿದೀಪವಾಗಿದ್ದು ಅವರ ಮಾರ್ಗದರ್ಶನದಲ್ಲಿ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ರಾಜ್ಯ ಘಟಕದ ಮಹಿಳಾ ಅಧ್ಯಕ್ಷೆ ಸುನಂದಾ ಬೆನ್ನೂರ ಹೇಳಿದರು.

ಅವರು ಪಟ್ಟಣದ ಚಂಬಣ್ಣ ಬಾಳಿಕಾಯಿ ಅವರ ಮಿಲ್ಲಿನ ಆವರಣದಲ್ಲಿ ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಶತಾಯುಷಿಗಳಿಗೆ ಹಾಗೂ ಮಹಿಳಾ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಿರಿಯ ಸಾಹಿತಿ ಲಲಿತಕ್ಕ ಕೆರಿಮನಿ ಮಾತನಾಡಿ, ಸಾಧನೆಯಿಂದ ಮಹಿಳೆಯರಿಗೆ ಸಮಾಜದಲ್ಲಿ ಗೌರವ-ಘನತೆ ಲಭಿಸುತ್ತದೆ. ಮಹಿಳೆಯರು ಜೀವನದಲ್ಲಿ ಯಾವುದೇ ಸಂಕಷ್ಟ ಎದುರಾದರೂ ಎದೆಗುಂದಬಾರದು. ಸಮಸ್ಯೆಯನ್ನು ಸಮರ್ಥವಾಗಿ ನಿಭಾಯಿಸುವ ಮನೋಬಲ ರೂಢಿಸಿಕೊಳ್ಳಬೇಕು ಎಂದರು. ಮಾಲಾದೇವಿ ದಂದರಗಿ ಉಪನ್ಯಾಸ ನೀಡಿ, ಹಿರಿಯ ನಾಗರಿಕರು ಗೌರವದಿಂದ ಬಾಳುವ ವಾತಾವರಣ ನಿರ್ಮಾಣ ಆಗಬೇಕು. ಸ್ವಾವಲಂಬನೆಯಿಂದ ಜೀವನ ನಡೆಸಲು ಸರ್ಕಾರಗಳು ಹಿರಿಯ ನಾಗರಿಕರಿಗೆ ಯೋಜನೆಗಳನ್ನು ತರಬೇಕು ಎಂದರು. ಶತಾಯುಷಿಗಳಾದ ಪಾರ್ವತೆವ್ವ ಪುರಾಣಿಕಮಠ, ಸಾವಿತ್ರಮ್ಮ ಹೂವಿನ, ಸೀನಮ್ಮ ಅರಳಿ, ಸೋಮವ್ವ ಚಿತ್ರಗಾರ ಹಾಗೂ ಮಹಿಳಾ ಸಾಧಕರಾದ ಲಲಿತಕ್ಕ ಕೆರಿಮನಿ, ಮೀನಾಕ್ಷಿ ಮಟ್ಟಿ, ಸವಿತಾ ಆದಿ, ಮಂಜುಳಾ ಹೊಂಗಾರ, ಸುನಂದಾ ಬೆನ್ನೂರ, ಮಾಲಾದೇವಿ ದಂದರಗಿ, ರೇಣುಕಾ ನವಲಗುಂದ ಎಸ್.ಸಿ ಅಂಗನವಾಡಿ ಅವರನ್ನು ಸನ್ಮಾನಿಸಲಾಯಿತು. ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಸಿ.ಆರ್. ಲಕ್ಕುಂಡಿಮಠ, ಚಂಬಣ್ಣ ಬಾಳಿಕಾಯಿ, ಪ್ರತಿಮಾ ಮಹಾಜನಶೆಟ್ಟರ, ಎಸ್.ವಿ. ಹೇಮಗಿರಿಮಠ, ಸುಗೇರಪ್ಪ ಪಾಲಿಶೆಟ್ಟರ, ಚನ್ನಪ್ಪ ಕೋಲಕಾರ, ನಿಂಗಪ್ಪ ಗೊರವರ, ನೀಲಪ್ಪ ಕರ್ಜಕಣ್ಣವರ, ನಾಗಭೂಷಣ ಪವಾಡಶೆಟ್ಟರ ಸೇರಿ ಅನೇಕರಿದ್ದರು. ಐ.ಎಸ್. ಮಡಿವಾಳರ, ಮಹಾನಂದ ಕೋಣ್ಣೂರ ನಿರೂಪಿಸಿದರು.



ಎಲ್ಲರೂ ಸೇರಿಕೊಂಡು ಜಾತ್ರೆ, ಉರುಸ್ ಆಚರಿಸಲಿ: ಸಂಗನಗೌಡ ಪಾಟೀಲ

• **ರೋಣ:** ಯಾವುದೇ ಧರ್ಮಗಳ ಜಾತ್ರೆಗಳಾಗಲಿ ಅಥವಾ ಉರುಸುಗಳಾಗಲಿ ಎಲ್ಲರೂ ಕೂಡಿಕೊಂಡು ಆಚರಿಸಿದಾಗ ಮಾತ್ರ ವಿಶೇಷ ಮೆರಗು ಸಿಗಲು ಸಾಧ್ಯ ಎಂದು ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ ಹೇಳಿದರು.

ಅವರು ಇತ್ತೀಚೆಗೆ ಪಟ್ಟಣದಲ್ಲಿ ಜರುಗಿದ ಹಜರತ ಸಯ್ಯದ ಶಾ ಖ್ವಾಜಾ ಹುಸೇನ ಶಾವಲಿ ಚಿಸ್ತಿ ಅಲ್‌ಖಾದ್ರಿ ಶರಣರ ಉರುಸು ಅಂಗವಾಗಿ ಜರುಗಿದ 20ನೇ ವರ್ಷದ ಸರ್ವಧರ್ಮ ಸಮ್ಮೇಳನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಮ್ಮ ದೇಶದಲ್ಲಿ ಮೊದಲಿನಿಂದಲೂ ಪರಸ್ಪರ ಎಲ್ಲರೂ ಸೇರಿಕೊಂಡು ಹಬ್ಬ ಹರಿದಿನಗಳನ್ನು ಹಾಗೂ ಮಹಾತ್ಮರ ಸ್ಮರಣೆಯನ್ನು ಮಾಡಲಾಗುತ್ತದೆ. ಹೀಗಾಗಿ ಇಂದಿಗೂ ಸಹ ದರ್ಗಾ ಮತ್ತು ಮಂದಿರಗಳಿಗೆ ಎಲ್ಲ ಧರ್ಮದವರು ನಡೆದುಕೊಳ್ಳುವುದು ಕಾಣುತ್ತೇವೆ ಎಂದರು.

ಹಜರತ ಸುಲೇಮಾನ್ ಸೈಯದ ಶಾ ಸುಲೇಮಾನ್ ಶಾವಲಿ ಅಜ್ಜನವರು ಮಾತನಾಡಿ, ದರ್ಗಾಕ್ಕೆ ಇತಿಹಾಸ ಕಾಲದಿಂದಲೂ ಹಿಂದು-ಮುಸ್ಲಿಂ ಎಂಬ ಭೇದ ಭಾವಗಳಿಲ್ಲದೆ ಎಲ್ಲರೂ ಭಕ್ತಿಯಿಂದ ನಡೆದುಕೊಂಡು ಬಂದಿದ್ದಾರೆ. ಮುಖ್ಯವಾಗಿ ದರ್ಗಾದ ಉರುಸು ಕಾರ್ಯಕ್ರಮಕ್ಕೆ ಪ್ರತಿ ವರ್ಷ ಪ್ರತಿಷ್ಠಿತ ಅನೇಕ ಮಠಗಳ ಪೂಜ್ಯರುಗಳು ಆಗಮಿಸಿ ಸಾವಿರಾರು ಭಕ್ತರಿಗೆ ತಮ್ಮ ಆಶೀರ್ವಚನ ನೀಡುತ್ತಿರುವುದು ಸೌಹಾರ್ದತೆಗೆ ಹಿಡಿದ ಕೈಗನ್ನಡಿಯಾಗಿದೆ. ಶರಣರು ಮತ್ತು ಸೂಫಿ ಸಂತರು ಹಾಕಿಕೊಟ್ಟಿರುವ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದರು.

ಸಾನ್ನಿಧ್ಯವನ್ನು ಗುರುಪಾದ ಶ್ರೀಗಳು, ಶರಣಬಸ ಶ್ರೀಗಳು ವಹಿಸಿದ್ದರು. ಅಕ್ಷಯ ಪಾಟೀಲ, ಶಬ್ಬೀರಷ್ಮದ ಖಾಜಿ, ಶಫೀಕ ಮೂಗನೂರ, ಮಲೀಕ ಯಲಿಗಾರ, ಅಸ್ಲಂ ಕೊಪ್ಪಳ, ಭರಮಗೌಡ ಲಿಂಗನಗೌಡ್ರ, ನಿಂಗಪ್ಪ ನವಲಗುಂದ, ಮಲ್ಲಯ್ಯ ಮಹಾಪುರುಷಮಠ ಸೇರಿದಂತೆ ಅನೇಕ ಮುಖಂಡರುಗಳು ಉಪಸ್ಥಿತರಿದ್ದರು.



ಬಾಲರಾಮನ ತೊಟ್ಟಿಲೋತ್ಸವ ಕಾರ್ಯಕ್ರಮ

• **ನರಗುಂದ:** ಪರಾಭವ ನಾಮ ಸಂವತ್ಸರದ ಚೈತ್ರ ಮಾಸದ ಶುಕ್ಲ ಪಕ್ಷದ ನವಮಿಯ ದಿನ ದೇಶಾದ್ಯಂತ ಆಚರಿಸಲಾಗುವ ಶ್ರೀ ರಾಮನವಮಿ ಹಬ್ಬದಂದು ಪಟ್ಟಣದ ದಂಡಾಪೂರ ಪಡುಗೊಂಡ ಕೆರೆ ಹತ್ತಿರದ ಪುರಾತನ ಶ್ರೀ ರಾಮ ಮಂದಿರದಲ್ಲಿ ಬಾಲರಾಮನ ತೊಟ್ಟಿಲೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಶ್ರೀ ರಾಮ ಮಂದಿರದಲ್ಲಿ ಸೀತಾದೇವಿ, ಶ್ರೀರಾಮ, ಲಕ್ಷ್ಮಣ, ಶತ್ರುಘ್ನ, ಹನುಮಂದೇವ ಹಾಗೂ ಈಶ್ವರಲಿಂಗ ಇವರೆಲ್ಲರ ಮೂರ್ತಿಗಳಿವೆ. ಗುರುವಾರ ಬೆಳಗ್ಗೆ ಎಲ್ಲ ಮೂರ್ತಿಗಳಿಗೆ ಮಹಾಅಭಿಷೇಕ ನೆರವೇರಿಸಲಾಯಿತು. ಅಲಂಕಾರಿಕ ಹೊಸ ಬಟ್ಟೆಗಳಿಂದ, ಹೂವುಗಳಿಂದ ಮತ್ತು ವಿವಿಧ ಹಣ್ಣುಗಳಿಂದ ಮೂರ್ತಿಗಳನ್ನು ಸುಂದರವಾಗಿ ಅಲಂಕಾರ ಮಾಡಲಾಗಿತ್ತು. ಮಧ್ಯಾಹ್ನ ಮಾತೆಯರು ಬಾಲ ರಾಮನನ್ನು ತೊಟ್ಟಿಲಲ್ಲಿ ಹಾಕುವ ಮೂಲಕ ತೊಟ್ಟಿಲೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ರಾಮಮಂದಿರಕ್ಕೆ ಆಗಮಿಸಿದ ಭಕ್ತಾದಿಗಳಿಗೆ ಶ್ರೀ ರಾಮನ ನೈವೇದ್ಯವಾದ ಪಾನಕ, ಕೋಸಂಬರಿ ಪ್ರಸಾದವನ್ನು ವಿತರಣೆ ಮಾಡಲಾಯಿತು. ಶುಕ್ರವಾರ ಸಕಲ ಭಕ್ತಾದಿಗಳಿಗೆ ಮಹಾಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿದ್ದು, ಸುತ್ತಮುತ್ತಲಿನ ಎಲ್ಲ ಭಕ್ತಾದಿಗಳು ಆಗಮಿಸಿ ಮಹಾಪ್ರಸಾದವನ್ನು ಸ್ವೀಕರಿಸಬೇಕೆಂದು ಈರಣ್ಣ ನವಲಗುಂದ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಈರಣ್ಣ ನವಲಗುಂದ, ರುದ್ರಗೌಡ ಹಿರೇಗೌಡ್ರ, ದಿಲೀಪ ಸುಬೇದಾರ, ಸಂದೀಪ ಸುಬೇದಾರ, ಚೇತನ ಕುಲಕರ್ಣಿ, ಮಂಜು ಬಣ್ಣಿಮಠದ, ರುದ್ರಗೌಡ ಪಾಟೀಲ, ಮಂಜು ಲೆಂಗೆ, ಪ್ರಶಾಂತ ಚಿತ್ರಗಾರ, ಪತ್ರಯ್ಯ ಹಿರೇಮಠ, ಕುಮಾರ ಬೆಳವಟಗಿ, ಶೈಲಾ ದಿ ಸುಬೇದಾರ, ಪತ್ರವ್ವ ಲೆಂಗೆ, ಮಂಜುಳಾ ಲ ಸುಬೇದಾರ, ಕಾವ್ಯಾ ನವಲಗುಂದ ಇತರರಿದ್ದರು.



ಡಾ.ಅಂಬೇಡ್ಕರ್ ಮೂರ್ತಿ ಸ್ಥಾಪನೆಗೆ ಸಿದ್ಧತೆ

• **ಮುಂಡರಗಿ:** ಪಟ್ಟಣದ ಪುರಸಭೆ ಆವರಣದ ಬಳಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 10 ಅಡಿಯ ಮೂರ್ತಿ ಸ್ಥಾಪನೆಯ ಸಿದ್ಧತೆ ನಡೆದಿದ್ದು, ಏಪ್ರಿಲ್ 14 ರಂದು ಉದ್ಘಾಟನೆ ಉದ್ದೇಶ ಹೊಂದಲಾಗಿದೆ. ಈ ಬಗ್ಗೆ ಸಭೆ ಕರೆದು ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಸಾಮಾಜಿಕ ಕಾರ್ಯಕರ್ತ ಆನಂದಗೌಡ ಎಚ್.ಪಾಟೀಲ ತಿಳಿಸಿದರು.

ಈ ಕುರಿತು ಅಂಬೇಡ್ಕರ್ ಮೂರ್ತಿ ಸ್ಥಾಪನೆಯ ಸ್ಥಳಕ್ಕೆ ಬಂದು ಕೆಲಸದ ಪ್ರಗತಿ ವೀಕ್ಷಿಸಿ ಈ ಕಾರ್ಯಕ್ಕೆ ಹಿಂದಿನ ಪುರಸಭೆ ಎಲ್ಲ 23 ಸದಸ್ಯರು, ಅಧ್ಯಕ್ಷ ಉಪಾಧ್ಯಕ್ಷರು ಒಮ್ಮತದ ನಿರ್ಣಯ ತೆಗೆದುಕೊಂಡು ಮೂರ್ತಿ ಸ್ಥಾಪನೆಗೆ ಕಾರಣವಾಗಿದ್ದಾರೆ. ಪುರಸಭೆ ವತಿಯಿಂದ 10 ಲಕ್ಷ ರೂ. ಅನುದಾನ ನೀಡಿದ್ದು ಉಳಿದ ಇನ್ನು 5 ಲಕ್ಷ ರೂ. ಅನುದಾನ ಬರಲಿದೆ. ಒಟ್ಟು 25 ಲಕ್ಷ ವೆಚ್ಚದೊಳಗೆ ಮೂರ್ತಿ ಕಾರ್ಯ ನಡೆಯಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಸದಸ್ಯ ನಾಗರಾಜ ಹೊಂಬಳಗಟ್ಟಿ, ನಿಂಗರಾಜ ಹಾಲಿನವರ ಮುತ್ತು ಹಾಳಕೇರಿ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಸಂಶೋಧನೆಗಳಿಂದ ಪರಿಹಾರ ಸಾಧ್ಯ: ಡಾ. ಸಿ.ವಿ ಏಳಮಗ್ಗದ

• **ಲಕ್ಷ್ಮೇಶ್ವರ:** ಸಂಶೋಧನೆಗಳಿಂದ ಪರಿಹಾರ ಸಾಧ್ಯ ಎಂದು ಬೆಂಗಳೂರಿನ ನ್ಯಾನೋ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸ್‌ನ ಹಿರಿಯ ವಿಜ್ಞಾನಿ ಡಾ. ಸಿ.ವಿ ಏಳಮಗ್ಗದ ಹೇಳಿದರು.

ಅವರು ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ. ಅಗಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯ್ ಸಿ ಎಂ ಆರ್ ಟಿ ಇ ಟಿ ಮೂರನೇ ಅಂತಾರಾಷ್ಟ್ರೀಯ ತಾಂತ್ರಿಕ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ನಮ್ಮ ಸುತ್ತಮುತ್ತಲಿನ ಅವಶ್ಯಕತೆಗಳಿಗೆ ಹಾಗೂ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಸಂಶೋಧನೆ ಮಾಡುವ ಮೂಲಕ ಪರಿಹಾರ ಕಾಣಲು ಸಾಧ್ಯ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಂದ ಹೊಸ ಅನ್ವೇಷಣೆ ಹಾಗೂ ಸಂಶೋಧನೆಗೆ ಶಿಕ್ಷಕರ ಮಾರ್ಗದರ್ಶನ ಸಹಕಾರ ಪ್ರೋತ್ಸಾಹ ಅಗತ್ಯವಾಗಿದೆ. ಇಂದು ನಾವು ಸೇವಿಸುವ ಆಹಾರದಿಂದ ಆಗುವ ದುಷ್ಪರಿಣಾಮಗಳನ್ನು ಸಂಶೋಧನೆಗಳ ಮೂಲಕ ಕಂಡು ಹಿಡಿದು ತಿಳುವಳಿಕೆ ನೀಡಿ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದರು.

ಸಮ್ಮೇಳನದ ಅಂತಾರಾಷ್ಟ್ರೀಯ ಭಾಷಣಕಾರರಾಗಿ ಥೈಲ್ಯಾಂಡ್ ದೇಶದ ಡಾ. ನರಪೋಲ್ ಟುಪೊಂಗ್ ಅವರು ವರ್ಚುವಲ್ ಮೂಲಕ ಭಾಗವಹಿಸಿ ಸಂಶೋಧನೆ ಮತ್ತು ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಅವಶ್ಯಕತೆ, ಪ್ರಾಮುಖ್ಯತೆ ತಿಳಿಸಿದರು. ದೇಶದ ವಿವಿಧ ಭಾಗಗಳಿಂದ 98ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಾಯಿತು. ಪ್ರಾಚಾರ್ಯ ಡಾ. ಪರಶುರಾಮ ಬಾರಕಿ, ಪ್ರೊ. ವಿಕ್ರಂ ಶಿರೋಳ, ಡಾ. ಸುಭಾಷ್ ಮೇಟಿ, ಸಂಯೋಜಕರಾದ ಡಾ. ಅರುಣ ಜೋಶಿ, ಡಾ. ಶ್ರೀನಿವಾಸ ಇದ್ದರು. ಡಾ. ಆರ್.ಎಂ. ಪಾಟೀಲ ಸ್ವಾಗತಿಸಿದರು.



15 ಅಡಿ ಎತ್ತರದ ಶ್ರೀರಾಮನ ಮೂರ್ತಿಯ ಶೋಭಾಯಾತ್ರೆ

•ಕಲಬುರಗಿ: ಹೆಜ್ಜೆ ಹೆಜ್ಜೆಗೂ ಸಾವಿರಾರು ಕೇಸರಿ ಭಗವಾ ಧ್ವಜಗಳ ರಾರಾಜಿಸುವಿಕೆ, ಶೋಭಾಯಾತ್ರೆಯ ದಾರಿಯುದ್ದಕ್ಕೂ ಎಲ್ಲರ ಬಾಯಲ್ಲೂ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಜೈಕಾರ, ಇವೆಲ್ಲವೂ ಕಂಡು ಬಂದಿದ್ದು ರಾಮನವಮಿ ಉತ್ಸವ ಸಮಿತಿಯಿಂದ ಗುರುವಾರ ಕಲಬುರಗಿ ನಗರದಲ್ಲಿ ಹಮ್ಮಿಕೊಂಡಿದ್ದ 15 ಅಡಿ ಎತ್ತರದ ಅಯೋಧ್ಯಾಪತಿ ಪ್ರಭು ಶ್ರೀರಾಮನ ಶೋಭಾಯಾತ್ರೆಯಲ್ಲಿ.

ಶ್ರೀರಾಮ ನವಮಿ ಉತ್ಸವ ಸಮಿತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ರಾಮನವಮಿ ಅಂಗವಾಗಿ 11ನೇ ವರ್ಷದ ಶಿವಲಿಂಗ ಅಲಂಕಾರಿತ ಪ್ರಭು ಶ್ರೀರಾಮನ ಮೂರ್ತಿಯ ಅದ್ಧೂರಿ ಶೋಭಾಯಾತ್ರೆಗೆ ನಗರದ ಚೆಕ್‌ಪೋಸ್ಟ್ ಬಳಿಯ ರಾಮತೀರ್ಥ ಮಂದಿರದಲ್ಲಿ ಪೂಜೆ ಸಲ್ಲಿಸಿದ ಬಳಿಕ ಕಲ್ಯಾಣದ ಆರಾಧ್ಯ ದೈವ ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ, ಗುರುಮೂರ್ತಿ ಶಿವಾಚಾರ್ಯರು ನೇತೃತ್ವದಲ್ಲಿ ಶೋಭಾಯಾತ್ರೆಗೆ ಚಾಲನೆ ನೀಡಲಾಯಿತು.



- ರಾಮನ ಅದ್ಧೂರಿ ಶೋಭಾಯಾತ್ರೆ
- ಸಂಸ್ಥಾನದ ದೊಡ್ಡಪ್ಪ ಅಪ್ಪಾರಿಂದ ಚಾಲನೆ
- 2 ಲಕ್ಷಕ್ಕೂ ಅಧಿಕ ರಾಮಭಕ್ತರು ಭಾಗಿ

ಭಕ್ತರಿಂದ ಅನ್ನ ಸಂತರ್ಪಣೆ

ವಿಶ್ವ ಹಿಂದೂ ಪರಿಷತ್, ಬಿಸಿಪಿಸಿ ಗ್ರೂಪ್, ಗುಲ್ಬರ್ಗ ಗೆಳೆಯರ ಬಳಗ ಸೇರಿದಂತೆ ನೂರಾರು ಸಂಘ ಸಂಸ್ಥೆಗಳು, ಉದ್ಯಮಿಗಳು, ಹೋರಾಟಗಾರರು ಶೋಭಾಯಾತ್ರೆಯ ಮಾರ್ಗದುದ್ದಕ್ಕೂ ಲಕ್ಷಾಂತರ ರಾಮಭಕ್ತರಿಗಾಗಿ ಅನ್ನಸಂತರ್ಪಣೆ, ತಂಪು ಪಾನೀಯಗಳ ವ್ಯವಸ್ಥೆ ಮಾಡಲಾಗಿದ್ದು, ಸಾವಿರಾರು ಭಕ್ತರಿಗೆ ಊಟದ ಅನುಕೂಲ ಕಲ್ಪಿಸಲಾಗಿತ್ತು. ನಗರದ ಚೆಕ್‌ಪೋಸ್ಟ್, ದೇವಿ ನಗರ, ಗಾಂಧಿ ಸರ್ಕಲ್, ಶೆಟ್ಟಿ ಕಾಂಪ್ಲೆಕ್ಸ್, ಸೂಪರ್ ಮಾರ್ಕೆಟ್ ಮೂಲಕ ಜಗತ್ ವೃತ್ತದಲ್ಲಿ ಸಂಪನ್ನಗೊಂಡಿತು.

ರಾಮನವಮಿ ಹಿನ್ನೆಲೆ ರಾಮನವಮಿ ಉತ್ಸವ ಸಮಿತಿಯಿಂದ ಆಯೋಜಿಸಿದ್ದ 11ನೇ ವರ್ಷದ ಐತಿಹಾಸಿಕ ಶೋಭಾಯಾತ್ರೆಯಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಿದ ರಾಮ ಭಕ್ತರಿಗೆಲ್ಲಾ ಧನ್ಯವಾದಗಳು ಅರ್ಪಿಸುತ್ತೇನೆ. ಬಿರು ಬಿಸಿಲಿನ ಮಧ್ಯೆಯೂ ಶೋಭಾಯಾತ್ರೆಯಲ್ಲಿ ಬಂದಂತಹ ರಾಮಭಕ್ತರಿಗೆ ಪ್ರಸಾದ, ತಂಪು ಪಾನೀಯ ವ್ಯವಸ್ಥೆ ಮಾಡಿರುವ ಎಲ್ಲರಿಗೂ ಧನ್ಯವಾದಗಳು.

■ ಚಂದು ಪಾಟೀಲ್, ಸಮಿತಿ ಸದಸ್ಯ

ಮೆರುಗು ತಂದ ಉಡುಪಿ ಅಘೋರಿ ತಂಡ

ಶೋಭಾಯಾತ್ರೆಗೆ ವಿಶೇಷ ಮೆರುಗು ನೀಡಲೆಂದೇ ನೆರೆಯ ಮಹಾರಾಷ್ಟ್ರದ ಸೋಲಾಪುರದಿಂದ ನಾಸಿಕ್ ಢೋಲಿನ ವಾದ್ಯ, 50 ಜನರ ಲೇಜಿಮ್ ತಂಡ ಹಾಗೂ ಕರಿ ಅಂಬಲಗಿಯ 30 ಸದಸ್ಯರ ತಂಡದ ಹಲಗಿ ಹಾಗೂ ವಿಶೇಷವಾಗಿ ಈ ಬಾರಿಯ ರಾಮೋತ್ಸವಕ್ಕೆ ಉಡುಪಿಯಿಂದ ಕರೆಸಲಾದ ಕಾಲಭೈರವ ನಂದಿ ಹಾಗೂ ಅಘೋರಿಗಳ ತಂಡದ ಮನಮೋಹಕ ನೃತ್ಯ ಗಮನ ಸೆಳೆಯಿತು. ವಿಶೇಷವಾಗಿಯುವಕರಿಗಾಗಿಯೇ ಸ್ಟೆಪ್ ಹಾಕಲು ಪುಣೆಯ ಆರ್‌ಆರ್ ಸೌಂಡ್ ಮತ್ತಷ್ಟು ವೈಭವ ಹೆಚ್ಚಿಸಿತು. ನಗರದ ಚೆಕ್‌ಪೋಸ್ಟ್ ಮೂಲಕ ಸಾಗಿದ ಶೋಭಾಯಾತ್ರೆಗಳು ಶೆಟ್ಟಿ ಕಾಂಪ್ಲೆಕ್ಸ್, ಸೂಪರ್ ಮಾರ್ಕೆಟ್ ಮೂಲಕ ಜಗತ್ ವೃತ್ತದಲ್ಲಿ ಸಂಪನ್ನಗೊಂಡಿತು. ಆದಿ ಪುರುಷ ರಾಮ ನವಮಿ ಉತ್ಸವ ಸಮಿತಿಯಿಂದ ಗಂಗಾರತಿ ನೆರವೇರಿತು.

ಕೇಸರಿಮಯವಾದ ಕಲಬುರಗಿ

ರಾಮನವಮಿ ಅಂಗವಾಗಿ ಗುರುವಾರ ಬಿಸಿಲು ನಾಡು ಕಲಬುರಗಿ ಅಕ್ಷರಶಃ ಕೇಸರಿಮಯವಾಗಿ ಮಾರ್ಪಟ್ಟಿತು. ನಗರದ ಚೆಕ್ ಪೋಸ್ಟ್ ಬಳಿಯಿಂದ ಶ್ರೀರಾಮ ನವಮಿ ಉತ್ಸವ ಸಮಿತಿಯಿಂದ 15 ಅಡಿ ಎತ್ತರದ ರಾಮನ ಮೂರ್ತಿ, ಆದಿ ಪುರುಷ ರಾಮ ನವಮಿ ಉತ್ಸವ ಸಮಿತಿ ಸಂಸ್ಥಾಪಕ, ಅಧ್ಯಕ್ಷ ಮಹೇಶ್ ಗೊಬ್ಬೂರ ನೇತೃತ್ವದಲ್ಲಿ 18 ಅಡಿ ಎತ್ತರದ ರಾಮನ ಮೂರ್ತಿಯ ಸೇರಿದಂತೆ 2 ಶೋಭಾಯಾತ್ರೆ ಹೊರಟರೆ, ನಗರದ ರಾಮಮಂದಿರದಿಂದ ಹೊರಟ ಇನ್ನೊಂದು ಶೋಭಾಯಾತ್ರೆ, ಕಲಬುರಗಿಯನ್ನು ಸಂಪೂರ್ಣ ರಾಮಮಯ ಮಾಡುವಲ್ಲಿ ಸಫಲವಾಯಿತು. ನಗರದ ಖಾದ್ರಿ, ಚೌಕ್ ಬಳಿ ಮುಸ್ಲಿಂರಿಂದ ಶೋಭಾಯಾತ್ರೆಯಲ್ಲಿ ಭಾಗಿಯಾದ ರಾಮ ಭಕ್ತರಿಗೆಲ್ಲಾ ತಂಪು ಪಾನೀಯ ವ್ಯವಸ್ಥೆ ಮಾಡಲಾಗಿತ್ತು. ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪಾ, ಪಾಳಾದ ಗುರುಮೂರ್ತಿ ಶಿವಾಚಾರ್ಯರು ಸೇರಿದಂತೆ ಹಲವು ಮಠಾಧೀಶರು, ರಾಜಕೀಯ ಮುಖಂಡರು ಗಣ್ಯರು ಭಾಗವಹಿಸಿದ್ದರು. ಶೋಭಾಯಾತ್ರೆಯಲ್ಲಿ 2 ಲಕ್ಷಕ್ಕೂ ಅಧಿಕ ರಾಮಭಕ್ತರು ಭಾಗಿಯಾಗಿದ್ದರು.

ರೈಲು ಸಂಚಾರಕ್ಕೆ ಅನುವು

•ಹುಬ್ಬಳ್ಳಿ: ನೈರುತ್ಯ ರೈಲ್ವೆಯು ಗದಗ-ಹೋಟಗಿ ಡಬ್ಲಿಂಗ್ ಯೋಜನೆಯಡಿ ಆಲಮಟ್ಟಿಯಿಂದ ವಾಂದಾಲ ನಡುವಿನ 9.60 ಕಿ.ಮೀ. ಬ್ರಾಡ್ ಗೇಜ್ ಡಬಲ್ ಲೈನ್ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಗುರುವಾರದಿಂದ ಸಾರ್ವಜನಿಕ ಪ್ರಯಾಣಿಕರ ಸಂಚಾರಕ್ಕೆ ತೆರೆಯಲಾಗಿದೆ.

ಈ ಹೊಸ ವಿಭಾಗದಲ್ಲಿ ಪರ್ವತಿಹಟ್ಟಿ ಹಳ್ಳದ ಮೇಲಿನ ಪ್ರಮುಖ ಓಪನ್ ವೆಬ್ ಗರ್ಡರ್ ಸೇತುವೆ ನಿರ್ಮಿಸಲಾಗಿದ್ದು, ಪ್ರತಿ 45.72 ಮೀ. ಉದ್ದದ 9 ಸ್ಪ್ಯಾನ್‌ಗಳು ಒಳಗೊಂಡಿವೆ. ಜೊತೆಗೆ ಒಂದು ಸಣ್ಣ ಸೇತುವೆ, ಒಂದು ರಸ್ತೆ ಮೇಲ್ಸೇತುವೆ ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ನಿರ್ಮಿಸಲಾಗಿದೆ.

ಈ ಮಾರ್ಗದಲ್ಲಿ 60 ಕೆಜಿ ರೈಲು ಹಳಿಗಳನ್ನು ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಸಮರ್ಪಕ ಬ್ಯಾಲಸ್ಟ್ ಕುಶನ್‌ನೊಂದಿಗೆ ಅಳವಡಿಸಲಾಗಿದೆ.

ಈ ಹಳಿ ಗರಿಷ್ಠ 110 ಕಿ.ಮೀ. ವೇಗಕ್ಕೆ ಅನುಕೂಲವಾಗುವಂತೆ ನಿರ್ಮಿಸಲಾಗಿದೆ. ಅಗತ್ಯ ಸಿಗ್ನಲಿಂಗ್ ವ್ಯವಸ್ಥೆ, ನಿಲ್ದಾಣ ಸೌಲಭ್ಯಗಳು ಮತ್ತು ಸುರಕ್ಷತಾ ವ್ಯವಸ್ಥೆಗಳು ಒದಗಿಸಲಾಗಿದೆ. ಇದರಿಂದ ಸುರಕ್ಷಿತ ಮತ್ತು ಸುಗಮ ರೈಲು ಕಾರ್ಯಾಚರಣೆ ಸಾಧ್ಯವಾಗುವುದರೊಂದಿಗೆ, ಪ್ರದೇಶದ ರೈಲು ಸಂಪರ್ಕ ಹಾಗೂ ಸರಕು ಸಾಗಣೆ ವ್ಯವಸ್ಥೆಗೆ ಮಹತ್ವದ ಉತ್ತೇಜನ ದೊರೆಯಲಿದೆ.



ರಕ್ತ ಸಂಗ್ರಹ ವಾಹನ ಕೊಡುಗೆ



•ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠದ ಆವರಣದಲ್ಲಿ, ರಾಷ್ಟ್ರೋತ್ಥಾನ ರಕ್ತ ಕೇಂದ್ರಕ್ಕೆ ಬೆಂಗಳೂರಿನ ಅಡೋಬೆ ಟೆಕ್ನಾಲಜಿಸ್ ಕಂಪನಿಯೂ ಸಿಎಸ್ ಆರ್ ನಿಧಿಯಡಿ ಸುಸಜ್ಜಿತ ರಕ್ತ ಸಂಗ್ರಹ ವಾಹನ ನೀಡಿದ್ದು, ಗುರುವಾರ ಲೋಕಾರ್ಪಣೆಗೊಂಡಿತು.

ಕುಂದಗೋಳದ ಕಲ್ಯಾಣಪುರಮಠದ ಅಭಿನವ ಬಸವಣ್ಣಜ್ಜನವರು ಸಾನ್ನಿಧ್ಯ ವಹಿಸಿ ಲೋಕಾರ್ಪಣೆಗೊಳಿಸಿದರು. ಸಿದ್ಧಾರೂಢ ಸ್ವಾಮಿ ಮಠದ ಟ್ರಸ್ಟ್ ಕಮಿಟಿ ಅಧ್ಯಕ್ಷ ಚನ್ನವೀರ ಮುಂಗರವಾಡಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಪ್ರಾಂತ ಕಾರ್ಯವಾಹ ರಾಘವೇಂದ್ರ ಕಾಗವಾಡ, ಉದ್ಯಮಿ ವೀರೇಂದ್ರ ಛೇಡಾ, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ರಾಘವೇಂದ್ರ ಅಂಬೇಕರ್, ಜಗದೀಶ ಹಿರೇಮಠ, ರಕ್ತ ಕೇಂದ್ರದ ಸಂಚಾಲಕ ದತ್ತಮೂರ್ತಿ ಕುಲಕರ್ಣಿ, ಡಾ.ಎಸ್.ಎಸ್ ಸಂಗೊಳ್ಳಿ, ಶ್ರೀಧರ ಜೋಶಿ, ವಿನೋದ ಪಟವಾ, ರಂಗಾ ಬದ್ದಿ, ಸಂದೀಪ ಬುದಿಹಾಳ, ಸಂಜೀವ ಜೋಶಿ, ರಮೇಶ ಕದಮ್, ನವೀನ ಚಿಕ್ಕಮಠ, ಸಿದ್ದು ಅಂಗಡಿ ಹಾಗೂ ರಕ್ತ ಕೇಂದ್ರದ ಸಿಬ್ಬಂದಿಗಳು ಹಾಗೂ ಇನ್ನು ಅನೇಕ ಪ್ರಮುಖರು ಉಪಸ್ಥಿತರಿದ್ದರು.

ಕಿರುಸುದ್ದಿ

ಬಾಗಲಕೋಟೆ ಉಪಚುನಾವಣೆ: ಮೂವರಿಗೆ ಜವಾಬ್ದಾರಿ

•ಬೆಳಗಾವಿ: ಉಪಚುನಾವಣೆ ಹಿನ್ನೆಲೆ ರಾಜ್ಯ ರಾಜಕೀಯ ಚಟುವಟಿಕೆ ಗರಿಗೆದರಿದ್ದು, ಕಾಂಗ್ರೆಸ್ ಹೈಕಮಾಂಡ್ ಗಡಿ ಜಿಲ್ಲೆಯ ಪ್ರಮುಖ ನಾಯಕರಿಗೆ ಗೆಲುವಿನ ಹೊಣೆಗಾರಿಕೆ ನೀಡಿದೆ. ಸೂಚನೆ ಹೊರ ಬಿದ್ದ ತಕ್ಷಣವೇ ಸ್ಥಳೀಯ ನಾಯಕರು ಕಾರ್ಯತಂತ್ರ ರೂಪಿಸಿ ಮೈದಾನಕ್ಕಿಳಿದಿದ್ದಾರೆ. ಬಾಗಲಕೋಟೆ ಉಪಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸುವ ಜವಾಬ್ದಾರಿಯನ್ನು ಸಚಿವ ಸತೀಶ ಜಾರಕಿಹೊಳಿ ಅವರಿಗೆ ನೀಡಲಾಗಿದೆ. ಇದೇ ವೇಳೆ ದಾವಣಗೆರೆ ಕ್ಷೇತ್ರದಲ್ಲಿ ಗೆಲುವಿನ ಹೊಣೆಗಾರಿಕೆಯನ್ನು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಹಂಚಲಾಗಿದೆ. ಈ ಎರಡು ಕ್ಷೇತ್ರಗಳಲ್ಲೂ ಪ್ರಚಾರಕ್ಕೆ ಹೊಸ ಹುಮ್ಮಸ್ಸು ತುಂಬಲು ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರನ್ನು ಸ್ಟಾರ್ ಪ್ರಚಾರಕರಾಗಿ ನೇಮಕ ಮಾಡಲಾಗಿದೆ. ಲಿಂಗಾಯತ ಹಾಗೂ ಅಹಿಂದ ಮತ ಬ್ಯಾಂಕ್‌ಗಳನ್ನು ಗುರಿಯಾಗಿಸಿಕೊಂಡು ಕಾರ್ಯತಂತ್ರ ರೂಪಿಸುವ ಮೂಲಕ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಸಾಧಿಸಲು ಈ ನಾಯಕರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಉಪಚುನಾವಣೆ ಫಲಿತಾಂಶಗಳು ರಾಜ್ಯ ರಾಜಕೀಯದ ದಿಕ್ಕನ್ನು ನಿರ್ಧರಿಸುವ ಸಾಧ್ಯತೆ ಇರುವುದರಿಂದ ಈ ಕ್ಷೇತ್ರಗಳ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.

ಒಳಮೀಸಲಾತಿ ಜಾರಿಯಾಗದಿದ್ದರೆ ಉಪಚುನಾವಣೆಯಲ್ಲಿ ತಕ್ಕ ಪಾಠ: ಎಚ್ಚರಿಕೆ

•ಜಮಖಂಡಿ: ಮಾರ್ಚ್ 27ರಂದು ಕರೆದ ಸಚಿವ ಸಂಪುಟದಲ್ಲಿ ಒಳಮೀಸಲಾತಿ ಜಾರಿಗೊಳಿಸದಿದ್ದರೆ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡು ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಸೋಲಿಸುವುದಾಗಿ ಮಾದಿಗ ಸಂಘಟನೆ ಎಚ್ಚರಿಕೆ ನೀಡಿದೆ. ಒಳಮೀಸಲಾತಿಗೆ ವಿಧೇಯಕವು ರಾಜ್ಯಪಾಲರ ಸಹಿ ಪಡೆದು ಅನುಮೋದನೆಗೊಂಡಿದೆ ಎಂದು ಸಂತೋಷ ಪಡುವ ಸಂದರ್ಭದಲ್ಲಿ ಒಳಮೀಸಲಾತಿ ಅನ್ವಯವಾಗದಂತೆ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂಬ ಫೆಬ್ರವರಿ 26ರ ಸಚಿವ ಸಂಪುಟದ ತೀರ್ಮಾನ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ಘೋರ ಅನ್ಯಾಯವಾಗಿದೆ. ಈ ಮೂಲಕ 40 ವರ್ಷಗಳ ಒಳಮೀಸಲಾತಿ ಹೋರಾಟಕ್ಕೆ ಮಹಾದ್ರೋಹ ಎಸಗಲಾಗಿದೆ. ಸರ್ಕಾರದ ಈ ತೀರ್ಮಾನವನ್ನು ಮಾದಿಗ ಸಂಘಟನೆಗಳ ಒಕ್ಕೂಟದ ಸುರೇಶ್ ಮಾಂಗ ಅವರು ತೀವ್ರವಾಗಿ ಖಂಡಿಸಿದ್ದಾರೆ. ಈ ಸರ್ಕಾರದ ವಿಳಂಬ ನೀತಿ ಸಹಿಸಲಾರೆವು ಮಾ.27ರಂದು ಸಂಪೂರ್ಣವಾದ ಒಳ ಮೀಸಲಾತಿ ಜಾರಿಗೊಳಿಸದಿದ್ದರೆ ಒಮ್ಮೆ ಮಾದಿಗ ಸಮುದಾಯದ ವಿದ್ಯಾರ್ಥಿಗಳು ಗುಡುಗಿದರೆ ವಿಧಾನಸೌಧವೇ ನಡುಗಿ ಹೋಗುವುದು ಎಚ್ಚರ. ಸರ್ಕಾರದ ವಿರುದ್ಧ ಉಗ್ರವಾದ ಹೋರಾಟದ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗುವದು ಎಂದು ಮಾದಿಗ ಸಂಘಟನೆಗಳ ಒಕ್ಕೂಟದ ಪ್ರಕಾಶ ಹುಗ್ಗಿನವರ, ಪರಶುರಾಮ ಮಾಂಗ, ಸುರೇಶ್ ಮಾಂಗ, ಅಡಿಗಪ್ಪ ಮಾಂಗ, ರಮೇಶ ಪೂಜಾರಿ, ಮಾರುತಿ ಮರೆಗುದ್ದಿ, ವಿಷ್ಣು ಮಾದರ, ರಾಜು ಮೇತ್ರಿ, ಆನಂದ ಮೇತ್ರಿ ತಿಳಿಸಿದ್ದಾರೆ.

ರಾಜ್ಯದಲ್ಲೇ ಅತಿ ಹೆಚ್ಚು ನೀರಿನ ಚಿಲುಮೆಗಳು

•ಬೆಳಗಾವಿ: ರಾಜ್ಯದ ಮೊದಲ ನೀರಿನ ಚಿಲುಮೆಗಳ ಜನಗಣತಿ ವರದಿ ಪ್ರಕಾರ, ಕರ್ನಾಟಕದಲ್ಲಿ ಪತ್ತೆಯಾದ ಒಟ್ಟು 274 ಚಿಲುಮೆಗಳ ಪೈಕಿ ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 59 ಚಿಲುಮೆಗಳು ಇರುವುದಾಗಿ ತಿಳಿದುಬಂದಿದೆ. ಈ ವರದಿ ಪ್ರಕಾರ ರಾಜ್ಯದ ವಿವಿಧ ಭಾಗಗಳಲ್ಲಿ ಕಂಡುಬಂದ ಚಿಲುಮೆಗಳಲ್ಲಿಯೂ 144 ಚಿಲುಮೆಗಳು ವರ್ಷ ಪೂರ್ತಿ ನೀರನ್ನು ಹೊಂದಿದ್ದು, ಜಲ ಸಂಪನ್ಮೂಲದ ದೃಷ್ಟಿಯಿಂದ ಮಹತ್ವವನ್ನು ಹೊಂದಿವೆ. ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಚಿಲುಮೆಗಳು ಇರುವುದರಿಂದ, ಭೂಗರ್ಭ ಜಲ ಸಂಪತ್ತಿನ ಸಮೃದ್ಧಿಯನ್ನು ಇದು ಸೂಚಿಸುತ್ತದೆ. ಜೊತೆಗೆ, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮೂಲಗಳಾಗಿ ಈ ಚಿಲುಮೆಗಳು ಪ್ರಮುಖ ಪಾತ್ರವಹಿಸುತ್ತಿವೆ.

10 ತಿಂಗಳಿನಿಂದ ಬೀಡು ಬಿಟ್ಟಿದ್ದ ಮೂರು ಕರಡಿ ಸೆರೆ



•ಬಳ್ಳಾರಿ: ಸಂಡೂರು ತಾಲೂಕಿನ ತೋರಣಗಲ್ಲಿನ ಜಿಂದಾಲ್ ವಿದ್ಯಾನಗರ ಟೌನ್‌ಶಿಪ್ ವ್ಯಾಪ್ತಿಯಲ್ಲಿ ಕಳೆದ 10 ತಿಂಗಳಿನಿಂದ ಬೀಡು ಬಿಟ್ಟಿದ್ದ ತಾಯಿ ಕರಡಿ ಹಾಗೂ ಎರಡು ಮರಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಗುರುವಾರ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಮೊದಲ ಬಾರಿಗೆ ಅತ್ಯಾಧುನಿಕ "ಆಟೋಮ್ಯಾಟಿಕ್ ಮೊಬೈಲ್ ಆಪ್ ಆಧಾರಿತ ಕೇಜ್ ಲಾಕಿಂಗ್ ಸಿಸ್ಟಮ್" ಬಳಸುವ ಮೂಲಕ ಮೂರು ಕರಡಿಗಳನ್ನು ಏಕಕಾಲಕ್ಕೆ ಬಂಧಿಸಿರುವುದು ವಿಶೇಷವಾಗಿದೆ.

ಕಳೆದ ಸುಮಾರು 10 ತಿಂಗಳಿನಿಂದ ಈ ಕರಡಿಗಳ ಕುಟುಂಬ ಜಿಂದಾಲ್ ವಿದ್ಯಾನಗರ ಟೌನ್‌ಶಿಪ್‌ನಲ್ಲಿ ಕಾಣಿಸಿಕೊಳ್ಳುತ್ತಿತ್ತು. ಇದರಿಂದ ನಿವಾಸಿಗಳಲ್ಲಿ ಭೀತಿ ಉಂಟಾಗಿದ್ದರೂ, ಅರಣ್ಯ ಇಲಾಖೆಯ ಮುನ್ನೆಚ್ಚರಿಕೆಯಿಂದಾಗಿ ಯಾವುದೇ ಅಹಿತಕರ ಘಟನೆ ಸಂಭವಿಸಿರಲಿಲ್ಲ. ವನ್ಯಜೀವಿ ವಿಭಾಗದ ಪಿಸಿಸಿಎಫ್ ಅವರ ಆದೇಶದನ್ವಯ, ಬಳ್ಳಾರಿ ಡಿಸಿಎಫ್ ಕೆ.ಎಸ್. ಬಸವರಾಜ್ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು.

ಎಸಿಎಫ್ ಕಿರಣ್ ಕುಮಾರ್, ಆರ್‌ಎಫ್‌ಒಗಳಾದ ಸಯ್ಯದ್ ದಾದಾ ಖಲಂದರ್ ಮತ್ತು ಮಂಜುನಾಥ್, ಡಿಆರ್‌ಎಫ್‌ಒಗಳಾದ ಮೋಹನ್ ಹಾಗೂ ಗುರುಸ್ವಾಮಿ, ಬಿಎಫ್‌ಒಗಳಾದ ವೆಂಕಟೇಶ್ ಮತ್ತು ಶ್ರೀಧರ್ ಅವರ ತಂಡ ಈ ಕಾರ್ಯಾಚರಣೆಯಲ್ಲಿದ್ದರು. ಇವರಿಗೆ ಪಶುವೈದ್ಯ ಡಾ. ಪ್ರಕೃತಿ ಹಾಗೂ ವೈಲ್ಡ್ ಲೈಫ್ ಎಸ್‌ಒಎಸ್ ಎನ್‌ಜಿಒ ಸಂಸ್ಥೆಯವರು ಸಾಥ್ ನೀಡಿದ್ದರು.

ಬಳ್ಳಾರಿ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಸ್. ಬಸವರಾಜ್ ಅವರು ಮಾತನಾಡಿ, ಸೆರೆ ಹಿಡಿದ ತಾಯಿ ಕರಡಿಗೆ ಮುಂದಿನ ದಿನಗಳಲ್ಲಿ ಅದರ ಚಲನವಲನದ ಮೇಲೆ ನಿಗಾ ಇಡಲು "ರೇಡಿಯೋ ಕಾಲರ್" ಅಳವಡಿಸಲಾಗಿದೆ. ನಂತರ ಮೇಲಾಧಿಕಾರಿಗಳ ಸೂಚನೆಯಂತೆ, ಸುರಕ್ಷಿತ ಅರಣ್ಯ ಪ್ರದೇಶದಲ್ಲಿ ತಾಯಿ ಹಾಗೂ ಮರಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.



ಹುಬ್ಬಳ್ಳಿ: ಗುಜ್ಜಾಡಿ ಸ್ವರ್ಣ ಜ್ಯುವೆಲ್ಲರ್ಸ್ ದೇಶಪಾಂಡೆ ನಗರ ಹುಬ್ಬಳ್ಳಿ ಶೋರೂಂನ ರಜತ ಮಹೋತ್ಸವ ಸಮಾರಂಭವನ್ನು ಸ್ವರ್ಣದ ಗ್ರಾಹಕರೊಂದಿಗೆ ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಹಕರಾದ ರಾಮದಾಸ ಶಾನ್ ಭಾಗ್, ಮಂಜುಳಾ ಹಿರೇಮಠ, ಮಮತಾ ಶೆಟ್ಟಿ, ಸ್ವರ್ಣದ ಮುಖ್ಯಸ್ಥರಾದ ಅವಿನಾಶ ನಾಯಕ್, ಪುರಂದರ ಹೆಗ್ಡೆ, ವಿಜಯೇಂದ್ರ ಅಣವಟ್ಟಿ, ಎ.ಬಿ.ಸವಣೂರು, ರಾಜೇಶ ಭಟ್, ಶೈಲಜಾ ತಡಸದ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು ಇದ್ದರು.

ಕಾರ್-ಟೆಂಪೋ ನಡುವೆ ಡಿಕ್ಕಿ: ಮಹಿಳೆ ಸಾವು

•ಮುದ್ದೇಬಿಹಾಳ: ತಾಲೂಕಿನ ಆಲಮಟ್ಟಿ ರಸ್ತೆಯ ಮಾದಿನಾಳ ಗ್ರಾಮದ ಸಂಪರ್ಕ ರಸ್ತೆಯಲ್ಲಿ ಟೆಂಪೋ ಹಾಗೂ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ವಾಹನಗಳು ಪಲ್ಟಿ ಹೊಡೆದ ಪರಿಣಾಮವಾಗಿ ಟೆಂಪೋದಲ್ಲಿ ಪ್ರಯಾಣಿಸುತ್ತಿದ್ದ ಬಟ್ಟಗಿ ತಾಂಡಾದ ನಿವಾಸಿ ಕಸ್ತೂರಿಬಾಯಿ ಕೃಷ್ಣಪ್ಪ ಲಮಾಣಿ (50) ಎಂಬ ಮಹಿಳೆ ಸ್ಥಳದಲ್ಲಿ ಮೃತಪಟ್ಟಿದ್ದು ಇನ್ನುಳಿದ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.



ಘಟನೆಯಲ್ಲಿ ಗಾಯಗೊಂಡ ಗಾಯಾಳುಗಳನ್ನು ಬಾಗಲಕೋಟೆಯ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ರವಾನಿಸಲಾಗಿದ್ದು. ಸಿಪಿಐ ಮಹಮ್ಮದ್ ಪಸಿವುದ್ದೀನ್, ಅಪರಾಧ ವಿಭಾಗದ ಪಿಎಸ್‌ಐ ಆರ್.ಎಸ್ ಬಂಗಿ ಹಾಗೂ ಪೊಲೀಸ್ ಸಿಬ್ಬಂದಿ ಆಗಮಿಸಿ, ಪ್ರಕರಣ ದಾಖಲಿಸಿಕೊಂಡು ಸಂಚಾರ ಸುಗಮಗೊಳಿಸಿದ್ದಾರೆ.

ದಾಖಲೆ ಇಲ್ಲದ 8 ಲಕ್ಷ ರೂ.ವಶ

•ಬಾಗಲಕೋಟೆ: ಜಿಲ್ಲೆಯ ಕುಳಗೇರಿ ಚೆಕ್ ಪೋಸ್ಟ್‌ನಲ್ಲಿ ದಾಖಲೆ ಇಲ್ಲದ 8 ಲಕ್ಷ ರೂ.ಗಳ ನಗದನ್ನು ವಶಕ್ಕೆ ಪಡೆಯಲಾಗಿದೆ.

ಬಾದಾಮಿ ತಾಲೂಕು ವ್ಯಾಪ್ತಿಯ ಕುಳಗೇರಿ ಚೆಕ್‌ಪೋಸ್ಟ್‌ನ ಆರ್.ಎಲ್.ನದಾಫ್ ನೇತೃತ್ವದ ಎಸ್‌ಎಸ್‌ಟಿ ತಂಡ ವಾಹನ ತಪಾಸಣೆ ವೇಳೆ ಕಾರಿನಲ್ಲಿ ದೊರೆತ ನಗದು ಹಣ ವಶಕ್ಕೆ ಪಡೆದುಕೊಳ್ಳಲಾಗಿದೆ.

2.50 ಲಕ್ಷ ಹಣ ಜಪ್ತಿ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ-2026 ಹಿನ್ನಲೆಯಲ್ಲಿ, ಬಾದಾಮಿ ತಾಲೂಕಿನ ಕುಳಗೇರಿ ಕ್ರಾಸ್ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದೇ ಕಾರಿನಲ್ಲಿ ಸಾಗಿಸುತ್ತಿದ್ದ 2.50 ಲಕ್ಷ ರೂ.ಗಳ ನಗದನ್ನು ಎಸ್‌ಎಸ್‌ಟಿ ಮತ್ತು ಎಫ್‌ಎಸ್‌ಟಿ ತಂಡ ವಶಕ್ಕೆ ಪಡೆದುಕೊಂಡಿದೆ.

ಕುಳಗೇರಿ ಚೆಕ್‌ಪೋಸ್ಟ್‌ನಲ್ಲಿ, ಆರ್.ಎಲ್ ನದಾಫ್ ನೇತೃತ್ವದ ಎಸ್.ಎಸ್.ಟಿ ತಂಡ ಹಾಗೂ ರಮೇಶ ಮಾಡಬಾಳ ನೇತೃತ್ವದ ಎಫ್ ಎಸ್‌ಟಿ ತಂಡ ಬುಧವಾರ ಸಂಜೆ ವಾಹನ ತಪಾಸಣೆ ವೇಳೆ ಹುಬ್ಬಳ್ಳಿಯಿಂದ ಗೋಕಾಕ್ ತಾಲೂಕಿನ ಕೌಜಲಗಿ ಕಡೆ ಹೊರಟಿದ್ದ ಕಾರ್ ತಪಾಸಣೆ ವೇಳೆ ನಗದು ಜಪ್ತಿ ಮಾಡಲಾಗಿದೆ.



ಬಾದಾಮಿ ತಾಲೂಕು ವ್ಯಾಪ್ತಿಯ ಜಾಲಿಹಾಳ ಚೆಕ್‌ಪೋಸ್ಟ್‌ನಲ್ಲಿ ಪ್ರತ್ಯೇಕ ಎರಡು ಪ್ರಕರಣಗಳಲ್ಲಿ 64 ಸಾವಿರ ರೂ, ಮತ್ತು 75 ಸಾವಿರ ರೂ.ಗಳ ನಗದನ್ನು ಜಪ್ತಿ ಮಾಡಲಾಗಿದೆ. ಬಾಗಲಕೋಟೆ ತಾಲೂಕಿನ ಬಿಕ್ಕಳಕಿ ಚೆಕ್ ಪೋಸ್ಟ್‌ನಲ್ಲಿ 65 ಸಾವಿರ ರೂ.ಗಳ ನಗದನ್ನು ಸಹ ವಶಕ್ಕೆ ಪಡೆಯಲಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮಾ.31ಕ್ಕೆ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆ ಪರೀಕ್ಷೆ

ಕಾರವಾರ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.18 ರಿಂದ ಏ.2 ರವರೆಗೆ ನಡೆಸಲು ಅಂತಿಮ ವೇಳಾಪಟ್ಟಿ ಪ್ರಕಟಿಸಲಾಗಿದ್ದು, ಅದರಂತೆ ಈಗಾಗಲೇ ಪರೀಕ್ಷೆಯು ಪ್ರಾರಂಭವಾಗಿದ್ದು, ಸದರಿ ವೇಳಾಪಟ್ಟಿಯನ್ವಯ ತೃತೀಯ ಭಾಷೆ ಪರೀಕ್ಷೆಯನ್ನು ಮಾ. 30ರಂದು ನಿಗದಿಪಡಿಸಲಾಗಿತ್ತು. ಆದರೆ ಸರ್ಕಾರದ ಅಧಿಸೂಚನೆ ಅನ್ವಯ ಮಹಾವೀರ ಜಯಂತಿ ಪ್ರಯುಕ್ತ ಘೋಷಿಸಲಾಗಿರುವ ಸಾರ್ವತ್ರಿಕ ರಜಾ ದಿನವನ್ನು ಮಾ.31 ಮಂಗಳವಾರ ಬದಲಾಗಿ ಮಾ.30 ಸೋಮವಾರ ಎಂದು ಮಾರ್ಪಡಿಸಿ ಆದೇಶಿಸಲಾಗಿದ್ದು, ಈ ಸಂಬಂಧ ಮಾ. 30 ರಂದು ನಿಗದಿಪಡಿಸಲಾಗಿದ್ದ ತೃತೀಯ ಭಾಷೆ ಪರೀಕ್ಷೆಯು ಮಾ.31ರಂದು ನಿಗದಿಪಡಿಸಿದ ಅವಧಿಯಲ್ಲಿ ನಡೆಸಲಾಗುವುದು. ಉಳಿದ ವಿಷಯದ ಪರೀಕ್ಷೆಗಳು ವೇಳಾಪಟ್ಟಿಯಂತೆ ಯಥಾವತ್ತಾಗಿ ನಡೆಯುವುದು ಎಂದು ಕ.ಶಾ.ಪ. ಬೋ ಮಂಡಳಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಂಧಿ ಗ್ರಾಮ ಪುರಸ್ಕಾರಕ್ಕೆ ಉಳವಿ ಗ್ರಾಪಂ ಆಯ್ಕೆ

ಜೋಯಿಡಾ: ರಾಜ್ಯ ಸರ್ಕಾರ ಕೊಡಮಾಡುವ ಗಾಂಧಿ ಗ್ರಾಮ ಪುರಸ್ಕಾರಕ್ಕೆ 2024-25 ಸಾಲಿಗಾಗಿ ತಾಲೂಕಾ ಮಟ್ಟದ ಪ್ರಶಸ್ತಿಗೆ ಜೋಯಿಡಾ ತಾಲೂಕಿನಿಂದ ಉಳವಿ ಗ್ರಾಪಂ ಆಯ್ಕೆ ಆಗಿದೆ. ಗ್ರಾಪಂ ಉತ್ತಮ ಕಾರ್ಯ ನಿರ್ವಹಣೆಗಾಗಿ ನೀಡುವ ಈ ಪ್ರಶಸ್ತಿ ಬರಲು ಶಾಸಕ ಆರ್.ವಿ.ದೇಶಪಾಂಡೆ ಅವರ ಸಹಕಾರ ಮಾರ್ಗದರ್ಶನ ಉಳವಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸಮಸ್ತ ನಾಗರಿಕರ ಸಹಕಾರದಿಂದ ಪಂಚಾಯತಿಗೆ ಈ ಪ್ರಶಸ್ತಿ ಲಭಿಸಲು ಸಾಧ್ಯವಾಗಿದೆ ಎಂದು ಎಂದು ಉಳವಿ ಗ್ರಾಮ ಪಂಚಾಯತ್ ಹಿಂದಿನ ಅಧ್ಯಕ್ಷ ಮಂಜುನಾಥ್ ಮೋಕಾಶಿ ಸಂತಸ ವ್ಯಕ್ತಪಡಿಸಿದ್ದಾರೆ.



ಯುವಕರ ಗಲಾಟೆ: ದೂರು ದಾಖಲು

ಹಳಿಯಾಳ: ತಾಲೂಕಿನ ಮದ್ನಳ್ಳಿ ಗ್ರಾಮದಲ್ಲಿ ಯುವಕರ ನಡುವೆ ಕ್ಷುಲ್ಲಕ ಕಾರಣಕ್ಕೆ ನಡೆದ ಗಲಾಟೆಗೆ ಸಂಬಂಧಿಸಿ ಎರಡು ಪ್ರತ್ಯೇಕ ದೂರುಗಳು ದಾಖಲಾಗಿವೆ. ಮೊದಲನೇ ದೂರು: ಮಹೇಶ ಸುರೇಶ ಸಾಗರೇಕರ (30) ನೀಡಿದ ದೂರಿನಲ್ಲಿ, ಮಾ. 23ರಂದು ರಾತ್ರಿ ಗ್ರಾಮಲಕ್ಷ್ಮಿ ದೇವಸ್ಥಾನದ ಎದುರು ಸ್ನೇಹಿತರೊಂದಿಗೆ ಮಾತನಾಡುತ್ತಿದ್ದ ವೇಳೆ ಕೆಲವರು ಏಕಾಏಕಿ ಹಲ್ಲೆ ನಡೆಸಿದರೆಂದು ಆರೋಪಿಸಲಾಗಿದೆ. ಮಲ್ಲೇಶ ಮಾಸ್ತಮರಡಿ ಸೇರಿದಂತೆ ಹಲವರು ಬೈಕ್ ಹಾಗೂ ಕೈಗಳಿಂದ ಹೊಡೆದು ತಲೆಗೆ ಮತ್ತು ದೇಹದ ವಿವಿಧ ಭಾಗಗಳಿಗೆ ಗಾಯಪಡಿಸಿದ್ದಾಗಿ ದೂರಿನಲ್ಲಿ ಆಪಾದಿಸಲಾಗಿದೆ. ಮಧ್ಯಪ್ರವೇಶಿಸಲು ಬಂದ ಜಗನ್ನಾಥ, ವಿನಾಯಕ, ಪ್ರಶಾಂತ ಸೇರಿದಂತೆ ಇತರರ ಮೇಲೂ ಹಲ್ಲೆ ನಡೆದಿದ್ದು, ಜೀವ ಬೆದರಿಕೆ ಹಾಕಿ ಆರೋಪಿತರು ಸ್ಥಳದಿಂದ ತೆರಳಿದ್ದಾರೆ ಎಂದು ದೂರು ದಾಖಲಿಸಿದ್ದಾರೆ. ಇನ್ನೊಂದೆಡೆ, ಮತ್ತೊಂದು ಗುಂಪು ನೀಡಿದ ದೂರಿನಲ್ಲಿ, ಗ್ರಾಮಲಕ್ಷ್ಮಿ ದೇವಸ್ಥಾನದ ಬಳಿ ನಡೆಯುತ್ತಿದ್ದ ಕಾರ್ಯಕ್ರಮದ ವೇಳೆ ಜಗಳ ಉಂಟಾಗಿ ಅದನ್ನು ಬಿಡಿಸಲು ಹೋದಾಗ ತಮ್ಮ ಮೇಲೆ ದಾಳಿ ನಡೆದಿದೆ ಎಂದು ಆರೋಪಿಸಲಾಗಿದೆ. ವಿನಾಯಕ ಬಸ್ತವಾಡ ಹಾಗೂ ಇತರರು ಹಲ್ಲೆ ನಡೆಸಿ ತಲೆಗೆ ಮತ್ತು ದೇಹಕ್ಕೆ ಗಾಯಗೊಳಿಸಿದರೆಂದು ಹೇಳಲಾಗಿದೆ. ಅಲ್ಲದೆ, ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರುವುದನ್ನು ತಿಳಿದಿದ್ದರೂ ಜಾತಿ ನಿಂದನೆ ಮಾಡಲಾಗಿದೆ ಎಂಬ ಆರೋಪವೂ ದೂರಿನಲ್ಲಿ ಇದೆ. ಗಾಯಗೊಂಡವರು ಹಳಿಯಾಳ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ದೂರು ನೀಡಿದ್ದಾರೆ. ಪೊಲೀಸರು ಎರಡು ಪ್ರಕರಣಗಳನ್ನು ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	58005	71899
ಬಿಳಿಗೋಟು	25908	39718
ಕೆಂಪುಗೋಟು	25268	35822
ಬೆಟ್ಟೆ	40400	49109
ರಾಶಿ	48698	53699
ಚಾಲಿ	44099	48799
ಬಿ.ಕಾಳುಮೆಣಸು	86099	86099

ಯಲ್ಲಾಪುರ	ಕನಿಷ್ಠ	ಗರಿಷ್ಠ
ಆಪಿ	57700	58600
ರಾಶಿ	49999	57559
ಬೆಟ್ಟೆ	38218	51121
ಕೆಂಪುಗೋಟು	22899	37969
ಬಿಳಿಗೋಟು	16899	42211
ಚಾಲಿ	38298	49199
ಕೋಕಾ	15201	34299
ಕಾಳುಮೆಣಸು	60799	68009



ಭಟ್ಕಳ: ಭಟ್ಕಳದಲ್ಲಿ ಶುಕ್ರವಾರ ಸಂಜೆ ಚೆನ್ನಪಟ್ಟಣ ಹನುಮಂತ ದೇವರ ಬ್ರಹ್ಮರಥೋತ್ಸವದ ಇರುವ ಹಿನ್ನೆಲೆಯಲ್ಲಿ ಗುರುವಾರ ಸಂಜೆ ಭಟ್ಕಳ ಪಟ್ಟಣದಲ್ಲಿ ಪೊಲೀಸರು ಪಥ ಸಂಚಲನ ನಡೆಸಿದರು. ಡಿವೈಎಸ್ಪಿ ಗಿರೀಶ, ನಗರ ಠಾಣೆ ಇನ್ಸಪೆಕ್ಟರ್ ದಿವಾಕರ ಮತ್ತಿತರರಿದ್ದರು.

ನಕಲಿ ದಾಖಲೆ ಸೃಷ್ಟಿಸಿ ಲಕ್ಷಾಂತರ ರೂ.ವಂಚನೆ

ಅಂಕೋಲಾ: ಸಹಕಾರಿ ಪತ್ತಿನ ಹಣಕಾಸು ಸಂಸ್ಥೆಯ ಸಿಬ್ಬಂದಿ ಓರ್ವ ನಕಲಿ ಸಹಿ ಮತ್ತು ದಾಖಲೆಗಳನ್ನು ಸೃಷ್ಟಿಸಿ ಸಂಸ್ಥೆಯಲ್ಲಿ ಗ್ರಾಹಕರು ಗಿರವಿ ಇಟ್ಟ ಲಕ್ಷಾಂತರ ರೂಪಾಯಿಗಳ ಬಂಗಾರದ ಆಭರಣಗಳನ್ನು ದುರುಪಯೋಗ ಪಡಿಸಿಕೊಂಡು ವಂಚಿಸಿರುವ ಘಟನೆ ನಡೆದಿದ್ದು, ಈ ಕುರಿತಂತೆ ಹಣಕಾಸು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕರು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.ಕಾರವಾರದ ಮಾರುತಿಗಲ್ಲಿಯಲ್ಲಿ ಮುಖ್ಯ ಕಚೇರಿ ಹೊಂದಿರುವ ದಿ ದೈವಜ್ಞ ಕೋ ಆಪ್ ಕ್ರೆಡಿಟ್ ಸೊಸೈಟಿಯ ಅಂಕೋಲಾ ಶಾಖೆಯಲ್ಲಿ ಈ ಕೃತ್ಯ ನಡೆದಿದ್ದು, ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಅಶೋಕ ಶೇಟ್ ಎನ್ನುವವರು ಸಂಸ್ಥೆಗೆ ನಂಬಿಕೆ ದ್ರೋಹ ಎಸಗಿದ್ದಾರೆ ಎಂದು ಆರೋಪ ಮಾಡಲಾಗಿದೆ.2025 ರ ಅಕ್ಟೋಬರ್ 19 ರಿಂದ 2026 ಫೆಬ್ರುವರಿ 6 ರ ನಡುವಿನ ಅವಧಿಯಲ್ಲಿ ನಾಲ್ಕು ಪ್ರತ್ಯೇಕ ಖಾತೆಗಳಿಂದ ಸುಮಾರು 9.80 ಲಕ್ಷ ಸಾಲ ಇರುವ 208.800 ಗ್ರಾಂ ಬಂಗಾರದ ಆಭರಣಗಳನ್ನು ದುರುಪಯೋಗ ಪಡಿಸಿಕೊಂಡು ವಂಚಿಸಿರುವ ಆರೋಪಿತನು ಸಂಸ್ಥೆಯ ಗ್ರಾಹಕರ ಉಳಿತಾಯ ಖಾತೆಯಿಂದ ಹಣ ತೆಗೆದು ಅದೇ ಶಾಖೆಯ ಖಾತೆಗಳಿಗೆ ಭರಣ ಮಾಡಿ ಕೈ ಕಿಲ್ಲು ಹಣ ಸಂಘದ ಬ್ಯಾಂಕ್ ಖಾತೆಗಳಿಗೆ ತುಂಬದೇ ಸುಮಾರು 50 ಸಾವಿರ ರೂಪಾಯಿಗಳ ವಂಚನೆ ಮಾಡಿರುವುದಾಗಿ ತಿಳಿದು ಬಂದಿದೆ. ಈ ಕುರಿತು ಸಂಸ್ಥೆಯ ಕಾರ್ಯನಿರ್ವಾಹಕ ಶ್ಯಾಮ್ ಕೃಷ್ಣ ಬಾಂದೇಕರ್ ಎನ್ನುವವರು ಆರೋಪಿತನ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಗೋಕರ್ಣ: ನದಿ ತಿರುವು ಯೋಜನೆ ವಿರುದ್ಧ ಭಜನಾ ಜಾಗೃತಿ ಅಭಿಯಾನ ಇಲ್ಲಿನ ಮೈತ್ರೇಯಿ ಮಹಿಳಾ ಮಂಡಳಿಯ ಸದಸ್ಯರಿಂದ ಕೋಟಿ ತೀರ್ಥಕಟ್ಟೆಯಲ್ಲಿರುವ ಮದಾಧ್ವ ರಥೋತ್ತಮ ಮಠದ ಶ್ರೀ ರಾಮ ಮಂದಿರದಲ್ಲಿ ನಡೆಯುತ್ತಿದೆ. ಸೋಂದಾ ಸ್ವರ್ಣವಲ್ಲಿ ಮಠದ ಶ್ರೀ ಗಂಗಾಧರೇಂದ್ರ ಸರಸ್ವತಿ ಶ್ರೀಗಳ ಆದೇಶದಂತೆ ಯುಗಾದಿ ಪಾಡ್ಯದಿಂದ ಶ್ರೀರಾಮ ನವಮಿಯವರೆಗೆ ಜಿಲ್ಲೆಯ ಎಲ್ಲೆಡೆ ಈ ಅಭಿಯಾನ ನಡೆಯುತ್ತಿದೆ. ಇದರಂತೆ ಪ್ರತಿ ಸಂಜೆ ಮಹಿಳಾ ಮಂಡಳಿಯ ಸದಸ್ಯರು ರಾಮ ನಾಮ ಸ್ಮರಣೆ, ಭಜನೆ ನಡೆಸುತ್ತಿದ್ದಾರೆ.

ಎನ್‌ಕಾರ್ಡ್ ಸಮಿತಿ ಸಭೆ | ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಸೂಚನೆ

ಮಾದಕ ವಸ್ತುಗಳ ತಪಾಸಣೆ ತೀವ್ರಗೊಳಿಸಿ

ಕಾರವಾರ: ಜಿಲ್ಲೆಯಲ್ಲಿ ಮಾದಕ ವಸ್ತುಗಳ ಸರಬರಾಜು ಮತ್ತು ಬಳಕೆಯ ಕುರಿತಂತೆ ಅನುಮಾನಾಸ್ಪದ ಸ್ಥಳಗಳಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ತೀವ್ರಗತಿಯಲ್ಲಿ ವ್ಯಾಪಕವಾಗಿ ತಪಾಸಣೆಗಳನ್ನು ನಡೆಸುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚನೆ ನೀಡಿದರು.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಎನ್‌ಕಾರ್ಡ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಾದಕ ವಸ್ತುಗಳ ಮತ್ತು ಸರಬರಾಜು ತಡೆಯಲು ಪೊಲೀಸ್ ಇಲಾಖೆ ಸೇರಿದಂತೆ ಎನ್ ಕಾರ್ಡ್ ಸಮಿತಿಯಲ್ಲಿನ ಎಲ್ಲಾ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯ ತಪಾಸಣೆಗಳನ್ನು ನಡೆಸುವಂತೆ ಸೂಚಿಸಿದ ಜಿಲ್ಲಾಧಿಕಾರಿಗಳು, ಪ್ರತೀ ತಿಂಗಳು ನಡೆಸಿದ ತಪಾಸಣೆಗಳು ಮತ್ತು ವಶಪಡಿಸಿಕೊಂಡ ಮಾದಕ ವಸ್ತುಗಳ ಪ್ರಮಾಣದ ಕುರಿತಂತೆ ಸಂಪೂರ್ಣ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವಂತೆ ನಿರ್ದೇಶನ ನೀಡಿದರು.

ಅಂಚೆ ಇಲಾಖೆಯಲ್ಲಿ ಸ್ವೀಕೃತವಾಗುವ ಅನುಮಾನಾಸ್ಪದ ಪಾರ್ಸೆಲ್‌ಗಳನ್ನು ನಿರಂತರವಾಗಿ ಮತ್ತು ಇತರೆ ಪಾರ್ಸೆಲ್‌ಗಳನ್ನು ಆಗಾಗ್ಗೆ ತಪಾಸಣೆ ನಡೆಸುವಂತೆ ಮತ್ತು ಮಾದಕ ವಸ್ತುಗಳ ಕುರಿತು ತಪಾಸಣೆಗಳನ್ನು ನಡೆಸುವ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳು ಪೊಲೀಸ್ ಇಲಾಖೆಯ ಶ್ವಾನದಳದ ನೆರವು ಪಡೆಯುವಂತೆ ನಿರ್ದೇಶನ ನೀಡಿದರು.

ಪೊಲೀಸ್, ಕೋಸ್ಟ್ ಗಾರ್ಡ್, ಕರಾವಳಿ ಕಾವಲು ಪೊಲೀಸ್, ಅಬಕಾರಿ, ಮೀನುಗಾರಿಕೆ, ಬಂದರು ಸೇರಿದಂತೆ ಎಲ್ಲಾ ಇಲಾಖೆಗಳು ಜಿಲ್ಲೆಯಲ್ಲಿ ಮಾದಕ ವಸ್ತುಗಳ ನಿರ್ಮೂಲನೆ ಕುರಿತ ಕಾರ್ಯದಲ್ಲಿ ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಕೋಸ್ಟ್ ಗಾರ್ಡ್, ಕರಾವಳಿ ಕಾವಲು ಪೊಲೀಸ್, ಅಬಕಾರಿ, ಮೀನುಗಾರಿಕೆ, ಬಂದರು, ಶಿಕ್ಷಣ, ಆರೋಗ್ಯ ಇಲಾಖೆಯ ಅಧಿಕಾರಿಗಳು ಇದ್ದರು.



- ಕೋರಿಯರ್ ಸಂಸ್ಥೆಗಳ ಮೂಲಕ ನಡೆಯುವ ಪಾರ್ಸೆಲ್‌ಗಳನ್ನು ಪರಿಶೀಲಿಸಿ
- ಮಾದಕ ವಸ್ತುಗಳ ಪ್ರಮಾಣದ ಕುರಿತು ಸಂಪೂರ್ಣ ವರದಿ ಸಲ್ಲಿಸಿ

ಅಧಿಕಾರಿಗಳಿಗೆ ಸೂಚನೆ

ಮಾದಕ ವಸ್ತುಗಳ ಬಳಕೆಯ ದುಷ್ಪರಿಣಾಮಗಳ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ ಅವರು ಜಿಲ್ಲೆಯ ಮೀನುಗಾರಿಕಾ ಬಂದರು, ಹೋಟೆಲ್ ಮತ್ತು ಬೀಚ್‌ನಲ್ಲಿ ಮಾದಕ ವಸ್ತುಗಳ ಸರಬರಾಜು ಮತ್ತು ಸೇವನೆ ಕುರಿತಂತೆ ತಪಾಸಣೆಗಳನ್ನು ನಡೆಸುವಂತೆ ಹಾಗೂ ಅರಣ್ಯದಲ್ಲಿ ಮತ್ತು ಕೃಷಿ ಜಮೀನಿನಲ್ಲಿ ಬೆಳೆಯಬಹುದಾದ ಮಾದಕ ಗಿಡಗಳ ಕುರಿತಂತೆ ಅರಣ್ಯ ಮತ್ತು ಕೃಷಿ ಇಲಾಖೆಯಿಂದ ಪರಿಶೀಲನೆ ನಡೆಸುವಂತೆ ಸೂಚಿಸಿದರು.

ನಾಯಕ್ ಹತ್ಯಾಯತ್ನಕ್ಕೆ ತೀವ್ರ ಖಂಡನೆ ಚುರುಕುಗೊಂಡ ಪೊಲೀಸ್ ತನಿಖೆ

ಅಂಕೋಲಾ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣ ನಾಯಕ ಹತ್ಯಾಯತ್ನಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯ ತನಿಖೆ ಚುರುಕುಗೊಂಡಿದ್ದು, ಕಾರವಾರ ಗೋವಾ ಗಡಿಯಲ್ಲಿ ಬಂಧಿತ ನಾಲ್ಕು ಜನ ಆರೋಪಿಗಳನ್ನು ಗುರುವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.



ಗೋಪಾಲಕೃಷ್ಣ ನಾಯಕ ಅವರು ವ್ಯವಹಾರಿಕ ಮತ್ತು ರಾಜಕೀಯ ರಂಗದಲ್ಲಿ ಸಕ್ರಿಯವಾಗಿದ್ದು ಯಾವುದಾದರೂ ದ್ವೇಷದ ಹಿನ್ನೆಲೆಯಲ್ಲಿ ಸುಪಾರಿ ನೀಡಲಾಗಿತ್ತೇ ಎನ್ನುವ ಕುರಿತಂತೆ ಪೊಲೀಸರು ತೀವ್ರ ವಿಚಾರಣೆ ನಡೆಸುತ್ತಿರುವುದಾಗಿ ತಿಳಿದು ಬಂದಿದೆ.

ಶಾಸಕ ಸತೀಶ ಸೈಲ್ ಘಟನೆಯನ್ನು ಖಂಡಿಸಿದ್ದು, ಅಪರಾಧಿಗಳನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಕೃತ್ಯದ ಹಿಂದಿನ ಷಡ್ಯಂತ್ರ ಬಯಲು ಮಾಡುವಂತೆ ಪೊಲೀಸ್ ಇಲಾಖೆಗೆ ಸೂಚಿಸಿರುವುದಾಗಿ ಹೇಳಿದ್ದಾರೆ. ಮಾಜಿ ಶಾಸಕಿ ರೂಪಾಲಿ ನಾಯ್ಕ, ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಗೋಪಾಲಕೃಷ್ಣ ನಾಯಕ ಅವರ ಮೇಲಿನ ಹಲ್ಲೆ ಖಂಡನೀಯ ಎಂದು ಹೇಳಿದ್ದಾರೆ.

ಗೋಪಾಲಕೃಷ್ಣ ನಾಯಕ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಮಣಿಪಾಲಕ್ಕೆ ಸಾಗಿಸಲಾಗಿತ್ತು. ಕೂಡಲೇ ಪೊಲೀಸ ದಾರಿಯಂತೆ ಕಾರ್ಯಾಚರಣೆಗೆ ಮುಂದಾದಾಗ ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ. ಅದರಲ್ಲಿ ಗೋವಾದ ಜಾಕೀರ, ನೈಜರ್, ಸದ್ದಾಂ ಮತ್ತು ಇರ್ಫಾನ್ ಇನ್ನಿಬ್ಬರು ತಲೆ ಮರೆಸಿಕೊಂಡಿದ್ದಾರೆ. ಇದರಲ್ಲಿ ಓರ್ವ ವಾಹನ ಚಾಲಕ, ಒಬ್ಬ ಸೆಂಟ್ರಿಂಗ್ ಕೆಲಸಗಾರ, ಒಬ್ಬ ರಿಯಲ್ ಎಸ್ಟೇಟ್ ಏಜೆಂಟ್ ಹಾಗೂ ಮತ್ತೊಬ್ಬ ಬೌನ್ಸರ್ ಆಗಿದ್ದಾನೆ ಎಂದು ಹೇಳಲಾಗಿದೆ. ಪೊಲೀಸ ಮೂಲಗಳ ಪ್ರಕಾರ ಗೋಪಾಲಕೃಷ್ಣರ ಕೊಲೆಗೆ ಸುಪಾರಿ ನೀಡಿ ಈ ಕೃತ್ಯಕ್ಕೆ ಮುಂದಾಗಿರಬಹುದೆಂದು ಸಂಶಯಿಸಲಾಗಿದೆ.

ಘಟನೆಯು ರಾಜಕೀಯ ದ್ವೇಷವೇ ಅಥವಾ ಇನ್ನೇನಾದರೂ ಇದೆಯೋ ಎನ್ನುವದು ತನಿಖೆಯಿಂದ ತಿಳಿದುಬರಬೇಕಿದೆ. ಈಗಾಗಲೆ ಘಟನೆಗೆ ಸಂಬಂಧಿಸಿದಂತೆ ಇನ್ನಿಬ್ಬರನ್ನು ಬಂಧಿಸಲು ನಾಲ್ಕು ವಿಶೇಷ ತಂಡಗಳನ್ನು ರಚಿಸಲಾಗಿದೆ. ತನಿಖೆ ಮುಂದುವರಿದಿದೆ ಜಿಲ್ಲಾ ಎಸ್ಪಿ ದೀಪನ್ ಹೇಳಿದ್ದಾರೆ.

ಸಿಲಿಂಡರ್ ಅಭಾವ: ಪ್ರವಾಸೋದ್ಯಮದ ಮೇಲೆ ಪರಿಣಾಮ

ಗೋಕರ್ಣ: ವಾಣಿಜ್ಯ ಸಿಲಿಂಡರ ಅಭಾವದಿಂದ ಪ್ರವಾಸಿ ತಾಣದ ಹೋಟೆಲ್‌ಗಳು ಬಂದಾಗುತ್ತಿದ್ದು, ಪ್ರವಾಸೋದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.

ಈ ಭಾಗದಲ್ಲಿ ಒಟ್ಟು 300ಕ್ಕೂ ಹೆಚ್ಚು ಹೋಟೆಲ್‌ಗಳು ಇವೆ. ಇದರ ಹೊರತಾಗಿ ಫಾಸ್ಟ್‌ಫುಡ್, ಚಿಕ್ಕ ಗೂಡಂಗಡಿಗಳು ವಹಿವಾಟು ನಡೆಯುತ್ತಿದೆ.

ಎಲ್ಲಾ ಅಂಗಡಿಗಳಲ್ಲೂ ಚಹಾ ತಿಂಡಿ ತಯಾರಿಕೆಗೆ ವಾಣಿಜ್ಯ ಸಿಲಿಂಡರ ಅವಲಂಬಿತವಾಗಿದ್ದು, ಮಧ್ಯಪ್ರಾಚ್ಯ ದೇಶಗಳ ಯುದ್ಧದ ಪರಿಣಾಮ ಉಂಟಾದ ಅನಿಲ ಕೊರತೆ ಈ ಉದ್ಯಮದ ಮೇಲೆ ಭಾರಿ ಹೊಡೆತ ನೀಡಿದೆ.

ನಿಬಂಧನೆಗಳ ತೊಡಕು: ಕೇಂದ್ರ ಸರ್ಕಾರ ಹೋಟೆಲ್ ಉದ್ಯಮಕ್ಕೆ ಅನುಕೂಲವಾಗುವ ರೀತಿಯಲ್ಲಿ ವಾಣಿಜ್ಯ ಸಿಲಿಂಡರ್ ನೀಡಲು ಆದೇಶಿಸಿದೆ. ಆದರೆ ಸಿಲಿಂಡರ್ ಪಡೆಯಲು ಹಲವು ಕಠಿಣ ನಿಯಮಗಳನ್ನು ರೂಪಿಸಿದ್ದು, ಇದು ಚಿಕ್ಕ ಹೋಟೆಲ್‌ನವರಿಗೆ ತೀವ್ರ ತೊಂದರೆಯಾಗಿದೆ. ಈ ಮೊದಲು ವಾಣಿಜ್ಯ ಬಳಕೆ ಸಿಲಿಂಡರ್‌ಗಳಿಗೆ ಯಾವುದೇ ಮುಂಗಡ ಬುಕಿಂಗ್ ಇರುತ್ತಿರಲಿಲ್ಲ, ಇದರ ಜೊತೆ ಸಿಲಿಂಡರ್ ಪಡೆದ ಗ್ರಾಹಕರಿಗೆ ರಶೀದಿಯು ನೀಡುತ್ತಿರಲಿಲ್ಲ, ಆದರೆ ಈಗ ಹೋಟೆಲ್ ಮಾಲಕನ ಹೆಸರಿಗೆ ವಾಣಿಜ್ಯ ಬಳಕೆ ಸಿಲಿಂಡರ್ ಕಾರ್ಡ್ ಇದ್ದರೂ ಸಹ ಅದು ಹೋಟೆಲ್ ಹೆಸರಿನಲ್ಲಿ ಇರಬೇಕು ಹಾಗಾದರೆ ಮಾತ್ರ ಸಿಲಿಂಡರ್ ನೀಡುತ್ತೇವೆ ಎಂದು ವಿತರಕರು ಉತ್ತರಿಸುತ್ತಾರೆ. ಇದರ ಜೊತೆ ಹೋಟೆಲ್ ಲೈಸೆನ್ಸ್,ಜಿ.ಎಸ್.ಟಿ ನಂಬರ್ ಮತ್ತಿರ ದಾಖಲೆಗಳನ್ನು ಕೇಳುತ್ತಿದ್ದು, ಸಣ್ಣ ಹೋಟೆಲ್ ನವರಿಗೆ ಈ ನಿಯಮ ತೊಡಕಾಗಿದೆ.

ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿ ವಹಿವಾಟು ಇಲ್ಲದೆ ಹಾನಿ ಅನುಭವಿಸುವುದಕ್ಕಿಂತ ಹೋಟೆಲ್ ಮುಚ್ಚುವುದು ಉತ್ತಮ ಎಂದು ಹಲವರು ಬಾಗಿಲು ಹಾಕಿದ್ದಾರೆ. ಕೂಡಲೇ ಈ ಹೊಸ ನಿಯಮ ಸಡಿಲಿಸಿ ಎಲ್ಲ ವ್ಯಾಪಾರಿಗಳಿಗೆ ಸಿಲಿಂಡರ್ ಪೂರೈಕೆ ಮಾಡುವ ನಿಟ್ಟಿನಲ್ಲಿ ಸರ್ಕಾರ ತುರ್ತು ಕ್ರಮ ತೆಗೆದುಕೊಳ್ಳಬೇಕಿದೆ.

ಕೋವಿಡ್ ಸಮಯದ ವಾತಾವರಣ: ಕೋವಿಡ್ ಮಹಾಮಾರಿ ಸಮಯದಲ್ಲಿ ಪ್ರವಾಸಿ ತಾಣದ ಬಹುತೇಕ ಅಂಗಡಿಯ ಮುಂಗಟ್ಟುಗಳು ಮುಚ್ಚಿ ಲಾಕ್ ಡೌನ್ ಮಾಡಲಾಗಿತ್ತು. ಅದರಂತೆ ಪ್ರಸ್ತುತ ಪ್ರಮುಖ ಮಾರ್ಗದಲ್ಲಿನ ಹಲವು ಹೋಟೆಲ್‌ಗಳು ಬಾಗಿಲು ಮುಚ್ಚಿದ್ದು, ಐದಾರು ವರ್ಷಗಳ ಹಿಂದಿನ ಸಂದಿಗ್ಧ ಸ್ಥಿತಿಯನ್ನು ಮತ್ತೆ ನೆನಪಿಸಿ, ಅದೇ ಸ್ಥಿತಿ ಮರು ಕಳಿಸುತ್ತಿದೆಯೋ ಎಂಬಂತಾಗಿದೆ.

ದರ ಏರಿಕೆ ಹಲವು ತಿಂಡಿಗೆ ಕೋಕ್: ಕೆಲವು ಹೋಟೆಲ್‌ಗಳು ಕಟ್ಟಿಗೆ ಒಲೆ ಬಳಸಿ ತಿಂಡಿಗಳನ್ನು ತಯಾರಿಸುತ್ತಿದ್ದು, ತಿಂಡಿಗಳ ದರವನ್ನು ಸಹ ಏರಿಕೆ ಮಾಡಲಾಗಿದೆ. ಅಲ್ಲದೆ ಬೇಕಿ ಬೇಯದೆ ತಯಾರಿಸುವ ಇತರೆ ತಿಂಡಿಗಳನ್ನು ನೀಡುತ್ತಿದ್ದು, ಈ ಮೊದಲು ಸಿಗುವ ಹಲವಾರು ತಿಂಡಿಗಳ ತಯಾರಿಕೆಯನ್ನು ನಿಲ್ಲಿಸಲಾಗಿದೆ.



ವಿವಿಧ ಇಲಾಖೆಗೆ ದಿಲೀಶ್ ಶಶಿ ಭೇಟಿ

ಮುಂಡಗೋಡ: ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಶ್ ಶಶಿ ಅವರು ಗುರುವಾರ ತಾಲೂಕಿನ ವಿವಿಧ ಇಲಾಖೆಗೆ ದಿಢೀರನೆ ಭೇಟಿ ನೀಡಿ ಕಡತಗಳನ್ನು ಪರಿಶೀಲಿಸಿದರು.

ಅವರು ಮೊದಲು ಗ್ರಾಮೀಣ ಕುಡಿಯುವ ನೀರು ಇಲಾಖೆಗೆ ಭೇಟಿ ನೀಡಿ, ಇಲಾಖೆಯ ಕಡತವನ್ನು ಹಾಗೂ ಹಾಜರಾತಿ ಬುಕ್ ಪರಿಶೀಲಿಸಿದರು. ಅಧಿಕಾರಿಯಿಂದ ತಾಲೂಕಿನಲ್ಲಿ ನೀರಿನ ಸಮಸ್ಯೆದ ಬಗ್ಗೆ ಮಾಹಿತಿ ಪಡೆದರು. ಮೈನಳ್ಳಿ ಗ್ರಾಮದ ಕುಡಿಯುವ ನೀರಿನ ಪ್ರತಿ ವರ್ಷ ಸಮಸ್ಯೆ ಎದುರಾಗುತ್ತಿದೆ ಇದಕ್ಕೆ ಶಾಶ್ವತ ಪರಿಹಾರವೆಂದರೆ ಅತ್ತಿವೇರಿ ಜಲಾಶಯದಿಂದ ಹುನಗುಂದ, ನಂದಿಕಟ್ಟಾ ಗುಂಜಾವತಿ ಮೂಲಕ ಮೈನಳ್ಳಿದವರೆಗೆ ಪೈಪ್ ಲೈನ್ ಸಂಪರ್ಕ ನೀಡಿದರೆ ಸಮಸ್ಯೆ ಬಗೆಹರಿಸಬಹುದೆಂದುಎಇ ರಾಜೇಶ್ವರಿ ಕದಂ ಅವರು ಸಿಇಒ ಅವರ ಗಮನಕ್ಕೆ ತಂದರು. ಈ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು. ಅಲ್ಲದೆ ಮುಂಡಗೋಡದ ಮಾಹಿತಿಯಲ್ಲಿ ಸಕಾಲ ಪ್ರತಿ ಇಲಾಖೆಯಲ್ಲಿ ಒಳವಡಿಸಲು ಸೂಚಿಸಿದರು. ನಂತರ ಪಂಚಾಯತ ರಾಜ್ ಇಲಾಖೆಗೆ ಭೇಟಿ ನೀಡಿದರು.



ಪತ್ರಕರ್ತರೊಂದಿಗೆ ಮಾತನಾಡಿದ ಅವರು,ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಮೈನಳ್ಳಿ ಮತ್ತು ಸಾಲಗಾಂವ ಗ್ರಾಪಂಯಲ್ಲಿ ನೀರಿನ ಸಮಸ್ಯೆದ ಬಗ್ಗೆ ಮಾಹಿತಿ ನೀಡಿದ್ದಾರೆ. ಶಾಶ್ವತ ಪರಿಹಾರಕ್ಕಾಗಿ ಯೋಜನೆ ಮಾಡಿಕೊಂಡು ಕ್ರಿಯಾಯೋಜನೆ ರಚಿಸಿ ತಮಗೆ ವರದಿ ನೀಡುವಂತೆ ಸಲ್ಲಿಸುವಂತೆ ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.ತಾಪಂ ಇಒ ಟಿ. ವೈ. ದಾಸನಕೊಪ್ಪ, ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ಸೋಮಶೇಖರ ಛಬ್ಬಿ, ರಾಜೇಶ್ವರಿ ಕದಂ ಸೇರಿದಂತೆ ತಾಲೂಕಾ ಅಧಿಕಾರಿಗಳು ಇದ್ದರು.

ಪಿಂಚಣಿ ಕಾಯ್ದೆ ಹಿಂಪಡೆಯಲು ಒತ್ತಾಯ

ಕುಮಟಾ: ಕೇಂದ್ರ, ನಾಗರಿಕ ಸೇವೆಗಳ(ಪಿಂಚಣಿ) ನಿಯಮಗಳ ಮಾನ್ಯತೆ ಕಾಯಿದೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಇಲ್ಲಿನ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದಿಂದ ಪ್ರಧಾನಿ ನರೇಂದ್ರ ಮೋದಿಯವರಿಗೆ ಸಂಬೋಧಿಸಿದ ಮನವಿಯನ್ನು ಗ್ರೇಡ್ 2 ತಹಶೀಲ್ದಾರ್ ಸತೀಷ ಗೌಡ ಅವರಿಗೆ ಸಲ್ಲಿಸಿದರು.

ಕೇಂದ್ರ ಸರ್ಕಾರವು ವರ್ಷದ ಹಿಂದೆ ಅಂಗೀಕರಿಸಿದ ಪಿಂಚಣಿ ಮಾನ್ಯತೆ ಕಾಯಿದೆಯನ್ನು ಸಂಪೂರ್ಣವಾಗಿ ಜಾರಿಗೆ ತಂದಲ್ಲಿ ನಿವೃತ್ತಿಯ ದಿನಾಂಕವನ್ನು ಪಿಂಚಣಿದಾರರ ವರ್ಗೀಕರಣ ಹಾಗೂ ಪಿಂಚಣಿ ಅರ್ಹತೆಯ ಆಧಾರ ನಡೆಯುತ್ತದೆ. ಇದರಿಂದ ಕೇಂದ್ರ ವೇತನ ಆಯೋಗ ಅಥವಾ ಯಾವುದೇ ವೇತನ ಆಯೋಗದ ಕಾರ್ಯಾಚರಣೆ ಅವಧಿಗೆ ಮೊದಲು ನಿವೃತ್ತರಾದ ಪಿಂಚಣಿದಾರರು ವೇತನ ಆಯೋಗದ ಶಿಫಾರಸುಗಳ ಲಾಭವನ್ನು ಕಳೆದುಕೊಳ್ಳುತ್ತಾರೆ. ಪಿಂಚಣಿ ಪರಿಷ್ಕರಣೆ ಹಾಗೂ ತುಟ್ಟಿಭತ್ಯೆ ಲಭ್ಯವಾಗುವುದಿಲ್ಲ.

ಪಿಂಚಣಿದಾರರು ಪಿಂಚಣಿ ಹೆಚ್ಚಳದ ಹಕ್ಕು ಇಲ್ಲದೇ ನಷ್ಟ ಅನುಭವಿಸುವಂತಾಗುತ್ತದೆ. ಪಿಂಚಣಿದಾರರ ನಡುವೆ ಸಮಾನತೆ ಇರಬೇಕು ಎಂದು 7 ಕೇಂದ್ರ ವೇತನ ಆಯೋಗದ ಶಿಫಾರಸಿಗೆ ವಿರುದ್ಧವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.



ಪಿಂಚಣಿ ಮಾನ್ಯತೆ ಕಾಯಿದೆಯನ್ನು ಹಿಂಪಡೆಯಬೇಕು ಎಂದು ಮನವಿ ಮೂಲಕ ಆಗ್ರಹಿಸಿದರು.

ನಿವೃತ್ತ ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಎಂ.ಎಸ್.ನಾಯ್ಕ, ಉಪಾಧ್ಯಕ್ಷ ಕೃಷ್ಣ ತಾಂಡೇಲ, ವಿ.ಆರ್.ನಾಯ್ಕ, ಜಿ.ವಿ.ನಾಯ್ಕ, ದಯಾನಂದ ಶೇಟ, ವಿಠ್ಠಲ ಜಿ. ಗುನಗಾ, ಜಿ.ವಿ.ನಾಯ್ಕ, ಎಂ.ಸಿ.ನಾಯ್ಕ, ವಿ.ಎಂ.ಭಟ್, ಶ್ರೀಕಾಂತ ಭಟ್, ಶಾಂತಾರಾಮ ಮಡಿವಾಳ, ವಿಶ್ವನಾಥ. ಆರ್. ನಾಯ್ಕ, ಎಸ್.ಡಿ.ನಾಯ್ಕ, ಸಿ.ಜೆ.ಪಟಗಾರ, ಎಸ್.ಐ.ನಾಯ್ಕ, ವಿ.ಪಿ.ಭಟ್, ಜಿ.ಎಲ್.ನಾಯ್ಕ, ಎಸ್.ಡಿ.ಪಾಲೇಕರ, ಎನ್.ಜಿ.ಭಟ್ ಇತರರು ಇದ್ದರು.

‘ಇಕೊ ಹಬ್ ಫೌಂಡೇಶನ್’ ವಿಡಿಐಟಿ ಒಡಂಬಡಿಕೆ



ಹಳಿಯಾಳ: ಕೆ ಎಲ್ ಎಸ್ ವಿಡಿಐಟಿ ಹಳಿಯಾಳ ಮತ್ತು ಇಕೊ ಹಬ್ ಫೌಂಡೇಶನ್ ಬೆಂಗಳೂರು ಒಡಂಬಡಿಕೆ ನಡೆಯಿತು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ.ಎ.ಕುಲಕರ್ಣಿ ಮತ್ತು ಇಕೊ ಹಬ್ ಫೌಂಡೇಶನ್ ಸಂಸ್ಥಾಪಕಿ ಹಾಗೂ ಮುಖ್ಯ ಕಾರ್ಯ ನಿರ್ವಾಹಕಿ ವೈಶಾಖಾ ಕುಲಕರ್ಣಿ ಒಪ್ಪಂದಕ್ಕೆ ಸಹಿ ಹಾಕಿದರು.

ಇಕೊ ಹಬ್ ಫೌಂಡೇಶನ್ ಹಾಗೂ ವಿಡಿಐಟಿ ಜಂಟಿ ಸಹಯೋಗದಲ್ಲಿ ಪ್ರಾಜೆಕ್ಟ್ ರೈಸ್ ಯೋಜನೆಯಡಿ ಮುಂಬರುವ ದಿನಗಳಲ್ಲಿ ಮಹಿಳೆಯರ ಹಾಗೂ ಮಕ್ಕಳ ಆರೋಗ್ಯ ಮತ್ತು ಸ್ವಾಸ್ಥ್ಯ ಕುರಿತಾಗಿ ಹಳ್ಳಿಗಳಿಗೆ ತೆರಳಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿದೆ.

ವಿಡಿಐಟಿಯ ಸಹಯೋಗದಲ್ಲಿ ಈ ಯೋಜನೆಗಳು ಸಾಕಾರ ಗೊಳ್ಳುತ್ತಿರುವುದು ಸಂತಸ ತಂದಿದೆ ಎಂದು ವೈಶಾಖಾ ಕುಲಕರ್ಣಿ ಹೇಳಿದರು. ಮಹಾವಿದ್ಯಾಲಯವು ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಇಕೊ ಹಬ್ ಫೌಂಡೇಶನ್‌ನ ಜೊತೆಗಿನ ಒಪ್ಪಂದ ಈ ಕಾರ್ಯಗಳಿಗೆ ಇನ್ನಷ್ಟು ಪುಷ್ಟಿ ನೀಡಿದೆ ಎಂದು ಡಾ. ವಿ.ಎ.ಕುಲಕರ್ಣಿ ಹೇಳಿದರು. ಈ ಸಂದರ್ಭದಲ್ಲಿ ಡಾ. ಸ್ನೇಹಾ ಕುಲಕರ್ಣಿ, ಲಕ್ಷ್ಮಿ ಕುಲಕರ್ಣಿ ಮತ್ತು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಗೌರವಧನ ನೀಡಲು ಒತ್ತಾಯ

ದಾಂಡೇಲಿ: ಕಳೆದ ಎರಡ್ಮೂರು ವರ್ಷಗಳಿಂದ ಬಿಸಿಯೂಟ ಕಾರ್ಯಕರ್ತೆಯರು ತಮ್ಮ ತಮ್ಮ ಶಾಲೆಗಳಲ್ಲಿ ಮೊಟ್ಟೆಗಳನ್ನು ಸುಲಿದುಕೊಟ್ಟಿರುವುದಕ್ಕೆ ನೀಡಬೇಕಾದ ಗೌರವಧನವನ್ನು ಬಹುತೇಕ ಶಾಲೆಗಳಲ್ಲಿ ನೀಡದೆ ಅನ್ಯಾಯ ಮಾಡಲಾಗಿದ್ದು, ಈ ಬಗ್ಗೆ ತಕ್ಷಣ ಕಾರ್ಯ ಪ್ರವೃತ್ತರಾಗಿ ಬಿಸಿಯೂಟ ಕಾರ್ಯಕರ್ತೆಯರಿಗೆ ಮೊಟ್ಟೆಗಳನ್ನು ಸುಲಿದು ಕೊಟ್ಟಿರುವುದಕ್ಕೆ ಈ ಕೂಡಲೇ ಗೌರವಧನವನ್ನು ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಗರದಲ್ಲಿ ತಹಶೀಲ್ದಾರರ ಮೂಲಕ ಜಿಲ್ಲಾಧಿಕಾರಿಗೆ ಕರ್ನಾಟಕ ಬಹುಜನ ಚಳುವಳಿ ಸಂಘವು ಲಿಖಿತ ಮನವಿಯ ಮೂಲಕ ಆಗ್ರಹಿಸಿದ್ದಾರೆ. ಗುರುವಾರ ಅಂಬೇವಾಡಿಯಲ್ಲಿರುವ ತಾಲೂಕು ಆಡಳಿತ ಸೌಧದಲ್ಲಿ ತಹಶೀಲ್ದಾರ್ ಶೈಲೇಶ ಪರಮಾನಂದ ಅವರ ಮೂಲಕ ಬಹುಜನ ಚಳುವಳಿ ಸಂಘಟನೆಯ ಜಿಲ್ಲಾ ಸಂಘಟನಾ ಕಾರ್ಯದರ್ಶಿ, ಭೀಮಶಿ ಭಾದುಲಿ ಹಾಗೂ ಸಂಘಟನೆಯ ಪ್ರಮುಖ ವೆಂಕಟೇಶ ಹರಿಜನ ಅವರು ಜಿಲ್ಲಾಧಿಕಾರಿಗೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಲಿಖಿತ ಮನವಿಯನ್ನು ಸಲ್ಲಿಸಿದರು.



ಇಂದು ಹನುಮಂತ ದೇವರ ಬ್ರಹ್ಮರಥೋತ್ಸವ

ಭಟ್ಕಳ: ಪಟ್ಟಣದ ಸುಪ್ರಸಿದ್ಧ ಶ್ರೀ ಚೆನ್ನಪಟ್ಟಣ ಹನುಮಂತ ದೇವರ ಬ್ರಹ್ಮರಥೋತ್ಸವ ಮಾ.27ರಂದು ನಡೆಯಲಿದೆ. ಜಾತ್ರಾ ಮಹೋತ್ಸವಕ್ಕೆ ಯುಗಾದಿಯಂದು ಧ್ವಜಾರೋಹಣ, ಶಿಬಿಕಾ ಯಂತ್ರೋತ್ಸವದೊಂದಿಗೆ ಗರುಡನ ಪಟ ಕಟ್ಟುವ ಕಾರ್ಯದೊಂದಿಗೆ ಚಾಲನೆ ಕೊಡಲಾಗಿತ್ತು. ಅಂದಿನಿಂದ ದೇವಸ್ಥಾನದಲ್ಲಿ ರಥೋತ್ಸವಕ್ಕೆ ಸಂಬಂಧ ಪಟ್ಟಂತೆ ಧಾರ್ಮಿಕ ವಿಧಿ ವಿಧಾನಗಳು ಆರಂಭವಾಗಿ ಶಿಬಿ ವಾಹನೋತ್ಸವ, ಡೋಲಾ ಯಂತ್ರೋತ್ಸವ, ಪುಷ್ಪ ಮಂಟಪೋತ್ಸವ, ಅತೀವೇಗ ವಾಹನೋತ್ಸವ, ಗಜವಾಹನೋತ್ಸವ, ರಾತ್ರಿ ಪುಷ್ಪರಥೋತ್ಸವ, ಸಿಂಹ ವಾಹನೋತ್ಸವ, ರಾತ್ರಿ ಪುಷ್ಪರಥೋತ್ಸವ ವಿಜೃಂಭಣೆಯಿಂದ ನಡೆಯಿತು. ರಾಜ್ಯದಲ್ಲಿಯೇ ಕೆಲವೇ ಕೆಲವು ದೇವಸ್ಥಾನಗಳಲ್ಲಿ ಆಗಮೋಕ್ತ ಪದ್ಧತಿಯಂತೆ ದೇವಾಲಯದ ಪ್ರಧಾನ ದೇವರಾಗಿ ಹನುಮಂತನನ್ನು ಪೂಜಿಸುವುದು ಭಟ್ಕಳ ಚೆನ್ನಪಟ್ಟಣ ಹನುಮಂತ ದೇವರ ವಿಶೇಷವಾಗಿದೆ. ಭಟ್ಕಳ ಚೆನ್ನಪಟ್ಟಣ ದೇವಸ್ಥಾನ ತನ್ನದೇ ಆದ ಇತಿಹಾಸ ಹೊಂದಿದೆ. ಇಲ್ಲಿನ ಹನುಮಂತನನ್ನು ಭಟ್ಕಳದ ಗ್ರಾಮ ದೇವತೆ ಎಂತಲೂ ಕರೆಯುತ್ತಾರೆ. ರಾಮನವಮಿಯಂದು ಸಂಜೆ ನಡೆಯುವ ಬ್ರಹ್ಮರಥೋತ್ಸವಕ್ಕೆ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಶ್ರೀಧರ ಎಂ ಜೋಗೇರ, ಪದಾಧಿಕಾರಿಗಳು, ಪ್ರಧಾನ ಅರ್ಚಕರು ಹಾಗೂ ದೇವಸ್ಥಾನದ ಭಕ್ತರು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ. ಶುಕ್ರವಾರ ಸಂಜೆ 5 ಗಂಟೆಗೆ ಚೆನ್ನಪಟ್ಟಣ ಹನುಮಂತ ದೇವರ ಬ್ರಹ್ಮರಥವನ್ನು ರಥಬೀದಿಯಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಎಳೆಯಲಾಗುತ್ತದೆ. ರಥೋತ್ಸವದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಭಾರೀ ಪೊಲೀಸ್ ಬಂದೋಬಸ್ತ ಏರ್ಪಡಿಸಲಾಗಿದೆ.



ನಾಯಕತ್ವ ಗುಣ ಬೆಳವಣಿಗೆಗೆ ಎನ್‌ಎಸ್‌ಎಸ್ ಸಹಕಾರಿ

ದಾಂಡೇಲಿ: ಎನ್‌ಎಸ್‌ಎಸ್ ವಿಶೇಷ ಶಿಬಿರಗಳಿಂದ ಹೊಸ ನಾಯಕತ್ವ ನಿರ್ಮಾಣವಾಗುತ್ತದೆ. ವಿದ್ಯಾರ್ಥಿ ಯುವ ಸಮುದಾಯದಲ್ಲಿ ನಾಯಕತ್ವ ಗುಣಗಳು ಬೆಳೆಯುತ್ತವೆ. ಇಂದು ರಾಷ್ಟ್ರ ಹಾಗೂ ರಾಜ್ಯಗಳನ್ನು ಮುನ್ನಡೆಸುತ್ತಿರುವ ಹಲವಾರು ನಾಯಕರು ಎನ್‌ಎಸ್‌ಎಸ್ ಶಿಬಿರಗಳಲ್ಲಿ ತರಬೇತಿ ಪಡೆದವರಾಗಿದ್ದಾರೆ. ಸಮಾಜದಲ್ಲಿ ಬದಲಾವಣೆಗಳು ಸಾಮಾಜಿಕ ಅರಿವು ಇರುವ ಚಳುವಳಿಗಳಿಂದ ಸಾಧ್ಯವಾಗುತ್ತದೆ. ರಾಷ್ಟ್ರೀಯ ಸೇವಾ ಯೋಜನೆ ಚಳುವಳಿಗಳನ್ನು ಮುನ್ನಡೆಸುವ ಸಾಮಾಜಿಕ ಅರಿವನ್ನು ಯುವ ಸಮುದಾಯಕ್ಕೆ ನೀಡುತ್ತದೆ ಎಂದು ದಾಂಡೇಲಿ ನಗರ ಸಭೆಯ ಪೌರಾಯುಕ್ತ ವಿವೇಕ ಬನ್ನೆ ಅವರು ಅಭಿಪ್ರಾಯಪಟ್ಟರು.

ಅವರು ಬುಧವಾರ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಕಾರ್ಯ ಚಟುವಟಿಕೆಗಳನ್ನು ಈ ಸಂದರ್ಭದಲ್ಲಿ ಕೊಂಡಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾ.ಡಾ. ಎಂ.ಡಿ.ಒಕ್ಕುಂದ ಅವರು ವಿದ್ಯಾರ್ಥಿ ಯುವ ಸಮುದಾಯದಲ್ಲಿ ಶ್ರಮ ಗೌರವ ಹಾಗೂ ವೈಚಾರಿಕ ಪ್ರಜ್ಞೆಯನ್ನು ಬೆಳೆಸುವುದು. ಹಾಗೂ ಅವರು ಸಮಾಜದಲ್ಲಿ ಸಾಮಾಜಿಕ ಜಾಗೃತಿಯನ್ನು ಮೂಡಿಸುವಂತೆ ವ್ಯಕ್ತಿತ್ವ ನಿರ್ಮಾಣ ಎನ್‌ಎಸ್‌ಎಸ್ ವಿಶೇಷ ಶಿಬಿರದಿಂದ ಸಾಧ್ಯವಾಗುತ್ತದೆ ಎಂದರು.



ವೇದಿಕೆಯಲ್ಲಿ ಸಿ.ಡಿ.ಸಿ ಸದಸ್ಯ ಬಶೀರ್ ಗಿರಿಯಾಲ ಹಾಗೂ ಎನ್. ಎಸ್. ಎಸ್ ಅಧಿಕಾರಿ ಡಾ. ವಿನಯಾ ಜಿ. ನಾಯಕ ಉಪಸ್ಥಿತರಿದ್ದರು. ಹಲಗಾಮರದ ಶಂಭಯ್ಯಾ ಹೀರೆಮಠ ಹಾಗೂ ಕಲಾ ತಂಡದವರು ಸಾಮಾಜಿಕ ಜಾಗೃತಿಯ ಹಾಡುಗಳನ್ನು ಹಾಡಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು. ಭಾವನಾ ಪ್ರಾರ್ಥಿಸಿದರು, ಸ್ಯಾಮುವೆಲ್ ವಡ್ಡರ ಸ್ವಾಗತಿಸಿದರು, ಪ್ರಶಾಂತ ದೇವಪ್ಪರ ವಂದಿಸಿದರು, ಅನು ಕಾರ್ಯಕ್ರಮವನ್ನು ನಿರೂಪಿಸಿದರು.

ಕಿರುಸುದ್ದಿ

ಸಾಧಕರಿಗೆ ಸನ್ಮಾನ, ಕಿರು ನಾಟಕ ಪ್ರದರ್ಶನ ಇಂದು

• **ಹಾವೇರಿ :** ಕೆ.ಎಲ್.ಇ ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ, ಜಿಲ್ಲಾ ಕಲಾ ಬಳಗ, ಕನ್ನಡ ವಿಭಾಗ ಹಾಗೂ ಐಕ್ಯುಎಸಿ ಸಂಯುಕ್ತ ಆಶ್ರಯದಲ್ಲಿ ವಿಶ್ವರಂಗಭೂಮಿ ದಿನಾಚರಣೆ ಮಾ.27ರ ಬೆಳಿಗ್ಗೆ 10 ಗಂಟೆಗೆ ಜಿ.ಎಚ್. ಕಾಲೇಜಿನಲ್ಲಿ ಜರುಗಲಿದೆ. ಹಾವೇರಿ ವಿ.ವಿ ಕುಲಪತಿ ಡಾ.ಎಸ್.ಟಿ. ಬಾಗಲಕೋಟಿ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಕೆ.ಎಲ್.ಇ ಸಂಸ್ಥೆಯ ನಿರ್ದೇಶಕರಾದ ಎಂ.ಸಿ. ಕೊಳ್ಳಿ ವಹಿಸುವರು. ಜಿಲ್ಲಾ ಕಸಾಪ ಅಧ್ಯಕ್ಷ ಲಿಂಗಯ್ಯ ಹಿರೇಮಠ, ಡಾ. ಜಿ.ಆರ್. ಶಿಂಧೆ ಅತಿಥಿಗಳಾಗಿ ಆಗಮಿಸುವರು. ಹಿರಿಯ ರಂಗಕರ್ಮಿಗಳಾದ ನಾಗರಾಜ ಬಣಕಾರ, ಶಂಕರಲಿಂಗಯ್ಯ ಹಿರೇಮಠ, ಈರಣ್ಣ ಬೆಳವಡಿ, ಜಗದೀಶ ಚೌಟಗಿ, ಜಮೀರ ರಿತ್ತಿ, ಎ.ಬಿ. ಗುದ್ದಳ್ಳಿ ಅವರುಗಳಿಗೆ ರಂಗಗೌರವ ಸನ್ಮಾನ ಜರುಗಲಿದೆ. ಯುವ ಪ್ರತಿಭೆಗಳಾದ ಪ್ರಿಯಾ ರೊಟ್ಟಿ, ಮಧು ಎಂ, ತುಂಗಾ ಅನುರಾಧೇಶ್ವರ ಶಿವಲಿಂಗಯ್ಯ, ಸಹನಾ ಮನ್ಸೂರ್, ಲಕ್ಷ್ಮೀ ಜಾಡರ ಹಾಗೂ ಪೂಜಾ ಯತ್ನಳ್ಳಿ ಅವರುಗಳಿಗೂ ಯುವ ಪುರಸ್ಕಾರ ನೀಡಲಾಗುತ್ತಿದೆ. ರಂಗಭೂಮಿ ಕುರಿತು ಕಿರು ಉಪನ್ಯಾಸಗಳನ್ನು ಸಾಹಿತಿ ಸತೀಶ ಕುಲಕರ್ಣಿ, ನಾಗವೇಣಿ ಪಾಟೀಲ ಹಾಗೂ ಸಂಧ್ಯಾ ಕುಲಕರ್ಣಿ ನೀಡುವರು. ಈ ಸಂದರ್ಭದಲ್ಲಿ ಹಾವು ಬಂತು ಹಾವು ಮತ್ತು ಯುದ್ಧ ಯುದ್ಧ ಎಂಬ ಎರಡು ಕಿರು ನಾಟಕಗಳನ್ನು ಜಿಲ್ಲಾ ಕಲಾ ಬಳಗ ಪ್ರದರ್ಶಿಸಲಿದೆ ಎಂದು ಕನ್ನಡ ವಿಭಾಗದ ಮುಖ್ಯಸ್ಥರು ಮತ್ತು ಕಾರ್ಯಕ್ರಮದ ಸಂಘಟಕ ಸಂಚಾಲಕ ನಾಯಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗ್ನಿಬನ್ನಿರಾಯ ಜಯಂತಿ ಇಂದು

• **ಹಾವೇರಿ :** ಅಗ್ನಿಬನ್ನಿರಾಯ ಜಯಂತಿ ಕಾರ್ಯಕ್ರಮ ಮಾ.27 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಅಗ್ನಿಬನ್ನಿರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಗುವುದು. ಎಲ್ಲ ಜಿಲ್ಲಾಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜ ಬಾಂಧವರು ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

80 ಮರಗಳ ತೆರವು: ಆಕ್ಷೇಪಣೆಗೆ ಅವಕಾಶ

• **ಹಾವೇರಿ :** ಹಿರೇಕೆರೂರು ತಾಲೂಕಿನ ಹಾವೇರಿ–ಸಾಗರ ರಾಜ್ಯ ಹೆದ್ದಾರಿ 62 ಕಿ.ಮೀ 51.80ರಿಂದ 53.57ರವರೆಗೆ ಹಿರೇಕೆರೂರಿನಿಂದ ಶಿರಾಳಕೊಪ್ಪಕ್ಕೆ ಹೋಗುವ ಹಿರೇಕೆರೂರು ಸರ್ವಜ್ಞ ವೃತ್ತದಿಂದ ತೇಜು ಹೋಟೆಲ್‌ವರೆಗೆ (ಪಟ್ಟಣ ಪರಿಮಿತಿ) ಒಟ್ಟು 1ಕಿ.ಮೀ.ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಡೆ ತಡೆಯಾಗಿರುವ ಒಟ್ಟು 80 ಮರಗಳನ್ನು ತೆರವುಗೊಳಿಸಬೇಕಾಗಿದೆ. ಈ ಬಗ್ಗೆ ತಕರಾರು ಸಲ್ಲಿಸಲು ಬಯಸುವವರು ತಮ್ಮ ತಕರಾರು ಅರ್ಜಿಯನ್ನು ವೃಕ್ಷ ಅಧಿಕಾರಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಹಾನಗಲ್ ಉಪ–ವಿಭಾಗ, ಹಾನಗಲ್ ಮತ್ತು ವಲಯ ಅರಣ್ಯಾಧಿಕಾರಿ, ಹಿರೇಕೆರೂರು ವಲಯ, ಹಿರೇಕೆರೂರು ಕಚೇರಿಗೆ ಲಿಖಿತ ರೂಪದಲ್ಲಿ ಏ.6ರೊಳಗಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ acf-hanagalsubdivision@gmail.com ಮತ್ತು ದೂರವಾಣಿ ಸಂಖ್ಯೆ 08379–262905 ಸಂಪರ್ಕಿಸಲು ಕೋರಲಾಗಿದೆ. ಒಂದು ವೇಳೆ ನಿಗದಿತ ದಿನಾಂಕ ಅಥವಾ ಅವಧಿಯೊಳಗೆ ತಕರಾರು ಸಲ್ಲಿಸದಿದ್ದರೆ ನಂತರ ಬಂದ ತಕರಾರು ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಹಾನಗಲ್ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.2ರಂದು ಪೂರ್ವಭಾವಿ ಸಭೆ

• **ಹಾವೇರಿ :** ಡಾ.ಬಾಬು ಜಗಜೀವನರಾಂರವರ 119ನೇ ಜನ್ಮದಿನಾಚರಣೆ ಹಾಗೂ ಡಾ.ಬಿ.ಆರ್. ಅಂಬೇಡ್ಕರವರ 135ನೇ ಜನ್ಮ ದಿನಾಚರಣೆ ಬಗ್ಗೆ ಪೂರ್ವಭಾವಿ ಸಭೆ ಏ.2ರಂದು ಬೆಳಿಗ್ಗೆ 11 ಗಂಟೆಗೆ ಹಾನಗಲ್ ತಹಶೀಲ್ದಾರ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಹಾನಗಲ್ ತಹಶೀಲ್ದಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಾಸೀರ ಆಯ್ಕೆ

• **ಹಾವೇರಿ:** ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಕಾನೂನು ಮಾನವಹಕ್ಕುಗಳು ಮತ್ತು ಮಾಹಿತಿ ಹಕ್ಕು ವಿಭಾಗದ ನೂತನ ಪ್ರಧಾನ ಕಾರ್ಯದರ್ಶಿಯನ್ನಾಗಿ ಅಕ್ಕಿಆಲೂರಿನ ವಕೀಲರಾದ ಯಾಸೀರ ಅರಾಫತ್ ಮಕಾನದಾರ್ ಅವರನ್ನು ನೇಮಿಸಿ ಕೆಪಿಸಿಸಿ ಕಾನೂನು ಮಾನವಹಕ್ಕುಗಳು ಮತ್ತು ಮಾಹಿತಿ ಹಕ್ಕು ವಿಭಾಗದ ರಾಜ್ಯ ಅಧ್ಯಕ್ಷ ಸಿ.ಎಂ. ಧನಂಜಯ ಆದೇಶಿಸಿದ್ದಾರೆ.





ಕುಮಟಾ: ಗೋವಾ ಸರ್ಕಾರದಿಂದ ಪುರಸ್ಕೃತ ಸ್ವರಶ್ರೀ ಸಂಗೀತ ಪ್ರತಿಷ್ಠಾನ, ಗೋವಾ ಇವರು, ಕೊಂಕಣಿ ಪರಿಷದ್ ಕುಮಟಾ ಇದರ ಸಹಯೋಗದಲ್ಲಿ ಆಯೋಜಿಸಿದ ಶ್ರೀರಾಮ ಗೀತಾ ಕಾರ್ಯಕ್ರಮವು ಭಕ್ತಿರಸ, ಸಾಹಿತ್ಯ ಮತ್ತು ಸಂಗೀತದ ಸುಂದರ ಸಂಯೋಜನೆಯಾಗಿ ಜನಮನ ಗೆದ್ದಿತು. ಕೊಂಕಣಿ ಪರಿಷದ್ ಕುಮಟಾದ ಅಧ್ಯಕ್ಷ ಅರುಣ ಉಭಯಕರ್, ಉಪಾಧ್ಯಕ್ಷ ಮುರಳೀಧರ ಪ್ರಭು, ಅರುಣ ಮಣಕೀಕರ್, ವನಿತಾ ಶಿರೀಷ ನಾಯಕ, ಗಣ್ಯರು ಉಪಸ್ಥಿತರಿದ್ದರು.

ವಿವಿಧ ಕಾಮಗಾರಿಗೆ ಭೂಮಿಪೂಜೆ

• **ಹಾನಗಲ್:** ಇಲ್ಲಿನ ತಹಶೀಲ್ದಾರ್ ಕಚೇರಿಯಲ್ಲಿ 2025–26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಯೋಜನೆಯಡಿ 25 ಲಕ್ಷ ರೂ. ವೆಚ್ಚದಲ್ಲಿ ವೆಚ್ಚದಲ್ಲಿ ಕೋರ್ಟ್ ಹಾಲ್ ನವೀಕರಣ, ಕಟ್ಟಡಕ್ಕೆ ಬಣ್ಣ ಹಚ್ಚುವುದು, ಮೇಲ್ಛಾವಣಿ ದುರಸ್ತಿ, ಶೆಡ್ ನವೀಕರಣ ಸೇರಿದಂತೆ ನಾನಾ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ತಾಲೂಕಿನಲ್ಲಿ ಕಂದಾಯ ಇಲಾಖೆಯ ಸೇವೆಯಲ್ಲಿ ಸಾಕಷ್ಟು ಸುಧಾರಣೆ ತರಲಾಗಿದೆ. ಹಕ್ಕುಪತ್ರ ವಿತರಣೆಯಲ್ಲಿ ರಾಜ್ಯದಲ್ಲಿಯೇ ಹಾನಗಲ್ ಮೊದಲ ಸ್ಥಾನದಲ್ಲಿದೆ. 41 ಲಕ್ಷ ಪುಟ ಕಂದಾಯ ದಾಖಲೆಗಳ ಡಿಜಿಟಲೀಕರಣ ಈಗಾಗಲೇ ಪೂರ್ಣಗೊಂಡಿದ್ದು, ದಾಖಲೆಗಳ ಬೆರಳ ತುದಿಯಲ್ಲಿ ಲಭಿಸುತ್ತಿವೆ. ನಿತ್ಯವೂ ಸಹ ತಾಲೂಕಿನ ನಾನಾ ಗ್ರಾಮಗಳಿಂದ ನೂರಾರು ಸಾರ್ವಜನಿಕರು ಕಚೇರಿಗೆ ಆಗಮಿಸುತ್ತಾರೆ. ಹಾಗಾಗಿ ತಹಶೀಲ್ದಾರ್ ಕಚೇರಿಯಲ್ಲಿ ಸಾರ್ವಜನಿಕರಿಗೆ ಇನ್ನೂ ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ಕಚೇರಿಯ ಕಟ್ಟಡ ದುರಸ್ತಿಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ತಹಶೀಲ್ದಾರ್ ರೇಣುಕಾ ಎಸ್., ಪುರಸಭೆ ಮಾಜಿ ಅಧ್ಯಕ್ಷೆ ರಾಧಿಕಾ ದೇಶಪಾಂಡೆ, ಮಮತಾ ಆರೆಗೊಪ್ಪ, ಮುಖ್ಯಾಧಿಕಾರಿ ವೈ.ಕೆ.ಜಗದೀಶ, ಕೆಡಿಪಿ ಸದಸ್ಯ ಬಾಪುಗೌಡ ಪಾಟೀಲ, ಮುಖಂಡರಾದ ಈರಣ್ಣ ಬೈಲವಾಳ, ಸುರೇಶ ಮುಸುರಿ, ಲೋಕೋಪಯೋಗಿ ಇಲಾಖೆಯ ಎಇಇ ಎಸ್.ದೇವರಾಜು ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.



ಹಾನಗಲ್: ಇಲ್ಲಿನ ತಹಶೀಲ್ದಾರ್ ಕಚೇರಿಯಲ್ಲಿ 2025–26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಯೋಜನೆಯಡಿ 25 ಲಕ್ಷ ರೂ. ವೆಚ್ಚದಲ್ಲಿ ವೆಚ್ಚದಲ್ಲಿ ಕೋರ್ಟ್ ಹಾಲ್ ನವೀಕರಣ, ಕಟ್ಟಡಕ್ಕೆ ಬಣ್ಣ ಹಚ್ಚುವುದು, ಮೇಲ್ಛಾವಣಿ ದುರಸ್ತಿ, ಶೆಡ್ ನವೀಕರಣ ಸೇರಿದಂತೆ ನಾನಾ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ನಿಷೇಧ ಬಗ್ಗೆ ಜಾಗೃತಿ ಮೂಡಿಸಿ

• **ಹಾವೇರಿ:** ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ನಿಷೇಧ ಕಾಯ್ದೆ ಬಗ್ಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಜಾಗೃತಿ ಮೂಡಿಸಬೇಕು. ಜಿಲ್ಲೆಯಲ್ಲಿ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ನಡೆಯದಂತೆ ಎಚ್ಚರ ವಹಿಸಿ ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಹಾಗೂ ಇನ್ ಸ್ಯಾನಿಟರಿ ಲ್ಯಾಟ್ರಿನ್ಸ್ ಮತ್ತು ಸಫಾಯಿ ಕರ್ಮಚಾರಿಗಳ ಕುರಿತ ಜಿಲ್ಲಾಮಟ್ಟದ ಸಮಿತಿ ಸಭೆ ಹಾಗೂ ಜಿಲ್ಲಾಮಟ್ಟದ ಚರ್ಮ ಕುಶಲಕರ್ಮಿಗಳ ಕುಂದುಕೊರತೆಗಳ ನಿವಾರಣಾ ಸಮಿತಿ ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಸಮೀಕ್ಷೆಯಲ್ಲಿ ಗುರುತಿಸಲಾದ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್‌ಗಳಿಗೆ ಹಾಗೂ ಪೌರ ಕಾರ್ಮಿಕರಿಗೆ ವಿವಿಧ ವಸತಿ ಯೋಜನೆಗಳಡಿ ವಸತಿ ಸೌಲಭ್ಯ, ಸಹಾಯಧನ–ಸಾಲ ಸೌಲಭ್ಯ ಸೇರಿದಂತೆ ವಿವಿಧ ಯೋಜನೆಗಳಲ್ಲಿ ಆದ್ಯತೆ ನೀಡಿ, ಫಲಾನುಭವಿಗಳು ಯೋಜನೆಗಳ ಸದುಪಯೋಗ ಪಡೆದ ಬಗ್ಗೆ ಪರಿಶೀಲನೆ ನಡೆಸಿ ಎಂದು ಸೂಚಿಸಿದರು.

ಜಿಲ್ಲಾಮಟ್ಟದ ಚರ್ಮ ಕುಶಲಕರ್ಮಿಗಳ ಕುಂದುಕೊರತೆಗಳನಿವಾರಣಾಸಮಿತಿ ನಾಮನಿರ್ದೇಶಿತ ಸದಸ್ಯರಾದ ಸುನೀಲ್ ಬೆಟಗೇರಿ, ಮಾರುತಿ ಹಂಚಿಗಿ, ಪೃಥ್ವಿರಾಜ ಬೆಟಗೇರಿ, ಎಚ್.ಡಿ. ಹೊನ್ನಕ್ಕಳವರ ಹಾಗೂ ಗುತ್ತೆಪ್ಪ ಹರಿಜನ ಅವರು ಅರ್ಹ ಚರ್ಮ ಕುಶಲಕರ್ಮಿಗಳನ್ನು ಗುರುತಿಸಬೇಕು. ಸರ್ಕಾರದ ಸೌಲಭ್ಯಗಳು ಕಾಲದಲ್ಲಿ ದೊರೆಯುವಂತಾಗಬೇಕು ಎಂದು ಡಿಸಿಗೆ ಮನವಿ ಮಾಡಿದರು.



ಸಸ್ಪೆಂಡ್‌ಗೆ ಸೂಚನೆ

ಜಿಲ್ಲೆಯಲ್ಲಿರುವ ಚರ್ಮ ಕುಶಲಕರ್ಮಿಗಳ ಸಂಖ್ಯೆ ಹಾಗೂ ವಿವಿಧ ಯೋಜನೆಗಳ ಸೌಲಭ್ಯಗಳ ಮಾಹಿತಿ ನೀಡಲು ತಡಬಡಾಯಿಸಿದ ಲಿಡಕರ್ ಜಿಲ್ಲಾ ವ್ಯವಸ್ಥಾಪಕರನ್ನು ತರಾಟೆಗೆ ತೆಗೆದುಕೊಂಡ ಜಿಲ್ಲಾಧಿಕಾರಿಗಳು, ಯಾವ ಫಲಾನುಭವಿಗೆ ಸೌಲಭ್ಯ ನೀಡಲಾಗಿದೆ ಎಂದು ಗೊತ್ತಿಲ್ಲ, ಜಿಲ್ಲೆಯ ಚರ್ಮ ಕುಶಲಕರ್ಮಿಗಳ ಸಂಖ್ಯೆ ಗೊತ್ತಿಲ್ಲ, ಏನು ಕೆಲಸ ಮಾಡುತ್ತಿದ್ದೀರಿ ಎಂದು ರೇಗಿದ ಅವರು, ಲಿಡಕರ್ ಜಿಲ್ಲಾ ವ್ಯವಸ್ಥಾಪಕರ ಸಸ್ಪೆಂಡ್‌ಗೆ ಮೇಲಾಧಿಕಾರಿಗಳಿಗೆ ಪತ್ರ ಬರೆಯುವಂತೆ ಡಿಎಸ್ ಡಬ್ಲ್ಯು ಪ್ರಶಾಂತ ವರಗಪ್ಪನವರ ಅವರಿಗೆ ಡಿಸಿ ಸೂಚನೆ ನೀಡಿದರು.

ಹಾವೇರಿ ನಗರದಲ್ಲಿ ನಗರಸಭೆಯಿಂದ ನಿರ್ಮಾಣ ಮಾಡಲಾದ ಸಾರ್ವಜನಿಕ ಶೌಚಾಲಯ ನಿರ್ವಹಣೆ, ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್‌ಗಳಿಗೆ ವಿವಿಧ ಯೋಜನೆಗಳ ಸೌಲಭ್ಯ ದೊರೆಯಬೇಕು ಎಂದು ಜಿಲ್ಲಾಮಟ್ಟದ ಸಮಿತಿ ಸದಸ್ಯರಾದ ಸುಭಾಸ ಬೆಂಗಳೂರು, ಭೀಮಪ್ಪ ಯಲ್ಲಾಪೂರ ಮನವಿ ಮಾಡಿದರು.

» ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ಅಧಿಕಾರಿಗಳಿಗೆ ಸೂಚನೆ

ಸಮಾಜ ಕಲ್ಯಾಣ ಇಲಾಖೆ ಜೆಡಿ ಪ್ರಶಾಂತ ವರಗಪ್ಪನವರ ಮಾತನಾಡಿ, ಜಿಲ್ಲೆಯ ಹಾನಗಲ್ ತಾಲೂಕು ಕೂಸನೂರ ಗ್ರಾಮದಲ್ಲಿ ನಡೆದ ಘಟನೆಯಲ್ಲಿ ತಪ್ಪಿತಸ್ಥರ ವಿರುದ್ಧ ಆಡೂರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಮ್ಯಾನ್ಯುವಲ್ ಸ್ಕ್ಯಾವೆಂಜರ್‌ಗಳಿಗೆ, ಪೌರ ಕಾರ್ಮಿಕರಿಗೆ ಪಿ.ಎಂ.ಎ.ವೈ., ಜಿ+1 ಸೇರಿದಂತೆ ವಿವಿಧ ವಸತಿ ಯೋಜನೆಗಳಡಿ ಮನೆ ಹಂಚಿಕೆಗೆ ಕ್ರಮವಹಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಎಎಸ್ಪಿ ಎಲ್.ವೈ. ಶಿರಕೋಳ, ಜಿಪಂ ಉಪಕಾರ್ಯದರ್ಶಿ ಡಾ.ಪುನೀತ್, ಎಸಿಗಳಾದ ಶುಭಂ ಶುಕ್ಲಾ, ಕಲ್ಯಾಣಿ ಕಾಂಬ್ಳೆ, ಜಿಲ್ಲಾಮಟ್ಟದ ಸಮಿತಿ ನಾಮ ನಿರ್ದೇಶಿತ ಸದಸ್ಯರಾದ ಗೌರಮ್ಮ ನಾಗರಾಜ ಮಂತ್ರಿ, ಗಿರಿಜಾ ನಾರಾಯಣ ಸೆಲ್ಲೂರ, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ಸ್ಥಳೀಯ ನಗರ ಸಂಸ್ಥೆಗಳ ಮುಖ್ಯಾಧಿಕಾರಿಗಳು, ತಾಪಂ ಇಒಗಳು, ತಾಲೂಕಾ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಉಪಸ್ಥಿತರಿದ್ದರು.

ಕೆರೆ, ನದಿ, ಹಳ್ಳಗಳನ್ನು ಸಂರಕ್ಷಿಸಿ: ಕಮಡೊಳ್ಳಿ

• **ಹಾನಗಲ್ಲ:** ತಾಲೂಕಿನ ಹುಣಸಿಕಟ್ಟಿ ಗ್ರಾಮದಲ್ಲಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದಿಂದ 12 ಲಕ್ಷ ರೂ.ಗಳ ವೆಚ್ಚದಲ್ಲಿ ಚಂಚಲಕಟ್ಟಿ ಕೆರೆ ಹೂಳೆತ್ತುವ ಕಾಮಗಾರಿಗೆ ಹಿರಿಯ ಸಾಮಾಜಿಕ ಮುಖಂಡ ಸಿದ್ದಲಿಂಗಪ್ಪ ಕಮಡೊಳ್ಳಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೆರೆಗಳು ರೈತರ ಜೀವ ನಾಡಿ, ಜಲಮೂಲಗಳನ್ನು ಉಳಿಸುವಲ್ಲಿ ನಾವು ಸೋಲಬಾರದು. ಎಲ್ಲ ಕಾಲಕ್ಕೂ ಬೇಕಾಗುವ ನಮ್ಮ ಕೆರೆ, ನದಿ, ಹಳ್ಳಗಳನ್ನು ಜೋಪಾನವಾಗಿ, ನಿತ್ಯ ನಿರಂತರ ಬಳಕೆಗೆ ಬರುವಂತೆ ಇಟ್ಟುಕೊಳ್ಳಬೇಕು. ಎಲ್ಲವನ್ನೂ ಸರ್ಕಾರದಿಂದಲೇ ನಿರೀಕ್ಷಿಸಲು ಸಾಧ್ಯವಿಲ್ಲ, ಸಾಮಾಜಿಕ ಸಹಭಾಗಿತ್ವದಲ್ಲಿ ನಮಗಾಗಿ ಎಲ್ಲವನ್ನೂ ಸರಿಯಾಗಿ ಉಳಿಸಿಕೊಳ್ಳೋಣ. ಈ ಮೂಲಕ ನಮ್ಮ ನೈಸರ್ಗಿಕ ಸಂಪತ್ತನ್ನು ನಮಗಾಗಿ ಸದುಪಯೋಗ ಮಾಡಿಕೊಳ್ಳೋಣ ಎಂದರು.

ಹುಬ್ಬಳ್ಳಿಯ ಸೇವಾಲಾಲ ಬಂಜಾರ ಗುರುಪೀಠದ ನಿರಂಜನ ಜಗದ್ಗುರು ತಿಪ್ಪೇಶ್ವರ ಮಹಾಸ್ವಾಮೀಜಿ ಮಾತನಾಡಿ, ಕೆರೆಗಳೇ ನಮ್ಮ ಆಸ್ತಿ. ಕೃಷಿಕನ ಭೂಮಿಗೆ ನೀರು, ಜನ ಜಾನುವಾರುಗಳಿಗೆ ಇದೇ ನೀರನ್ನು ಅವಲಂಬಿಸಿದ ರೈತ ಈಗ ಬದಲಾಗಿದ್ದಾನೆ. ಆದರೆ ಮತ್ತೆ ಮೂಲ ವ್ಯವಸ್ಥೆಗೆ ನಾವು ಬರಬೇಕಾದ ಅನಿವಾರ್ಯತೆ ಕಾಣುತ್ತಿದೆ. ಮತ್ತೆ ಕೆರೆ, ಹಳ್ಳ, ಹೊಳೆ, ಬಾವಿಗಳ ನೀರನ್ನು ಅವಲಂಬಿಸುವ ಕಾಲದತ್ತ ಸಾಗುತ್ತಿದ್ದೇವೆ. ಆದಕ್ಕಾಗಿ ನಮ್ಮ ಸಂಪನ್ಮೂಲಗಳನ್ನು ಉಳಿಸಿಕೊಳ್ಳೋಣ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಹಾನಗಲ್ಲ ತಾಲೂಕು ಕೃಷಿ ಮೇಲ್ವಿಚಾರಕ ಮಹಾಂತೇಶ ಹರಕುಣಿ ಮಾತನಾಡಿ, 14 ಎಕರೆ ವಿಸ್ತೀರ್ಣವಿರುವ ಹುಣಸಿಕಟ್ಟಿಯ ಚಂಚಲಕಟ್ಟಿ ಕೆರೆಯನ್ನು ಒಂದೂವರೆ ತಿಂಗಳಿನಲ್ಲಿ ಹೂಳೆತ್ತುವ ಕಾರ್ಯ ಪೂರ್ಣಗೊಳಿಸಬೇಕಾಗಿದೆ. ಅಲ್ಲದೆ ಕೆರೆಯ ಬದಿಯ ಹಾಗೂ ಇದರ ಪಕ್ಕದ ರಸ್ತೆ ಬದಿಯ ಜಂಗಲ್ ಕಟಿಂಗ ಕೂಡ ಮಾಡಲಾಗುತ್ತದೆ. ಕೆರೆಗಳನ್ನು ಕೃಷಿಕರು ತಮಗಾಗಿ ಸರಿಯಾಗಿ ಉಳಿಸಿಕೊಳ್ಳಲು ಮುಂದಾಗಬೇಕು. ಇದಕ್ಕಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಗಣನೀಯವಾಗಿ ಸೇವೆ ಸಲ್ಲಿಸುತ್ತಿದೆ. ಈ ವರೆಗೆ ಹಾನಗಲ್ಲ ತಾಲೂಕಿನಲ್ಲಿ 7 ಕೆರೆಗಳನ್ನು ಹೂಳೆತ್ತಲಾಗಿದೆ ಎಂದರು.

ಗಣ್ಯರಾದ ಗಂಗಣ್ಣ ಪ್ಯಾಟಿ, ಕುಮಾರಸ್ವಾಮಿ ಹಿರೇಮಠ, ರವಿ ಮ್ಯಾಗೇರಿ, ಮಹೇಶ ಕುಲಕರ್ಣಿ, ಕುಮಾರ ಮ್ಯಾಗೇರಿ ಮೊದಲಾದವರು ಇದ್ದರು.



ಎಲ್‌ಪಿಜಿ, ಪೆಟ್ರೋಲ್ ದರ ಹೆಚ್ಚಳ?

• **ಹಾವೇರಿ:** ಮಧ್ಯಪ್ರಾಚ್ಯದಲ್ಲಿ ಮುಂದುವರೆದಿರುವ ಯುದ್ಧದಿಂದ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದ್ದು, ಹೋಟೆಲ್ ಉದ್ಯಮಕ್ಕೆ ಪೆಟ್ಟು ಬಿದ್ದಿದೆ. ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಜನರು ಕಟ್ಟಿಗೆ ಒಲೆಗೆ ಮೊರೆ ಹೋಗುತ್ತಿದ್ದು, ಸೌದೆಗೆ ಏಕಾಏಕಿ ಬೇಡಿಕೆ ಹೆಚ್ಚಿದೆ. ಈ ಹಿನ್ನಲೆಯಲ್ಲಿ ಕಟ್ಟಿಗೆಗೆ ಬೇಡಿಕೆ ಬಂದಿದೆ.

ನಗರಗಳಲ್ಲಿ ಎಲ್‌ಪಿಜಿಗೆ ವಿದ್ಯುತ್ ಒಲೆ ಇಲ್ಲವೇ ಇಂಡಕ್ಷನ್ ಪರ್ಯಾಯ ಮಾರ್ಗಗಳಾಗಿದ್ದು, ಹೋಟೆಲ್ ಉದ್ಯಮಕ್ಕೆ ಮರ್ಮಾಘಾತ ನೀಡಿದೆ.

ಗ್ಯಾಸ್ ಏಜೆನ್ಸಿಗಳ ಮುಂದೆ ಕ್ಯೂ: ಈಗಾಗಲೇ ಎಲ್‌ಪಿಜಿ ದರದಲ್ಲಿ ಹೆಚ್ಚಳ ಅಧಿಕೃತವಾಗಿ ಘೋಷಣೆಯಾಗಿದ್ದರೂ, ಅಲ್ಲಲ್ಲಿ ಹೆಚ್ಚಿನ ಬೆಲೆ ಪಡೆಯುತ್ತಿರುವುದು ಕಂಡು ಬಂದಿದೆ. ಅನಗತ್ಯ ಗಾಬರಿಯ ಪರಿಣಾಮ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಗ್ಯಾಸ್ ಸಿಲಿಂಡರ್ ಮುಂಗಡ ಬುಕ್ಕಿಂಗ್‌ಗೆ ಧಾವಂತ ತೋರುತ್ತಿದ್ದಾರೆ. ಇದರ ಪರಿಣಾಮ ಸಿಲಿಂಡರ್ ಬುಕ್ಕಿಂಗ್ ಹೆಚ್ಚಳ, ಗ್ಯಾಸ್ ಕಂಪನಿಗಳ ಸರ್ವರ್ ಡೌನ್ ಆಗಿದೆ.

ದರ ಹೆಚ್ಚಳ: ಸವಣೂರು ನಗರದಲ್ಲಿ ಕಳೆದೆರಡು ದಿನಗಳಿಂದ ಪೆಟ್ರೋಲ್‌ಗೆ ದಟ್ಟಣೆ ಕಂಡು ಬರುತ್ತಿದ್ದು, ತಾಲೂಕಿನಾದ್ಯಂತ ಜನ ಪೆಟ್ರೋಲ್ ಬಂಕ್‌ಗಳಲ್ಲಿ ಸಾಲುಗಟ್ಟಿ ನಿಂತು ಅವಶ್ಯಕತೆಗಿಂತ ಹೆಚ್ಚಿನ ಪೆಟ್ರೋಲ್ ಖರೀದಿ ಕಂಡು ಬರುತ್ತಿದೆ. ಹಾವೇರಿ ನಗರದ ರಾಣೆಬೆನ್ನೂರ ರಸ್ತೆಗೆ ಹೊಂದಿಕೊಂಡಿರುವ ಖಾಸಗಿ ಪೆಟ್ರೋಲ್ ಬಂಕ್‌ನಲ್ಲಿ ಇಂಧನ ದರ ಹೆಚ್ಚಳ ಮಾಡಿದ್ದು ಪೆಟ್ರೋಲ್ ಪ್ರತಿ ಲೀಟರ್‌ಗೆ ರೂ.5, ಡೀಸೆಲ್ ಪ್ರತಿ ಲೀಟರ್‌ಗೆ ರೂ.3 ಏರಿಕೆ ಮಾಡಲಾಗಿದೆ.



ಬೆಳಗ್ಗೆ ಟಿಫಿನ್ ಬಾಕ್ಸ್ ಸಮೇತ ಶಿಶುಪಾಲನ ಕೇಂದ್ರಕ್ಕೆ ಪುಟಾಣಿ ಮಕ್ಕಳನ್ನು ಬಿಡಿ ಎಂದು ಹೇಳಿದ್ದೇವೆ. ಬ್ಲಾಕ್‌ನಲ್ಲಿ ಕೇಳಿದರೂ ಸಿಲಿಂಡರ್ ಸಿಗುತ್ತಿಲ್ಲ, ಹೀಗಾದರೆ ಮಕ್ಕಳಿಗೆ ಹೇಗೆ ಅಡುಗೆ ಮಾಡಲು ಸಾಧ್ಯ?

■ ಹೆಸರು ಹೇಳಲಿಚ್ಛಿಸದ ಶಿಶುಪಾಲನಾ ಕೇಂದ್ರದ ಸಿಬ್ಬಂದಿ

ಮಾ.25ಕ್ಕೆ ರೂ.103.58 ಇದ್ದ ಪೆಟ್ರೋಲ್ ದರ ಮಾ.26ಕ್ಕೆ ರೂ.108.58 ಹಾಗೂ ಡೀಸೆಲ್ ಮಾ.25ಕ್ಕೆ ರೂ.91.39ಇದ್ದು, ಮಾ.26ರಂದು ರೂ.94.39ಕ್ಕೆ ಹೆಚ್ಚಿಸಿದ್ದಾರೆ. ಈ ದರ ಏರಿಕೆಗೆ ಗ್ರಾಹಕರ ಆಕ್ರೋಶ ವ್ಯಕ್ತವಾಗಿದ್ದಾರೆ.

ಶಿಶುಪಾಲನಾ ಕೇಂದ್ರಕ್ಕೂ ತಟ್ಟಿದ ಯುದ್ಧದ ಬಿಸಿ: ಸಿಲಿಂಡರ್ ಕೊರತೆ ಹಿನ್ನೆಲೆಯಲ್ಲಿ ವಾತ್ಸಲ್ಯ ಶಿಶುಪಾಲನಾ ಕೇಂದ್ರಕ್ಕೂ ಯುದ್ಧದ ಬಿಸಿ ತಟ್ಟಿದೆ. ಹೀಗಾಗಿ ಹಾವೇರಿ ನಗರದ ದೇವರಾಜ ಅರಸು ಭವನದಲ್ಲಿರೋ ಶಿಶುಪಾಲನಾ ಕೇಂದ್ರ ಮಕ್ಕಳಿಗೆ ನೀಡುತ್ತಿದ್ದ ಊಟ ಬಂದ್ ಮಾಡಲಾಗಿದ್ದು, ಸಿಲಿಂಡರ್ ಖಾಲಿಯಾಗಿದ್ದು, ಪಾಲಕರಿಗೆ ಮಕ್ಕಳಿಗೆ ಮನೆಯಿಂದ ಊಟ ಉಪಹಾರ ತನ್ನಿ ಎಂದು ಮಾಹಿತಿ ಕಳಿಸಲಾಗಿದೆ. ದ್ಯು ಪ್ರಸ್ತುತ 32ಕ್ಕೂ ಹೆಚ್ಚು ಮಕ್ಕಳು ಶಿಶು ಪಾಲನಾ ಕೇಂದ್ರದಲ್ಲಿವೆ.

ಶೇ.6ರಷ್ಟು ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಮನವಿ

• **ಹಾವೇರಿ :** ಮಾದಿಗರು ಸೇರಿದಂತೆ ಮೂಲ ಅಸ್ಪೃಶ್ಯರಿಗೆ ಒಳ ಮೀಸಲಾತಿ ಜಾರಿ ವಿಳಂಬ ಮಾಡುತ್ತಿರುವುದು ಖಂಡನೀಯ. ಎಸ್.ಸಿಗಳಿಗೆ ಇರುವ ಶೇ.15ರ ಮೀಸಲಾತಿಯಲ್ಲಿಯೇ ಶೇ.6ರಷ್ಟು ಒಳ ಮೀಸಲಾತಿ ಜಾರಿಗೆ ತಂದು ರಾಜ್ಯ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕೆಂದು ಲಿಡ್ಕರ ನಿಗಮ ಮಾಜಿ ಉಪಾಧ್ಯಕ್ಷ ಡಿ.ಎಸ್. ಮಾಳಗಿ ಅವರು ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ ಮೂಲಕ ಸಿಎಂಗೆ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಜಾರಿ ಮಾಡುವಂತೆ ಕಳೆದ 40 ವರ್ಷಗಳಿಂದ ಮಾದಿಗರು ನಿರಂತರ ಹೋರಾಟ ಮಾಡುತ್ತಲೇ ಬಂದಿದ್ದಾರೆ. ಈ ಹಿಂದೆ ಬಸವರಾಜ ಬೊಮ್ಮಾಯಿ ಸಿಎಂ ಇದ್ದಾಗ ಒಳ ಮೀಸಲಾತಿ ನೀಡಲು ರಾಜ್ಯ ಸರ್ಕಾರದ ಸಚಿವ ಸಂಪುಟ ಒಪ್ಪಿಗೆ ಮೇರೆಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ ನಂತರ ಇದನ್ನು ಕೆಲವರು ವಿರೋಧಿಸಿ ಸುಪ್ರೀಂ ಕೋರ್ಟ್ ದಾವೆ ಹಾಕಿದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸುಪ್ರೀಂ ಕೋರ್ಟ್ ತ್ರಿಪೀಠ ಸದಸ್ಯ ಪೀಠ ಒಳ ಮೀಸಲಾತಿ ನೀಡುವಂತೆ ಆದೇಶ ಮಾಡಿದೆ.

ಇದೆಲ್ಲವೂ ಆದ ಮೇಲೆ ನಾಗಮೋಹನ ದಾಸ ವರದಿ ಆಧಾರದ ಮೇಲೆ ಮೀಸಲಾತಿ ಹೆಚ್ಚಳ ಆಧಾರದಲ್ಲಿ ಶೇ.6 ಒಳ ಮೀಸಲಾತಿ ನಿರ್ಣಯ ತೆಗೆದುಕೊಂಡು ರಾಜ್ಯ ಪತ್ರ ಹೊರಡಿಸಲಾಯಿತು. ಆದರೆ ಇದರಲ್ಲಿ ಕಾನೂನಿನ ತೊಡಕು ಇಟ್ಟು ಮೀಸಲಾತಿ ಕೊಟ್ಟ ರಾಜ್ಯ ಸರ್ಕಾರದ ದಂದ್ವವನ್ನು ಸುಪ್ರೀಂ ಮೀಸಲಾತಿ ಹೆಚ್ಚಳ ಬಗ್ಗೆ ಪ್ರಶ್ನೆ ಮಾಡಿದೆ. ಇದರಿಂದ ಒಳ ಮೀಸಲಾತಿಗೆ ದೊಡ್ಡ ಕೊಡಲಿ ಏಟು ಬಿದ್ದಿದೆ. ತುಳಿತಕ್ಕೊಳಗಾದ ಮಾದಿಗರ ಅನ್ಯಾಯ ಆಗುತ್ತಿದೆ. ಎಸ್.ಸಿ.ಗಳಿಗೆ ಈಗಿರುವ ಶೇ.15ರಲ್ಲಿ ಮಾದಿಗರಿಗೆ ಶೇ.6ರಷ್ಟು ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳಮೀಸಲಾತಿ ಜಾರಿಗೊಳಿಸಿ 58 ಸಾವಿರ ಸರಕಾರಿ ಉದ್ಯೋಗ ಭರ್ತಿ ಆಗಲೆಂದು ಆಗ್ರಹಿಸಿದರು.

ಈ ಜನರಿಗೆ ಒಳ ಮೀಸಲಾತಿ ಜಾರಿ ಮಾಡದೇ ಹೋದಲ್ಲಿ ಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ನ್ಯಾಯವಾದಿ ನಾಗರಾಜ ಮಾಳಗಿ, ಅಶೋಕ ಮರೆಣ್ಣನವರ, ನಿವೃತ್ತ ಡಿಡಿಪಿಐ ಅಂಜನೇಯ ಸೇರಿದಂತೆ ಅನೇಕರು ಹಾಜರಿದ್ದರು.

ದೇಶದ ಅಭಿವೃದ್ಧಿ ಪೂರಕ ಕಾರ್ಯಗಳಲ್ಲಿ ಭಾಗವಹಿಸಿ: ಶಿವಜ್ಯೋತಿ

• **ಬ್ಯಾಡಗಿ:** ಮಹಿಳೆಯರು ಕೇವಲ ಅಡುಗೆ ಮನೆಗೆ ಸೀಮಿತವಾಗದೆ ಸಮಾಜದ ಮುಖ್ಯ ವಾಹಿನಿಯಲ್ಲಿ ದೇಶದ ಅಭಿವೃದ್ಧಿಗೆ ಪೂರಕವಾಗುವ ಕಾರ್ಯಗಳಲ್ಲಿ ಭಾಗವಹಿಸಬೇಕು ಎಂದು ನವ ಚೈತನ್ಯ ಶಿಕ್ಷಣ ಸಂಸ್ಥೆಯ ಪ್ರಿನ್ಸಿಪಾಲ ಶಿವಜ್ಯೋತಿ ಹೇಳಿದರು.

ಪಟ್ಟಣದ ತಾಲೂಕ ಸಾಹಿತ್ಯ ಪರಿಷತ್ ಕನ್ನಡ ಭವನದಲ್ಲಿ ನಡೆದ ಬ್ಯಾಡಗಿ ಇನ್ನರ್ ವೀಲ್ ಕ್ಲಬ್ನ 5 ನೇ ವರ್ಷದ ಸಂಸ್ಥಾಪನ ದಿನಾಚರಣೆಯ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದರು.

ಮಹಿಳೆಯರು ಸಮಾಜ ಸೇವೆಗಾಗಿ ಇಂತಹ ಉತ್ತಮ ಸಂಘಟನೆಗಳ ಮೂಲಕ ಬಡ ಜನರ ಸೇವೆ ಮಾಡುತ್ತಿರುವದು ಶ್ಲಾಘನೀಯವಾಗಿದೆ ಎಂದರು.

ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಪ್ರತಿಭಾ ಮೇಲಗಿರಿ ಮಾತನಾಡಿ, ಇನ್ನರ್ ವೀಲ್ ಕ್ಲಬ್ ಪಟ್ಟಣ ಹಾಗೂ ತಾಲೂಕಿನಲ್ಲಿ ಹಲವಾರು ಕಾರ್ಯಗಳನ್ನು ಮಾಡಿದೆ. ಶಿಕ್ಷಣ ಆರೋಗ್ಯ ಪರಿಸರ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದೆ ಎಂದರು.

ಈ ವೇಳೆ ಶಿಕ್ಷಕಿ ಸುಷ್ಮಾ ಉಪಾಸಿ, ಕೆಎಸ್ಆರ್‌ಟಿಸಿ ನಿರ್ವಾಹಕಿ ವೇದಾವತಿ,



ಅಂಚೆ ಮಹಿಳೆ ನಾಗವೇಣಿ ಸಂಕಣ್ಣನವರ, ಕೆಇಬಿ ಮೀಟರ್ ರೀಡರ್ ಶೈಲಾ ಬನ್ನಿಮಟ್ಟಿ, ಕಟ್ಟಿಂಗ್ ತರಬೇತುದಾರಿ ಮಂಜುಳಾ ಭಜಂತ್ರಿ ಇವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕ್ಲಬ್ ಕಾರ್ಯದರ್ಶಿ ಲಕ್ಷ್ಮೀ ಉಪ್ಪಾರ, ಪದಾಧಿಕಾರಿಗಳಾದ ಪುಷ್ಪಾ ಇಂದಿಮಠ, ವಿಜಯಲಕ್ಷ್ಮೀ ಗೌಡರ, ಗೀತಾ ಎಲಿ, ಸಂಧ್ಯಾರಾಣಿ ದೇಶಪಾಂಡೆ, ಮಹೇಶ್ವರಿ ಪಾಸಾರದ, ಕವಿತಾ ಸೊಪ್ಪಿನಮಠ ಹಾಗೂ ಇತರರು ಉಪಸ್ಥಿತರಿದ್ದರು.

ಸಮಾನತೆ, ಕಾಯಕದ ಮಹತ್ವ ಸಾರಿದ ದಾಸಿಮಯ್ಯ: ಗಾಜಿಗೌಡ್ರ

• **ಹಾವೇರಿ:** ದೇವರ ದಾಸಿಮಯ್ಯನವರು 12ನೇ ಶತಮಾನದ ಬಸವಣ್ಣನವರ ಕಾಲದ ಶರಣರು. ವಚನ ಸಾಹಿತ್ಯದ ಮೂಲಕ ಸಮಾಜಕ್ಕೆ ಸಮಾನತೆ, ಸತ್ಯ ಮತ್ತು ಕಾಯಕದ ಮಹತ್ವ ಸಾರಿದ ಮಹಾನ್ ವ್ಯಕ್ತಿ ಎಂದು ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ ಹೇಳಿದರು.

ನಗರದ ಪ್ರವಾಸಿತಾಣ ಗಾಂಧಿ ಭವನದಲ್ಲಿ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಸಹಯೋಗದಲ್ಲಿ ಆಯೋಜಿಸಲಾದ ಆದ್ಯ ವಚನಕಾರ ದೇವರ ದಾಸಿಮಯ್ಯನವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಜಯಂತಿಗಳು ಆಯಾ ಸಮುದಾಯಗಳಿಗೆ ಮಾತ್ರ ಸೀಮಿತ ಆಗದೇ ಎಲ್ಲರೂ ಶರಣರ ಜಯಂತಿಗಳಲ್ಲಿ ಭಾಗವಹಿಸಬೇಕು. ಸರ್ಕಾರ ಮಹಾನ್ ವ್ಯಕ್ತಿಗಳ, ಶರಣರ ಜೀವನ ಮತ್ತು ತತ್ವಗಳನ್ನು ತಿಳಿಸಲು ಜಯಂತಿ ಆಚರಣೆ ಮಾಡುತ್ತಿದೆ. ಯುವ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಜಯಂತಿಗಳಲ್ಲಿ ಭಾಗವಹಿಸಿ, ಮಹಾನ್ ವ್ಯಕ್ತಿಗಳ ತತ್ವಾದರ್ಶಗಳನ್ನು ತಿಳಿದುಕೊಂಡಾಗ ಮಾತ್ರ ಜಯಂತಿಗಳ ಆಚರಣೆ ಯಶಸ್ವಿಯಾಗಲು ಸಾಧ್ಯ ಎಂದರು.

ಹಾವೇರಿ ಉಪ ವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ ಮಾತನಾಡಿ, ದೇವರ ದಾಸಿಮಯ್ಯನವರು ಸಮಾಜದಲ್ಲಿ ಸಮಾನತೆ ಮತ್ತು ಧರ್ಮದ ಅರಿವು ಮೂಡಿಸಿದವರು. ಅವರು ವಚನ ಸಾಹಿತ್ಯದ ಮೊದಲ ಶರಣರಾಗಿದ್ದು, ಸಮಾಜದಲ್ಲಿ ಸಮಾನತೆ, ಸತ್ಯ ಮತ್ತು ಭಕ್ತಿ ಎಂಬ ಮೌಲ್ಯಗಳನ್ನು ಜನರಿಗೆ ಬೋಧಿಸಿದವರು ಎಂದು ಬಣ್ಣಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ ಮಾತನಾಡಿ, ವಚನ ಸಾಹಿತ್ಯದಲ್ಲಿ ಅನೇಕ ಶರಣರು ಇದ್ದರೂ ಸಹ ದೇವರ ದಾಸಿಮಯ್ಯನವರು ಪ್ರಮುಖ ಸ್ಥಾನ ಪಡೆದಿದ್ದಾರೆ. ಅವರ ವಚನಗಳು ಜನಸಾಮಾನ್ಯರಿಗೆ ದಾರಿದೀಪವಾಗಿವೆ ಎಂದರು.

ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಂ.ಎಂ. ಹಿರೇಮಠ ಮಾತನಾಡಿ, ಶರಣರ ತತ್ವಾದರ್ಶಗಳನ್ನು ಎಲ್ಲರೂ ಬದುಕಿನಲ್ಲಿ ಅಳವಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ತಹಶೀಲ್ದಾರ ಶರಣಮ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಗೌರವಾಧ್ಯಕ್ಷ ಡಾ.ಬಸವರಾಜ ಕೇಲಗಾರ, ಜಿಲ್ಲಾ ಅಧ್ಯಕ್ಷ ಹನುಮಂತಪ್ಪ ಮುಕ್ತೇನಹಳ್ಳಿ, ಸಮಾಜದ ಮುಖಂಡರು ಉಪಸ್ಥಿತರಿದ್ದರು.



ಕನ್ನಡ ಸಾಹಿತ್ಯದಲ್ಲಿ ದಾಸಿಮಯ್ಯರ ಸ್ಥಾನ ಅತ್ಯಂತ ಮಹತ್ವದ್ದು, ಅವರ ಜೀವನ ಮತ್ತು ವಚನಗಳು ಇಂದಿಗೂ ಸತ್ಯ, ನಿಷ್ಠೆ ಮತ್ತು ಸಮಾನತೆಯ ಮೌಲ್ಯಗಳನ್ನು ಕಲಿಸುತ್ತಿವೆ. ಸಮಾಜದಲ್ಲಿನ ಜಾತಿ ಬೇಧ ಮತ್ತು ಅಂಧಶ್ರದ್ಧೆಗಳನ್ನು ತೀವ್ರವಾಗಿ ವಿರೋಧಿಸಿ ಸಮಾಜದ ಅಂಕು ಡೊಂಕು ತಿದ್ದಿದ ಮಹಾನ್ ಶರಣರು.

■ ನಾಗರಾಜ ದ್ಯಾಮನಕೊಪ್ಪ, ಪ್ರಾಚಾರ್ಯ, ಚನ್ನಪ್ಪ ಕುನ್ನೂರ ಪಿಯು ಕಾಲೇಜು, ಶಿಗ್ಗಾಂವ

ಏ.7ರಿಂದ ದುರ್ಗಾದೇವಿ, ಕಾಳಿಕಾದೇವಿ ಜಾತ್ರಾ ಮಹೋತ್ಸವ

• **ಬಂಕಾಪೂರ:** ಸಮೀಪದ ಮುದ್ದಿನಕೊಪ್ಪ ಗ್ರಾಮದ ದುರ್ಗಾದೇವಿ ಹಾಗೂ ಕಾಳಿಕಾದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಏ.7 ರಿಂದ ಏ.12 ರವರೆಗೆ ಪ್ರತಿಷ್ಠಾಪನೆ ಹೋಮಹವನ ಪೂಜಾವಿಧಿವಿಧಾನ ಹಾಗೂ ಧರ್ಮ ಕಾರ್ಯಗಳು ಜರುಗುವವು. ಏ.8ರಂದು ದೇವಿಯ ಮೂರ್ತಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪೂರ್ಣಕುಂಭ ಕಲಶದೊತ್ತ ಸುಮಂಗಲೆಯರು ವಾದ್ಯ ವೃಂದ ವೈಭವದೊಂದಿಗೆ ಭವ್ಯ ಮೆರವಣಿಗೆ ನಡೆಸುವರು. ಮುಂಡಗೋಡದ ವೇದಮೂರ್ತಿ ಪಂಡಿತ ರುದ್ರಮುನಿ ಸ್ವಾಮಿಗಳು ಹಿರೇಮಠ ಪ್ರವಚನ ಕಾರ್ಯಕ್ರಮ ನಡೆಯುವುದು. ಏ.9ರಂದು ಬೆಳಗ್ಗೆಯಿಂದ ಸಂಜೆವರೆಗೆ ದೇವಿಗೆ ಉಡಿ ಉಂಬುವುದು, ಹಣ್ಣುಕಾಯಿ ಸೇವೆ ಹಾಗೂ ಹರಕೆ ಸೇವೆ ನಡೆಯುವುದು. ಏ.10ರಂದು ಬೆಳಗ್ಗೆ ದೇವಿಯರಿಗೆ ಲೋಕಕಲ್ಯಾಣಾರ್ಥವಾಗಿ ಮಹಾಚಂಡಿಕಾ ಯಾತ್ರೆ ಜರುಗುವುದು. ಏ.11ರಂದು ವೇದಿಕೆ ಕಾರ್ಯಕ್ರಮ ಹಾಗೂ ಧರ್ಮ ಜರುಗುವುದು. ಏ.12 ರಂದು ಮಧ್ಯಾಹ್ನ 3ಕ್ಕೆ ದುರ್ಗಾದೇವಿ ಹಾಗೂ ಕಾಳಿಕಾದೇವಿಯ ಮೂರ್ತಿಗಳನ್ನು ಮೆರವಣಿಗೆ ಮುಖಾಂತರ ಪಾದಗಟ್ಟಿಗೆ ತಲುಪುವುದು. ಕಾರ್ಯಕ್ರಮ ಮಾರ್ಗದರ್ಶಕರಾಗಿ ಯಲ್ಲಾಪೂರ ಗ್ರಾಮದ ಗ್ರಾಮದೇವಿಯ ಪ್ರಧಾನ ಅರ್ಚಕ ವೇ. ಮೂ. ಪರಶುರಾಮ್ ಗಣಪತಿ ಆಚಾರ್ಯರು, ಸುಬ್ರಮಣ್ಯ ಗಂಗಾಧರ ಭಟ್, ದುರ್ಗಾದೇವಿ ಹಾಗೂ ಕಾಳಿಕಾದೇವಿ ದೇವಸ್ಥಾನ ಪ್ರಧಾನ ಅರ್ಚಕರು ಕಾರ್ಯಕ್ರಮ ನಡೆಸಿಕೊಡುವರು. ಅಂದಲಗಿ, ಕಡಗರವಳ್ಳಿ, ಕ್ಯಾಬಳ, ಮುಳಕೇರಿ, ಬದ್ರಾಪೂರ, ಕೋಣನಕೇರಿ, ಬಸವನಕಟ್ಟಿ, ಹೊಡೂರು, ಲಕ್ಕಿಕೊಪ್ಪ, ಬಮ್ಮನಹಳ್ಳಿ, ಸುತ್ತಲಿನ ಗ್ರಾಮದ ಭಕ್ತರು ಪಾಲ್ಗೊಳ್ಳಬೇಕೆಂದು ಜಾತ್ರಾ ಪ್ರಕಟಣೆ ತಿಳಿಸಿದೆ.

ನಿವೃತ್ತ ನೌಕರರ ಸಂಘದಿಂದ ಮನವಿ

• **ಹಾವೇರಿ:** ನಿವೃತ್ತ ನೌಕರರಿಗೆ ವಾರ್ಷಿಕ ತುಟ್ಟಿಭತ್ಯೆ ನೀಡದಿರಲು ಹಾಗೂ ವೇತನ ಪರಿಷ್ಕರಣೆ ಮಾಡದಿರಲು ಕೇಂದ್ರ ಸರ್ಕಾರ ಕೈಗೊಂಡಿರುವ ನಿರ್ಧಾರವನ್ನು ಖಂಡಿಸಿ, ಕೂಡಲೇ ಕೇಂದ್ರ ಸರ್ಕಾರ ಈ ಕಾಯ್ದೆಯನ್ನು ಹಿಂಪಡೆಯುವಂತೆ ಒತ್ತಾಯಿಸಿ ರಾಜ್ಯ ನಿವೃತ್ತ ನೌಕರರ ಸಂಘ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲಾಯಿತು.

ಇಲ್ಲಿನ ನಿವೃತ್ತ ನೌಕರರ ಸಂಘದ ಭವನದಲ್ಲಿ ಸಮಾವೇಶಗೊಂಡ ನಿವೃತ್ತ ನೌಕರರು ಕೈಗೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟಿಸಿ ಅವರ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸಂಘದ ಜಿಲ್ಲಾಧ್ಯಕ್ಷ ಎಸ್.ಬಿ. ಅಣ್ಣಿಗೇರಿ ಮಾತನಾಡಿ, ನಿವೃತ್ತ ನೌಕರರಿಗೆ, ಕುಟುಂಬ ಪಿಂಚಣಿದಾರರಿಗೆ ಪಿಂಚಣಿ ಪರಿಷ್ಕರಣೆ ಮಾಡಲು ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ ಎರಡು ತುಟ್ಟಿ ಭತ್ಯೆಯನ್ನು ನೀಡದಿರಲು ಕೇಂದ್ರ ತೀರ್ಮಾನಿಸಿದ್ದು, ಇದರಿಂದ ಲಕ್ಷಾಂತರ ನಿವೃತ್ತ ನೌಕರರಿಗೆ ಆರ್ಥಿಕ ಸಮಸ್ಯೆ ಎದುರಾಗಲಿದೆ. ಕಾರಣ ಕೂಡಲೇ ಈ ಕಾಯ್ದೆಯನ್ನು ಕೇಂದ್ರ ಸರ್ಕಾರ ಹಿಂಪಡೆಯಬೇಕೆಂದು ಒತ್ತಾಯಿಸಿದರು. ಈ ವೇಳೆ ಸಂಘದ ಕಾರ್ಯದರ್ಶಿ ಎ.ಕೆ. ತಿಮ್ಮಾಪುರ, ನಿವೃತ್ತ ನೌಕರರಾದ ಸಿ.ಎಸ್. ಮಾಳಗಿ, ಶಂಕರ ಸುತಾರ, ಜಿ.ಎಸ್. ಬೊರಗಿ, ಅಶೋಕ ಯತ್ತಿನಹಳ್ಳಿ, ಎಚ್.ಎ. ಜಮಾದಾರ, ಪಿ.ಬಿ. ಬಾವನೂರು, ಸೈಯದ್ ಅಕ್ಬರ್ ಇತರರಿದ್ದರು.



ಕಿರುಸುದ್ದಿ



ಕೊಕಟನೂರ: ಸಮೀಪದ ಕೊಡಗಾನೂರ ಗ್ರಾಮದಲ್ಲಿ ಶ್ರೀ ಸಿಕಂದರ್ ಬಾದಶಾ ಉರುಸು ನಿಮಿತ್ತ ಗುರುವಾರ ನೀಟ್ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಎಂಬಿಬಿಎಸ್ ಪದವಿಗೆ ಆಯ್ಕೆಯಾದ ಪೂಜಾ ಚಂದ್ರಕಾಂತ್ ಕಿಲಾರಿ ಅವರನ್ನು ಸತ್ಕರಿಸಲಾಯಿತು. ಬಾಬಾಸಾಬ ಅವತಾಡೆ, ಸಂಜು ಪವಾರ್, ರಾಜ ಮುಜಾವರ್, ಪ್ರದೀಪ್ ಜಾದವ್, ಕೊಂಡಿಬಾ ಬಾಬರ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಖಜಾಂಚಿಯಾಗಿ ಬಲರಾಮ ನೇಮಕ



• **ಬೆಳಗಾವಿ:** ಕೆಪಿಸಿಸಿಯ ರಾಜ್ಯ ಪ್ರಚಾರ ಸಮಿತಿಯ ಅಧ್ಯಕ್ಷ ವಿನಯಕುಮಾರ ಸೊರಕೆ ಅವರ ಅನುಮೋದನೆ ಮೇರೆಗೆ, ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸೂಚನೆಯ ಮೇರೆಗೆ ಬಲರಾಮ ಮಾಸೆನಟ್ಟಿ ಅವರನ್ನು ಬೆಳಗಾವಿ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಪ್ರಚಾರ ಸಮಿತಿಯ ಜಿಲ್ಲಾ ಖಜಾಂಚಿಯನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಇಂಧನಕ್ಕಾಗಿ ಹೊಡೆದಾಟ: ಇಬ್ಬರ ಬಂಧನ

• **ಬೆಳಗಾವಿ:** ನಗರದಲ್ಲಿ ಪೆಟ್ರೋಲ್, ಡೀಸೆಲ್ ಕೊರತೆ ಉಂಟಾಗಲಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸಿರುವ ಪರಿಣಾಮವಾಗಿ, ಇಂಧನ ತುಂಬಿಸಿಕೊಳ್ಳಲು ವಾಹನ ಸವಾರರು ಮುಗಿಬಿದ್ದಿದ್ದರು. ಈ ವೇಳೆ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ತುಂಬಿಸಿಕೊಳ್ಳುವ ವಿಚಾರಕ್ಕೆ ಇಬ್ಬರು ಯುವಕರು ಹೊಡೆದಾಡಿಕೊಂಡಿದ್ದರು. ನಗರದ ರಾಮದೇವ ಹೋಟೆಲ್ ಪಕ್ಕದ ಪೆಟ್ರೋಲ್ ಬಂಕ್ ಬಳಿ ನಡೆದ ಭೀಕರ ಗಲಾಟೆಗೆ ಸಂಬಂಧಿಸಿದಂತೆ ಪೊಲೀಸರು ಈಗ ಇಬ್ಬರನ್ನು ಬಂಧಿಸಿದ್ದಾರೆ. ಇಬ್ಬರು ಯುವಕರು ಹೊಡೆದಾಡಿಕೊಂಡ ವಿಚಾರಕ್ಕೆ ಗಂಭೀರವಾಗಿ ಪರಿಗಣಿಸಿರುವ ಬೆಳಗಾವಿ ಪೊಲೀಸರು, ಸಾರ್ವಜನಿಕ ಶಾಂತಿಗೆ ಭಂಗ ತಂದ ಆರೋಪದ ಮೇಲೆ ಇಬ್ಬರನ್ನು ಕೂಡಲೇ ಬಂಧಿಸಿ ಕಾನೂನಿನ ಕ್ರಮ ಕೈಗೊಂಡಿದ್ದಾರೆ.

ಅಪ್ರಾಪ್ತೆಗೆ ಲೈಂಗಿಕ ಕಿರುಕುಳ: ಆರೋಪಿಗೆ 3 ವರ್ಷ ಕಾರಾಗೃಹ ಶಿಕ್ಷೆ

• **ಬೆಳಗಾವಿ:** ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಿತನಿಗೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ಇಲ್ಲಿನ ಪೋಕ್ಸೊ ನ್ಯಾಯಾಲಯ ತೀರ್ಪು ಹೊರಡಿಸಿದೆ. ಗಣೇಶಪುರ ಲಕ್ಷ್ಮೀನಗರದ ಸಿಂಡಿಕೇಟ್ ಬ್ಯಾಂಕ್ ಕಾಲೋನಿ ಸಮೀಪದ ಸಚಿನ್ ಕಾಕತ್ಕರ್(30) ಶಿಕ್ಷೆಗೊಳಗಾದ ಆರೋಪಿ. ಈ ಕುರಿತು ಕ್ಯಾಂಪ್ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಫಿರ್ಯಾದಿದಾರರ ಮಗಳು ನೊಂದ ಬಾಲಕಿ. ಎಸ್.ಎಚ್. ಮುಲ್ಲಾ ಪ್ರಕರಣ ದಾಖಲಿಸಿಕೊಂಡಿದ್ದರು. ಪಿಎಸ್‌ಐ ಎಸ್. ಎಸ್. ಬಸ್ವಾ ತನಿಖೆ ಕೈಗೊಂಡಿದ್ದರು. ನ್ಯಾಯಾಧೀಶರಾದ ಸಿ.ಎಂ.ಪುಷ್ಪಲತಾ ಪ್ರಕರಣದ ವಿಚಾರಣೆ ನಡೆಸಿದ್ದರು.

ಕುಮಾರ ಗುಡೋಡಗಿ ನಿಧನ



• **ಕುಡಚಿ:** ಸಮೀಪದ ಯಲ್ಪಾರಟ್ಟಿ ಗ್ರಾಮದ ನಿವಾಸಿ ಕುಮಾರ ಮುರಿಗೆಪ್ಪ ಗುಡೋಡಗಿ (46) ಗುರುವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ನಿಧನಕ್ಕೆ ಗ್ರಾಮದ ಗಣ್ಯರು ಹಾಗೂ ಸಾರ್ವಜನಿಕರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಹಿರೇಬಾಗೇವಾಡಿ: ಹಿರೇಬಾಗೇವಾಡಿಯ ಪಡಿಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ರಥದ ಕಳಸಾರೋಹಣ ಕಾರ್ಯಕ್ರಮವನ್ನು ಬಡೆಕೊಳ್ಳ ಮಠದ ನಾಗೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು. ಜಾಲಿ ಕರೆಮ್ಮ ದೇವಸ್ಥಾನದ ಊಳವಪ್ಪಜ್ಜ, ಕಲ್ಲಯ್ಯಸ್ವಾಮಿ ಉದೇಶಿ ಮಠ, ಎಲ್ಲನಗೌಡ ಪಾಟೀಲ, ಪ್ರಶಾಂತ ದೇಸಾಯಿ, ಆನಂದ ಗೌಡ ಪಾಟೀಲ ಇತರರು ಇದ್ದರು.

ಮಕ್ಕಳಲ್ಲಿ ಕ್ರಿಯಾಶೀಲತೆ ರೂಢಿಸಿ

• **ಕುಡಚಿ:** ಪಾಲಕರು ನಮ್ಮ ಮಕ್ಕಳು ಆರಾಮವಾಗಿರಬೇಕು ಅನ್ನುವುದಕ್ಕಿಂತ ಕ್ರಿಯಾಶೀಲರಾಗಿರಬೇಕು ಎಂದು ಬಯಸಬೇಕು ಎಂದು ಪರಮಾನಂದವಾಡಿ ಗುರುದೇವಾಶ್ರಮದ ಡಾ. ಅಭಿನವ ಬ್ರಹ್ಮಾನಂದ ಸ್ವಾಮೀಜಿ ಹೇಳಿದರು. ಸಮೀಪದ ಗುಂಡವಾಡ ಗ್ರಾಮದಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಬಿ. ಶಂಕರಾನಂದ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಕುಡಚಿ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ 2025-26ನೇ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಮನೆಗೆದ್ದು ಮಾರು ಗೆಲ್ಲು ಎಂಬ ಹೇಳಿಕೆಯಂತೆ ಯುವಕರು ಚಟುವಟಿಕೆ ಹಾಗೂ ಕ್ರಿಯಾಶೀಲದ ಹುರುಪು ನಮ್ಮಲ್ಲಿ ಇದ್ದರೆ ಜೀವನ ಯಶಸ್ವಿಗೊಳಿಸುತ್ತದೆ ಎಂದರು. ಈ ಸಂದರ್ಭದಲ್ಲಿ ಚಿಕ್ಕೋಡಿ ಜಿಲ್ಲಾ ಪ್ರಭಾರಿ ಸಂಯೋಜನಾಧಿಕಾರಿಗಳಾದ ಶಂಕರ ನಿಂಗನೂರೆ, ಬಾಹುಬಲಿ ಬ್ಯಾಡಗಿ, ಸುಕುಮಾರ್ ಪಾಟೀಲ, ಶಾಣ್ಣಾಸಾಬ ಪಾಟೀಲ, ಬಾಳು ಸಾಂಗ್ಲಿ, ನೇಮಿನಾಥ ಪಾಟೀಲ, ರಾವಸಾಬ ಪಾಟೀಲ, ಮಾರುತಿ ಪೂಜೇರಿ, ಕಲಗೌಡ ಪಾಟೀಲ, ಗಂಗಾರಾಮ ಪೂಜೇರಿ, ಕುಮಾರ್ ಆರಗೆ, ಆದಿನಾಥ ಪಾಟೀಲ, ಎ.ಎಸ್.ಕಾಂಬಳೆ, ಎನ್‌ಎಸ್‌ಎಸ್ ಕಾರ್ಯಕ್ರಮದ ಅಧಿಕಾರಿ ಆರ್.ಪ್.ಮಹೇಶವಾಡಗಿ ಸೇರಿದಂತೆ ಶಿಬಿರಾರ್ಥಿಗಳು ಹಾಜರಿದ್ದರು ಪ್ರೊ.ಆನಂದ ಪಾಂಡ್ರಾಗೋಳ ಸ್ವಾಗತಿಸಿದರು ಪ್ರೋ. ಶೋಭಾ ಕೊಟಬಾಗಿ ನಿರೂಪಿಸಿದರು ಪ್ರೋ.ಕೆ.ಕೆ. ಕಾಂಬಳೆ ವಂದಿಸಿದರು.



ಕುಡಚಿ: ಸಮೀಪದ ಗುಂಡವಾಡ ಗ್ರಾಮದಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಬಿ. ಶಂಕರಾನಂದ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಕುಡಚಿ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ 2025-26ನೇ ವಾರ್ಷಿಕ ವಿಶೇಷ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಗುಬ್ಬಚ್ಚಿ ಪ್ರಿಯ ಗ್ರಂಥಾಲಯ ಸಿಬ್ಬಂದಿ ಮನೋಹರ

ಪಕ್ಷಿಗಳ ಸಂರಕ್ಷಣೆಗೆ ಪಣ

• **ಮೂಡಲಗಿ:** ಗ್ರಂಥಾಲಯದ ಸಿಬ್ಬಂದಿಯೊಬ್ಬರ ಪಕ್ಷಿ ಪ್ರೇಮ ಇತರರಿಗೆ ಮಾದರಿಯಾಗಿದ್ದಾರೆ. ಬೇಸಿಗೆಯಲ್ಲಿ ನೀರಿನ ಸಮಸ್ಯೆ ಎದುರಿಸುವ ಪಕ್ಷಿಗಳಿಗಾಗಿಯೇ ನೀರು ಇಡುವ ಕಾಯಕವನ್ನು ಸದಾ ಪಾಲಿಸುತ್ತ ಬಂದಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಸುಮಾರು ಹತ್ತು ಹದಿನೈದು ವರ್ಷಗಳ ಹಿಂದಿನಿಂದಲೂ ಮೂಡಲಗಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಇರುವ ಗ್ರಂಥಾಲಯದ ಸಿಬ್ಬಂದಿ ಮನೋಹರ ಲಮಾಣಿ ಗುಬ್ಬಚ್ಚಿಗೆ ನೀರು ಹಾಕುವ ಕಾಯಕ ಮಾಡುತ್ತ ಬಂದಿದ್ದಾರೆ.

ಗ್ರಂಥಾಲಯದಲ್ಲಿ ತಮ್ಮ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವುದರ ಜೊತೆಗೆ ಪಕ್ಷಿಗಳ ಮೇಲೆಯೂ ಎಲ್ಲಿಲ್ಲದ ಕಾಳಜಿಯನ್ನು ತೋರುತ್ತಿದ್ದಾರೆ. ಬೇಸಿಗೆಯ ನಾಲ್ಕು ತಿಂಗಳು ಗುಬ್ಬಚ್ಚಿಗಳಿಗೆ ನೀರು ಹಾಕುವುದರ ಮೂಲಕ ಪಕ್ಷಿಗಳ ರಕ್ಷಣೆಗೆ ಮುಂದಾಗಿದ್ದಾರೆ.

ಮೂಡಲಗಿ ಲಾಯನ್ಸ್ ಕ್ಲಬ್ ತಂಡ ಹಾಗೂ ನೇಮಗೌಡರ ವಿದ್ಯಾರ್ಥಿ ನೇತೃತ್ವದ ವಿದ್ಯಾರ್ಥಿಗಳ ತಂಡ ಗುಬ್ಬಚ್ಚಿಗಳಿಗೆ ನೀರು ಕಾಳು ಇಡಲು ಗಿಡಗಳಿಗೆ ತೂಗು ಬಿಡುವ ನೆಲವು ಹಾಗೂ ಮಣ್ಣಿನ ಮಡಕೆ (ಪಣತಿ)ಗಳನ್ನು ತಂದು ಕೊಟ್ಟು ಗುಬ್ಬಚ್ಚಿ ಪ್ರೇಮವನ್ನು ಮೆರೆದಿದ್ದರು.



ಎಲ್ಲರ ಪರಿಶ್ರಮದ ಫಲವಾಗಿ ಮೂಡಲಗಿ ಶಿಕ್ಷಣ ಸಂಸ್ಥೆಯ ಆವರಣ ಈಗ ಒಂದು ಸಣ್ಣ ಪಕ್ಷಿಧಾಮವಾಗಿದೆ. ಇಲ್ಲಿ ವಿವಿಧ ಬಗೆಯ ಪಕ್ಷಿಗಳು ವಾಸವಾಗಿದ್ದು, ಕೆಲವೊಂದು ವಿದೇಶಿ ವಲಸೆ ಪಕ್ಷಿಗಳು ವರ್ಷಕ್ಕೆ ಒಮ್ಮೆ ಇಲ್ಲಿ ಭೇಟಿ ನೀಡುತ್ತವೆ.

ಮೂಡಲಗಿ ಶಿಕ್ಷಣ ಸಂಸ್ಥೆಯ ವಿಶಾಲವಾದ ಆವರಣ ಹಚ್ಚ ಹಸಿರಿನಿಂದ ಕಂಗೊಳಿಸುವ ಮೂಲಕ ವಾಯುವಿಹಾರ (ವಾಕಿಂಗ್) ಮಾಡುವವರ ನೆಚ್ಚಿನ ತಾಣವಾಗಿ ಮಾರ್ಪಟ್ಟಿದೆ. ಪ್ರತಿನಿತ್ಯ ಮುಂಜಾನೆ ಸಂಜೆ ನೂರಾರು ಜನ ಇಲ್ಲಿ ವಾಯು ವಿಹಾರಕ್ಕೆ ಆಗಮಿಸುತ್ತಾರೆ ಗುಬ್ಬಚ್ಚಿಗಳ ನಾದ ಕೇಳುತ್ತಾರೆ ಅಂದ ಚಂದದ ಪಕ್ಷಿಗಳನ್ನು ನೋಡುತ್ತಾರೆ. ಇವರ ಕಾರ್ಯಕ್ಕೆ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷ ವೆಂಕಟೇಶ ಸೋನವಾಲಕರ ಹಾಗೂ ಉಪಾಧ್ಯಕ್ಷ ರವಿ ಸೋನವಾಲಕರ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಫೋಟೋಗ್ರಾಫರ್‌ಗಳ ಮೆಚ್ಚಿನ ತಾಣ

ಪಕ್ಷಿ ಪ್ರಿಯ ಫೋಟೋಗ್ರಾಫರಗಳು ಇಲ್ಲಿ ಬಣ್ಣ ಬಣ್ಣದ ಹಾಗೂ ವಿವಿಧ ಜಾತಿಯ ವಿದೇಶಿ ವಲಸೆ ಪಕ್ಷಿಗಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿಯಲು ಆಗಮಿಸುತ್ತಾರೆ. ಕಾಲೇಜಿನ ನಿವೃತ್ತ ಪ್ರಾಚಾರ್ಯ ಪ್ರೊ. ಜಿ. ವ್ಹಿ. ನಾಗರಾಜ ಅವರ ಪುತ್ರ, ಎಂಜಿನೀಯರ ಹವ್ಯಾಸಿ ಫೋಟೋಗ್ರಾಫರ್ ವಿಕಾಸ ಗುಂಡಗನಹಳಿ ತಮ್ಮ ಕ್ಯಾಮೆರಾದಲ್ಲಿ ಸಂಗ್ರಹಿಸಿರುವ ಇಲ್ಲಿನ ಪಕ್ಷಿಗಳ ಚಿತ್ರಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಬೆಲೆಕ್ಸ್ 2026: ಡಿಸಿ, ಕಮಿಷನರ್ ಭೇಟಿ



• **ಬೆಳಗಾವಿ:** ಬೆಳಗಾವಿ ವಾಣಿಜ್ಯೋದ್ಯಮ ಸಂಘ ಆಯೋಜಿಸಿದ್ದ ಕೈಗಾರಿಕೆ ಮತ್ತು ವಾಣಿಜ್ಯ ಪ್ರದರ್ಶನ ಬೆಲೆಕ್ಸ್ -2026 ಗೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಭೇಟಿ ನೀಡಿದರು. ಪ್ರತಿಯೊಂದು ಮಳಿಗೆಗೆ ಭೇಟಿ ನೀಡಿ ಮಾಹಿತಿ ಪಡೆದು, ಮಾದರಿ ಪ್ರದರ್ಶನ ಆಯೋಜನೆಗೆ ಪ್ರಶಂಸೆ ವ್ಯಕ್ತಪಡಿಸಿದರು. ಮಹಾನಗರ ಪಾಲಿಕೆ ಆಯುಕ್ತ ಕಾರ್ತಿಕ ಎಂ. ಸಹ ಆಗಮಿಸಿ ಎಲ್ಲ ಮಳಿಗೆಗಳನ್ನು ವೀಕ್ಷಿಸಿದರು. ವಾಣಿಜ್ಯೋದ್ಯಮ ಸಂಘದ ಪರವಾಗಿ ಜಿಲ್ಲಾಧಿಕಾರಿ ಹಾಗೂ ಪಾಲಿಕೆ ಆಯುಕ್ತರನ್ನು ಸನ್ಮಾನಿಸಲಾಯಿತು.

ವಿದ್ಯಾರ್ಥಿಗಳಿಗೆ ವಿಪುಲ ಅವಕಾಶ

• **ಗೋಕಾಕ:** ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶಗಳಿದ್ದು, ಕಠಿಣ ಪರಿಶ್ರಮದಿಂದ ಪ್ರತಿಭಾನ್ವಿತರಾಗಿರೆಂದು ನಗರಾಭಿವೃದ್ಧಿ ಯೋಜನೆ ಸಹಾಯಕ ನಿರ್ದೇಶಕ ಶ್ರೀಶೈಲ ಆಡಿಟ ಹೇಳಿದರು.

ಬುಧವಾರ ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಪಾಲಿಟೆಕ್ನಿಕ್‌ನ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮಲ್ಲಿಯ ಕೌಶಲ್ಯಗಳನ್ನು ವೃದ್ಧಿಸಿಕೊಂಡು ಸಾಧಕರಾಗಿ ತಮ್ಮ ಬದುಕು ರೂಪಿಸಿಕೊಳ್ಳಿ ಎಂದರು.

ಈ ವೇಳೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸನತ ಜಾರಕಿಹೊಳಿ, ಪ್ರಾಚಾರ್ಯ ಎಚ್. ಎಸ್.ಅಡಿಬಟ್ಟಿ, ಉಪನ್ಯಾಸಕರಾದ ಪಿ.ಡಿ. ಪಾಂಚಾಳ, ಆರ್.ಎಸ್.ಕರಿಗಾರ, ವಿದ್ಯಾರ್ಥಿ ಪ್ರತಿನಿಧಿಗಳಾದ ಸುಫಿಯಾನ ಪೀರಜಾದೆ, ಸಮೀಕಾ ಗುಡದಪ್ಪಗೋಳ ಇದ್ದರು.



ಅಡಿವೆಪ್ಪ ಹೊಸಮನಿ ನೇಮಕ



• **ಚೆನ್ನಮ್ಮನ ಕಿತ್ತೂರು:** ಇಲ್ಲಿಗೆ ಸಮೀಪದ ಮತ್ತಿಕೊಪ್ಪ ಗ್ರಾಮದ ಪಿಕೆಪಿಎಸ್ ಉಪಾಧ್ಯಕ್ಷ, ಬಿಜೆಪಿ ನಾಯಕರಾದ ಅಡಿವೆಪ್ಪ ಹೊಸಮನಿ ಅವರನ್ನು ಕಿತ್ತೂರು ಮಂಡಲ ಬಿಜೆಪಿ ರೈತ ಮೋರ್ಚಾ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. ಮಾಜಿ ಶಾಸಕ, ಬಿಡಿಸಿಸಿ ಬ್ಯಾಂಕ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ ಹಾಗೂ ಬಿಜೆಪಿ ಜಿಲ್ಲಾ ಅಧ್ಯಕ್ಷ ಸುಭಾಷ ಪಾಟೀಲ, ಹಾಗೂ ಪಕ್ಷದ ವರಿಷ್ಠರ ಸೂಚನೆಯ ಮೇರೆಗೆ ಅಡಿವೆಪ್ಪ ಹೊಸಮನಿ ಅವರನ್ನು ಕಿತ್ತೂರು ಬಿಜೆಪಿ ಮಂಡಲದ ರೈತ ಮೋರ್ಚಾ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದೆ ಎಂದು ಕಿತ್ತೂರು ಮಂಡಲ ಬಿಜೆಪಿ ಅಧ್ಯಕ್ಷರಾದ ಶ್ರೀಶೈಲ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀರಾಮಚಂದ್ರ, ಭಾರತೀಯ ಸಂಸ್ಕೃತಿಯ ಪ್ರತೀಕ

• **ಯರಗಟ್ಟಿ:** ಶ್ರೀ ರಾಮ ಚಂದ್ರ ಭಾರತೀಯ ಸಂಸ್ಕೃತಿಯ ಪ್ರತೀಕ. ಇಡೀ ಜಗತ್ತಿಗೆ ಆದರ್ಶ ಪುರುಷ ಎಂದು ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಹೇಳಿದರು.

ಸಮೀಪದ ಆಲದಕಟ್ಟಿ ಕೆ.ಎಂ ಗ್ರಾಮದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶ್ರೀ ಸೀತಾರಾಮ, ಲಕ್ಷ್ಮಣ, ಶ್ರೀ ಹನುಮಾನ ನೂತನ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ನೂತನ ಶ್ರೀ ರಾಮ ಮಂದಿರ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಶ್ರೀರಾಮ ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿ, ಸನಾತನ ಸಂಸ್ಕೃತಿಯ ಪ್ರತೀಕ, ಆದರ್ಶ ಬದುಕನ್ನು ಹೇಗೆ ನಡೆಸಬೇಕು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ವಿನಯ ಮೂರ್ತಿ ಎಂದರು.

ತಿಂದೋಗಿ ಗುರು ನಿತ್ಯಾನಂದ ಸತ್ಸಂಗ ಆಶ್ರಮದ ಮುಕ್ತಾನಂದ ಸ್ವಾಮೀಜಿ ಮಾತನಾಡಿ, ಭಕ್ತಿಯಿಂದ ದೇವರ ನಾಮ ಸ್ಮರಣೆ ಮಾಡಿದಾಗ ಮಾತ್ರ ದೇವರ ಕರುಣೆ ಸಾಧ್ಯ ಎಂದು ಹೇಳಿದರು.

ಸಮಾಜ ಸೇವಕ ಪಂಚನಗೌಡ ದ್ಯಾಮನಗೌಡರ, ಬಿಜೆಪಿ ಮುಖಂಡ ಮಡಿವಾಳಪ್ಪ ಬದರಗಡ್ಡಿ ಮಾತನಾಡಿ, ಇಂದಿನ ಯುವಕರು ತಂದೆ ತಾಯಿ ಗುರು ಹಿರಿಯರನ್ನು ಗೌರವಿಸಿ ಅವರ ಮಾರ್ಗದರ್ಶನದಲ್ಲಿ ಜೀವನ ರೂಪಿಸಿಕೊಂಡು ಮಾದರಿ ವ್ಯಕ್ತಿಗಳಾಗಿ ಎಂದರು.

ಇದಕ್ಕೂ ಮುಂಚೆ ಬೆಳಿಗ್ಗೆ ಗಣಪತಿ ಹೋಮ, ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ ಹಾಗೂ ವಸ್ತ್ರಾಲಂಕಾರ ಸೇವೆ ನಡೆಯಿತು. ಅನ್ನಸಂತರ್ಪಣೆ ನಡೆಯಿತು.

ಹಣ್ಣಿಕೇರಿ ಸಿದ್ಧ ಶಿವಬಸವ ಮಠದ ಶರಣಮ್ಮ ತಾಯಿ, ಮಳ್ಳಿಕೇರಿ ರಾಮ ಮಂದಿರ ಕನ್ನಯ್ಯ ದಾಸ್ಮೋಚೀದಾಸ ಪ್ರಭುಜೀ, ರಾಮ ಮಂದಿರ ಸೇವಾ ಸಮಿತಿ ಅಧ್ಯಕ್ಷ ಫಕೀರಪ್ಪ ದಾಗನಾಯ್ಕರ ಅಧ್ಯಕ್ಷತೆ ವಹಿಸಿದ್ದರು, ಮುಖಂಡ ಶ್ರೇಯಸ ಮಾಮನಿ, ಪುಂಡಲೀಕ ಮೇಟಿ, ಸೋಮಲಿಂಗಪ್ಪ ಮುಗಳಿ, ನಿವೃತ್ತ ಶಿಕ್ಷಕ ಭರಮಪ್ಪ ಜಗಮೈನವರ, ಮೃತ್ಯುಂಜಯ ಹೊಂಗಲ, ಚಂದ್ರಯ್ಯ ಹಿರೇಮಠ, ಸಣಗೌಡ ಸಣಗೌಡ್ರ, ಮಹಾಂತೇಶ ಗೌಡರ, ಸೋಮಲಿಂಗಪ್ಪ ಚವಡಪ್ಪನವರ, ಫಕೀರಪ್ಪ ಸಣ್ಣಗೌಡರ, ಬಸವರಾಜ ಕುರಗುಂದ, ಭೀಮಪ್ಪ ಸತ್ಯನಾಯ್ಕರ, ಶಿವನಾಯ್ಕ ಸತ್ಯನಾಯ್ಕರ, ವಿಠ್ಠಲ ಹಲಗಲಿ, ಅಜ್ಜಪ್ಪ ನಾಯ್ಕರ, ಬಸಲಿಂಗಪ್ಪ ಚವಡಪ್ಪನವರ, ಬಸಪ್ಪ ಚವಡಪ್ಪನವರ, ಬಸವರಾಜ ಹಳೇಮನಿ, ಸಂಗ್ರಾಮ ಗೌಡರ ಮತ್ತಿತರಿದ್ದರು.



7ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



• **ಕಕಮರಿ:** ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವವಾಗಿದೆ ಎಂದು ಮುಖ್ಯೋಪಾಧ್ಯಾಯ ಬಿ.ವಿ.ಅಕ್ಕಿ ಹೇಳಿದರು.

ಅವರು ಬುಧವಾರ ಗ್ರಾಮದ ಶ್ರೀ ಅಮ್ಮಾಜೇಶ್ವರಿ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ನೀಡುವ ಮೂಲಕ ಮುಂದಿನ ಶೈಕ್ಷಣಿಕ ಕ್ಷೇತ್ರದಲ್ಲಿ ಉಪಯೋಗವಾಗುತ್ತದೆ. ಪಾಲಕರು ವಿದ್ಯಾರ್ಥಿಗಳಿಗೆ ಶಿಕ್ಷಣದ ಜತೆಗೆ ಸಂಸ್ಕಾರ ನೀಡುವುದು ಮುಖ್ಯವಾಗಿದೆ ಎಂದರು.

ಶಿಕ್ಷಕ ಕಲ್ಲೇಶ ಕನ್ನಾಳ ಮಾತನಾಡಿದರು.

ಶಿಕ್ಷಕ ಪ್ರಕಾಶ ದಾನಪ್ಪಗೋಳ, ಶಿಕ್ಷಕಿಯರಾದ ಸಾವಿತ್ರಿ ವಾಲಿ, ಕಲಾವತಿ ಹುನ್ನೂರ, ಐಶ್ವರ್ಯ ಜನಗೌಡ, ಪಿ.ಒ.ನೇಮಗೌಡ, ಭುವನೇಶ್ವರಿ ಹಳಮನಿ, ಗೌರಿ ಹಾಲಳ್ಳಿ, ಇತರರಿದ್ದರು. ಶಿಕ್ಷಕ ಪ್ರಕಾಶ ದಾನಪ್ಪಗೋಳ ಸ್ವಾಗತಿಸಿ ನಿರೂಪಿಸಿದರು.

ಗುಡುಗು ಸಹಿತ ಮಳೆ ಎಚ್ಚರಿಕೆ

• **ಬೆಳಗಾವಿ:** ಜಿಲ್ಲೆಯಲ್ಲಿ ಮುಂದಿನ ಏಳು ದಿನಗಳವರೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದ್ದು, ಮಿಂಚು-ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಹೆಚ್ಚಾಗಿದೆ ಎಂದು ತಿಳಿಸಲಾಗಿದೆ.

ನಾಗರಿಕರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ವಿಶೇಷವಾಗಿ, ಮಿಂಚಿನ ಸಮಯದಲ್ಲಿ ತೆರೆಯಾದ ಪ್ರದೇಶಗಳಲ್ಲಿ ನಿಲ್ಲದೇ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು. ದುರ್ಬಲ ಕಟ್ಟಡಗಳು, ಹಳೆಯ ಮರಗಳು ಮತ್ತು ವಿದ್ಯುತ್ ತಂತಿಗಳಿಂದ ದೂರವಿರುವಂತೆ ಸೂಚಿಸಲಾಗಿದೆ.

ಕೃಷಿಕರು ತಮ್ಮ ಬೆಳೆಗಳ ರಕ್ಷಣೆಗಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಹವಾಮಾನ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ನೇತ್ರ ಆರೋಗ್ಯ ದಿನಾಚರಣೆ

• **ಯಮಕನಮರಡಿ:** ಸಮೀಪದ ಹತ್ತರಗಿ ಗ್ರಾಮದಲ್ಲಿ ಫ್ಲೋರ್ ಸ್ಟೆಟ್ ಫೌಂಡೇಶನ್ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆಯ ಸಹಯೋಗದಲ್ಲಿ ನಡೆಯುತ್ತಿರುವ ಅಭಯ ಆರೋಗ್ಯ ಶಿಬಿರದಲ್ಲಿ ನೇತ್ರ ತಜ್ಞರ ದಿನಾಚರಣೆ ಅಂಗವಾಗಿ ನೇತ್ರ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮ ನಡೆಯಿತು. ಅಭಯ ಯೋಜನೆ ಮ್ಯಾನೇಜರ್ ಯೋಗೇಶ್ ಜೋಶಿ ಮಾತನಾಡಿ, ಕಣ್ಣುಗಳ ಆರೈಕೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯ ಎಂದು ಹೇಳಿದರು. ನಿಯಮಿತವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳುವುದರಿಂದ ಅನೇಕ ಸಮಸ್ಯೆಗಳನ್ನು ಆರಂಭದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ಪಡೆಯಬಹುದು ಎಂದು ತಿಳಿಸಿದರು. ಸಂಯೋಜಕಿ ಸುರೇಖಾ ಪಾಟೀಲ, ನೇತ್ರ ತಜ್ಞರಾದ ಡಾ. ಸತೀಶ್ ಬಿ.ಡಿ., ಡಾ. ಪುಟ್ಟಂಜಯ್ಯ ಹಿರೇಮಠ, ಡಾ. ಐಶ್ವರ್ಯ ಕೆ. ಮಾಳಗಿ, ಡಾ. ವಿನಾಯಕ ವಿ. ಚಾವಡಿ ಹಾಗೂ ಡಾ. ಪ್ರತೀಕ್ ಎಸ್. ಹೊನಮನೆ ಉಪಸ್ಥಿತರಿದ್ದರು.



ನೂತನ ಎಂಎಸ್‌ಎಂಇ ನೀತಿ ಸಲಹೆ ಅನುಸಾರ ವರದಿ ಸಲ್ಲಿಸಲು ನಿರ್ಧಾರ

• **ಬೆಳಗಾವಿ:** ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಕರ್ನಾಟಕ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ನೀತಿ ಹಿನ್ನೆಲೆಯಲ್ಲಿ ಬೆಳಗಾವಿಯಲ್ಲಿ ಪಾಲುದಾರರೊಂದಿಗೆ ಸಮಾಲೋಚನೆ ನಡೆಯಿತು.

ಜಿಲ್ಲಾ ಕೈಗಾರಿಕೆ ಕೇಂದ್ರ ಹಾಗೂ ಬೆಳಗಾವಿ ವಾಣಿಜ್ಯೋದ್ಯಮ ಸಂಘಗಳ ಸಹಯೋಗದಲ್ಲಿ ಫೌಂಡ್ರಿ ಕ್ಲಸ್ಟರ್ ಸಭಾಂಗಣದಲ್ಲಿ ನಡೆದ ವಿಭಾಗಮಟ್ಟದ ಸಮಾವೇಶದಲ್ಲಿ ವಿವಿಧ ತಜ್ಞರು ವಿಷಯಗಳನ್ನು ಮಂಡಿಸಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕ ಡಾ.ಸತೀಶ ಬಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಎಲ್ಲ ಕಡೆ ಪಾಲುದಾರರ ಸಮಾವೇಶ ನಡೆಸಿ, ಸಲಹೆ ಪಡೆದು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಚರ್ಚೆಯ ನಂತರ ಸರಕಾರ ನೂತನ ಪಾಲಿಸಿ ಜಾರಿಗೆ ತರಲಿದೆ ಎಂದರು. ಬೆಳಗಾವಿ ವಿಭಾಗದ ವಿವಿಧ ಜಿಲ್ಲೆಗಳಿಂದ ಕೈಗಾರಿಕೋದ್ಯಮಿಗಳು ಆಗಮಿಸಿದ್ದರು.



ಹುಬ್ಬಳ್ಳಿಯ ಎಂಎಸ್‌ಎಂಇ ಜೆಡಿ ಸತೀಶ್ ಕುಮಾರ, ಫೌಂಡ್ರಿ ಕ್ಲಸ್ಟರ್ ಚೇರಮನ್ ರಾಮ ಭಂಡಾರೆ, ಬೆಳಗಾವಿ ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಪ್ರಭಾಕರ ನಾಗರಮುನೋಳಿ, ಹುಬ್ಬಳ್ಳಿ ವಾಣಿಜ್ಯೋದ್ಯಮ ಸಂಘದ ಉಪಾಧ್ಯಕ್ಷ ಪ್ರವೀಣ ಅಗಡಿ, ವಿಜಯಪುರ ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಪೀಟರ್ ಅಲೆಕ್ಸಾಂಡರ್, ಲಘು ಉದ್ಯೋಗ ಭಾರತಿ ರಾಷ್ಟ್ರೀಯ ಉಪಾಧ್ಯಕ್ಷ ಸಚಿನ್ ಸಬ್ನಿಸ್, ಬೆಳಗಾವಿ ಕಾರ್ಯದರ್ಶಿ ಪ್ರಶಾಂತ ಪಾಟೀಲ, ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಸತ್ಯನಾರಾಯಣ ಭಟ್ ಮೊದಲಾದವರು ಭಾಗವಹಿಸಿದ್ದರು.

ಮಹಿಳೆಯರ ಗೌರವ, ಹಕ್ಕು ಕಾಪಾಡಿ

• **ಕಕಮರಿ:** ಮಹಿಳಾ ದಿನಾಚರಣೆಯನ್ನು ಕೇವಲ ಒಂದು ದಿನದ ಸಂಭ್ರಮಕ್ಕೆ ಸೀಮಿತಗೊಳಿಸದೇ ಪ್ರತಿ ದಿನವೂ ಮಹಿಳೆಯರ ಗೌರವ ಮತ್ತು ಹಕ್ಕುಗಳನ್ನು ಕಾಪಾಡಬೇಕು ಎಂದು ಪ್ರಾಚಾರ್ಯ ಶಿವಗುರು ಬಸರಗಿ ಹೇಳಿದರು.

ಅವರು ಗುರುವಾರ ಸ್ಥಳೀಯ ಮಾತೋಶ್ರೀ ನೀಲಮ್ಮಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾಜ ಎಂಬ ರಥಕ್ಕೆ ಮಹಿಳೆ ಮತ್ತು ಪುರುಷರು ಎರಡು ಗಾಲಿಗಳಂತೆ. ಒಂದು ಗಾಲಿ ಕುಂಠಿತವಾದರೂ ಸಮಾಜ ಹಾಗೂ ದೇಶದ ಪ್ರಗತಿ ಸಾಧ್ಯವಾಗುವುದಿಲ್ಲ, ಆದ್ದರಿಂದ ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣ ನೀಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಅತ್ಯಗತ್ಯ ಎಂದರು.

ಉಪನ್ಯಾಸಕಿ ಎಸ್.ಬಿ.ಬಸರಗಿ ಮಾತನಾಡಿದರು.

ಮಾತೋಶ್ರೀ ನೀಲಮ್ಮಾವ ಸಾನ್ನಿಧ್ಯ ವಹಿಸಿದ್ದರು. ಉಪನ್ಯಾಸಕರಾದ ಕೆ.ಬಿ.ನಾವಿ, ಡಿ.ಎಚ್.ಕಾರಜೋಳ, ಬಿ.ಎಲ್.ಪೂಜಾರಿ, ಜಿ.ಆರ್. ಮುಷ್ಟಿಪ್ಪಗೋಳ, ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಶ್ವೇತಾ ಕನಮಡಿ ಸ್ವಾಗತಿಸಿ ನಿರೂಪಿಸಿದರು, ವಿದ್ಯಾರ್ಥಿನಿ ಅನುಸೂಯಾ ಬಾಳಿಕಾಯಿ ವಂದಿಸಿದರು.



ಎನ್‌ಎಸ್‌ಎಸ್ ಶಿಬಿರಕ್ಕೆ ಚಾಲನೆ



• **ಯಮಕನಮರಡಿ:** ದೇಶದ ಪ್ರಗತಿಗಾಗಿಯುವಜನರು ವಿದ್ಯಾರ್ಥಿ ದೆಸೆಯಲ್ಲಿಯೇ ಸಮಾಜಮುಖಿ ಕಾರ್ಯಮಾಡುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಡಾ.ವಿ.ಎಸ್ ಹೂಗಾರ ಹೇಳಿದರು. ಮೈ ಭಾರತ ಕೇಂದ್ರ ಬೆಳಗಾವಿ, ಆಶಾದೀಪ ಸಮುದಾಯ ಕಲಾಕೇಂದ್ರ ಹಾಗೂ ಸ್ನೇಹ ಚೇತನ ಕಲಾಪ್ರೇರಣೆ ಸಮುದಾಯ ಸೇವಾ ಬಳಗ ಬೆಡಕಿಹಾಳ ಹಾಗೂ ಎನ್ ಎಸ್‌ಎಸ್ ಘಟಕ ಸಂಯುಕ್ತಾಶ್ರಯದಲ್ಲಿ ಝುಂಗಟಿಹಾಳ ಗ್ರಾಮದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಮಾತನಾಡಿದರು. ಎನ್‌ಎಸ್‌ಎಸ್ ಅಧಿಕಾರಿಗಳಾದ ಆರ್ ಎಸ್ ಹುದ್ದಾರ ಮಾತನಾಡಿ, ಭಗತ ಸಿಂಗ, ರಾಜಗುರು, ಸುಖದೇವ ಅವರು ದೇಶಕ್ಕಾಗಿ ಹೋರಾಡಿ ಪ್ರಾಣತ್ಯಾಗಮಾಡಿದವರು ಅವರ ಪ್ರೇರಣೆ ಇಂದಿನ ಯುವ ಜನರಲ್ಲಿ ದೇಶ ಭಕ್ತಿ ಇರಬೇಕು ಎಂದರು. ಗ್ರಾಪಂ ಕಾರ್ಯದರ್ಶಿ ನಾಶಿರಖಾನ ಪಠಾಣ, ಕಲಾವಿದ ಪ್ರಕಾಶ ಬನಮುಟ್ಟಿ ಹಾಗೂ ಸ್ಥಳೀಯ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು. ಶಿಲ್ಪಾ ಗೋಲಭಾಂವಿ ನಿರೂಪಿಸಿದರು. ಲಕ್ಷ್ಮಣ ಯಡ್ರಾಂವಿ ಸ್ವಾಗತಿಸಿ ವಂದಿಸಿದರು.

ರಕ್ತದಾನ ಶಿಬಿರಕ್ಕೆ ಚಾಲನೆ

• **ಗೋಕಾಕ:** ಮಾ.30ರಂದು ನಡೆಯಲಿರುವ ಭಗವಾನ್ ಶ್ರೀ 1008 ಮಹಾವೀರ ತೀರ್ಥಂಕರರ ಜನ್ಮ ಕಲ್ಯಾಣಕ ಮಹೋತ್ಸವ ನಿಮಿತ್ತ ದಿಗಂಬರ ಜೈನ್ ಸಮಾಜ ಗೋಕಾಕ್ ಅವರ ವತಿಯಿಂದ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ತಾಲೂಕ ದಂಡಾಧಿಕಾರಿ ಡಾ.ಮೋಹನ ಭಸ್ಮೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜೈನ್ ಸಮಾಜದ ಅಧ್ಯಕ್ಷ ಶೀತಲ್ ದೊಂಗರೆ, ಪ್ರಮೋದ್ ಅಂಗಡಿ, ಶಾಂತು ಹರದಿ, ಧನ್ಯಕುಮಾರ್ ಕಿತ್ತೂರ್, ಮಹಾವೀರ್ ಖಾರೇಪಾಠನ, ಪ್ರದೀಪ್ ಮೆಳವಂಕಿ, ಮಹಾವೀರ್ ಜೋಡಟ್ಟಿ, ಅಣ್ಣಾಸಾಬ್ ತಥಾಜ, ದಶರಥ ಪರಪ್ಪನವರ್, ವರ್ಧಮಾನ್ ಬೆಸ್ತಾಡಿ, ರೋಟರಿ ಸಂಸ್ಥೆಯ ಸೋಮಶೇಖರ್ ಮಗದುಮ್, ಮಹಾವೀರ್ ಕಲಾಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.



ಕಿರುಸುದ್ದಿ

ಪ್ರಕಾಶ ಸುಳೇಭಾವಿಗೆ ಪಿಎಚ್‌ಡಿ ಪ್ರದಾನ



•**ಬೆಳಗಾವಿ:** ಬೆಳಗಾವಿಯ ಸಂಶೋಧನಾ ವಿದ್ಯಾರ್ಥಿ ಪ್ರಕಾಶ ಸುಳೇಭಾವಿ ಭೂಗೋಳಶಾಸ್ತ್ರ ವಿಷಯದಲ್ಲಿ ಮಂಡಿಸಿದ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪ್ರದಾನ ಮಾಡಲಾಗಿದೆ.

ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಭೂಗೋಳಶಾಸ್ತ್ರ ವಿಷಯದಲ್ಲಿ ಎ ಸ್ಪೇಶಲ್ ಅನಾಲಿಸಿಸ್ ಆಫ್ ಗ್ರೌಂಡ ವಾಟರ ಕ್ವಾಲಿಟಿ ಅಂಡ ಇಟ್ಸ್ ಇಂಪ್ಯಾಕ್ಟ್ ಆನ್ ಹ್ಯೂಮನ್ ಹೆಲ್ತ್: ಎ ಕೇಸ್ ಸ್ಟಡಿ ಆಫ್ ಮುಂಡರಗಿ ತಾಲೂಕ್ ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ ಸಲ್ಲಿಸಿದ ಮಹಾಪ್ರಬಂಧಕ್ಕೆ ಪಿಎಚ್.ಡಿ ಪ್ರದಾನ ಮಾಡಲಾಗಿದೆ. ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಂಜುನಾಥ ಎನ್.ಕೆ. ಮಾರ್ಗದರ್ಶನ ಮಾಡಿದ್ದಾರೆ.

ಏ.4ರಂದು ವೃತ್ತಿಮೇಳ ಆಯೋಜನೆ



•**ಚಿಕ್ಕೋಡಿ:** ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ವತಿಯಿಂದ ಸ್ಥಾಪಿತ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕದ ಅಡಿಯಲ್ಲಿ ಪಟ್ಟಣದ ಹೊರವಲಯದ ಜಿಟಿಟಿಸಿ ಕೇಂದ್ರ (ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ) ಆವರಣದಲ್ಲಿ ಏ.4ರಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವೃತ್ತಿಮೇಳ ಆಯೋಜಿಸಲಾಗಿದೆ ಎಂದು ಡಯಟ್ ಪ್ರಾಚಾರ್ಯ ಸಂಜು ಹುಲ್ಲೋಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೃತ್ತಿ ಮೇಳದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ನಂತರ ಲಭ್ಯವಿರುವ ವಿವಿಧ ವಿದ್ಯಾಭ್ಯಾಸ ಮಾರ್ಗಗಳ ಪರಿಚಯ, ಪಿಯುಸಿ, ಐಟಿಐ, ಡಿಪ್ಲೋಮಾ, ಬಿ.ಇ, ಮೆಡಿಕಲ್ ಮುಂತಾದ ಕ್ಷೇತ್ರಗಳ ಕುರಿತು ಮಾರ್ಗದರ್ಶನ, ವಿವಿಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳ ಲಭ್ಯತೆ, ಪೋಷಕರು ಹಾಗೂ ವಿದ್ಯಾರ್ಥಿಗಳಿಗಾಗಿ ಸಂವಾದ ಕಾರ್ಯಕ್ರಮಗಳನ್ನು ನುರಿತ ತಜ್ಞರಿಂದ ಹಮ್ಮಿಕೊಳ್ಳಲಾಗಿದೆ. 9ನೇ ತರಗತಿಯಿಂದ 12ನೇ ತರಗತಿಯ ವಿದ್ಯಾರ್ಥಿಗಳು ವೃತ್ತಿಮೇಳದಲ್ಲಿ ಭಾಗವಹಿಸಿ ಲಾಭ ಪಡೆದುಕೊಳ್ಳಬೇಕೆಂದು ತಿಳಿಸಿದ್ದಾರೆ.

ಸ್ಕೈಕ್ಲಿಂಗ್ ಸ್ಪರ್ಧೆಗೆ ಅರ್ಹತೆ



•**ಮೂಡಲಗಿ:** ಇದೇ ಮಾ.24 ರಂದು ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್. ಬಿ. ಆರ್ಟ್ಸ್ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜರುಗಿದ ರಾ.ಚ.ವಿ.ಯ ಮಹಿಳಾ ಸೈಕ್ಲಿಂಗ್ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ, ವಾಣಿಜ್ಯ ಹಾಗೂ ಬಿಸಿಎ ಮಹಾವಿದ್ಯಾಲಯದ ಬಿಎ ದ್ವಿತೀಯ ಸೆಮಿಸ್ಟರ್‌ನ ಪೂಜಾ ಮಳಿವತಿ ಮಹಾವಿದ್ಯಾಲಯದ ವತಿಯಿಂದ ಸ್ಪರ್ಧಿಸಿ ರಾ.ಚ.ವಿ ತಂಡಕ್ಕೆ ಆಯ್ಕೆಯಾಗಿದ್ದಾಳೆ. 2026 ರ ಎಪ್ರಿಲ್ 15 ರಿಂದ 18 ರವರೆಗೆ ಮಹಾರಾಷ್ಟ್ರದ ಔರಂಗಾಬಾದ ವಿಶ್ವವಿದ್ಯಾಲಯದಲ್ಲಿ ಜರುಗಲಿರುವ ಅಖಿಲ್ ಭಾರತ ಅಂತರ ವಿಶ್ವವಿದ್ಯಾಲಯ ಸೈಕ್ಲಿಂಗ್ ಸ್ಪರ್ಧೆಗೆ ಅರ್ಹತೆಯನ್ನು ಪಡೆದುಕೊಂಡಿದ್ದಾಳೆ. ಕ್ರೀಡಾಪಟುವಿನ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಆರ್.ಸೋನವಾಲ್ಕರ, ಉಪಾಧ್ಯಕ್ಷ ಆರ್. ಪಿ. ಸೋನವಾಲ್ಕರ, ಆಡಳಿತ ಮಂಡಳಿಯ ನಿರ್ದೇಶಕರು, ಆಡಳಿತಾಧಿಕಾರಿಗಳಾದ ಡಾ.ಎಸ್. ಎಲ್. ಚಿತ್ರಗಾರ, ಮಹಾವಿದ್ಯಾಲಯದ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿ ವೃಂದದವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಚರ್ಚೆಗೆ ಗ್ರಾಸವಾದ 'ಫಾಲೋವರ್' ಚಿತ್ರ

•**ಬೆಳಗಾವಿ:** ಬೆಳಗಾವಿಯ ಗಡಿ ವಿವಾದದ ಹಿನ್ನೆಲೆಯಲ್ಲಿ ನಿರ್ಮಾಣವಾಗಿರುವ ಫಾಲೋವರ್ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ದ್ವೇಷ ಮತ್ತು ಅದರ ಪರಿಣಾಮಗಳ ಕುರಿತು ಜಿಲ್ಲಾದ್ಯಂತ ಅಷ್ಟೇ ಅಲ್ಲದೆ, ಪಕ್ಕದ ರಾಜ್ಯದಲ್ಲಿಯೂ ಚರ್ಚೆಗೆ ಗ್ರಾಸವಾಗಿದೆ.

ಈ ಚಿತ್ರವು ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರದರ್ಶನಗೊಂಡಿದ್ದು, ನಿರ್ದೇಶಕ ಹರ್ಷದ್ ನಲವಡೆ ಅವರು ಇದು ತಮ್ಮ ಸ್ನೇಹಿತರ ನೈಜ ಕಥೆಯನ್ನು ಆಧರಿಸಿದೆ ಎಂದು ತಿಳಿಸಿದ್ದಾರೆ. ಚಿತ್ರವು ಬೆಳಗಾವಿ ಕನ್ನಡ-ಮರಾಠಿ ಗಡಿ ವಿವಾದದ ಸಾಮಾಜಿಕ ಮತ್ತು ಮಾನಸಿಕ ಪರಿಣಾಮಗಳನ್ನು ತೆರೆದಿಡುತ್ತದೆ. ಪ್ರಸ್ತುತ ಈ ಚಿತ್ರ ಎಂಎಕ್ಸ್‌ಪ್ಲೇಯರ್ ಒಟಿಟಿ ವೇದಿಕೆಯಲ್ಲಿ ವೀಕ್ಷಣೆಗೆ ಲಭ್ಯವಿದೆ.

ಈ ಚಿತ್ರವು ಎರಡು ರಾಜ್ಯಗಳ ನಡುವೆ ಮತ್ತೆ ಕನ್ನಡ-ಮರಾಠಿ ಭಾಷೆಗಳ ನಡುವೆ ಕಿಚ್ಚು ಹಚ್ಚುತ್ತದೆಯೋ ಅಥವಾ ಕನ್ನಡ-ಮರಾಠಿ ಭಾಷಿಕರನ್ನು ಒಂದು ಮಾಡುತ್ತದೆಯೋ ಎಂದು ಸಾರ್ವಜನಿಕರಿಗೆ ದೊಡ್ಡ ಪ್ರಶ್ನೆ ಕಾಡುತ್ತಿದೆ.



ರಾಯಬಾಗ: ವಿ. ಎಲ್ ಪಾಟೀಲ್ ಅಬಾಜಿ 104ನೇ ಜನ್ಮದಿನದ ಜಯಂತಿಯನ್ನು ಅಬಾಜಿ ಫೌಂಡೇಶನ್ ಅಧ್ಯಕ್ಷರಾದ ಪ್ರಣಯ ಪಾಟೀಲ್‌ರ ನೇತೃತ್ವದಲ್ಲಿ ಪಟ್ಟಣದ ಅಬಾಜಿ ಸರ್ಕಲ್ ನಲ್ಲಿ ಪೂಜೆ ಮಾಡಿ ಆಚರಿಸಲಾಯಿತು.

ಬೈಲಹೊಂಗಲದಲ್ಲಿ ಶ್ರದ್ಧಾ ಭಕ್ತಿಯ ಶ್ರೀರಾಮೋತ್ಸವ

•**ಬೈಲಹೊಂಗಲ:** ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳ ವತಿಯಿಂದ ಗುರುವಾರ ಶ್ರೀರಾಮೋತ್ಸವವನ್ನು ಭಕ್ತಿ-ಶ್ರದ್ಧೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ವಿಶ್ವಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ ಅವರು ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾತನಾಡಿದರು.

ಶ್ರೀರಾಮನು ಧರ್ಮಸ್ಥಾಪನೆಗಾಗಿ ಅವತಾರ ತಾಳಿದ ಮಹಾನ್ ವ್ಯಕ್ತಿ. ರಾಮರಾಜ್ಯದ ಆಡಳಿತ ಮಾದರಿಯನ್ನು ಇಂದಿನ ಸಮಾಜ ಅನುಸರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಶೀನಾಥ ಬಿರಾದಾರ, ಶಿವಾನಂದ ಬಡ್ಡಿಮನಿ, ಅಶೋಕ ಸವದತ್ತಿ, ವಿವೇಕಾನಂದ ಪೂಜಾರ, ದಯಾನಂದ ಗೆಜ್ಜಿ, ಗಿರೀಶ ಹರಕುಣಿ, ಗೌತಮ ಇಂಚಲ, ಬಸವರಾಜ ಜನ್ಮಟ್ಟಿ, ವಿರೂಪಾಕ್ಷ ವಾಲಿ, ಚೆನ್ನಪ್ಪ ಹಾದಿಮನಿ, ಡಾ. ಸಾಗರ ಕುಲಕರ್ಣಿ, ಮಲ್ಲಿಕಾರ್ಜುನ ಎಣಗಿಮಠ, ಸೋಮನಾಥ ಸೊಪ್ಪಿಮಠ, ಬಸವರಾಜ ಬಡಿಗೇರ, ವಿಜಯ ಪತ್ತಾರ, ಅನುಪ ಇಂಚಲ, ಲಾಲಚಂದ ಗೋಗಡ, ಶಿವಾನಂದ ಕುಡಸೋಮಣ್ಣವರ, ಮೀನಾಕ್ಷಿ ಕುಡಸೋಮಣ್ಣವರ, ಜಯಶ್ರೀ ಮತ್ತಿಕೊಪ್ಪ, ವಾಣಿ ಪತ್ತಾರ, ಕೃಷ್ಣ ಭಸ್ಮೆ, ಚಂದ್ರು ಗೌಡರ, ಸಂಗಮೇಶ ಸವದತ್ತಿಮಠ, ಮಾಜಿ ಸೈನಿಕರು, ವಿಶ್ವ ಹಿಂದೂ ಪರಿಷತ್, ಬಜರಂಗದಳದ ಕಾರ್ಯಕರ್ತರು ಇದ್ದರು.

ಮೃತ್ಯುಂಜಯ ಸ್ವಾಮೀಜಿ ಅವರು ಪೂಜಾ ವಿಧಿ ವಿಧಾನ ನೆರವೇರಿಸಿದರು. ವಿಶ್ವಹಿಂದೂ ಪರಿಷತ್ ಹಾಗೂ ಬಜರಂಗದಳ ಕಾರ್ಯಕರ್ತರು ಇದಕ್ಕೂ ಮೊದಲು ದೊಡ್ಡ ಕೆರೆ ಹತ್ತಿರದ ಶ್ರೀರಾಮ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬೈಕ್ ರ್‍ಯಾಲಿ ಮೂಲಕ ರಾಯಣ್ಣ ವೃತ್ತಕ್ಕೆ ಆಗಮಿಸಿದರು.



ಬೈಲಹೊಂಗಲ: ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳ ವತಿಯಿಂದ ಗುರುವಾರ ಶ್ರೀರಾಮೋತ್ಸವವನ್ನು ಭಕ್ತಿ-ಶ್ರದ್ಧೆಯಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿಶ್ವಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ ಅವರು ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾತನಾಡಿದರು.

ಪಾಲಿಕೆಯ ಇತಿಹಾಸ ಮರುಕಳಿಸಲು ಕನ್ನಡಿಗರ ಸಿದ್ಧತೆ

ಬೆಳಗಾವಿ ಎಂದಿಗೂ ನಮ್ಮದೇ: ಮಹಾ ನಿರ್ಣಯಕ್ಕೆ ವಿರೋಧ

•**ಬೆಳಗಾವಿ :** ಮಹಾನಗರ ಪಾಲಿಕೆಯಲ್ಲಿ ಈಗ ಕನ್ನಡಿಗರ ಪಾರುಪತ್ಯವಿದ್ದು, ಗಡಿ ವಿವಾದಕ್ಕೆ ಸಂಬಂಧಿಸಿದಂತೆ ದಶಕಗಳ ಹಿಂದಿನ ಕಪ್ಪು ಚುಕ್ಕೆಯನ್ನು ಅಳಿಸಿಹಾಕಲು ಕಾಲ ಪಕ್ವವಾಗಿದೆ. 2005ರಲ್ಲಿ ಎಂಇಎಸ್ ಮಂಡಿಸಿದ್ದ ಮಹಾರಾಷ್ಟ್ರ ಪರ ನಿರ್ಣಯವನ್ನು ರದ್ದುಗೊಳಿಸಿ, 'ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ' ಎಂಬ ಹೊಸ ನಿರ್ಣಯ ಅಂಗೀಕರಿಸುವಂತೆ ಕನ್ನಡ ಸಂಘಟನೆಗಳು ಮಹಾಪೌರರಿಗೆ ಮನವಿ ಮಾಡಿವೆ.



ಬೆಳಗಾವಿ ಮಹಾನಗರ ಪಾಲಿಕೆಯ ನೂತನ ಮಹಾಪೌರರು ಮತ್ತು ಉಪ ಮಹಾಪೌರರನ್ನು ಭೇಟಿಯಾದ ಕನ್ನಡ ಸಂಘಟನೆಗಳ ಕ್ರಿಯಾಶೀಲ ಸಮಿತಿಯು ಗಡಿ ವಿಷಯದಲ್ಲಿ ಮಹತ್ವದ ಚರ್ಚೆ ನಡೆಸಿದೆ. 1967ರ ಮಹಾಜನ್ ವರದಿಯಂತೆ ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದರೂ, ಮಹಾರಾಷ್ಟ್ರ ಬೆಂಬಲಿತ ಸಂಘಟನೆಗಳು ಸುಪ್ರೀಂ ಕೋರ್ಟ್‌ನಲ್ಲಿ ಪದೇಪದೇ ವಿವಾದ ಕೆದಕುತ್ತಿವೆ. ವಿಶೇಷವಾಗಿ 2005ರಲ್ಲಿ ಎಂಇಎಸ್ ಅಧಿಕಾರದಲ್ಲಿದ್ದಾಗ ಬೆಳಗಾವಿ ಸೇರಿದಂತೆ ಹಲವು ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಪಾಲಿಕೆಯಲ್ಲಿ ಕಾನೂನುಬಾಹಿರ ನಿರ್ಣಯ ಪಾಸ್ ಮಾಡಲಾಗಿತ್ತು. ಈ ನಿರ್ಣಯವನ್ನು ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟನಲ್ಲಿ ಸಾಕ್ಷಿಯಾಗಿ ಬಳಸಿಕೊಳ್ಳುತ್ತಿರುವುದು ಕರ್ನಾಟಕದ ಹಿತಾಸಕ್ತಿಗೆ ಮಾರಕವಾಗಿದೆ ಎಂದು ಸಮಿತಿ ಕಳವಳ ವ್ಯಕ್ತಪಡಿಸಿದೆ.

ಸದ್ಯ ಬೆಳಗಾವಿ ಪಾಲಿಕೆಯಲ್ಲಿ ಕನ್ನಡ ಪರ ಸದಸ್ಯರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದು, ಇದೊಂದು ಸುವರ್ಣ ಅವಕಾಶವಾಗಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ತಕ್ಷಣವೇ ವಿಶೇಷ ಸರ್ವಸಾಧಾರಣ ಸಭೆಯನ್ನು ಕರೆದು, ಕರ್ನಾಟಕ ವಿಧಾನ ಮಂಡಲವು ಅಂಗೀಕರಿಸಿರುವ ಮಾದರಿಯಲ್ಲೇ ಮಹಾಜನ್ ವರದಿಯೇ ಅಂತಿಮ ಮತ್ತು ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ನಿರ್ಣಯವನ್ನು ಪಕ್ಷಾತೀತವಾಗಿ ಅಂಗೀಕರಿಸಬೇಕು ಎಂದು ಒತ್ತಾಯಿಸಲಾಗಿದೆ.

ಈ ಮೂಲಕ ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕದ ಪರವಾಗಿ ಬಲವಾದ ದಾಖಲೆಯನ್ನು ಒದಗಿಸಲು ಸಾಧ್ಯವಾಗುತ್ತದೆ ಎಂದು ಸಂಘಟನೆಗಳು ಮಹಾಪೌರರ ಗಮನಕ್ಕೆ ತಂದಿವೆ.

ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಕ್ರಿಯಾಶೀಲ ಸಮಿತಿಯ ಅಧ್ಯಕ್ಷ ಅಶೋಕ್ ಚಂದರಗಿ ಅವರು, ಹಳೆಯ ತಪ್ಪುಗಳನ್ನು ಸರಿಪಡಿಸುವ ಕಾಲ ಬಂದಿದೆ. 2005ರ ನಿರ್ಣಯಕ್ಕೆ ಪ್ರತಿಯಾಗಿ ಈಗ ಕರ್ನಾಟಕದ ಪರ ನಿರ್ಣಯ ಪಾಸ್ ಮಾಡುವುದು ಅನಿವಾರ್ಯವಾಗಿದೆ, ಎಂದು ಹೇಳಿದರು. ಈ ಕೋರಿಕೆಗೆ ಮಹಾಪೌರರು ಮತ್ತು ಉಪ ಮಹಾಪೌರರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಶೀಘ್ರದಲ್ಲೇ ಈ ಕುರಿತು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು.

ಸಂಸ್ಕೃತಿ ಭಕ್ತಿಯ ಸಮಾಗಮಕ್ಕೆ ಬೈಲಹೊಂಗಲ ಸಾಕ್ಷಿ

•**ಬೈಲಹೊಂಗಲ:** ದುರ್ಗಾಪರಮೇಶ್ವರಿ ಅಮ್ಮನವರ ಜಾತ್ರಾ ಮಹೋತ್ಸವವು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ, ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಪ್ರತಿಬಿಂಬವಾಗಿದೆ ಎಂದು ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಹೇಳಿದರು.

ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ 17ನೇ ವರ್ಷದ ಜಾತ್ರಾ ಮಹೋತ್ಸವ

ನಗರದ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ 17ನೇ ವರ್ಷದ ಜಾತ್ರಾ ಮಹೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಡಾ. ಮಹಾಂತೇಶ ಶಾಸ್ತ್ರಿಗಳ ನೇತೃತ್ವದಲ್ಲಿ ನಡೆಯುತ್ತಿರುವ ಈ ಜಾತ್ರೆ ನಮ್ಮ ಭಾಗದ ಹೆಮ್ಮೆಯಾಗಿದ್ದು, ನಾಡಿನ ವಿವಿಧ ಭಾಗಗಳಿಂದ ಕಲಾವಿದರನ್ನು ಕರೆಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು ಸಮಾಜದ ಸಾಂಸ್ಕೃತಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಇಂತಹ ಕಾರ್ಯಕ್ರಮಗಳು ಜನರಲ್ಲಿ ಒಗ್ಗಟ್ಟು, ಭಕ್ತಿ ಹಾಗೂ ಸಾಂಸ್ಕೃತಿಕ ಅರಿವು ಹೆಚ್ಚಿಸುತ್ತವೆ ಎಂದು ಹೇಳಿದರು.

ಯುವ ಕಾಂಗ್ರೆಸ್ ಮುಖಂಡರಾದ ರಾಹುಲ್ ಜಾರಕಿಹೊಳಿ, ಸರ್ವೋತ್ತಮ್ ಜಾರಕಿಹೊಳಿ ಹಾಗೂ ಅರುಣ ಬಿಜೋಳೆ ಅವರು ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಕಾರ್ಯಕ್ರಮಕ್ಕೆ ಹುಕ್ಕೇರಿ ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮುರಗೋಡದ ನೀಲಕಂಠ ಮಹಾಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಜೊತೆಗೆ ರುದ್ರಾಕ್ಷಿಮಠದ ಬಸವಲಿಂಗ ಸ್ವಾಮೀಜಿ ಸೇರಿದಂತೆ ಅಂಕಲಿಮಠ, ವಣ್ಣೂರ, ತೊಂಡಿಕಟ್ಟಿ ಹಾಗೂ ಹುಣಸಿಕಟ್ಟಿ ಮಠಗಳ ಪರಮಪೂಜ್ಯರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಆಧ್ಯಾತ್ಮಿಕ ಮೆರುಗು ನೀಡಿದರು.

ಮುಖ್ಯ ಅತಿಥಿಗಳಾಗಿ ವಿದ್ಯಾವತಿ ಭಜಂತ್ರಿ, ಡಿವೈಎಸ್ಪಿ ವೀರಯ್ಯ ಹಿರೇಮಠ, ಸಿಪಿಐ ಸಂತೋಷ್ ಹಳ್ಳೂರ್, ಶಿವಾನಂದ ಕೋಲಕಾರ, ಪ್ರಮೋದ್ ಕುಮಾರ್ ವಕುಂದಮಠ, ಈಶ್ವರ ಕೌಜಲಗಿ, ಶಿವಾನಂದ ಹಿರೇಮಠ, ನಾನಾಸಾಹೇಬ ಪಾಟೀಲ, ಕಾರ್ತಿಕ್ ಪಾಟೀಲ, ಮಹಾಂತೇಶ ಕಳ್ಳಿಬಡ್ಡಿ, ಶ್ರೀಶೈಲ ಯಡಳ್ಳಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು. ಗಿಲ್ಲಿ ಹಾಗೂ ಕಾವ್ಯ ಅವರ ಮನರಂಜನಾ ಮಾತುಗಳು ವಿಶೇಷ ಗಮನ ಸೆಳೆದವು. ಚಲನಚಿತ್ರ ನಟರಾದ ವಿನಯ್ ರಾಜಕುಮಾರ್ ಮತ್ತು ಮೇಘ ಶೆಟ್ಟಿ ಅವರ ಹಾಜರಾತಿ ಕಾರ್ಯಕ್ರಮಕ್ಕೆ ಇನ್ನಷ್ಟು ಮೆರುಗು ನೀಡಿತು. ಉತ್ತರ ಕರ್ನಾಟಕದ ಜನಪದ ಕಲಾವಿದರಾದ ಬಾಳು ಬೆಳಗುಂದಿ, ಮಾಳು ನಿಪ್ಪನಾಳ ಹಾಗೂ ಪ್ರಿಯಾ ನಿಲೋಗಲ್ ಅವರ ಸಂಗೀತ ಕಾರ್ಯಕ್ರಮಗಳು ಭಕ್ತರನ್ನು ಕಟ್ಟಿ ಹಾಕಿದವು.



ಉನ್ನತ ಶಿಕ್ಷಣ ಪಡೆದು ಭವಿಷ್ಯ ರೂಪಿಸಿಕೊಳ್ಳಿ

•**ರಾಮದುರ್ಗ:** ಜವಳಿಯ ನೇಕಾರರ ಸೀರೆಗಳಿಗೆ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದೆ. ನೇಕಾರಿಕೆಯ ಜೊತೆಗೆ ನೇಕಾರರ ಮಕ್ಕಳು ಉನ್ನತ ಶಿಕ್ಷಣ ಪಡೆದು ಭವಿಷ್ಯ ರೂಪಿಸಿಕೊಳ್ಳಬೇಕೆಂದು ಬೆಳಗಾವಿ ಮಹಾನಗರ ಪಾಲಿಕೆಯ ನೂತನ ಮೇಯರ ಪ್ರೀತಿ ವಿನಾಯಕ ಕಾಮಕರ ಹೇಳಿದರು.

ನಗರದ ರಾಧಾಪೂರ ಪೇಟೆಯಲ್ಲಿ ತಾಲೂಕಾ ಆಡಳಿತ, ದೇವಾಂಗ ಸಮಾಜ ಹಾಗೂ ನೇಕಾರ ಸಮುದಾಯಗಳ ನೇತೃತ್ವದಲ್ಲಿ ಆಯೋಜಿಸಿದ್ದ ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯನವರ 1047ನೇ ಜಯಂತ್ಯುತ್ಸವ ಸಮಾರಂಭದಲ್ಲಿ, ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದ ಅವರು, ರಾಜ್ಯದಲ್ಲಿಯೇ ಓರ್ವ ಹಿಂದುಳಿದ ವರ್ಗದ ಸಾಮಾನ್ಯ ಮಹಿಳೆ ಉನ್ನತ ಸ್ಥಾನ ಪಡೆದಿರುವುದು ಇದೆ ಮೊದಲು. ಮೇಯರ್ ಸ್ಥಾನಕ್ಕೆ ತಲುಪಲು ರಾಮದುರ್ಗ ಸಮಾಜ ಬಾಂಧವರ ಆಶೀರ್ವಾದ ನನ್ನ ಮೇಲಿದೆ. ಅಧಿಕಾರ ಶಾಶ್ವತ ಅಲ್ಲ, ಸಿಕ್ಕ ಅವಕಾಶ ಬಳಸಿಕೊಂಡು, ಸಮಾಜ ಸಂಘಟನೆ ಹಾಗೂ ಸಾಮಾಜಿಕ ಯೋಜನೆಗಳನ್ನು ಜಾರಿಗೆ ತಂದು ಸಮಾಜದ ಋಣ ತೀರಿಸಲು ಬದ್ಧ ಎಂದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ನಾಗನೂರ ಬಸವಾಶ್ರಮದ ಕಾರ್ಯದರ್ಶಿ ನಿವೇದಿತಾ ಡಿ.ಪಿ, ಗ್ರೇಡ್-2 ತಹಶೀಲ್ದಾರ್ ಸಂಜಯ್ ಪಾಟೀದಾರ, ರಾಜ್ಯ ದೇವಾಂಗ ಸಂಘದ ಉಪಾಧ್ಯಕ್ಷ ಶಂಕ್ರಪ್ಪ ಮುರುಡಿ, ನೇಕಾರ ಸಮುದಾಯಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಗಜಾನನ ಗುಂಜೇರಿ ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ವೇದಮೂರ್ತಿ ಶಂಕ್ರಯ್ಯಸ್ವಾಮಿ ದೇವಾಂಗಮಠ, ವೇದಮೂರ್ತಿ ನಿರಂಜನಸ್ವಾಮಿ ದೇವಾಂಗಮಠ ಆಶೀರ್ವಚನ ನೀಡಿದರು.

ಬೆಳಗಾವಿ ಮಹಾನಗರ ಪಾಲಿಕೆ ಸದಸ್ಯೆ ರೇಷ್ಮಾ ಕಾಮಕರ, ರಾಜ್ಯ ದೇವಾಂಗ ಸಂಘದ ನಿರ್ದೇಶಕ ಶಿವಾನಂದ ಬಳ್ಳಾರಿ, ದೇವಾಂಗ ಸಮಾಜದ ತಾಲೂಕು ಅಧ್ಯಕ್ಷ ಅಶೋಕ ಸೂಳಿಭಾವಿ, ನೇಕಾರ ಸಮುದಾಯಗಳ ಒಕ್ಕೂಟದ ತಾಲೂಕು ಅಧ್ಯಕ್ಷ ನಾರಾಯಣ ಹೂಲಿ, ಬನಶಂಕರಿ ದೇವಾಂಗ ಸಮಾಜದ ಅಧ್ಯಕ್ಷ ಕುಬೇರ ಗರಡಿಮನಿ, ಮುಖಂಡರಾದ ಏಕನಾಥ ಕೊಣ್ಣೂರ, ನೇಮಣ್ಣ ಅರಿ, ಮನೋಹರ ಹೊಸ್ಮಂಗಿರ, ದಾಮೋದರ ರಾಮದುರ್ಗ, ಶ್ರೀಕಾಂತ ಮುಗಳಿ ಇದ್ದರು.

ಪ್ರಥಮೇಶ ಯಾದವಾಡ ಪ್ರಾರ್ಥಿಸಿದರು. ಪತ್ರಕರ್ತ ರಾಮಚಂದ್ರ ಯಾದವಾಡ ಸ್ವಾಗತಿಸಿದರು. ಶಿಕ್ಷಕ ಎಸ್.ಎಂ ಕಲಬುರ್ಗಿ ಕಾರ್ಯಕ್ರಮ ನಿರೂಪಿಸಿದರು. ವಿನೋದ ಕರಡಿಗ ವಂದಿಸಿದರು.



ಏ.2ರವರೆಗೆ ಶರಣ ಸಂಸ್ಕೃತಿ ಉತ್ಸವ

•**ರಾಯಬಾಗ:** ತಾಲೂಕಿನ ನಂದಿಕುರಳಿ ಗ್ರಾಮದ ಪಂಚಲಿಂಗೇಶ್ವರ ಮಠದಲ್ಲಿ ಮಾ.29 ರಿಂದ ಏ.2 ರವರೆಗೆ 39ನೇ ಶರಣ ಸಂಸ್ಕೃತಿ ಉತ್ಸವ ನಡೆಯಲಿದೆ.



ಮಾ.29 ರಂದು ಮುಂ.7 ಗಂಟೆಗೆ ಷಟ್ಸ್ಥಲ ಧ್ವಜಾರೋಹಣವನ್ನು ಚಿಕ್ಕೋಡಿ ಸಂಪಾದನಾ ಚರಮೂರ್ತಿಮಠದ ಸಂಪಾದನಾ ಸ್ವಾಮೀಜಿಯವರು ಧ್ವಜಾರೋಹಣ ನೆರವೇರಿಸುವರು. 8 ಗಂಟೆಗೆ ಬುತ್ತಿ ಮೆರವಣಿಗೆ ನಡೆಯುವುದು. 11 ಗಂಟೆಗೆ ನಡೆಯುವ ಕೃಷಿಮೇಳವನ್ನು ಅಥಣಿ ಶಾಡಾಗಿಶ್ವರ ಮಠದ ಡಾ.ಶಾಂತಯ್ಯ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಸಾನ್ನಿಧ್ಯವನ್ನು ವೀರಭದ್ರ ಸ್ವಾಮೀಜಿಯವರು ವಹಿಸಲಿದ್ದಾರೆ.

ಸಂಜೆ 4 ಗಂಟೆಗೆ ನಡೆಯುವ ಪ್ರವಚನ ಕಾರ್ಯಕ್ರಮದಲ್ಲಿ ಸನಾತನ ಧರ್ಮ ಬಗ್ಗೆ ಹಂಚಿನಾಳ ಭಕ್ತಿಯೋಗಾಶ್ರಮದ ಮಹೇಶಾನಂದ ಸ್ವಾಮೀಜಿಯವರು ಪ್ರವಚನ ನೀಡಲಿದ್ದಾರೆ. 6 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಬೆಂಗಳೂರಿನ ಹಾರಿಕಾ ಮಂಜುನಾಥ ಹಾಗೂ ವಿಶ್ವ ಹಿಂದೂ ಪರಿಷತ್ ಪ್ರಾಂತ ಗೋರಕ್ಷಾ ಪ್ರಮುಖ ವಿಠ್ಠಲಜಿ ಮಾಳಿ ಭಾಷಣ ಮಾಡಲಿದ್ದಾರೆ.

ಮಾ.30 ರಂದು ಮುಂ.9 ಗಂಟೆಗೆ ಮುಕ್ತ ರಂಗೋಲಿ ಸ್ಪರ್ಧೆ ನಡೆಯಲಿದೆ. ಮಾ.31 ರಂದು ವೀರಭದ್ರ ಸ್ವಾಮೀಜಿಯವರ ತುಲಾಭಾರ ನಡೆಯಲಿದೆ. ಏ.1 ರಂದು ಮುಂ.8 ಗಂಟೆಗೆ ಮಕ್ಕಳಿಂದ ವಚನ ಕಂಠಪಾಠ ಸ್ಪರ್ಧೆ ನಡೆಯಲಿದೆ. ಏ.2 ರಂದು ಮುಂ.5 ಗಂಟೆಗೆ ಕೋಟಿ ಜಪಯಜ್ಞ, ಮುಂ.7 ಗಂಟೆಗೆ ಶ್ರೀ ಪಂಚಲಿಂಗಗಳಿಗೆ ರುದ್ರಾಭಿಷೇಕ ನಡೆಯುವುದು. ಮುಂ.9 ಗಂಟೆಗೆ ನಡೆಯುವ ಪ್ರವಚನ ಕಾರ್ಯಕ್ರಮದ ಸಾನಿಧ್ಯವನ್ನು ವೀರಭದ್ರ ಸ್ವಾಮೀಜೀ ವಹಿಸಲಿದ್ದಾರೆ. ದೋಣಿವಾಡ ದುರದುಂಡೇಶ್ವರ ಮಠದ ಶಿವಾನಂದ ಸ್ವಾಮೀಜೀ, ವಿಜಯಪುರ ಜಿಲ್ಲೆಯ ಚೈನಾಪುರದ ಸಿದ್ಧಲಿಂಗ ಸ್ವಾಮೀಜೀ, ಕಾಡಾಪುರ ಸಿದ್ಧಾರೂಢ ಮಠದ ಸಚ್ಚಿದಾನಂದ ಸ್ವಾಮೀಜೀ ಭಾಗವಹಿಸಲಿದ್ದಾರೆ.

ಸಂಜೆ 6 ಗಂಟೆಗೆ ಸಕಲ ಸದ್ಭಕ್ತರಿಂದ ತೇರೋತ್ಸವ ಹಾಗೂ ಸಂಜೆ 7 ಗಂಟೆಗೆ ದೀಪೋತ್ಸವ ನಡೆಯಲಿದೆ. ಪ್ರತಿ ದಿನ ಬೆಳಿಗ್ಗೆಯಿಂದ ರಾತ್ರಿ ವರೆಗೆ ಮಹಾಪ್ರಸಾದವ್ಯವಸ್ಥೆ ಇರುವುದರಿಂದ, ಈ ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತರು ಪಾಲ್ಗೊಳ್ಳಬೇಕೆಂದು ನಂದಿಕುರಳಿ ಶ್ರೀ ಪಂಚಲಿಂಗೇಶ್ವರ ಮಠದ ವೀರಭದ್ರ ಸ್ವಾಮೀಜಿ ತಿಳಿಸಿದ್ದಾರೆ.

ಇಂದು ರೈತರ ಖಾತೆಗೆ 2.69 ಕೋಟಿ ರೂ. ಜಮೆ

•**ಚಿಕ್ಕೋಡಿ:** ನಿಪ್ಪಾಣಿ ನಗರದ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆಗೆ 2025-26 ಸಾಲಿನ ಹಂಗಾಮಿನಲ್ಲಿ ಕಾರ್ಖಾನೆಗೆ ಕಬ್ಬು ಪೂರೈಕೆ ಮಾಡಿದ ರೈತರಿಗೆ ಕರ್ನಾಟಕ ಸರ್ಕಾರ ಪ್ರತಿ ಟನ್ ಕಬ್ಬಿಗೆ 50 ರೂ. ಆರ್ಥಿಕ ನೆರವು ಪಾವತಿಸಿದೆ. ರಾಜ್ಯದ ರೈತರು ಕಾರ್ಖಾನೆಗೆ ಪೂರೈಕೆ ಮಾಡಿದ 538062 ಮೆ.ಟನ್ ಕಬ್ಬಿಗೆ ತಲಾ 50 ರೂ. ನಂತೆ 2,69,03,445 ರೂ.ಗಳನ್ನು ಮಾ.27 ರಂದು ಆಯಾ ರೈತರ ಖಾತೆಗೆ ಜಮೆ ಮಾಡಲಾಗುವುದು ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ಅಣ್ಣಾಸಾಹೇಬ ಶಿರಗಾವೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಾರ್ಖಾನೆಯ ರೂವಾರಿ, ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಮತ್ತು ಶಾಸಕಿ ಶಶಿಕಲಾ ಜೊಲ್ಲೆ ಅವರ ಮಾರ್ಗದರ್ಶನದಲ್ಲಿ ಪ್ರಸ್ತುತ ಹಂಗಾಮಿನಲ್ಲಿ ಕಾರ್ಖಾನೆ ಅತ್ಯುತ್ತಮ ಸಾಧನೆಯನ್ನು ತೋರಿದೆ. ಈ ಹಂಗಾಮಿನಲ್ಲಿ ಒಟ್ಟು 5,77,672 ಮೆಟ್ರಿಕ್ ಟನ್ ಕಬ್ಬನ್ನು ನುರಿಸಲಾಗಿದ್ದು, ಇದರಲ್ಲಿ ಕರ್ನಾಟಕ ರಾಜ್ಯದ ರೈತರು 5,38,062 ಮೆಟ್ರಿಕ್ ಟನ್ ಮತ್ತು ಮಹಾರಾಷ್ಟ್ರ ರಾಜ್ಯದ ರೈತರು 39,609 ಮೆಟ್ರಿಕ್ ಟನ್ ಕಬ್ಬನ್ನು ಪೂರೈಕೆ ಮಾಡಿದ್ದಾರೆ.

ರಾಜ್ಯ ಸರ್ಕಾರದಿಂದ ಕರ್ನಾಟಕದ ರೈತರಿಗೆ ಸಲ್ಲಬೇಕಾದ 2,69,03,445 ರೂ. ಮೊತ್ತವನ್ನು ಪಾವತಿಸಲಾಗಿದ್ದು, ಮಹಾರಾಷ್ಟ್ರದ ರೈತರಿಗೆ ಸಲ್ಲುವ ರೂ. 19,80,522 ರೂ. ಮೊತ್ತವನ್ನು ಕಾರ್ಖಾನೆಯೇ ಪಾವತಿಸಿದೆ. ಒಟ್ಟಾರೆಯಾಗಿ ಪ್ರತಿ ಟನ್ ಕಬ್ಬಿಗೆ 3360 ರೂ. ಬೆಲೆ ಪಾವತಿಸಲಾಗಿದೆ.

ಎರಡನೇ ಕಂತಿನಡಿ ಪ್ರತಿ ಟನ್‌ಗೆ 100 ರೂ. ಪಾವತಿಯಲ್ಲಿ, ರಾಜ್ಯ ಸರ್ಕಾರದ ಪಾಲು 50 ರೂ. ಮತ್ತು ಕಾರ್ಖಾನೆಯ ಪಾಲು 50 ರೂ. ಆಗಿದ್ದು, ಕಾರ್ಖಾನೆಯ ಪಾಲಿನ 50 ರೂ. ಅನ್ನು ಈಗಾಗಲೇ ಎಲ್ಲಾ ರೈತರಿಗೆ ಸಂಪೂರ್ಣವಾಗಿ ಪಾವತಿಸಲಾಗಿದೆ. ರೈತರ ಆರ್ಥಿಕ ಸ್ಥಿರತೆಗೆ ನೆರವಾಗುವ ಈ ಕ್ರಮವು ಕಾರ್ಖಾನೆಯ ಸಾಮಾಜಿಕ ಬದ್ಧತೆಯ ಇನ್ನೊಂದು ಉದಾಹರಣೆಯಾಗಿದೆ.

ರೈತರಿಗೆ ಸಮಯಕ್ಕೆ ಸರಿಯಾಗಿ ಪಾವತಿ ಮಾಡುವುದು ಮತ್ತು ಅವರ ವಿಶ್ವಾಸವನ್ನು ಉಳಿಸುವುದು ಕಾರ್ಖಾನೆಯ ಪ್ರಮುಖ ಆದ್ಯತೆಯಾಗಿದ್ದು, ಬರುವ ಹಂಗಾಮಿನಲ್ಲಿಯೂ ಇದೇ ರೀತಿಯ ಸೇವೆಯನ್ನು ಮುಂದುವರಿಸಲಾಗುವುದು ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಭಕ್ತರು ಸತ್ಯ ಧರ್ಮದಿಂದ ನಡೆಯಿರಿ: ಡಾ.ಮುರುಘರಾಜೇಂದ್ರ ಶ್ರೀ

•**ಮುಗಳಖೋಡ:** ಸಿದ್ಧಲಿಂಗರ ಓಂ ನಮಃ ಶಿವಾಯ ಎಂಬ ಸಿದ್ಧಿ ಮಂತ್ರವೇ ಭಕ್ತರಿಗೆ ಬಂಗಾರವಾಗಿ ತೋರಿದೆ. ಮುಗಳಖೋಡ ಮಠದಲ್ಲಿ ಪ್ರತಿ ವರ್ಷ ಸಿದ್ಧಲಿಂಗೇಶ್ವರ ಜಾತ್ರಾ ಮಹೋತ್ಸವದಲ್ಲಿ ಭಕ್ತರ ಭಕ್ತಿಯ ಕುಂಭಮೇಳ ನಡೆಯುವುದು. ಯಾವ ಭಕ್ತರು ಭಕ್ತಿಯಿಂದ ಗುರುಗಳನ್ನು ನೆನೆಸಿದರೆ ಅಲ್ಲಿಯೇ ಗುರು ಪ್ರತ್ಯಕ್ಷನಾಗುತ್ತಾನೆ. ಗುರುವಿನ ರಥವನ್ನು ಎಳೆದರೆ ಆ ಭಕ್ತನ ಜೀವನದ ರಥವನ್ನು ಯಾವ ಕಷ್ಟಗಳಿಲ್ಲದೆ ಆ ದೇವರು ಎಳೆಯುತ್ತಾರೆ. ಎಲ್ಲರೂ ಸತ್ಯ ಧರ್ಮದಿಂದ ನಡೆಯಿರಿ ಗುರುಗಳ ಆಶೀರ್ವಾದ ಸದಾಕಾಲವೂ ಇರಲಿದೆ ಎಂದು ಮುಗಳಖೋಡ-ಜಿಡಗಾ ಮಠದ ಪೀಠಾಧಿಪತಿ ಡಾ.ಮುರುಘರಾಜೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.



ಅವರು ಪಟ್ಟಣದ ಶ್ರೀ ಯಲ್ಲಾಲಿಂಗೇಶ್ವರ ಬೃಹನ್ಮಠದಲ್ಲಿ ನಡೆದ ಶ್ರೀ ಸಿದ್ಧಲಿಂಗೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಗುರುವಾರ ಸಂಜೆ 6 ಗಂಟೆಗೆ ಶ್ರೀ ಸಿದ್ಧಲಿಂಗೇಶ್ವರ ಮಹಾರಥೋತ್ಸವಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದರು.

ಗುರುವಾರ ಬೆಳಗ್ಗೆ 6 ಗಂಟೆಗೆ ಶ್ರೀ ಸಿದ್ಧಲಿಂಗೇಶ್ವರ, ಶ್ರೀ ಯಲ್ಲಾಲಿಂಗೇಶ್ವರ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಮಂಗಳಾರುತಿ ನೆರವೇರಿಸಿದರು.

ಅಗ್ನಿಜಾತ್ರೆ: ಬೆಳಗ್ಗೆ 11.30ಕ್ಕೆ ಡಾ.ಮುರುಘರಾಜೇಂದ್ರ ಸ್ವಾಮೀಜಿ ಲೋಕ ಕಲ್ಯಾಣಕ್ಕಾಗಿ, ಭಕ್ತರು ವರ್ಷವಿಡೀ ಮಾಡಿದ ಮುಟ್ಟಿ ಬಟ್ಟು ಹೋದ ಪಾಪದ ಸಂಕೋಲೆಗಳನ್ನು ಸುಡಲೆಂದು ಅಗ್ನಿ ಹಾಯ್ದರು. ಎಲ್ಲ ಭಕ್ತಾದಿಗಳು ಅಗ್ನಿ ಕುಂಡದಲ್ಲಿ ನಾಣ್ಯಗಳನ್ನು ಹಾಕಿ ಸಿದ್ಧಲಿಂಗ, ಯಲ್ಲಾಲಿಂಗ, ಸಿದ್ಧರಾಮ ಹಾಗೂ ಮುರುಘರಾಜೇಂದ್ರ ಎಂದು ಗುರುಗಳ ಜೈಕಾರ ಹಾಕುತ್ತಾ ಗುರುಗಳ ಅಗ್ನಿ ಹಾಯುವುದನ್ನು ನೋಡಿ ಕಣ್ತುಂಬಿಕೊಂಡರು.

ರಥೋತ್ಸವ : ಸಂಜೆ 6 ಗಂಟೆಗೆ ಶ್ರೀ ಸಿದ್ಧಲಿಂಗೇಶ್ವರ ಪಲ್ಲಕ್ಕಿ ಉತ್ಸವದೊಂದಿಗೆ ಪುಷ್ಪಗಳಿಂದ ಅಲಂಕರಿಸಿದ ಮಹಾರಥೋತ್ಸವ ಜರುಗಿತು. ಕಾರ್ಯಕ್ರಮದಲ್ಲಿ ಭಾಗಿಯಾದ ಭಕ್ತ ಸಮೂಹ ರಥೋತ್ಸವಕ್ಕೆ ಖಾರಿಕ, ಬಸ್ಕೇಟ, ಬತ್ತಸ, ಬಾಳೆಹಣ್ಣು ಎಸೆದು ಗುರುಗಳಿಗೆ ಜೈಕಾರ ಹಾಕುತ್ತಾ ರಥೋತ್ಸವಕ್ಕೆ ನಮನ ಸಲ್ಲಿಸಿದರು.

ದಂಡೋತ್: ಶನಿವಾರ ಸಾಯಂಕಾಲದಿಂದ ರವಿವಾರ ಬೆಳಗಿನವರೆಗೂ ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಸ್ನಾನಮಾಡಿ ಮಡಿಯಿಂದ ಸುಮಾರು 8 ರಿಂದ 10 ಕಿ.ಮೀ ದೂರದಿಂದ ದಂಡೋತ್ತ (ದೀರ್ಘ ದಂಡ ನಮಸ್ಕಾರ) ಹಾಕಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಆಸ್ಥಾನದ ಗವಾಯಿಗಳಿಂದ ಸಂಗೀತ ಸೇವೆ ನಡೆಯಿತು.

ಈ ಭವ್ಯ ಜಾತ್ರಾ ಮಹೋತ್ಸವದಲ್ಲಿ ಕರ್ನಾಟಕ ಸೇರಿದಂತೆ ಆಂಧ್ರ, ಗೋವಾ ಮಹಾರಾಷ್ಟ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ ಸಾವಿರಾರು ಭಕ್ತ ಸಮೂಹದವರು ಪಾಲ್ಗೊಂಡಿದ್ದರು.

ಪ್ರಭುಲಿಂಗ ಶ್ರೀಗಳ ಆದರ್ಶ ಪಾಲಿಸೋಣ: ಜಾರಕಿಹೊಳಿ

•**ಮೂಡಲಗಿ:** ಚೌಕೇಶ್ವರ ಮಠದ ಪೂಜ್ಯರಾಗಿದ್ದ ಲಿಂ. ಪ್ರಭುಲಿಂಗ ಮಹಾಸ್ವಾಮಿಗಳು ಯಾದವಾಡ ಭಾಗದಲ್ಲಿ ಸಾಮಾಜಿಕ, ಧಾರ್ಮಿಕ, ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿ ಭಕ್ತರ ಪಾಲಿಗೆ ಕಾಮಧೇನು ಆಗಿದ್ದರು. ಅವರ ಆದರ್ಶಗಳು ಇಂದಿನ ಯುವ ಪೀಳಿಗೆ ಮುಂದುವರೆಸಿಕೊಂಡು ಹೋಗಬೇಕಿದೆ. ಈ ದಿಸೆಯಲ್ಲಿ ಚೌಕಿಮಠದ ಪಟ್ಟವನ್ನು ಅಲಂಕರಿಸಿಕೊಂಡಿರುವ ವಿಶ್ವಾರಾಧ್ಯ ದೇವರಿಗೆ ಭಕ್ತರು ಮತ್ತು ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ತಿಳಿಸಿದರು.



» ಶಾಸಕ ಜಾರಕಿಹೊಳಿಯವರು ವಿಶ್ವಾರಾಧ್ಯ ದೇವರನ್ನು ಸತ್ಕರಿಸಿ, ಗೌರವಿಸಿ ಶುಭ ಕೋರಿದರು.

ಬುಧವಾರ, ತಾಲ್ಲೂಕಿನ ಯಾದವಾಡ ಗ್ರಾಮದಲ್ಲಿ ನಡೆಯುತ್ತಿರುವ ಚೌಕೇಶ್ವರ ವಿರಕ್ತಮಠದ ವಿಶ್ವಾರಾಧ್ಯ ದೇವರ ಚರ ಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮದಲ್ಲಿ, ಪಾಲ್ಗೊಂಡು ಮಾತನಾಡಿದ ಅವರು, ನೂರಾರು ಜಾತಿ, ಧರ್ಮಗಳಿದ್ದರೂ ನಮ್ಮ ದೇಶದಲ್ಲಿ ಎಲ್ಲ ಜಾತಿ, ಧರ್ಮದವರು ಏಕತೆಯ ಮಂತ್ರ ಜಪಿಸಿ, ಒಗ್ಗಟ್ಟಿನ ಬದುಕು ಕಟ್ಟಿಕೊಂಡಿದ್ದಾರೆ. ಇದು ದೇವರ ವರದಾನವಾಗಿದೆ. ಇದಕ್ಕಾಗಿಯೇ ಭಾರತವು ಮಿಕ್ಕ ದೇಶಗಳಿಗಿಂತ ಭಿನ್ನವಾಗಿದೆ ಎಂದು ತಿಳಿಸಿದರು.

ರೈತರು ಈ ದೇಶದ ಬೆನ್ನೆಲುಬು. ರೈತರಿಂದಲೇ ನಾವೆಲ್ಲ ಸುಖ ಜೀವನ ನಡೆಸುತ್ತಿದ್ದೇವೆ. ಕಾಲ ಕಾಲಕ್ಕೆ ಮಳೆಯಾಗಿ ಉತ್ತಮ ಬೆಳೆಯಾದರೆ ರೈತರ ಮುಖದಲ್ಲಿ ಮಂದಹಾಸ ಮೂಡುತ್ತದೆ. ರೈತರಿಂದಲೇ ನಮ್ಮ ದೇಶವು ಸಮೃದ್ಧಿಯ ಬಾಳು ನಡೆಸುತ್ತಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಹಂದಿಗುಂದ ಮಠದ ಶಿವಾನಂದ ಮಹಾಸ್ವಾಮಿಗಳು, ಬೈಲಹೊಂಗಲ ಮೂರು ಸಾವಿರ ಮಠದ ನೀಲಕಂಠ ಮಹಾಸ್ವಾಮಿಗಳು, ಭಾಗೋಜಿಕೊಪ್ಪದ ಶಿವಲಿಂಗ ಮುರುಘರಾಜೇಂದ್ರ ಮಹಾಸ್ವಾಮಿಗಳು ವಹಿಸಿದ್ದರು. ಸಾನಿಧ್ಯವನ್ನು ಗೋಕಾಕ ಸಂಪಾದನ ಮಠದ ಮುರುಘರಾಜೇಂದ್ರ ಮಹಾಸ್ವಾಮಿಗಳು, ಕೊಲ್ಹಾರದ ಯೋಗಿ ಕಲ್ಲಿನಾಥ ದೇವರು, ಹುಲಜಂತಿಯ ಮಾಳಿಂಗರಾಯ ಮಹಾರಾಜರು, ಬಬಲಾದಿಯ ಸಿದ್ರಾಮಯ್ಯ ಅಜ್ಜ, ಹಂಚಿನಾಳದ ಮಹೇಶಾನಂದ ಸ್ವಾಮಿಗಳು, ತೊಂಡಿಕಟ್ಟಿಯ ಅವಧೂತ ವೆಂಕಟೇಶ ಮಹಾರಾಜರು, ಹುಣಶ್ಯಾಳ ಪಿಜಿಯ ನಿಜಗುಣಾನಂದ ದೇವರು, ನಿರುಪೂರಿಂದ ಶಾಂತಭೀಷ್ಮ ಮಹಾಸ್ವಾಮಿಗಳು, ತಂಕೇರಿಯ ವೃಷಭೇಂದ್ರ ಮಹಾಸ್ವಾಮಿಗಳು, ಹೆಬ್ಬಳ್ಳಿಯ ದತ್ತಾವಧೂತ ಗುರುಗಳು, ಸ್ಥಳೀಯ ಅಬ್ದುಲ್ ಬಮೂದಾರ ವಹಿಸಿದ್ದರು. ಗ್ರಾಮದ ಹಲವು ಮುಖಂಡರು, ಸದ್ಭಕ್ತರು ಉಪಸ್ಥಿತರಿದ್ದರು.

ಬೀಳಗಿಯ ಸಿದ್ದಪ್ಪ ಬದರಿ ಅವರು ರೈತ ಸಮಾವೇಶದ ವಿಶೇಷ ಉಪನ್ಯಾಸ ನೀಡಿದರು.

ಕಿರುಸುದ್ದಿ

ಇಂದು ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ಕಾರ್ಯಕ್ರಮ

ಕಮತಗಿ: ಪಟ್ಟಣದಲ್ಲಿ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಯೋಗಿನಿದೇವಿ ಆರ್.ಪಾಟೀಲ ಗ್ರಾಮೀಣ ಮಹಿಳಾ ಶಿಕ್ಷಣ ಮಹಾವಿದ್ಯಾಲಯದ ಸಭಾಭವನದಲ್ಲಿ ಮಾ.27ರಂದು ಬೆಳಗ್ಗೆ 11ಗಂಟೆಗೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ. ಹು.ವಿ.ವ.ಸಂಘದ ಅಧ್ಯಕ್ಷ ಹುಚ್ಚೇಶ್ವರ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು. ಸಹಕಾರ್ಯದರ್ಶಿ ವಿದ್ಯಾಧರ ಆರ್.ಮುಳ್ಳಿ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ಮುಂಡ್ಯದ ವಿಶೇಷಾಧಿಕಾರಿ ಡಾ.ವಿಷ್ಣು ಎಂ.ಶಿಂಧೆ ಉದ್ಘಾಟಿಸಲಿದ್ದಾರೆ. ಬಾಗಲಕೋಟೆ ಗುಳೇದ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕಿ, ಸ್ಥಾಪಕಿ, ಡಾ.ಅಪೂರ್ವ ಗುಳೇದ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಆಡಳಿತ ಮಂಡಳಿಯ ಸದಸ್ಯರು ಹಾಗೂ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಪ್ರಾಚಾರ್ಯ ವೈ.ಆರ್.ಪಾಟೀಲ ಮಹಿಳಾ ಬಿಎಡ್ ಕಾಲೇಜ್ ಕಮತಗಿ ಡಾ.ಪಿ.ಐ.ಮೋಮಿನ ಪ್ರಾಚಾರ್ಯರು ತಿಳಿಸಿದ್ದಾರೆ.

ಇಂದು ರಾಮ ಜನ್ಮೋತ್ಸವ

ರಬಕವಿ-ಬನಹಟ್ಟಿ: ರಾಮಪುರ ನಗರದಲ್ಲಿರುವ ರಾಮ ಮಂದಿರದಲ್ಲಿ ಮಂದಿರ ನಿರ್ಮಾಣವಾದ ನಂತರ ಈಗ ಆಚರಿಸುತ್ತಿರುವ ರಾಮ ಜನ್ಮೋತ್ಸವ 99ನೇ ಉತ್ಸವವಾಗಿದ್ದು, ಮಾ.27ರಂದು ಅದ್ಧೂರಿಯಾಗಿ ರಾಮ ಜನ್ಮೋತ್ಸವ ಜರುಗಲಿದೆಯೆಂದು ದೇವಸ್ಥಾನ ಕಮಿಟಿ ತಿಳಿಸಿದೆ. ಶುಕ್ರವಾರ ಬೆಳಗ್ಗೆ 5ರಿಂದ ಮೂರ್ತಿಗೆ ವಿಶೇಷ ಅಭಿಷೇಕ ಹಾಗೂ ಪೂಜೆ ಜರುಗುವುದು. ಮಧ್ಯಾಹ್ನ 12-30ಕ್ಕೆ ರಾಮನ ಪಲ್ಲಕ್ಕಿ ಉತ್ಸವ, ಸಂಜೆ 7ಕ್ಕೆ ಬೆಳ್ಳಿ ರಾಮನ ಮೂರ್ತಿ ಪ್ರತಿಷ್ಠಾಪಿಸಿದ ಬೃಹತ್ ರಥೋತ್ಸವ ಜರುಗುವುದು. ಮಾ.29ರಂದು ಸಂಜೆ 6ಕ್ಕೆ ಕಳಸೋತ್ಸವದೊಂದಿಗೆ ಜಾತ್ರೆ ಸಂಪನ್ನಗೊಳ್ಳುವುದು.

ಇಂದು ಕುಂದುಕೊರತೆ ಸಭೆ

ಬಾಗಲಕೋಟೆ: ಭವಿಷ್ಯನಿಧಿ, ಪಿಂಚಣಿ ಇತ್ಯಾದಿಗಳಿಗೆ ಸಂಬಂಧಿಸಿದ ಕುಂದುಕೊರತೆ ಪರಿಹರಿಸುವ ನಿಟ್ಟಿನಲ್ಲಿ ಮಾ.27ರಂದು ಕೂಡಲಸಂಗಮ ಅಭಿವೃದ್ಧಿ ಮಂಡಳಿ, ಕೂಡಲಸಂಗಮದಲ್ಲಿ ಸಭೆ ಕರೆಯಲಾಗಿದೆ. ಅಂದು ಬೆಳಗ್ಗೆ 9.30ರಿಂದ ಸಂಜೆ 4 ಗಂಟೆವರೆಗೆ ಪಿಂಚಣಿದಾರರು ಇಪಿಎಫ್ ಚಂದಾದಾರರು ಮತ್ತು ಉದ್ಯೋಗದಾತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ರಾಯಚೂರು ಪ್ರಾದೇಶಿಕ ಕಚೇರಿಯ ಪಿಎಫ್ ಕಮೀಷನರ್-2 ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ sro.raichur@epfindia.gov.in do.bagalkot@epfindia-gov.in ಇ-ಮೇಲ್‌ಗೆ ಸಂಪರ್ಕಿಸಬಹುದಾಗಿದೆ.

ಬಾಲ್ಯವಿವಾಹ ನಿಷೇಧ ಫಲಕ ಅಳವಡಿಕೆ ಕಡ್ಡಾಯ

ಬಾಗಲಕೋಟೆ: ಕಾನೂನು ಪ್ರಕಾರ ಬಾಲ್ಯವಿವಾಹ ನಿಷೇಧಿಸಲಾಗಿದೆ ಎಂಬ ಫಲಕಗಳನ್ನು ದೇವಸ್ಥಾನಗಳು, ಕಲ್ಯಾಣ ಮಂಟಪಗಳೂ ಸೇರಿದಂತೆ ಇತರೆಡೆ ಪ್ರದರ್ಶಿಸುವುದು ಕಡ್ಡಾಯವಾಗಿದೆ ಎಂದು ಹೈಕೋರ್ಟ್ ಆದೇಶಿಸಿದೆ. ತನ್ನ ವಿರುದ್ಧ ದೇವನಹಳ್ಳಿ ಕೋರ್ಟ್‌ನಲ್ಲಿರುವ ಕ್ರಿಮಿನಲ್ ಪ್ರಕರಣ ರದ್ದು ಕೋರಿ ಎನ್.ಮಂಜುನಾಥ (ಬಾಲಕಿಯ ಗಂಡ) ಸೇರಿ ಕುಟುಂಬದ ಒಟ್ಟು ಐವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ತಿರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012 (ಪೋಕ್ಸೋ) ಅಥವಾ ಬಾಲ್ಯವಿವಾಹ ನಿಷೇಧ ಕಾಯ್ದೆ-2006ರ ನಿಬಂಧನೆಗಳಡಿ ಉದ್ಭವಿಸುತ್ತಿರುವ ಮೊಕದ್ದಮೆಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂಬ ತೀವ್ರ ಕಳವಳ ವ್ಯಕ್ತಪಡಿಸಿದ ನ್ಯಾಯಪೀಠ, ಬಾಲ್ಯವಿವಾಹ ನಿರ್ಮೂಲನೆ ಕೇವಲ ಶಾಸನಬದ್ಧ ಗುರಿಯಲ್ಲ, ಇದು ಸಾಂವಿಧಾನಿಕವಾಗಿ ಕಡ್ಡಾಯ ಅಂಶ. ಈ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಾಗೂ ಸಮಾಜವನ್ನು ಸಂವೇದನಾಶೀಲಗೊಳಿಸಲು ಮಾಧ್ಯಮಗಳು ತಮ್ಮ ಪಾತ್ರವನ್ನು ಇನ್ನಷ್ಟು ಕಾಳಜಿಯಿಂದ ನಿರ್ವಹಿಸಬೇಕು ಎಂದು ಸೂಚಿಸಿದೆ. ಬಾಲ್ಯವಿವಾಹ ನಡೆಸುವ, ನಿರ್ದೇಶಿಸುವ ಅಥವಾ ಪ್ರಚೋದಿಸುವ, ಯಾರಾದರೂ ಆಗಲಿ ಅದಕ್ಕೆ ಸಮಾನ ಹೊಣೆಗಾರರಾಗುತ್ತಾರೆ. ಮದುವೆ ಮಾಡಿಸುವ ಪುರೋಹಿತ, ಅದನ್ನು ಏರ್ಪಡಿಸುವ ಸಂಬಂಧಿ, ಅದನ್ನು ಸುಗಮಗೊಳಿಸುವ ಆಯೋಜಕರೂ ಸೇರಿದಂತೆ ಎಲ್ಲರೂ ಬಾಲ್ಯವಿವಾಹ ನಿಷೇಧ ಕಾಯಿದೆಯ ಚೌಕಟ್ಟಿನಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿ ಕಂಡು ಎನಿಸಬೇಕಾಗುತ್ತದೆ. ಕಾನೂನು ಬಾಲ್ಯವಿವಾಹ ನಿಷೇಧ ಕಾಯಿದೆಯ ಚೌಕಟ್ಟಿನಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿ ಕಂಡು ಎನಿಸಬೇಕಾಗುತ್ತದೆ. ಕಾನೂನು ಅಜ್ಞಾನ ಕ್ಷಮಿಸುವುದಿಲ್ಲ, ಹಾಗಾಗಿ ವಿವಾಹಗಳು ಜರುಗುವ ಪ್ರತಿಯೊಂದು ಸ್ಥಳದಲ್ಲಿ ಕ್ರಿಮಿನಲ್ ಹೊಣೆಗಾರಿಕೆಯ ಅರಿವು ಇರುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೋಡಿಕೊಳ್ಳಬೇಕು ಎಂದು ನ್ಯಾಯಪೀಠ ಎಚ್ಚರಿಸಿದೆ.



ಜಮಖಂಡಿ: ನಗರದ ಕುಂಚನೂರ ವೃತ್ತ ಅಂಬೇಡ್ಕರ್ ವೃತ್ತದ ಸುತ್ತಲೂ ಇರುವ ಮಾವಾ ಅಂಗಡಿಗಳ ಮೇಲೆ ತಾಲೂಕು ಆರೋಗ್ಯಾಧಿಕಾರಿ ಡಾ.ಗೈಬುಸಾಬ್ ಗಲಗಲಿ ಪೊಲೀಸರ ಸಹಯೋಗದಲ್ಲಿ ದಾಳಿ ನಡೆಸಿದರು. ರಫೀಕ್ ಕಲಾದಗಿ ಪಾನ್ ಶಾಪನಲ್ಲಿ ದಾಳಿ ಮಾಡಿದಾಗ 6 ಮಾವಾ ಪ್ಯಾಕ್‌ಗಳು ಸಿಕ್ಕಿದ್ದರಿಂದ ಅಂಗಡಿಯ ಮಾಲೀಕರ ಮೇಲೆ ಕೊಟ್ಪಾ ಕಾಯ್ದೆಯಡಿ ಪ್ರತ್ಯೇಕ 11 ಪ್ರಕರಣ ದಾಖಲಿಸಿ 2800 ರೂ.ಗಳ ದಂಡ ವಿಧಿಸಿದ್ದಾರೆ. ದಾಳಿಯಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಸಂತೋಷ ನಾಯಿಕ, ಅಸ್ಲಂ ಅಬಾಲೆ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿ ಇದ್ದರು.

ಪೆಟ್ರೋಲ್ ಬಂಕ್ ಎದುರು ಸಾಲುಗಟ್ಟಿದ ವಾಹನಗಳು

ಗುಳೇದಗುಡ್ಡ: ಪೆಟ್ರೋಲ್ ಹಾಗೂ ಡಿಸ್ಲೆಲ್ ಅಭಾವದ ವದಂತಿ ಹಿನ್ನಲೆಯಲ್ಲಿ ಬುಧವಾರ ಬೆಳಗ್ಗೆಯಿಂದಲೆ ಪಟ್ಟಣದ ಪೆಟ್ರೋಲ್ ಬಂಕ್ ಮುಂದೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಕೊಲ್ಲಿಯಲ್ಲಿನ ಯುದ್ಧದಿಂದಾಗಿ ಪೆಟ್ರೋಲ್, ಡಿಸ್ಲೆಲ್ ಅಭಾವವಾಗಲಿದೆ ಎಂಬ ವದಂತಿ ವಾಹನ ಸವಾರರನ್ನು ನಿದ್ದೆಗೆಡಿಸಿದೆ. ಅದರಲ್ಲೂ ಬೈಕ್ ಸವಾರರು ಇಂಧನ ಖಾಲಿಯಾಗುವ ಭೀತಿಯಿಂದ ಪೆಟ್ರೋಲ್ ಬಂಕ್ ಎದುರು ಜಮಾಯಿಸುತ್ತಿದ್ದಾರೆ.

ಪಟ್ಟಣದಲ್ಲಿ ಒಟ್ಟು ಮೂರು ಪೆಟ್ರೋಲ್ ಬಂಕ್‌ಗಳಿದ್ದು, ಬಸ್ ನಿಲ್ದಾಣದ ಬಳಿಯ ಧುತ್ತರಗಿ ಪೆಟ್ರೋಲ್ ಬಂಕ್, ಬಾಗಲಕೋಟೆ ರಸ್ತೆಯ ಬಳಿ ಇರುವ ಭಾರತ್ ಪೆಟ್ರೋಲಿಯಂ ಬಂಕ್ ಸ್ಟಾಕ್ ಇಲ್ಲದ್ದರಿಂದ ಕೆಲಸಮಯ ಬಂದ್ ಆಗಿದ್ದರಿಂದ ಆಸಂಗಿ ರಸ್ತೆಯಲ್ಲಿನ ಇರುವ ಬಾಲಾಜಿ ಪೆಟ್ರೋಲ್ ಬಂಕ್ ಒಂದೇ ತೆರೆದಿದ್ದರಿಂದ ವಾಹನ ಸವಾರರು ಇಂಧನಕ್ಕಾಗಿ ಮುಗಿಬಿದ್ದರು. ನೂರು ವಾಹನಗಳು ಪೆಟ್ರೋಲ್‌ಗಾಗಿ ಬಂಕ್ ಮುಂದೆ ಸಾಲುಗಟ್ಟಿ ನಿಂತಿದ್ದವು. ಪೆಟ್ರೋಲ್, ಡಿಸ್ಲೆಲ್‌ಗಾಗಿ ಯಾರೂ ಆತಂಕ ಪಡಬಾರದು, ನಮ್ಮ ಕಂಪನಿಯಿಂದ ಪೆಟ್ರೋಲ್, ಡಿಸ್ಲೆಲ್ ಬೇಡಿಕೆಗೆ ತಕ್ಕಂತೆ ಸರಬರಾಜು ಆಗುತ್ತಿದೆ. ಬಿಸಿಲಿನ ಧಗೆಯಿಂದಾಗಿ ಈಗ ಬಾಟಲಿ ಹಾಗೂ ಕ್ಯಾನ್‌ನಲ್ಲಿ ಪೆಟ್ರೋಲ್ ಹಾಕಿಕೊಡುವುದಿಲ್ಲ, ಗ್ರಾಹಕರು ಯಾವುದೇ ಆತಂಕ ಪಡದೇ ವಾಹನಗಳ ತಂದು ಪೆಟ್ರೋಲ್, ಡಿಸ್ಲೆಲ್ ಪಡೆಯುವ ಮೂಲಕ ಗ್ರಾಹಕರು ಸಹಕರಿಸಬೇಕು ಎಂದು ಬಾಲಾಜಿ ಪೆಟ್ರೋಲಿಂ ಮಾಲೀಕ ಗೋಕುಲ್ ಮಾಲಪಾಣಿ ತಿಳಿಸಿದರು.



ಗುಳೇದಗುಡ್ಡ: ಪೆಟ್ರೋಲ್ ಹಾಗೂ ಡಿಸ್ಲೆಲ್ ಅಭಾವದ ವದಂತಿ ಹಿನ್ನಲೆಯಲ್ಲಿ ಬುಧವಾರ ಬೆಳಗ್ಗೆಯಿಂದಲೆ ಪಟ್ಟಣದ ಪೆಟ್ರೋಲ್ ಬಂಕ್ ಮುಂದೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಕೊಲ್ಲಿಯಲ್ಲಿನ ಯುದ್ಧದಿಂದಾಗಿ ಪೆಟ್ರೋಲ್, ಡಿಸ್ಲೆಲ್ ಅಭಾವವಾಗಲಿದೆ ಎಂಬ ವದಂತಿ ವಾಹನ ಸವಾರರನ್ನು ನಿದ್ದೆಗೆಡಿಸಿದೆ. ಅದರಲ್ಲೂ ಬೈಕ್ ಸವಾರರು ಇಂಧನ ಖಾಲಿಯಾಗುವ ಭೀತಿಯಿಂದ ಪೆಟ್ರೋಲ್ ಬಂಕ್ ಎದುರು ಜಮಾಯಿಸುತ್ತಿದ್ದಾರೆ.

ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಬಿಜೆಪಿ ಮತಯಾಚನೆ

ದೊಡ್ಡ ಅಂತರದಲ್ಲಿ ಗೆಲುವು: ಚರಂತಿಮಠ

ಬಾಗಲಕೋಟೆ: ಅಭಿವೃದ್ಧಿಪರ ಇರುವ ಬಾಗಲಕೋಟೆ ಜನರ ನಂಬಿಕೆ ಮತ್ತು ವಿಶ್ವಾಸ ಬಿಜೆಪಿ ಗೆಲ್ಲಿಸುತ್ತದೆ. ಈ ಭಾರಿ ದೊಡ್ಡ ಅಂತರದಲ್ಲಿ ಗೆಲುವಾಗಲಿದೆ ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹೇಳಿದರು.

ಉಪಚುನಾವಣೆಯ ಹಿನ್ನಲೆಯಲ್ಲಿ ಭಾರತೀಯ ಜನತಾ ಪಕ್ಷದ ವತಿಯಿಂದ ಬಾಗಲಕೋಟೆ ನಗರದಲ್ಲಿ ಗುರುವಾರ ಪಾದಯಾತ್ರೆ ನಡೆಸಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಲಾಯಿತು. ನಗರದ ಗಣಪನ ದೇವಸ್ಥಾನದಿಂದ ಆರಂಭವಾದ ಪಾದಯಾತ್ರೆ ಸಾಗರ ಬಂಡಿಯವರ 5ನೇ ವಾರ್ಡ್ ಹಾಗೂ ಶಶಿಕಲಾ ಮಜ್ಜಿಗೆಯವರ 7ನೇ ವಾರ್ಡ್ ವ್ಯಾಪ್ತಿಯ ಚಿನ್ನಾಪೇಟೆ, ಬಾದಾಮಿಡಗಿ ಭಾಳ, ನಾರಾ ಸಂದಿ, ಶಂಕರಲಿಂಗ ಗುಡಿ, ಕುಂಬಾರ ಮಡುವು ಪ್ರದೇಶಗಳಲ್ಲಿ ಪಾದಯಾತ್ರೆಯ ಮೂಲಕ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿ ಮಾತನಾಡಿದ ಅವರು, ಪ್ರಚಾರಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿದೆ. ಎರಡು ವಾರ್ಡ್‌ಗಳಲ್ಲಿ ನಡೆದ ಪಾದಯಾತ್ರೆಗೆ ಜನರಿಂದ ಉತ್ತಮ ಉತ್ಸಾಹ ವ್ಯಕ್ತವಾಗಿದೆ ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಹಲವಾರು ನಾಯಕರು ಪ್ರಚಾರಕ್ಕೆ ಆಗಮಿಸಲಿದ್ದು, ಪಕ್ಷ ದಿನದಿಂದ ದಿನಕ್ಕೆ ಬಲಿಷ್ಠವಾಗುತ್ತಿದೆ ಎಂದು ಹೇಳಿದರು. ಮತಯಾಚನೆಯಲ್ಲಿ ದೇವರಾಜ ಪಾಟೀಲ, ರಾಜು ನಾಯ್ಕರ, ಬಸವರಾಜ ಕಟಗೇರಿ, ದುಂಡಪ್ಪ ಏಳಮ್ಮಿ, ಸಂಗಯ್ಯ ಸರಗಣಾಚಾರಿ, ಮಂಜುನಾಥ ಏಳಮ್ಮಿ, ಮಲ್ಲು ಭಾಳಿಪ್ಪನವರ, ಜ್ಞಾನೇಶ್ವರ ಕಪಾಟೆ, ದೂಳಪ್ಪ ಯಳ್ಳಿಗುತ್ತಿ, ಮಲ್ಲು ಗಿರಿಗಾಂವಿ, ಬಂಡಪ್ಪ ಏಳಮ್ಮಿ, ಪ್ರಮೋದ ಅಂಭಗೇರ, ನಗರಸಭೆ ಸದಸ್ಯೆ ಶಶಿಕಲಾ ಮಜ್ಜಿಗಿ, ಬಸಪ್ಪ ಯಳ್ಳಿಗುತ್ತಿ, ಅಮಾತೆಪ್ಪ ಮಂಚಿನ, ಗೋಪಾಲ ಕಟ್ಟಿಮನಿ, ಅಶೋಕ ಕಲಾಲ, ಸುರೇಶ ಮಜ್ಜಿಗಿ, ರೇಣುಕಾ ಬಡಿಗೇರ, ನಾಗರತ್ನಾ ಹಡಗಲಿ, ಸವಿತಾ ಗದ್ದಿಮಠ, ಶಿವಲೀಲಾ ಹಿರೇಮಠ, ಲಕ್ಷ್ಮೀ ಚಿಂಗಾಡೆ, ಸಾಗರ ಬಂಡಿ, ಸದಾನಂದ ನಾರಾ, ಈಶ್ವರ ಸುಗಂದಿ, ಸೇರಿದಂತೆ ಕಾರ್ಯಕರ್ತರು ಭಾಗವಹಿಸಿದ್ದರು.



ಬಿಜೆಪಿಗೆ ಮನೋಹರ ಏಳಮ್ಮಿ ಸೇರ್ಪಡೆ

ಕಾಂಗ್ರೆಸ್ ಮುಖಂಡ ಮನೋಹರ ಏಳಮ್ಮಿ ಸೇರಿದಂತೆ ಹಲವು ಮುಖಂಡರು ಭಾರತೀಯ ಜನತಾ ಪಕ್ಷಕ್ಕೆ ಗುರುವಾರ ಸೇರ್ಪಡೆಯಾದರು. ಸಂದೀಪ ಏಳಮ್ಮಿ, ಸಂಗಪ್ಪ ಕರಿಗೊಂಡ, ಚಂದ್ರು ಪೂಜಾರ, ಬಸವರಾಜ ಕುದರಿ, ಬಸವರಾಜ ಏಳಮ್ಮಿ, ಶ್ರೀಶೈಲ ಏಳಮ್ಮಿ, ಸಿದ್ದಪ್ಪ ಘಾಟದ ಸೇರ್ಪಡೆಯಾದರು. ದುಂಡಪ್ಪ ಏಳಮ್ಮಿಯವರ, ಸಂಗಮೇಶ ತಿಮ್ಮಣ್ಣವರ, ಸುರೇಶ ಮಜ್ಜಿಗಿ ಇದ್ದರು.

ಬಿಜೆಪಿಯತ್ತ ಮಹಿಳೆಯರ ಒಲವು: ರಾಜೇಶ್ವರಿ

ಬಾಗಲಕೋಟೆ: ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಹಾಗೂ ಬಾಗಲಕೋಟೆ ಮತಕ್ಷೇತ್ರದ ಅಭಿವೃದ್ಧಿಗಾಗಿ ಡಾ.ವೀರಣ್ಣ ಚರಂತಿಮಠ ಅವರ ಅಭಿವೃದ್ಧಿಪರ ಕಾರ್ಯ ಮೆಚ್ಚಿ ಮಹಿಳಾ ಶಕ್ತಿ ಬಿಜೆಪಿಯತ್ತ ವಾಲುತ್ತಿದೆ ಎಂದು ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ ಅವರ ಧರ್ಮಪತ್ನಿ ರಾಜೇಶ್ವರಿ ಚರಂತಿಮಠ ಹೇಳಿದರು. ನವನಗರದ 14,15ನೇ ಸೆಕ್ಟರ್‌ನಲ್ಲಿ ಬಿಜೆಪಿ ಪರವಾಗಿ ಪಾದಯಾತ್ರೆ ಮೂಲಕ ಮನೆ ಮನೆ ತೆರಳಿ ಮತಯಾಚನೆ ಮಾಡಿ ಮಾತನಾಡಿದ ಅವರು, ಡಾ.ವೀರಣ್ಣ ಚರಂತಿಮಠ ಅವರ ಶಾಸಕರಾಗಿದ್ದ ಅವಧಿಯಲ್ಲಿ ಬಾಗಲಕೋಟೆ ಅಭಿವೃದ್ಧಿ ಹೊಂದಿದೆ. ಕ್ಷೇತ್ರದ ಮಹಿಳೆಯರು ಅಭಿವೃದ್ಧಿ ಪರವಾದ ಬಿಜೆಪಿಯ ಪರವಾಗಿದ್ದಾರೆ. ಮತ ನೀಡಿ ಗೆಲ್ಲಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ನುಡಿದಂತೆ ನಡೆದ ಕಾಂಗ್ರೆಸ್‌ಗೆ ಬೆಂಬಲಿಸಿ: ಮೇಟಿ

ಬಾಗಲಕೋಟೆ: ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದು ಗ್ಯಾರಂಟಿ ಯೋಜನೆಗಳ ಮೂಲಕ ಜನ ಸಾಮಾನ್ಯರಿಗೆ ಆಸರೆಯಾಗಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಹೇಳಿದರು.

ತಾಲೂಕಿನ ಆಲೂರ, ಆಲೂರ ಎಲ್‌ಟಿ ಗ್ರಾಮದಲ್ಲಿ ಗುರುವಾರ ಪ್ರಚಾರ ಸಭೆ ನಡೆಸಿ ಅವರು ಮಾತನಾಡಿದರು. ಗ್ರಾಮೀಣ ಜನರ ಅಭಿವೃದ್ಧಿಗೆ ಕಾಂಗ್ರೆಸ್ ಬದ್ಧವಾಗಿದ್ದು, ನಮ್ಮತಂದೆ ದಿ.ಎಚ್.ವೈ..ಮೇಟಿ ಅವರು ಈ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಅವರ ನಿಧನದ ನಂತರಅವರ ಕನಸಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತೆ ಪಕ್ಷದ ಮುಖಂಡರು ನನಗೆ ಆದೇಶಿಸಿದ್ದಾರೆ. ಅಭಿವೃದ್ಧಿ ಕೈಗೊಳ್ಳಲು ಮತದಾರ ಪ್ರಭುಗಳ ಆಶೀರ್ವದಿಸಬೇಕೆಂದರು.

ನಂತರ ಚಿಕ್ಕಗುಳಬಾಳ, ಹಿರೇಗುಳಬಾಳ, ಮುತ್ತತ್ತಿ, ಹಿರೇಗುಳಬಾಳ ಎಲ್‌ಟಿ, ಬಿಜ್ಜಾಪುಟಂಟಿ, ಹೊದ್ಲೂರು, ಲವಳೇಶ್ವರ ಎಲ್‌ಟಿ, ಕಡ್ಲಿಮಟ್ಟಿ ಸ್ಟೇಷನ್ ಭಾಗದಲ್ಲಿ ಕಾರ್ಯಕರ್ತರೊಂದಿಗೆ ಪ್ರಚಾರ ಕೈಗೊಂಡು ಮತಯಾಚಿಸಿದರು. ತಿಪ್ಪಣ್ಣ ಬೀಳಗಿ, ಯಮುನಪ್ಪ ನಿಂಗಾಪೂರ, ಸಂಗಪ್ಪಕುರಿ, ದ್ಯಾಮಣ್ಣತೇಜಿ, ಹನುಮಂತ ಮೋಸಗೇರಿ, ಬಲರಾಮ ನಾಯಕ, ಸಂತೋಷ ಲಮಾಣಿ, ರಮೇಶಕೇಸಪ್ಪ, ಆಡಿವೆಪ್ಪ ಸದೂರ, ಹೊದ್ಲೂರ ಮಂಡಲೀಕಗೌಡರ, ಶಿವಪ್ಪ ನಡಗಡ್ಡಿ, ಭೀಮಪ್ಪ ಕಾಳಿ, ದಾವಲಸಾಬ್ ವಾಲೀಕಾರ, ಅರ್ಜುನ ಕರಡೊಳ್ಳಿ ಇದ್ದರು.

ಸಚಿವ ಆರ್.ಬಿ.ತಿಮ್ಮಾಪೂರ ಪ್ರಚಾರ: ನಗರದ ಕೆಲಪೇಟೆಯಲ್ಲಿ ಗುರುವಾರ ಬೆಳಗ್ಗೆ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪಕ್ಷದ ಮುಖಂಡರೊಂದಿಗೆ ಪ್ರಚಾರ ಕೈಗೊಂಡು ಮತಯಾಚಿಸಿದರು. ಸಮಗ್ರ ಅಭಿವೃದ್ಧಿಯೊಂದಿಗೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿರೂಪಿಸುವ ನಮ್ಮ ತಂದೆಯವರ ಕನಸು ಸಾಕಾರಗೊಳಿಸಲು ಮತ್ತೊಮ್ಮೆ ಕಾಂಗ್ರೆಸ್ ಬೆಂಬಲಿಸಬೇಕೆಂದರು.

ಬಳಿಕ ಸಚಿವರು ಮಾತನಾಡಿ, ಬಡವರ ಶ್ರೇಯೋಭಿವೃದ್ಧಿಗೆ ಕಾಂಗ್ರೆಸ್ ಬದ್ಧವಾಗಿದೆ. ಎಚ್.ವೈ.ಮೇಟಿ ಅವರ ಪುತ್ರ ಉಮೇಶ ಮೇಟಿ ಅವರನ್ನು ಬಹುಮತದಿಂದ ಗೆಲ್ಲಿಸಿ ಅಭಿವೃದ್ಧಿ ಕಾರ್ಯ ಮುಂದುವರಿಸಲು ಅವಕಾಶ ನೀಡಬೇಕು ಎಂದು ವಿನಂತಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಮುಖಂಡರಾದ ಪ್ರಕಾಶ ತಪಶೆಟ್ಟಿ, ಮಲ್ಲಿಕಾರ್ಜುನ ಚರಂತಿಮಠ, ಮಲ್ಲಿಕಾರ್ಜುನ ಮೇಟಿ, ನಾಗರಾಜ ಹದ್ಲಿ, ಸಂಜೀವ ವಾಡಕರ, ಸಂತೋಷ ಹೊಕ್ರಾಣಿ, ಬಸವರಾಜ ಅಂಬಿಗೇರ, ಮಂಜು ಮುಚಖಂಡಿ, ಅಭಿಷೇಕ ತಳ್ಳಕೇರಿ, ರಮೇಶ ಪದಸಲಗಿ, ರೇಣುಕಾ ನಾರಾಯಣಕರ್, ರೇಣುಕಾ ನ್ಯಾಮಗೌಡ, ಸುಧಾ ಪಾಟೀಲ, ಪ್ರೇಮಾ ರಾಠೋಡ ಇತರರು ಇದ್ದರು.



ದೇಶದ ಆರ್ಥಿಕತೆಗೆ ಜಿಎಸ್‌ಟಿ ಸಹಕಾರಿ

ಬೀಳಗಿ: ಜಿಎಸ್‌ಟಿ ದೇಶದಲ್ಲಿ ಅತ್ಯಂತ ಉತ್ತಮವಾದ ತೆರಿಗೆ ಪದ್ಧತಿಯಾಗಿದ್ದು, ವಸ್ತುಗಳು ಬೆಲೆ ಕಡಿಮೆಯಾಗಿವೆ. ಹಾಗೂ ದೇಶದ ಆರ್ಥಿಕತೆಗೆ ಉತ್ತಮ ವಾತಾವರಣ ನಿರ್ಮಿಸಿದೆ. ಬಹಳಷ್ಟು ಉದ್ಯೋಗಗಳ ಸೃಷ್ಟಿ ಹಾಗೂ ಬೆಳವಣಿಗೆಗೆ ಪೂರಕವಾಗಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಮೀನಾ ಆರ್.ಚಂದಾವರ್ಕರ ಹೇಳಿದರು.

ಪಟ್ಟಣದ ರುದ್ರಗೌಡ ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಬೀಳಗಿ, ವಾಣಿಜ್ಯ ವಿಭಾಗ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯೂಎಸಿ) ಸಹಯೋಗದಲ್ಲಿ ಜಿಎಸ್‌ಟಿ ಸುಧಾರಣೆಗಳು ಮತ್ತು ಎಂಎಸ್‌ಎಂಇಗಳು, ಸ್ಟಾರ್ಟ್-ಅಪ್‌ಗಳು ಹಾಗೂ ಉದ್ಯಮಶೀಲತೆಯ ಮೇಲೆ ಅವುಗಳ ಪ್ರಭಾವ ಎಂಬ ವಿಷಯದ ಕುರಿತು ಐಸಿಎಸ್‌ಎಸ್‌ಆರ್-ಎಸ್‌ಆರ್‌ಸಿ ಪ್ರಾಯೋಜಿತ ಎರಡು ದಿನಗಳ ಕಾಲ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಚಾರ್ಯ ಡಾ.ಶ್ರೀದೇವಿ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣ ಸಂಸ್ಥೆಗಳು ಇಂತಹ ವಿಚಾರ ಸಂಕಿರಣಗಳ ಮೂಲಕ ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆಯ ಮನೋಭಾವ ಬೆಳೆಸಬೇಕೆಂದರು. ತಾಂತ್ರಿಕ ಅಧಿವೇಶನ 1ರಲ್ಲಿ ಜಿಎಸ್‌ಟಿ ಮತ್ತು ಎಂಟ್ರಪ್ರೆನೇರಿಯಲ್ ಡೆವಲಪ್ಮೆಂಟ್ ವಿಷಯದ ಕುರಿತು ಚರ್ಚೆ ನಡೆಯಿತು. ಪ್ರೊ.ಗುರುಪಾದ ಬನ್ನಾಯಕ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿ ಪ್ರೊ.ಟಿ.ಕೃಷ್ಣಕುಮಾರ್ ಜಿಎಸ್‌ಟಿ ವ್ಯವಸ್ಥೆಯು ಹೊಸ ಉದ್ಯಮಶೀಲರಿಗೆ ನೀಡುವ ಅವಕಾಶಗಳು ಹಾಗೂ ಎದುರಾಗುವ ಸವಾಲುಗಳನ್ನು ವಿಶ್ಲೇಷಿಸಿದರು. ರಪೋರ್ಟರ್ ಡಾ.ಚೇತನ್ ಡಾಗಾ ಚರ್ಚೆಯ ಮುಖ್ಯ ಅಂಶಗಳನ್ನು ದಾಖಲಿಸಿದರು. ಉದ್ಯಮ ಆರಂಭಿಸಲು ಬೇಕಾದ ನೀತಿಗಳು, ತೆರಿಗೆ ಸವಲತ್ತುಗಳು ಹಾಗೂ ಮಾರುಕಟ್ಟೆ ಪ್ರವೇಶದ ಬಗ್ಗೆ ವಿಶ್ಲೇಷಣೆ ನಡೆಯಿತು.

ತಾಂತ್ರಿಕ ಅಧಿವೇಶನ 2ರಲ್ಲಿ, ಜಿಎಸ್‌ಟಿ ಮತ್ತು ಪಾಲಿಸಿ ಡೆವಲಪ್ಮೆಂಟ್ ಇನ್ ಇಂಡಿಯಾ ವಿಷಯದ ಕುರಿತು ಚರ್ಚೆ ನಡೆಯಿತು. ಪ್ರೊ.ಮಲ್ಲಿಕಾರ್ಜುನ ಮರಡಿ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿ ಪ್ರೊ.ಪ್ರಹ್ಲಾದ ರಾಠೋಡ ಭಾರತದಲ್ಲಿ ಜಿಎಸ್‌ಟಿ ನೀತಿಗಳ ರೂಪರೇಷೆ, ಅವುಗಳ ಅಭಿವೃದ್ಧಿ ಹಾಗೂ ಭವಿಷ್ಯದ ದಿಕ್ಕುಗಳ ಬಗ್ಗೆ ವಿವರಿಸಿದರು. ರಪೋರ್ಟರ್ ಡಾ.ಅಜ್ಜಪ್ಪ ಕಡೂರ ಅಧಿವೇಶನದ ಸಾರಾಂಶವನ್ನು ಮಂಡಿಸಿದರು. ಕಾರ್ಯಕ್ರಮದ ಸಂಚಾಲಕ ಡಾ. ಶಂಕರ ಸೊಪ್ಪಡ್ಲ ಹಾಗೂ ಸಹ ಸಂಚಾಲಕ ಪ್ರೊ.ಸಾವಿನಯ ಎಚ್.ಎಲ್., ಡಾ. ಕವಿತಾ ಮುತ್ತಪ್ಪ, ಪ್ರೊ.ಜಗದೀಶ ನಿರೂಪಿಸಿದರು. ಡಾ.ಶಂಕರ ಇದ್ದರು.



ಮಾ.29ಕ್ಕೆ ಪದ್ಮಾವತಿ ದೇಸಾಯಿ ಸಂಶೋಧನಾ ಕೃತಿ ಲೋಕಾರ್ಪಣೆ

ಜಮಖಂಡಿ: ಸ್ವಾತಂತ್ರ್ಯ ಸೇನಾನಿ ಪದ್ಮಾವತಿ ದೇಸಾಯಿಯವರ ಸಂಶೋಧನಾ ಕೃತಿಯನ್ನು ಮಾ.29ರಂದು ಬೆಳಗ್ಗೆ 10ಕ್ಕೆ ನಗರದ ಬಸವ ಭವನದಲ್ಲಿ ಕಸಾಪ ಮತ್ತು ಸ್ವಾ.ಸೇ.ಪದ್ಮಾವತಿಬಾಯಿ ಅಭಿಮಾನಿ ಬಳಗದ ಸಹಯೋಗದಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು ಸಂಶೋಧನಾ ಗ್ರಂಥ ಕರ್ತೃ ಹಿರಿಯ ನ್ಯಾಯವಾದಿ ತಾತಾಸಾಹೇಬ ಬಾಂಗಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದ್ಮಾವತಿ ದೇಸಾಯಿಯವರು ಮೂಲತಃ ಜಮಖಂಡಿ ತಾಲೂಕಿನವರಾದ ಈ ಮಹಿಳೆಯ ಬಗ್ಗೆ ನಮಗೆ ತಿಳಿದಿರಲಿಲ್ಲ, ಅಂತಹ ಧೀರ ಮಹಿಳೆಯ ಪರಿಚಯ ನಾಡಿಗೆ ತಿಳಿಸುವುದಕ್ಕಾಗಿ ಅವರ ಕಿರು ಪರಿಚಯದ ಸಂಶೋಧನಾ ಗ್ರಂಥ ಲೋಕಾರ್ಪಣೆ ಮಾಡಲಿದ್ದೇವೆ ಎಂದರು. ಅಂದು ಮೂಲ ಸಿದ್ಧ ಕ್ಷೇತ್ರದ ಸಿದ್ಧಮುತ್ಯಾ, ಗ್ರಂಥ ಕರ್ತೃ ನ್ಯಾಯವಾದಿ ತತಾಸಾಹೇಬ ಬಾಂಗಿ, ಸ್ವಾ.ಸೇ ಪದ್ಮಾವತಿಬಾಯಿಯವರ ಮೊಮ್ಮಗ ಮನೋಜ ಪಾಟೀಲ, ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಪ್ರೊ.ಮೀನಾ ಚಂದಾವರಕರ, ಡಾ.ವೈ.ಎಂ.ಯಾಕೊಳ್ಳಿ, ಮಹಾದೇವ ಬಸರಕೋಡ, ಸವಿತಾ ಬೆಳಗಲಿ, ಡಾ.ಎ.ಬಿ.ವಗ್ಗರ, ಪ್ರೊ.ಕೆ.ಚನ್ನಬಸಪ್ಪ, ಸುಬೇದಾರ ಮೇಜರ, ಬಸವರಾಜ ಹಟ್ಟಿಗೌಡರ, ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಕಾಡು ಮಾಳಿ, ಶ್ರೀಶೈಲ ಮೊಟಗಿ, ಸ್ವಾ.ಸೇ ಕುಟುಂಬ ಸದಸ್ಯರು ಆಗಮಿಸಲಿದ್ದಾರೆ. ಸ್ವಾ ಸೇನಾನಿ ಪದ್ಮಾವತಿ ದೇಸಾಯಿಯವರಿಗೆ ಸಹಾಯ ಮಾಡಿದ 96 ವರ್ಷದ ವೈದ್ಯ ಡಾ.ಪ್ರಹ್ಲಾದ ಹುಲ್ಯಾಳಕ ಮತ್ತು ಪ್ರಕಾಶ ಹೊಸವಾಡ ಅವರನ್ನು ಸನ್ಮಾನಿಸಲಾಗುವುದು.

ಪುಸ್ತಕ ಲೋಕಾರ್ಪಣೆಯಲ್ಲಿ ಸ್ವಾ ಸೇ ಕುಟುಂಬದವರಾದ ಹುನ್ನೂರಿನ ಶಂಕರ ಜಾಧವ, ಸರೋಜಾ ಕುಲಕರ್ಣಿ, ಶೈಲಾ ಜೋಶಿ, ಅಶೋಕ ಹುಲ್ಯಾಳಕ, ಸೇರಿದಂತೆ ಅನೇಕರನ್ನು ಸನ್ಮಾನಿಸಲಾಗುವದು ಎಂದು ಹೇಳಿದರು. ಕಸಾಪ ತಾಲೂಕಾಧ್ಯಕ್ಷ ಸಂತೋಷ ತಳಕೇರಿ ಮಾತನಾಡಿದರು. ಶ್ರೀಪಾದ ಹೊಸವಾಡ, ಗಿರಮಲ್ಲಪ್ಪ ಹಂಚಿನಾಳ, ಎಮ್.ಡಿ.ಸಂಕ, ಬಸವರಾಜ ನಾಗಮೋತಿ.



ರಾಚೋಟೇಶ್ವರ ರಥೋತ್ಸವ ನಾಳೆ

ಕೆರೂರ: ಪಟ್ಟಣದ ಹಳಪೇಟೆ ಬಡಾವಣೆಯ ಆರಾಧ್ಯದೈವ ಶ್ರೀ ಭದ್ರಕಾಳಿ ಸಮೇತ ರಾಚೋಟೇಶ್ವರ ಮಹಾರಥೋತ್ಸವ ಮಾ.28ರಂದು ಸಂಜೆ 5 ಗಂಟೆಗೆ ನಡೆಯಲಿದೆ. ಜಾತ್ರೆಯ ಅಂಗವಾಗಿ ಅಂದು ಬೆಳಗ್ಗೆ ದೇವಸ್ಥಾನದಲ್ಲಿ ರಾಚೋಟೇಶ್ವರ ದೇವರಿಗೆ ಮಹಾಭಿಷೇಕ, ರುದ್ರಾಭಿಷೇಕ ಹಾಗೂ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ನಡೆಯಲಿವೆ. ಏ.1ರ ವರೆಗೆ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ನಾಟಕ ಕಾರ್ಯಕ್ರಮಗಳು ನಡೆಯಲಿದೆ. ಮಾ.29ರಂದು ರಾತ್ರಿ 10 ಗಂಟೆಗೆ ರಾಚೋಟೇಶ್ವರ ದೇವರ ಅಗ್ನಿ ಉತ್ಸವ, ಮಾ.30ರಿಂದ ಮೂರು ದಿನ ಕುಸ್ತಿ ಪಂದ್ಯಾವಳಿಗಳು ಜರುಗಲಿವೆ. ಜಾತ್ರೆಯ ರಥೋತ್ಸವದ ಅಂಗವಾಗಿ ವಿಜಯಪುರ ಜಿಲ್ಲೆಯ ಸಾರವಾಡ ಗ್ರಾಮದವರಿಂದ ಶಕ್ತಿ ಗೊಂಬೆ ಕುಣಿತ ಮೆರವಣಿಗೆ ನಡೆಯಲಿದೆ ಎಂದು ದೇವಾಲಯ ಸಮಿತಿ ಪ್ರಕಟಣೆ ತಿಳಿಸಿದೆ.

ಶ್ರದ್ಧಾಭಕ್ತಿಯ ಸಾಯಿ ತೊಟ್ಟಿಲೋತ್ಸವ

ಕಲಾದಗಿ: ಶ್ರೀರಾಮ ನವಮಿ ಹಾಗೂ ಸಾಯಿಬಾಬಾ ಜನ್ಮದಿನ ಅಂಗವಾಗಿ ಇಲ್ಲಿನ ಸಾಯಿ ಮಂದಿರದಲ್ಲಿ ಸಾಯಿಬಾಬಾ ತೊಟ್ಟಿಲೋತ್ಸವ ಸಾಯಿಬಾಬಾ ಸೇವಾ ಸಮಿತಿ ಹಾಗೂ ಸ್ಥಳೀಯ ಭಕ್ತರೊಡಗೂಡಿ ಶ್ರದ್ಧಾ ಭಕ್ತಿಯಿಂದ ಸಡಗರ ಸಂಭ್ರಮದಿಂದ ನಡೆಯಿತು. ಬೆಳಗ್ಗೆ ಸಾಯಿಬಾಬಾ ಮೂರ್ತಿಗೆ ಪಂಚಾಮೃತಭಿಷೇಕ, ಅಲಂಕಾರ ಪೂಜೆ, ಸಾಯಿಮಂತ್ರ ಮಂಗಳಾರತಿ ಜರುಗಿದವು. ಗ್ರಾಮದ ಮಹಿಳಾ ಭಜನೆ ಮಂಡಳಿಯವರು ನೀಡಿದ ಭಜನಾ ಕಾರ್ಯಕ್ರಮ, ಸಾಯಿನಾಮ ಭಜನೆ ಎಲ್ಲರ ಗಮನ ಸೆಳೆಯಿತು. ಮಧ್ಯಾಹ್ನ 12.30 ಗಂಟೆಗೆ ಗ್ರಾಮದ ನೂರಾರು ಸುಮಂಗಳೆಯರು ಸಾಯಿಬಾಬಾರ ತೊಟ್ಟಿಲೋತ್ಸವ ನೆರವೇರಿಸಿದರು. ಮಧ್ಯಾಹ್ನ ಸಂಜೆ ಧೂಪಾರತಿ ಮುಂತಾದ ಪೂಜಾ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನೆರವೇರಿದವು. ಪಕ್ಕದೂರುಗಳಿಂದ ಆಗಮಿಸಿದ್ದ ಭಕ್ತಸಮೂಹ ತೊಟ್ಟಿಲೋತ್ಸವದಲ್ಲಿ ಪಾಲ್ಗೊಂಡಿದ್ದರು.



ಅಡುಗೆ ಸಿಲಿಂಡರ್ ಸ್ಫೋಟ: ಇಬ್ಬರಿಗೆ ಗಾಯ

ತೇರದಾಳ: ಪಟ್ಟಣದ ದರ್ಗಾ ಕಾಲೋನಿಯ ಮನೆಯೊಂದರಲ್ಲಿ ಅಡುಗೆ ಸಿಲಿಂಡರ್ ಸ್ಫೋಟಗೊಂಡು ಇಬ್ಬರಿಗೆ ಗಾಯವಾಗಿದೆ. ಬುಧವಾರ ಭಾರಿ ಸದ್ದಿನೊಂದಿಗೆ ಸಿಲಿಂಡರ್ ಬ್ಲಾಸ್ಟ್ ಆಗಿದ್ದು, ಮನೆಯ ಮೇಲ್ಛಾವಣಿಯ ಸಿಮೆಂಟ್ ಪಾಡಿ ಪುಡಿಯಾಗಿದೆ.

ಶೋಭಾ(ಬಸವ್ವ) ಬೆಳಕೂಡ (45) ಹಾಗೂ ಮಗ ಚೇತನ (25) ಇವರಿಬ್ಬರಿಗೂ ಸುಟ್ಟ ಗಾಯವಾಗಿದೆ. ಸ್ಥಳೀಯರು ಇವರಿಬ್ಬರನ್ನು ಕೂಡಲೇ ಪದ್ಮಾ ಆಸ್ಪತ್ರೆಗೆ ದಾಖಲ ಮಾಡಿದ್ದಾರೆ. ಪ್ರಥಮ ಚಿಕಿತ್ಸೆ ಪಡೆದ ನಂತರ ಇವರನ್ನು ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರದ ಬಿಎಲ್‌ಡಿಇ ಆಸ್ಪತ್ರೆಗೆ ಕಳುಹಿಸಲಾಗಿದೆ.

ಸುದ್ದಿ ತಿಳಿದ ತಕ್ಷಣವೇ ತೇರದಾಳ ತಹಶೀಲ್ದಾರ್ ವಿಜಯಕುಮಾರ ಕಡಕೋಳ, ಪಿಎಸ್‌ಐ ಸಿಂಗನ್ನವರ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ವಾರ್ಡ್ ನಿವಾಸಿ ಮಹೇಶ ಶೇಡಬಾಳ ಮಾತನಾಡಿ, ಸಿಲಿಂಡರ್ ಸ್ಫೋಟಕ್ಕೆ ಸುತ್ತಮುತ್ತಲಿನ ಮನೆಗಳಲ್ಲಿ ಭೂಕಂಪನವಾದಂತಹ ಅನುಭವವಾದಂತಾಯಿತು. ನಮ್ಮ ಮನೆಯ ಮೇಲ್ಛಾವಣಿಗಳು ಒಂದೆರಡು ನಿಮಿಷದ ವರೆಗೆ ಕಂಪಿಸಿದಂತಹ ಅನುಭವವಾಯಿತು. ಭಾರಿ ಸದ್ದು ಕೇಳಿ ಬೆಚ್ಚಿಬಿದ್ದ ನಾವೆಲ್ಲಾ ಭಯದಿಂದ ನಮ್ಮ ಮನೆಯವರೆಲ್ಲರನ್ನು ಕರೆದುಕೊಂಡು ಹೊರಗೋಡಿ ಬಂದು ನಿಂತೆವು ಇದೊಂದು ತುಂಬಾ ಭಯಾನಕ ಘಟನೆ ಎಂದರು.



ಅಲ್ಲದೆ ಗಾಯಾಳುಗಳು ದಾಖಲಾಗಿದ್ದ ಡಾ.ಪದ್ಮಾ ಆಸ್ಪತ್ರೆಗೆ ಆರೋಗ್ಯ ವಿಚಾರಿಸಿದರು. ಬಳಿಕ ಮಾತನಾಡಿದ ತಹಶೀಲ್ದಾರ್, ಸಾರ್ವಜನಿಕರು ಗ್ಯಾಸ್, ಪೆಟ್ರೋಲ್, ಡಿಸ್ಲೆಲ್ ವಿಷಯದಲ್ಲಿ ಅತ್ಯಂತ ಜಾಗೃತವಾಗಿರಬೇಕು. ಸಣ್ಣ ನಿರ್ಲಕ್ಷ್ಯವು ಸಹ ಜೀವಕ್ಕೆ ಹಾನಿ ತರಬಹುದು. ಇತ್ತೀಚೆಗೆ ಕೆಲವು ವದಂತಿಗಳನ್ನು ನಂಬಿ ಮನೆಯಲ್ಲಿ ಪೆಟ್ರೋಲ್, ಡಿಸ್ಲೆಲ, ಗ್ಯಾಸ್ ಶೇಖರಿಸಿಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ಕಾರಣ ಯಾವುದೋ ಕಾರಣಕ್ಕೂ ಇಂತಹ ತಪ್ಪು ಮಾಡಬಾರದು. ಅಡುಗೆ ಮುಗಿದ ಮೇಲೆ ಕಡ್ಡಾಯವಾಗಿ ರೆಗ್ಯುಲೇಟರ್ ಬಂದ ಮಾಡಲೇಬೇಕು ಎಂದು ತಿಳಿಸಿದರು. ಆಹಾರ ನಿರೀಕ್ಷಕ ಸೂಡಿ, ಮುಖ್ಯಾಧಿಕಾರಿ ಎಚ್.ಪಿ.ಗಿಡ್ಡಿ ಹಾಗೂ ಸಿಬ್ಬಂದಿ ಇದ್ದರು.

ಮಕ್ಕಳ ಆರೋಗ್ಯದತ್ತ ಕಾಳಜಿ ವಹಿಸಿ

ಗುಳೇದಗುಡ್ಡ: ಪಾಲಕರು ತಮ್ಮ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಮಕ್ಕಳ ದೇಹಕ್ಕೆ ಅವಶ್ಯಕವಾಗಿರುವ ಪೋಷಕಾಂಶವುಳ್ಳ ಆಹಾರವನ್ನು ಸಮಯಕ್ಕೆ ಸರಿಯಾಗಿ ನೀಡಬೇಕು. ಅಲ್ಲದೇ ಮಕ್ಕಳು ಆಟಪಾಠಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ನೀಡಬೇಕು ಎಂದು ಪಟ್ಟಣದ ಜವಳಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಡಾ.ಚಂದ್ರಕಾಂತ ಜವಳಿ ಹೇಳಿದರು.

ಗುರುವಾರ ಪಟ್ಟಣದ ಜವಳಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಸ್ಥಳೀಯ ಪಿಂಚಿಯ ಗಂಗಮ್ಮ ಅಂದಾನೆಪ್ಪಾ ಅಂಗಡಿ ಪೂರ್ವ ಪ್ರಾಥಮಿಕ ಶಾಲೆಯ ಆಶ್ರಯದಲ್ಲಿ ನಡೆದ ಶಾಲಾ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಮಕ್ಕಳ ಆರೋಗ್ಯ ಜಾಗೃತಿ ಹಾಗೂ ಉಚಿತ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿ, ಮಕ್ಕಳ ಆರೋಗ್ಯದಲ್ಲಿ ಸ್ವಲ್ಪವೂ ಏರುಪೇರಾದರೆ ಪಾಲಕರು ನಿರ್ಲಕ್ಷ್ಯ ವಹಿಸದೇ ತಜ್ಞ ವೈದ್ಯರನ್ನು ಕಾಣಬೇಕು ಎಂದರು.

ಮಕ್ಕಳತಜ್ಞ ವೈದ್ಯರಾದ ಡಾ.ಚಂದ್ರಶೇಖರ ಶಿರೂರ ಹಾಗೂ ಡಾ.ನಿಖಿತಾ ಕೇಲೂಸಕಟ್ಟಿ ಮಕ್ಕಳ ಆರೋಗ್ಯ ತಪಾಸಣೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಚೇರಮನ್ ಅಮಾತೆಪ್ಪಾ ಕೊಪ್ಪಳ, ನಿರ್ದೇಶಕ ರವೀಂದ್ರ ಅಂಗಡಿ, ಮುಖ್ಯೋಪಾಧ್ಯಾಯಿನಿ ಸುಜಾತ ಕರಡಿ



ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಹಿರಿದು

ಲೋಕಾಪುರ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ದೇಶದ ಭವಿಷ್ಯಕ್ಕೆ ಬೇಕಾಗಿರುವ ಸ್ವಸ್ಥ, ಸದೃಢ ಯುವಜನತೆ ನಿರ್ಮಿಸುವಲ್ಲಿ ಹಾಗೂ ದೇಶದ ಪ್ರತಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಹಿರಿದಾದುದು ಎಂದು ಶಿಕ್ಷಕ ಸುರೇಶ ಹರಕಂಗಿ ಹೇಳಿದರು.

ಮುಧೋಳದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ(ರಿ) ಕಮತಗಿ ಆಯೋಜಿಸಿದ ಮೇಘಮೈತ್ರಿ ದ್ವಿತೀಯ ಯುವ ಸಾಹಿತ್ಯ ಸಮ್ಮೇಳನದಲ್ಲಿ ಶಿಕ್ಷಣರತ್ನ ಪ್ರಶಸ್ತಿ ಪಡೆದ ಶಿಕ್ಷಕ ಎಂ.ಎಸ್.ಜಾಲಿಕಟ್ಟಿ ಅವರಿಗೆ ಪಟ್ಟಣದ ಗೆಳೆಯರ ಬಳಗದಿಂದ ಆಯೋಜಿಸಿದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಕರು ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಿ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ದೇಶಕ್ಕೆ ಉತ್ತಮ ಪ್ರಜೆಗಳನ್ನು ಕೊಡುಗೆಯಾಗಿ ನೀಡುವುದು ಮುಖ್ಯ ಜವಾಬ್ದಾರಿಯಾಗಿದೆ ಎಂದರು.

ಇಡೀ ಸಮಗ್ರ ಸಮಾಜದ ಜವಾಬ್ದಾರಿ ಶಿಕ್ಷಕರನ್ನು ಅವಲಂಬಿಸಿದೆ. ಹಾಗೂ ಅವರ ಕಾರ್ಯ ಅತ್ಯಂತ ಪವಿತ್ರ ಕಾರ್ಯವಾಗಿದೆ. ಮಕ್ಕಳಿಗೆ ಜ್ಞಾನ ತುಂಬುವುದರ ಜೊತೆಗೆ ಜೀವನ ಮೌಲ್ಯಗಳನ್ನು, ಆದರ್ಶಗಳನ್ನು ತುಂಬಿ ಭವ್ಯ ಭಾರತ ನಿರ್ಮಾಣದಲ್ಲಿ ಶಿಕ್ಷಕರು ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಅವರ ಪಾತ್ರ ಸಮಾಜದಲ್ಲಿ ಅತ್ಯಂತ ಹಿರಿದಾದುದು ಎಂದು ಶ್ಲಾಘಿಸಿದರು. ಶಿಕ್ಷಕ ದುಂಡಯ್ಯ ಸಾಲಿಮಠ ಮಾತನಾಡಿ, ಶಿಕ್ಷಕರ ಕಾರ್ಯ ಜನ ಮೆಚ್ಚುವಂತಹದ್ದು. ವಿದ್ಯಾರ್ಥಿಗಳ ಜ್ಞಾನಾರ್ಜನೆಯಲ್ಲಿ, ಅದರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಪ್ರಮುಖವಾಗಿದೆ. ಹಾಗೂ ಸುಶಿಕ್ಷಿತ ಸಮಾಜ ನಿರ್ಮಾಣದ ಜವಾಬ್ದಾರಿ ಹಾಗೂ ಹೊಣೆಗಾರಿಕೆ ಶಿಕ್ಷಕರ ಮೇಲಿದೆ. ಶಿಕ್ಷಕರು ಕಾಣ ಪರಿಶ್ರಮದಿಂದ, ಪ್ರಾಮಾಣಿಕತೆಯಿಂದ ವಿದ್ಯಾದಾನ ಮಾಡಬೇಕು ಎಂದು ತಿಳಿಸಿದರು.

ಕಿರಣ ಭಜಂತ್ರಿ, ಮಂಜು ರೇವಡಿಕೊಪ್ಪ, ರಾಜು ಪಟ್ಟಣಶೆಟ್ಟಿ, ಬಸವರಾಜ ಮಾಳಿ, ಕೃಷ್ಣಾ ಹೂಗಾರ, ಅಕ್ಷತ ಕಾಗಿಯವರ, ಧನುಷ ಕಲಾಲ, ಕುಶಾಲ ಗಾಣಿಗೇರ, ಪತ್ರಕರ್ತ ಪೀರಸಾಬ ನದಾಫ, ಈರಪ್ಪ ಸಾಳಗುಂದಿ ಇದ್ದರು.



ಕಿರುಸುದ್ಧಿ

ಇಂದು ವಿಶೇಷ ಉಪನ್ಯಾಸ

•**ಬಸವನಬಾಗೇವಾಡಿ:** ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಸಹಯೋಗದಲ್ಲಿ ಪಿ.ಲಂಕೇಶ ಬದುಕು ಬರಹ ಪತ್ರಿಕೋದ್ಯಮ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಮಾ.27ರಂದು ಬೆಳಗ್ಗೆ 10.30ಕ್ಕೆ ಮಹಾವಿದ್ಯಾಲಯದ ಸಭಾಭವನದಲ್ಲಿ ನಡೆಯಲಿದೆ. ವಿಜಯಪುರ ಆದರ್ಶ ಶಿಕ್ಷಕರ ವೇದಿಕೆ ಜಿಲ್ಲಾಧ್ಯಕ್ಷ ಉಮೇಶ ಕೌಲಗಿ ಉದ್ಘಾಟಿಸುವರು ವಿಶೇಷ ಉಪನ್ಯಾಸಕರಾಗಿ ಸಿದ್ದರಾಮ ಬಿರಾದಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರಿನ ರಜಿಸ್ಟ್ರಾರ್ ಕರಿಯಪ್ಪ ಎನ್ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಅಧ್ಯಕ್ಷ ಎಲ್.ಎನ್.ಮುಕುಂದರಾಜ, ಶಂಕರ ಬೈಚಬಾಳ, ಮಲ್ಲಿಕಾರ್ಜುನ ಗದ್ದನಕೇರಿ ಉಪಸ್ಥಿತರಿರುವರು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎ.ಸೂರ್ಯವಂಶಿ ಅಧ್ಯಕ್ಷತೆ ವಹಿಸುವರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಬಿ.ಎಂ ಸಾಲವಾಡಗಿ ತಿಳಿಸಿದ್ದಾರೆ.

ಇಂದು ಲೋಕಾರ್ಪಣೆ

•**ತಾಳಿಕೋಟೆ:** ತಾಲೂಕಿನ ಸುಕ್ಷೇತ್ರ, ಹೊಸಹಳ್ಳಿ ಗ್ರಾಮದಲ್ಲಿ ಮಾರುತೇಶ್ವರ ನೂತನ ಮಂದಿರ ಲೋಕಾರ್ಪಣೆ ಮಾ.27ರಂದು ಜರುಗಲಿದೆ. ಅಂದು ಬೆಳಗ್ಗೆ 5ಗಂಟೆಯಿಂದ ಹೋಮ ಹವನ ಮತ್ತು ಮಾರುತೇಶ್ವರ ಮಂದಿರ ಜೀರ್ಣೋದ್ಧಾರ ಮತ್ತು ಕಳಸಾರೋಹಣ ವಿರೂಪಾಕ್ಷ ಭಟ್ಟ ಜೋಶಿ ಇಲಕಲ್ಲ ಹಾಗೂ ವೇದ ವಿದ್ಯಾರ್ಥಿಗಳಿಂದ ನೆರವೇರಿಸಲಾಗುವುದು. ತಾಳಿಕೋಟೆ ತಾಲೂಕು ಬ್ರಾಹ್ಮಣ ಸಮಾಜದ ಗಾಯತ್ರಿ ಭಜನಾ ಮಂಡಳಿ, ಮಹಾಲಕ್ಷ್ಮೀ ಭಜನಾ ಮಂಡಳಿ ಹಾಗೂ ವಿಜಯಪುರದ ಕಲ್ಪವೃಕ್ಷ ಪಾರಾಯಣ ಸಂಘ ಇವರಿಂದ ಸಂಗೀತ ಕಾರ್ಯಕ್ರಮ ಜರುಗುವುದು. ಸಂಜೆ 4ಗಂಟೆಗೆ ಅಭಿನವ ಗಜದಂಡ ಶಿವಾಚಾರ್ಯರು ಬೃಹನ್ಮಠ ಕೋಟಿನಕಟ್ಟಿ ದೇವರಭೂಪುರ ಅವರಿಗೆ ಶಾಂತಗೌಡ ಅಯ್ಯಪ್ಪಗೌಡ ಪಾಟೀಲ ಅವರಿಂದ ತುಲಾಭಾರ ಜರುಗುವುದು. ವಿನಾಯಕ ಮೂರ್ತಿಗೆ ಬೆಳ್ಳಿ ಕಿರೀಟವನ್ನು ಭೀಮನಗೌಡ ಸಿದ್ದನಗೌಡ ಬಿರಾದಾರ ಅರ್ಪಿಸಲಿದ್ದಾರೆ.

ಎಪ್ರಿಲ್‌ನಿಂದ ಜನಗಣತಿ ಆರಂಭ: ಜಿಲ್ಲಾಧಿಕಾರಿ

•**ವಿಜಯಪುರ:** ನಮ್ಮ ಜನಗಣತಿ, ನಮ್ಮ ಭವಿಷ್ಯ ಧ್ಯೇಯ ವಾಕ್ಯದಡಿ ಭಾರತ ಜನಗಣತಿ-2027ರ ಮೊದಲ ಹಂತದ ಜನಗಣತಿಯನ್ನು ಎಪ್ರಿಲ್‌ನಿಂದ ಜಿಲ್ಲೆಯಲ್ಲಿ ಆರಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ತಿಳಿಸಿದ್ದಾರೆ. ಮೊದಲ ಹಂತ -1 ಮನೆಪಟ್ಟಿ ಮತ್ತು ಮನೆ ಗಣತಿ (ಎಚ್‌ಎಲ್‌ಒ) ಎಪ್ರಿಲ್ 1ರಿಂದ 15ರವರೆಗೆ ಇದೇ ಮೊದಲ ಬಾರಿಗೆ ಸ್ವಯಂ ಗಣತಿ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಈ ಸ್ವಯಂ ಗಣತಿ ಐಚ್ಛಿಕವಾಗಿರುತ್ತದೆ. ಕುಟುಂಬಗಳು ಮಾತ್ರ ಸ್ವಯಂ ಗಣತಿ ಮಾಡಬಹುದಾಗಿದೆ ಎಂದವರು ತಿಳಿಸಿದ್ದಾರೆ. ಈ ಹಂತದಲ್ಲಿ ನಿಮ್ಮ ಮೊಬೈಲ್ ಮತ್ತು ಡೆಸ್ಕ್‌ಟಾಪ್ ಮೂಲಕ ಲಾಗಿನ್ ಆಗಬೇಕು. ಲಾಗಿನ್ ನಲ್ಲಿ ಕಾಣಿಸುವ 33 ಸರಳ ಪ್ರಶ್ನೆಗಳಿಗೆ ಸೂಕ್ತವಾದ ಮಾಹಿತಿಯನ್ನು ಅಪ್‌ಡೇಟ್ ಮಾಡಿದ ನಂತರ ಎಸ್‌ಇ ಐಡಿ ಸೃಜನೆಯಾಗುತ್ತಿದ್ದಂತೆಯೇ ಅದನ್ನು ಸೇವ್ ಮಾಡಬೇಕು. ಬಳಿಕ ಗಣತಿದಾರರು ಮನೆಗೆ ಭೇಟಿ ನೀಡಿದಾಗ ಅವರಿಗೆ ನೀಡಬೇಕು. ಸ್ವಯಂ ಗಣತಿ ಪೂರ್ಣ ಪ್ರಮಾಣದ ಜನಗಣತಿಯಾಗುವುದಿಲ್ಲ. ಏ. 16 ರಿಂದ ಮೇ 15ರ ವರೆಗೆ ಮನೆ ಪಟ್ಟಿ ಕ್ಷೇತ್ರ ಕಾರ್ಯ ಕೈಗೊಳ್ಳಲಾಗುವುದು. ಫೆ. 2027ರಿಂದ ಜನಸಂಖ್ಯಾ ಗಣತಿ 2ನೇ ಹಂತದ ಜನಗಣತಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಜನಗಣತಿಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಎಲ್ಲ ಚಾರ್ಜ್ ಅಧಿಕಾರಿಗಳಿಗೆ ಮತ್ತು ಕ್ಷೇತ್ರ ತರಬೇತುದಾರರಿಗೆ ತರಬೇತಿ ನೀಡಲಾಗಿದೆ. ಗಣತಿದಾರರಿಗೆ ಮತ್ತು ಮೇಲ್ವಿಚಾರಕರಿಗೆ ಆಯಾ ಚಾರ್ಜ್ ಹಂತಗಳಲ್ಲಿ ಎಪ್ರಿಲ್ 2026 ಮೊದಲ ವಾರದಲ್ಲಿ ತರಬೇತಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

ದೇವಸ್ಥಾನ ಜೀರ್ಣೋದ್ಧಾರಕ್ಕೆ ಅನುದಾನ: ಯತ್ನಾಳ

•**ವಿಜಯಪುರ:** ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ನಗರದಲ್ಲಿ ವಿವಿಧ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ 2025- 26 ನೇ ಸಾಲಿನ ಮುಜರಾಯಿ ಇಲಾಖೆಯಿಂದ 25 ಲಕ್ಷ ರೂ. ಅನುದಾನ ಮಂಜೂರಿಸಿದ್ದಾರೆ. ನಗರದ ವಾರ್ಡ್ ನಂ.2 ರ ಆಶ್ರಯ ಕಾಲೋನಿಯ ಪಾರಿ ಮಾರುತಿ ದೇವಸ್ಥಾನ, ದರ್ಗಾದ ವೀರಭದ್ರೇಶ್ವರ ದೇವಸ್ಥಾನ, ಗೋಂಧಳಿ ಗಲ್ಲಿಯ ಜೈ ಅಂಭಾಭವಾನಿ ಮಂದಿರ, ವಾರ್ಡ್ ನಂ.11 ರ ವಜ್ರ ಓಣಿಯ ಹನುಮಾನ ದೇವಸ್ಥಾನ, ವಾರ್ಡ್ ನಂ.14 ರ ಸುಣಗಾರ ಗಲ್ಲಿಯ ಹುಲಿಗೆಪ್ಪ ಜೀರ್ಣೋದ್ಧಾರಕ್ಕಾಗಿ ತಲಾ 5 ಲಕ್ಷ ಸೇರಿ ಒಟ್ಟು 25 ಲಕ್ಷ ರೂ. ಅನುದಾನ ಮಂಜೂರಾಗಿದೆ. ಇತ್ತೀಚೆಗೆ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗ ರೆಡ್ಡಿ ಅವರು ವಿಜಯಪುರ ನಗರಕ್ಕೆ ಆಗಮಿಸಿದಾಗ, ಈ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ನಗರ ಶಾಸಕರು ಮನವಿ ಸಲ್ಲಿಸಿದ್ದರು. ಇನ್ನೂ ಕೆಲವು ಬಾಕಿ ಉಳಿದ ದೇವಸ್ಥಾನಗಳಿಗೂ ಶೀಘ್ರ ಅನುದಾನ ಮಂಜೂರಿಸುವುದಾಗಿ ಸಚಿವರು, ನಗರ ಶಾಸಕರಿಗೆ ಭರವಸೆ ನೀಡಿದ್ದು, ಅವುಗಳಿಗೂ ಅನುದಾನ ಕೆಲ ದಿನಗಳಲ್ಲಿ ಮಂಜೂರಾಗಲಿವೆ ಎಂದು ನಗರ ಶಾಸಕರ ಸಾರ್ವಜನಿಕ ಸಂಪರ್ಕ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.



ಮುದ್ದೇಬಿಹಾಳ: ತಾಲೂಕಿನ ಹುಲ್ಲೂರ ಗ್ರಾಮದ ಎಸ್‌ಎನ್‌ಡಿ ಪಬ್ಲಿಕ್ ಶಾಲೆಯ ವತಿಯಿಂದ ಹಮ್ಮಿಕೊಂಡ ರಾಜ್ಯಮಟ್ಟದ ಚನ್ನಬಸವ ಪ್ರಶಸ್ತಿಯನ್ನು ವರದಿಗಾರ ಸಾಗರಕುಮಾರ ಎಂ.ಉಕ್ಕಲಿ, ಜನರ ಕೂಗು ಚಾನಲ್ ಸಂಪಾದಕ ಗುಲಾಮ ಧಪೇದಾರ, ಹೋರಾಟಗಾರ ಹರೀಶ ನಾಟಿಕಾರ, ಕುಮಾರ ಹಿರೇಮಠ ಸೇರಿದಂತೆ 30 ಹಲವು ಸಾಧಕರಿಗೆ ಪ್ರದಾನ ಮಾಡಿದರು. ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ.ಚಲವಾದಿ, ಯರಝರಿ ಮಠದ ಮಲ್ಲಾಲಿಂಗ ಮಹಾರಾಜರು, ಎಸ್.ಎಸ್.ತುರಡಗಿ, ಬಿ.ಎಸ್.ಮುದ್ನೂರ, ನಾನಾಗೌಡ ನಡುವಿನಮನಿ, ಮಂಜುನಾಥ ಕೊಪ್ಪ ಶಿಕ್ಷಕ ಗೌರೋಜಿ ಇದ್ದರು.

ಮಹಿಳೆಯರಿಗೆ ಅನುಕಂಪಕ್ಕಿಂತ ಅವಕಾಶ ಮುಖ್ಯ

•**ವಿಜಯಪುರ:** ತಿಕೋಟಾ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ ತಾಲೂಕು ಪಂಚಾಯತಿ ಹಾಗೂ ತಾಲೂಕುಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಕಾರ್ಯನಿರ್ವಾಹಕ ಅಧಿಕಾರಿ ಬಸವಂತರಾಯಗೌಡ ಬಿರಾದಾರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಜೀವನದಲ್ಲಿ ಹೆಣ್ಣು ಗಂಡು ಎಂದು ಭೇದಭಾವ ಮಾಡದೇ ಸಮಾನವಾಗಿ ಕಾಣಬೇಕು. ಹೆಣ್ಣನ್ನು ಕೀಳಾಗಿ ಎಂದೂ ಕಾಣಬಾರದು. ಹೆಣ್ಣಿಗೆ ಕೇವಲ ಅನುಕಂಪ ತೋರಿಸದೇ ಅವಳಿಗೆ ಅವಕಾಶ ನೀಡಿದ್ದಲ್ಲಿ ಎಲ್ಲವನ್ನೂ ಮಾಡಿ ತೋರಿಸುವ ಶಕ್ತಿ ಅವರಲ್ಲಿ ಅಡಗಿದೆ. ಇಲ್ಲಿ ಮಹಿಳೆಯನ್ನು ಅದಿ ಅನಾದಿ ಕಾಲದಿಂದಲೂ ದೇವತೆಯಾಗಿ ಪೂಜಿಸಲ್ಪಡುತ್ತಾಳೆ. ಅದರಿಂದಲೇ ಹೇಳಲಾಗಿದೆ ಯತ್ರ ನಾರ್ಯಸ್ತು, ತತ್ರ ದೇವತಾಃ ಎಂದು ಹೇಳಲಾಗಿದೆ ಎಂದರು. ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಗಂಗೂಬಾಯಿ ಮಡದಾನ ಮಾತನಾಡಿ, ಹೆಣ್ಣನ್ನು ದೇವರಂತೆ ಆರಾಧಿಸುವ ಭಾರತದಲ್ಲಿ ಜನಿಸಿದ ನಾವೆಲ್ಲರೂ ನಿಜಕ್ಕೂ ಧನ್ಯರು. ನಾವೆಲ್ಲರೂ ಸರಕಾರದ ಎಲ್ಲ ಯೋಜನೆಗಳ ಲಾಭ ಪಡೆದುಕೊಳ್ಳಬೇಕು ನಂತರ ಇತರರಿಗೂ ಲಾಭ ಪಡೆಯುವಂತೆ ಪ್ರೋತ್ಸಾಹಿಸಿ ಮಹಿಳೆಯರು ಸಬಲರಾಗಬೇಕು ಎಂದರು. ಜ್ಯೋತಿ ಬಿರಾದಾರ, ಭಾರತಿ ಪಾಟೀಲ, ಜೆ.ಎಸ್.ದೇಶಮುಖ, ಶಿವಾನಂದ ಹಂಜಗಿ, ಮಾತನಾಡಿದರು. ಗ್ಯಾರಂಟಿ ಯೋಜನೆಯ ಅನುಷ್ಠಾನ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ವರದಿ ವಾಚಿಸಿದರು. ತಾಲೂಕು ಐಇಸಿ ಸಂಯೋಜಕ ಕಲ್ಲಪ್ಪ ನಂದರಗಿ ನಿರೂಪಿಸಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಗೌರವಿಸಲಾಯಿತು.



ವಿಜಯಪುರ: ತಿಕೋಟಾ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ ತಾಲೂಕು ಪಂಚಾಯತಿ ಹಾಗೂ ತಾಲೂಕುಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಕಾರ್ಯನಿರ್ವಾಹಕ ಅಧಿಕಾರಿ ಬಸವಂತರಾಯಗೌಡ ಬಿರಾದಾರ ಚಾಲನೆ ನೀಡಿದರು. ತಾಲೂಕು ಯೋಜನಾಧಿಕಾರಿ ಮಹಾಂತೇಶ ಬಾಗೇವಾಡಿ, ಗ್ಯಾರಂಟಿ ಯೋಜನೆಯ ಸದಸ್ಯೆ ರಿಯಾನಾ ಜಮಖಂಡಿ, ಶಿವಾನಂದ ಹಂಜಗಿ, ದೀಲಿಪ ದಳವಾಯಿ, ಸಂಜು ಆಯತವಾಡ ಸೇರಿದಂತೆ ಅಧಿಕಾರಿಗಳು, ಸ್ವಸಹಾಯ ಸಂಘದ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು ಇತರರಿದ್ದರು.

ಜನಗಣತಿ 2027ರ ಕಾರ್ಯದ ಸಿಬ್ಬಂದಿಗೆ ಜಿಲ್ಲಾಧಿಕಾರಿ ಸೂಚನೆ

ತರಬೇತಿ ಸದುಪಯೋಗ ಪಡೆದುಕೊಳ್ಳಿ

•**ವಿಜಯಪುರ:** ಜಿಲ್ಲೆಯಲ್ಲಿ ಕೈಗೊಳ್ಳಲಾಗುತ್ತಿರುವ ಭಾರತ ಜನಗಣತಿ 2027ರ ಕಾರ್ಯಕ್ಕೆ ನಿಯೋಜಿಸುವ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಿ ನಿಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಾರತ ಜನಗಣತಿ 2027ರ ಜನಗಣತಿ ಕುರಿತು ಪೂರ್ವಭಾವಿ ಸಿದ್ಧತೆ ಹಾಗೂ ತರಬೇತುದಾರರಿಗೆ ವಿಡಿಯೋ ಸಂವಾದ ಮೂಲಕ ಮಾತನಾಡಿದ ಅವರು ಗಣತಿ ಕಾರ್ಯಕ್ಕೆ ನಿಯೋಜಿಸಿದ ಸಿಬ್ಬಂದಿಗಳು ಕಾಲ ಕಾಲಕ್ಕೆ ನೀಡುವ ತರಬೇತಿಯ ಪ್ರಯೋಜನ ಪಡೆದುಕೊಂಡು ಗಣತಿ ಕಾರ್ಯವನ್ನು ಯಾವುದೇ ಲೋಪ, ದೋಷಗಳಾಗದಂತೆ ಕಾರ್ಯ ನಿರ್ವಹಿಸಬೇಕು. ಮೊದಲನೆ ಹಂತವಾಗಿ ಎಪ್ರಿಲ್ 1ರಿಂದ 15ರ ವರೆಗೆ ಸ್ವಯಂ ಗಣತಿ ಕಾರ್ಯ ನಡೆಯಲಿದ್ದು, ಏ.16ರಿಂದ ಮೇ 15ರ ವರೆಗೆ ಮನೆ ಪಟ್ಟಿ ಕ್ಷೇತ್ರ ಕಾರ್ಯ ಕೈಗೊಳ್ಳಲಾಗುವುದು. ಫೆ.2027ರಿಂದ ಜನಗಣತಿ ಕಾರ್ಯ ನಡೆಯಲಿದೆ ಎಂದರು.

ಜಿಲ್ಲೆಯ ಎಲ್ಲ ನಗರ ಮತ್ತು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಾಡಿಗೆ ಇರುವ ಕುಟುಂಬಗಳು ಒಳಗೊಂಡಂತೆ, ಎಲ್ಲ ಮನೆಗಳು, ತೋಟದ ವಸ್ತಿ, ಸ್ಲಂ, ಎಲ್ಲ ಕುಟುಂಬಗಳ ಮನೆ ಪಟ್ಟಿ ಕಾರ್ಯ ಕೈಗೊಳ್ಳಬೇಕು. ಜನಗಣತಿಯಿಂದ ಯಾವುದೇ ಕುಟುಂಬ ಕೈಬಿಟ್ಟು ಹೋಗದಂತೆ ಅತಿ ಎಚ್ಚರಿಕೆಯಿಂದ ಜನಗಣತಿ ಕಾರ್ಯ ನಿರ್ವಹಿಸಬೇಕು. 50 ಗಣತಿದಾರರ ಸಿಬ್ಬಂದಿಗಳಿಗೆ ಗುಂಪು ಮಾಡಿ ತರಬೇತಿ ನೀಡಬೇಕು. ತರಬೇತಿಗೆ ನಿಯೋಜಿಸುವ ಸಿಬ್ಬಂದಿಗಳಿಗೆ 2 ರಿಂದ 3 ಬಾರಿಗೆ ತರಬೇತಿ ನೀಡಿ ಪೂರ್ಣ ಪ್ರಮಾಣದ ತಿಳುವಳಿಕೆ ಹೊಂದುವಂತೆ ತರಬೇತಿ ನೀಡಬೇಕು. ಈ ಕಾರ್ಯದಲ್ಲಿ ಮುಖ್ಯವಾಗಿ ಒಂದು ವಾರ್ಡನಲ್ಲಿ ಮತ್ತೊಂದು ವಾರ್ಡ್ ವಿಲೀನವಾಗದಂತೆ ಬ್ಲಾಕುಗಳನ್ನು ರಚಿಸಿ ಅಂತಿಮಗೊಳಿಸಬೇಕು. ಒಂದು ವೇಳೆ ಅಂತಿಮಗೊಳಿಸದೆ ಮುಂದಿನ ಪ್ರಕ್ರಿಯೆ ಹೋಗಲು ಬರುವುದಿಲ್ಲ, ಆದುದರಿಂದ ಅಂತಿಮಗೊಳಿಸುವ ಮುಂಚೆ ಕೂಲಂಕುಷವಾಗಿ ಪರಿಶೀಲಿಸಬೇಕು. ಯಾರು ನಿರ್ಲಕ್ಷ ಮಾಡದೆ ಈ ಕಾರ್ಯ ಪೂರ್ಣಗೊಳಿಸಿ ಎಂದು ಸೂಚಿಸಿದರು.

ಅಪರಜಿಲ್ಲಾಧಿಕಾರಿಡಾ.ಬಿದ್ರಾಮ,ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಇಂಡಿ ತಹಶೀಲ್ದಾರ್ ಬಿ.ಎಸ್ ಕಡಕಬಾವಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ವೀರಯ್ಯ ಸಾಲಿಮಠ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದೀನ ಸೌದಾಗರ ಸೇರಿದಂತೆ ಇತರರು ಉಪಸ್ಥಿತರಿದ್ದರು.



42 ಜನ ಆರೋಪಿಗಳ ಬಂಧನ: ಚಿನ್ನಾಭರಣ ವಶ

•**ವಿಜಯಪುರ:** ಜಿಲ್ಲೆಯಲ್ಲಿ ವಿವಿಧ 20 ಪ್ರಕರಣಗಳಿಗೆ ಸಂಬಂಧಿಸಿದಂತೆ 42 ಜನ ಆರೋಪಿಗಳನ್ನು ಬಂಧಿಸಿ, 1 ಕೋಟಿಗೂ ಹೆಚ್ಚು ಮೌಲ್ಯದ ಚಿನ್ನಾಭರಣ ಸೇರಿ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಇಂಡಿ ಉಪವಿಭಾಗದ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಸರಣಿ ಕಳ್ಳತನ, ದರೋಡೆ ಹಾಗೂ ದೇವಸ್ಥಾನಗಳ ಕಳವು ಪ್ರಕರಣದ ಆರೋಪಿಗಳನ್ನು ಬಂಧಿಸಲಾಗಿದೆಎಂದರು. ಕಳ್ಳತನ ಪ್ರಕರಣದ ಕಾರ್ಯಾಚರಣೆಯಲ್ಲಿ ಒಟ್ಟು 42 ಜನ ಆರೋಪಿಗಳನ್ನು ಬಂಧಿಸಿದ್ದು, 1,20,04,750 ರೂ. ಮೌಲ್ಯದ ಚಿನ್ನಾಭರಣ ಹಾಗೂ ವಾಹನಗಳನ್ನು ವಶಪಡಿಸಿಕೊಂಡಿದ್ದು, 2024-2025 ಹಾಗೂ 2025-2026 ರ ಅವಧಿಯಲ್ಲಿ ದಾಖಲಾಗಿದ್ದ 20ಕ್ಕೂ ಹೆಚ್ಚು ಪ್ರಕರಣಗಳ ಇತ್ಯರ್ಥ ಪಡಿಸುವಲ್ಲಿ ಪೊಲೀಸ್ ಇಲಾಖೆ ಯಶಸ್ವಿಯಾಗಿದೆ ಎಂದರು. ಜಿಲ್ಲೆಯ ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳನ್ನು ಭೇದಿಸಿ ಕಳ್ಳತನವಾಗಿದ್ದ ಚಿನ್ನ-ಬೆಳ್ಳಿ ಆಭರಣಗಳು ಜೆಸಿಬಿ, ಪಿಕಪ್ ವ್ಯಾನ್, ಸ್ಕಾರ್ಪಿಯೋ, ಕ್ರೂಸರ್‌ಗಳು, ಮೋಟಾರ್ ಸೈಕಲ್‌ಗಳು ಹಾಗೂ ನೀರಿನ ಪಂಪ್ ಸೆಟ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದರು. ಚಡಚಣದ ದೇವಸ್ಥಾನದಲ್ಲಿ ನಡೆದಿದ್ದ ಕಳ್ಳತನ. ಆಲಮೇಲದ ಖಾಸಗಿ ಫೈನಾನ್ಸ್‌ನಲ್ಲಿ ನಡೆದಿದ್ದ ನಗದು ದರೋಡೆ. ಹೊರ್ತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಲಾರಿ ತಡೆದು ನಡೆಸಿದ್ದ ದರೋಡೆ. ಪ್ರಕರಣಗಳ ಆರೋಪಿಗಳನ್ನು ಬಂಧಿಸಲಾಗಿದೆ ಎಂದರು. ಕಳೆದ ಎರಡು ವರ್ಷಗಳಿಂದ ಇಂಡಿ ಉಪವಿಭಾಗದಲ್ಲಿ ಸರಣಿ ಕಳ್ಳತನಗಳು ವರದಿಯಾಗುತ್ತಿದ್ದವು. ಹೀಗಾಗಿ ಇದಕ್ಕೆ ವಿಶೇಷ ತಂಡಗಳು ರಚಿಸಿ 20ಕ್ಕೂ ಹೆಚ್ಚು ಪ್ರಕರಣ ಭೇದಿಸಿ 42 ಆರೋಪಿಗಳನ್ನು ಬಂಧಿಸಲಾಗಿದ್ದು, ಸಾರ್ವಜನಿಕರ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಯನ್ನು ಮರಳಿ ಕೊಡಲು ಮುಂದಾಗಿದ್ದಾರೆ. ದೇವಸ್ಥಾನ ಹಾಗೂ ಫೈನಾನ್ಸ್ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಈ ಗ್ಯಾಂಗ್ ಕೃತ್ಯ ಎಸಗುತ್ತಿತ್ತು. ವಶಪಡಿಸಿಕೊಂಡ ವಾಹನ ಮತ್ತು ಚಿನ್ನಾಭರಣಗಳನ್ನು ವಾರಸುದಾರರಿಗೆ ಕಾನೂನು ಪ್ರಕ್ರಿಯೆಯ ನಂತರ ಹಸ್ತಾಂತರಿಸಲಾಗುವುದು. ಪೊಲೀಸರಿಗೆ ಎಸ್‌ಪಿ ಲಕ್ಷ್ಮಣ ನಿಂಬರಗಿ ಪ್ರಶಂಸನಾ ಪತ್ರ ನೀಡಿ ಗೌರವಿಸಿದರು.



ಸಂಭ್ರಮದ ಜಾತ್ರಾ ಮಹೋತ್ಸವ

•**ಝಳಕಿ:** ಸಮೀಪದ ಅರ್ಜನಾಳ ಗ್ರಾಮದ ಮಲ್ಲಯ್ಯ ದೇವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಮಲ್ಲಯ್ಯ ದೇವರಿಗೆ ಬೆಳಗ್ಗೆ ರುದ್ರಾಭಿಷೇಕ, ಪುಷ್ಪ ಅಲಂಕಾರ, ನೈವೇದ್ಯ ನಂತರ ಮಲ್ಲಯ್ಯ ಕಂಬ ಹಾಗೂ ಪಲ್ಲಕ್ಕಿ ಉತ್ಸವ ಜರುಗಿತು. ಬಸಲಿಂಗಯ್ಯ ಹಿರೇಮಠ, ಶಿವಲೀಲಾ ಹಿರೇಮಠ, ದಯಾನಂದ ಹಿರೇಮಠ ಚಂದ್ರಯ್ಯ ಹಿರೇಮಠ, ನಾಗೇಶಯ್ಯ ಚಿಟ್ಟಪಟ್ಟ, ಉಮೇಶಯ್ಯ ಹಿರೇಮಠ, ಡಾ.ರಜನಿದೇವಿ ಹಿರೇಪಟ್ಟ, ದಾನೇಶಯ್ಯ ಹಿರೇಮಠ, ಗಜಾನಂದ ಹಿರೇಮಠ, ಹಣಮಂತ ಮೇತ್ರಿ, ಈರಣ್ಣಗೌಡ ಬಿರಾದಾರ, ಮಳಸಿದ್ದಗೌಡ ಬಿರಾದಾರ, ಸುರೇಶ ಗೋಡೆಕಾರ, ಶ್ರೀಶೈಲಗೌಡ ಬಿರಾದಾರ, ಚಂದಪ್ಪ ನಾವಿ, ಶಿವಯೋಗೇಪ್ಪ ಗೋಡೆಕಾರ, ಯಶವಂತ ಗೋಡೆಕಾರ, ಚಂದ್ರಕಾಂತ ಇದ್ದರು.

ತಾಳಿಕೋಟೆಯಲ್ಲಿ ಜನಾಕ್ರೋಶಗೊಂಡ ಧರಣಿ

•**ತಾಳಿಕೋಟೆ:** ಪ್ರಜಾಸೌಧ ನಿರ್ಮಾಣ ಸ್ಥಳ ಆಯ್ಕೆ ವಿಚಾರ ಇದೀಗ ದೊಡ್ಡ ವಿವಾದಕ್ಕೆ ತಿರುಗಿದ್ದು, ತಾಲೂಕಿನ ಮೈಲೇಶ್ವರ ಗ್ರಾಮದ ಸಮೀಪ ನಿಗದಿಪಡಿಸಿರುವ ಸ್ಥಳದ ವಿರುದ್ಧ ಜನರ ಆಕ್ರೋಶ ಸ್ಫೋಟಗೊಂಡಿದೆ. ಪ್ರಜಾಸೌಧವನ್ನು ತಾಳಿಕೋಟೆ ಪಟ್ಟಣದಲ್ಲಿಯೇ ನಿರ್ಮಿಸಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು 31ನೇ ದಿನಕ್ಕೂ ಮುಂದುವರಿದಿದ್ದು ಹೋರಾಟ ತೀವ್ರಗೊಳ್ಳುತ್ತಿದೆ.

ಗುರುವಾರ ನಡೆದ ಧರಣಿಗೆ ರಾಷ್ಟ್ರೀಯ ರೈತರ ಸಂಘ ಬೆಂಬಲ ಸೂಚಿಸಿದ್ದು, ಹಿರಿಯರು ಮತ್ತು ಯುವಕರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿ ಸರ್ಕಾರದ ವಿರುದ್ಧ ಕಿಡಿಕಾರಿದರು. ಗ್ರಾಮ ಮಟ್ಟದಲ್ಲಿ ಹೋರಾಟಕ್ಕೆ ಭಾರೀ ಬೆಂಬಲ ವ್ಯಕ್ತವಾಗಿದೆ.

ರಾಷ್ಟ್ರೀಯ ರೈತ ಸಂಘದ ರಾಜ್ಯ ಮಹಿಳಾ ಕಾರ್ಯದರ್ಶಿ ರೇಣುಕಾ ಪಾಟೀಲ ಹಾಗೂ ತಾಲೂಕು ಅಧ್ಯಕ್ಷ ಅಶೋಕಗೌಡ ಪಾಟೀಲ ಮಾತನಾಡಿ, ನಿಗದಿಪಡಿಸಿರುವ ಸ್ಥಳ ಪಟ್ಟಣದಿಂದ ದೂರದ ನಿರ್ಜನ ಪ್ರದೇಶ ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ಸುರಕ್ಷತೆ ಪ್ರಶ್ನಾರ್ಥಕ? ಜನರಿಗೆ ಸುಲಭವಾಗುವಂತೆ ಪಟ್ಟಣದಲ್ಲಿಯೇ ಕಟ್ಟಡ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಈ ಕುರಿತು ಶಾಸಕರಿಗೂ ಹಾಗೂ ಜಿಲ್ಲಾಡಳಿತಕ್ಕೂ ಅನೇಕ ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ. ನಿಗದಿಪಡಿಸಿದ ಜಾಗದ ಆಯ್ಕೆ ಹಿಂದೆ ಸ್ವಹಿತಾಸಕ್ತಿ ಇರುವ ಶಂಕೆಯನ್ನೂ ಹೋರಾಟಗಾರರು ವ್ಯಕ್ತಪಡಿಸಿದ್ದಾರೆ.

ಇದು ಕೇವಲ ಒಂದು ಗ್ರಾಮದ ಸಮಸ್ಯೆಯಲ್ಲ, ಇಡೀ ತಾಲೂಕಿನ ಹಕ್ಕಿನ ಪ್ರಶ್ನೆ. ಬೇಡಿಕೆ ಈಡೇರುವವರೆಗೆ ಹೋರಾಟ ನಿಲ್ಲದು ಎಂದು ಎಚ್ಚರಿಕೆ ನೀಡಿದ್ದಾರೆ. ರವಿ ಪಡಹಳ್ಳಿ, ಹಣಮಂತ್ರಾಯಗೌಡ ಬಿರಾದಾರ, ಭಾಷಾಸಾಬ ಮನಗೂಳಿ, ಶರಣಬಸ್ಸು ಪಟ್ಟಣಶೆಟ್ಟಿ, ಶಿವರೆಡ್ಡಿ ಕರವಿನ, ಗೌಡಪ್ಪ ಚೌದ್ರಿ, ಎಸ್.ಡಿ.ಪಾಟೀಲ, ವಿಜಯಕುಮಾರ ಉಕ್ಕಲಿ, ಮಲ್ಲಿಕಾರ್ಜುನ ಉಕ್ಕಲಿ, ವಿನೋದ ಬಿರಾದಾರ, ಗೌಡಪ್ಪಗೌಡ ಅಸ್ಕಿ, ಶಂಕ್ರಯ್ಯ ಹಿರೇಮಠ, ಮಹದೇವಪ್ಪ ಬೆಣ್ಣಳ್ಳಿ, ಶಿವಪ್ಪ ಹೂಗಾರ, ಸಂಗಮೇಶ ಹುಣಸಗಿ, ಹೋರಾಟ ಸಮಿತಿಯ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ, ಮಹೇಶ ಛಲವಾದಿ, ಪ್ರಕಾಶ್ ಹಜೇರಿ, ಮುದಕಪ್ಪ ಬಡಿಗೇರ ಇದ್ದರು.



ಶರಣ ಶ್ರೇಷ್ಠ, ಮಡಿವಾಳ ಮಾಚಿದೇವರ ರಥೋತ್ಸವ ಸಂಪನ್ನ

•**ದೇವರ ಹಿಪ್ಪರಗಿ:** 12ನೇ ಶತಮಾನದ ಶರಣ ಶ್ರೇಷ್ಠ, ಕಾಯಕನಿಷ್ಠ, ವಚನ ಸಾಹಿತ್ಯ ಭಂಡಾರ ರಕ್ಷಕ ಶರಣ ಮಡಿವಾಳ ಮಾಚಿದೇವರ ಜಾತ್ರಾ ರಥೋತ್ಸವ ಹಾಗೂ ಪಲ್ಲಕ್ಕಿ ಮಹೋತ್ಸವ ಸಾವಿರಾರು ಭಕ್ತವೃಂದದೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದಲ್ಲಿ ಮಾಚಿದೇವರ ರಥೋತ್ಸವದ ಅಂಗವಾಗಿ ಗದ್ದುಗೆ ಮಠದಲ್ಲಿ ಸಾಂಪ್ರದಾಯಿಕವಾಗಿ ನಡೆದು ಬಂದ ಪೂಜಾ ವಿಧಿವಿಧಾನಗಳು ಬೆಳಗ್ಗೆ ಹೋಮ ಹವನದೊಂದಿಗೆ ಆರಂಭಗೊಂಡವು. ನಂತರ ಅರಾ ಎಂದೇ ಕರೆಯಲಾಗುವ ಪ್ರಕೃತಿಗೆ ಆಹಾರ ನೀಡುವುದು ಜರುಗಿತು.

ಸಂಜೆ ಗದ್ದುಗೆ ಮಠದ ಮಡಿವಾಳೇಶ್ವರ ಸ್ವಾಮಿಗಳು, ಕಿರಿಯ ಸ್ವಾಮಿಗಳು ಹಾಗೂ ಪಟ್ಟಣದ ಪ್ರಮುಖರ ನೇತೃತ್ವದಲ್ಲಿ ಮಾಚಿದೇವರನ್ನು ಹೊತ್ತ ಪಲ್ಲಕ್ಕಿ ಗದ್ದುಗೆಮಠದಿಂದ ಹೊರಟು ಮೇನ್ ಬಜಾರಿನಲ್ಲಿರುವ ತೇರಿನವರೆಗೆ ಸಾಗಿ 5 ಸುತ್ತು ಪ್ರದಕ್ಷಿಣೆ ಹಾಕಿ ನೈವೇದ್ಯ (ಬಡ್ಯಾಣ) ಅರ್ಪಿಸಲಾಯಿತು. ತದನಂತರ ಬೆಳಿಗ್ಗೆಯಿಂದಲೇ ಹೂವಿನ ಹಾರ, ತಳಿರು ತೋರಣಗಳಿಂದ ಶೃಂಗಾರಗೊಂಡ ರಥ (ತೇರ) ಕ್ಕೆ ನೆರೆದ ಸಾವಿರಾರು ಜನ ಭಕ್ತರ ಜಯಕಾರ, ಉದ್ಘೋಷಗಳ ಮೂಲಕ ಕಳಸಾರೋಹಣ ನೆರವೇರಿಸಿ ಚಾಲನೆ ನೀಡಲಾಯಿತು. ರಥೋತ್ಸವಕ್ಕೆ ಈ ಬಾರಿ ಯಾವುದೇ ಅಡ್ಡಿ ಆತಂಕಗಳಿಲ್ಲದ ಕಾರಣ ಯುವಸಮೂಹ ಉತ್ಸಾಹದಿಂದ ರಥವನ್ನು ಎಳೆದು ತಮ್ಮ ಭಕ್ತಿ, ಭಾವ ತೋರಿದರು. ನಂತರ ಮಾಚಿದೇವರನ್ನು ಹೊತ್ತ ಪಲ್ಲಕ್ಕಿ ಉತ್ಸವ ಹೊರವಲಯದ ಮಡಿವಾಳ ಮಾಚಿದೇವರ ದೇವಸ್ಥಾನದವರೆಗೆ ಮೆರವಣಿಗೆಯಲ್ಲಿ ತೆರಳಿ ಪುನಃ ಮರಳಿ ಗದ್ದಿಗೆಮಠಕ್ಕೆ ಬಂದು ಸೇರಿತು. ಹೆಸ್ಕಾಂ, ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಸೂಕ್ತ ಕ್ರಮ ವಹಿಸಿದ್ದರು.



ರೈಲ್ವೆ ನಿಲ್ದಾಣದಲ್ಲಿ ಲಿಫ್ಟ್ ಸೌಲಭ್ಯ ಕಲ್ಪಿಸಲು ವಿಶಿಷ್ಟಚೇತನರಿಂದ ಮನವಿ

•**ಕೊಲ್ಹಾರ:** ವಿಜಯಪುರ ನಗರದ ರೈಲ್ವೆ ನಿಲ್ದಾಣದಲ್ಲಿ ಇರುವ ಮೂರು ಪ್ಲಾಟ್‌ಫಾರ್ಮ್‌ಗಳಿಗೆ ಲಿಫ್ಟ್ ಸೌಲಭ್ಯ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳು ಸೇರಿದಂತೆ ಸಂಬಂಧಿತ ಅಧಿಕಾರಿಗಳಿಗೆ ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟದ ವತಿಯಿಂದ ಮನವಿ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿಗಳು ಹಾಗೂ ವಿಜಯಪುರ ಲೋಕಸಭಾ ಕ್ಷೇತ್ರದ ಸಂಸದ ರಮೇಶ ಜಿಗಜಿಣಗಿ ಅವರಿಗೆ ಮನವಿ ನೀಡಿ ನಂತರ ಮಾತನಾಡಿದ ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟದ ಅಧ್ಯಕ್ಷ ವಿಠ್ಠಲ ಕರ್ಜಗಿ, ನಿಲ್ದಾಣದಲ್ಲಿ ಲಿಫ್ಟ್ ವ್ಯವಸ್ಥೆ ಇಲ್ಲದಿರುವುದರಿಂದ ಅಂಗವಿಕಲರು, ಹಿರಿಯ ನಾಗರಿಕರು ಮತ್ತು ವೀಲ್‌ಚೇರ್ ಬಳಕೆದಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದರು.

ಪ್ರಸ್ತುತ ಪ್ರಯಾಣಿಕರು ಮೇಲ್ಸೇತುವೆ ಮೂಲಕ ಮೆಟ್ಟಿಲುಗಳನ್ನು ಏರಿ ಇಳಿದು ಪ್ಲಾಟ್‌ಫಾರ್ಮ್‌ಗಳಿಗೆ ತೆರಳಬೇಕಾಗಿರುವುದರಿಂದ ವಿಶೇಷವಾಗಿ ಅಂಗವಿಕಲರಿಗೆ ಇದು ತುಂಬಾ ಕಷ್ಟಕರವಾಗಿದೆ. ಭಾರತ ಸರ್ಕಾರ ಜಾರಿಗೆ ತಂದಿರುವ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ, 2016 ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ಅಂಗವಿಕಲರಿಗೆ ಸುಗಮ ಪ್ರವೇಶ ಕಲ್ಪಿಸುವುದು ಕಡ್ಡಾಯವಾಗಿರುವುದರಿಂದ ವಿಜಯಪುರ ರೈಲ್ವೆ ನಿಲ್ದಾಣದಲ್ಲೂ ಶೀಘ್ರವಾಗಿ ಲಿಫ್ಟ್ ಸೌಲಭ್ಯ ಒದಗಿಸುವಂತೆ ಮನವಿ ನೀಡಲಾಗಿದೆ ಎಂದರು.



ರೈಲ್ವೆ ನಿಲ್ದಾಣದ ಅಧಿಕಾರಿಗಳು ಸೂಕ್ತ ವ್ಯವಸ್ಥೆ ಮಾಡುತ್ತೇವೆ ಎಂದು ಭರವಸೆ ವ್ಯಕ್ತಪಡಿಸಿದ್ದಾರೆ. ಲೋಕಸಭಾ ಸದಸ್ಯರ ಆಪ್ತ ಸಹಾಯಕರು ಕೂಡ ಈ ವಿಷಯವನ್ನು ಸಂಸದರಿಗೆ ತಿಳಿಸಿ ಅತಿ ಶೀಘ್ರದಲ್ಲಿ ಪರಿಹಾರ ಕಲ್ಪಿಸುವುದಾಗಿ ತಿಳಿಸಿದ್ದಾರೆ ಎಂದು ಹೇಳಿದರು.

ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟದ ಅಧ್ಯಕ್ಷ ವಿಠ್ಠಲ ಕರ್ಜಗಿ ಪತ್ರಿಕೆಗೆ ಮಾಹಿತಿ ನೀಡಿದರು. ಮಲ್ಲಿಕಾರ್ಜುನ ಬಿರಾದಾರ, ವಿಠ್ಠಲ ಹಂಚಿನಾಳ, ಸುರೇಶ್ ಚವ್ಹಾಣ, ಪ್ರಕಾಂತ್ ಗೆಣ್ಣೂರು ಹಾಗೂ ರೈತಸಂಘದ ಮುಖಂಡರಾದ ಸೋಮಣ್ಣ ಸೇರಿದಂತೆ ರೈತ ಸಂಘದ ಸದಸ್ಯರು ಬೆಂಬಲ ವ್ಯಕ್ತಪಡಿಸಿದರು.

ರಾಮ ನಾಮಸ್ಮರಣೆಯಿಂದ ಜೀವನ ಪಾವನ



•**ಬಸವನಬಾಗೇವಾಡಿ:** ರಾಮ ನಾಮ ಸ್ಮರಣೆ ಮಾಡುವುದರಿಂದ ನಮ್ಮ ಜೀವನ ಪಾವನವಾಗಲಿದ್ದು ಪುರುಷೋತ್ತಮ ಶ್ರೀರಾಮ ನಮಗೆಲ್ಲ ಆದರ್ಶ ಪುರುಷನಾಗಿದ್ದಾನೆ ಎಂದು ಮುಖಂಡ ಸಂಗಮೇಶ ಓಲೇಕಾರ ಹೇಳಿದರು.

ಪಟ್ಟಣದ ಬಸವನಗರದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ, ವಿಶ್ವ ಹಿಂದೂ ಪರಿಷತ್ ಬಜರಂಗದಳ ಬಸವನ ಬಾಗೇವಾಡಿ ಪ್ರಖಂಡ ನೇತೃತ್ವದಲ್ಲಿ ರಾಮ ನವಮಿ ನಡೆದ ಕಾರ್ಯಕ್ರಮದಲ್ಲಿ ರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಜಗದೀಶ ಕೊಟ್ರಶೆಟ್ಟಿ, ಮುದಕಣ್ಣಾ ಹೊರ್ತಿ ಮಾತನಾಡಿದರು. ವಿಶ್ವ ಹಿಂದೂ ಪರಿಷತ್ ಬಜರಂಗದಳದ ಅಧ್ಯಕ್ಷ ಮಹೇಶ ಸಾಲೋಡಗಿ, ಕಾರ್ಯದರ್ಶಿ ಅಶ್ವಿನಕುಮಾರ ಪಟ್ಟಣಶೆಟ್ಟಿ, ಜಿಲ್ಲಾ ಪ್ರಮುಖರಾದ ದಯಾನಂದ ಆದಿಗೊಂಡ, ಶರಣಪ್ಪ ಬೆಲ್ಲದ, ಸೀತಾರಾಮ ಭಜಂತ್ರಿ, ಬಸವರಾಜ ಕಾಮನಕೇರಿ, ಅಶೋಕ ಪವಾರ, ಮಲ್ಲಿಕಾರ್ಜುನ ಜೀರ, ಶ್ರೀಶೈಲ ಅಗಸರ, ಹಣಮಂತ ಪೂಜಾರಿ, ಲಕ್ಷ್ಮಣ ಅಂಬಿಗೇರ, ಗುರು ಪಂದಾಲ, ಬಾಬು ಭೈರವಾಡಗಿ, ಮಹಾಂತೇಶ ಕಾನಾಗಡ್ಡಿ, ಆಕಾಶ ಅಗಸರ, ಶಿವಾನಂದ ಬೆಲ್ಲದ, ಮುರುಗೇಶ ಮಠಪತಿ, ಚಂದು ತುಡ್ಡಗಿ, ಅಕ್ಷಯ ಹೊಸಮನಿ, ದರ್ಶನ ಕೋಳೂರ, ಬಸವರಾಜ ಕಟಬುರ, ನಾಗರಾಜ ಬಿರಾದಾರ, ಮಂಜುನಾಥ ಪೂಜಾರಿ ಸೇರಿದಂತೆ ಇತರರು ಇದ್ದರು.

ಅಧ್ಯಯನಕ್ಕೆ ಜಾನಪದ ಮೂಲ ಸಂಸ್ಕೃತಿ

•**ಮುದ್ದೇಬಿಹಾಳ:** ವಿದ್ಯಾರ್ಥಿಗಳು ಕನ್ನಡ ನಾಡಿನ ಹಿರಿಮೆ, ಭಾಷೆಯ ಸೊಗಡು ಹಾಗೂ ಸಂಸ್ಕೃತಿ ಪ್ರಚುರ ಪಡಿಸಬೇಕಾದರೆ ಜಾನಪದ ಅಧ್ಯಯನ ಮಾಡಬೇಕು. ನಾಡಿನ ಸಂಸ್ಕೃತಿ ಹಿರಿಮೆ ಹೇಳಬೇಕು ಎಂದು ಎಂಜಿವಿಸಿ ಕಾಲೇಜು ಕನ್ನಡ ಪ್ರಾಧ್ಯಾಪಕ ಡಾ.ಪ್ರಕಾಶ ಎನ್.ನರಗುಂದ ಹೇಳಿದರು.

ತಾಲೂಕಿನ ಗ್ರಾಮದಲ್ಲಿ ನಡೆದ ಕಾಲೇಜಿನ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಉಪನ್ಯಾಸಕರಾಗಿ ಮಾತನಾಡಿದ ಅವರು, ನಿಜ ಜೀವನದಲ್ಲಿ ಜನಪದ ಎಂಬ ವಿಷಯದ ಜನಪದ ಹಾಡುಗಳನ್ನು ಹಾಡುತ್ತ ಮಾತನಾಡಿದರು.

ಸರ್ಕಾರಿ ಪದವಿ ಕಾಲೇಜಿನ ಸಮಾಜಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಪ್ರೊ.ಹಂಪಣ್ಣ ಮಾತನಾಡಿ, ಸುಧಾರಣೆಯಲ್ಲಿ ಎನ್‌ಎಸ್‌ಎಸ್‌ನ ಪಾತ್ರ ಎಂಬ ವಿಷಯದ ಮೇಲೆ ಮಾತನಾಡಿ, ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಪ್ರೊ.ಅಶೋಕ ಹಡಪದ, ಪ್ರೊ.ಪಿ.ಸಿ.ಟೆಳ್ಳಗಿ, ಶಿಬಿರದ ಮಾರ್ಗದರ್ಶಕ ಡಾ.ಬಸವರಾಜ ಹಡಪದ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಪ್ರೊ.ವಿ.ಎಸ್.ಲಮಾಣಿ, ಪ್ರೊ.ಶ್ರೀಶೈಲ ಹಟ್ಟಿ ಹಾಗೂ ಅವಿನಾಶ ಲಮಾಣಿ, ರೇಣುಕಾ ಜಗ್ಗಲ ಸಾಂಸ್ಕೃತಿಕ ಉಡುಗೆ ತೊಟ್ಟು ಉಪಸ್ಥಿತರಿದ್ದರು.



ಕರ ಲೀಲಾವಿನಲ್ಲಿ ಪಪಂಗೆ ಆರ್ಥಿಕ ಲಾಭ



•**ಬಸವನಬಾಗೇವಾಡಿ:** ಹಿಂದಿನ ವರ್ಷಕ್ಕಿಂತ ಈ ವರ್ಷ ಪಟ್ಟಣ ಪಂಚಾಯತಿ ಸಂತೆಕರ ಲೀಲಾವಿನಲ್ಲಿ ದುಪ್ಪಟ್ಟು ಮೊತ್ತ ಹೆಚ್ಚಾಗಿರುವುದರಿಂದ ಪಟ್ಟಣ ಪಂಚಾಯತಿಗೆ ಆರ್ಥಿಕವಾಗಿ ಲಾಭವುಂಟಾಗಲಿದೆ ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ನಿಖಿಲ ಪಾಟೀಲ ಹೇಳಿದರು.

ತಾಲೂಕಿನ ಮನಗೂಳಿ ಪಟ್ಟಣ ಪಂಚಾಯತಿ 2026-27ನೇ ಸಾಲಿನ ಬುಧವಾರ ನಡೆದ ಸಂತೇಕರ ಲೀಲಾವು ಹರಾಜು ಪ್ರಕ್ರಿಯೆಯಲ್ಲಿ, ಮಾತನಾಡಿದ ಅವರು ಲೀಲಾವು ಪ್ರಕ್ರಿಯೆಯಲ್ಲಿ 7ಜನ ಭಾಗವಹಿಸಿದ್ದರು. ಹರಾಜು ಪೈಪೋಟಿಯಿಂದ ಕೂಡಿತು. 4.50 ಲಕ್ಷ ರೂಪಾಯಿಗಳಿಗೆ ಸಂತೆ ಕರ ಲೀಲಾವಿನಲ್ಲಿ ಅಂತಿಮವಾಗಿ ಮಹಾಂತೇಶ ತಳೇವಾಡ ಇವರು ಎಲ್ಲರಕ್ಕಿಂತ ಹೆಚ್ಚಿನ ಮೊತ್ತ ಬೀಡಿದ್ದರಿಂದ ಸದರಿಯವರಿಗೆ ಲಭಿಸಿತು ಎಂದು ಹೇಳಿದರು.

ಲೀಲಾವು ಪ್ರಕ್ರಿಯೆಯಲ್ಲಿ ಪಪಂ ಉಪಾಧ್ಯಕ್ಷ ಶೇಖಪ್ಪಗೌಡ ಬಿರಾದಾರ ಅಧ್ಯಕ್ಷತೆ ವಹಿಸಿದರು. ಸದಸ್ಯರಾದ ರಾಜು ವಾಲಿಕಾರ, ರಮೇಶ ಫಿರಗಾ, ಕಂದಾಯ ನಿರೀಕ್ಷಕ ವಿಜಯ ರೋಕಡೆ, ಸಂತೋಷ ಪೈಲಾ, ಬಸವರಾಜ ಬೋಳಶೆಟ್ಟಿ ಸೇರಿ ಇತರರು ಇದ್ದರು.

ಯುವಕರು ಕುಸ್ತಿ ಬೆಳೆಸಿ: ಪಟ್ಟಣಶೆಟ್ಟಿ

•**ಝಳಕಿ:** ಯುವಕರು ಹೆಚ್ಚು ಹೆಚ್ಚು ಕುಸ್ತಿ ಪಟ್ಟುಗಳಲ್ಲಿ ಭಾಗವಹಿಸಿ ಭಾರತೀಯ ಕುಸ್ತಿ ಪಂದ್ಯ ಉಳಿಸಿ ಬೆಳೆಸಿರಿ ಎಂದು ಮಾಜಿ ಸಚಿವ ಅಪ್ಪಾಸಾಹೇಬ್ ಪಟ್ಟಣಶೆಟ್ಟಿ ಹೇಳಿದರು.

ಸಮೀಪದ ಬಳ್ಳೊಳ್ಳಿ ಗ್ರಾಮದಲ್ಲಿ ನಡೆದ ವೀರಭದ್ರೇಶ್ವರ ದೇವರ ಜಾತ್ರಾ ಮಹೋತ್ಸವ ಪ್ರಯುಕ್ತ ಫೇಟರ್ ಕುಸ್ತಿ ಪಂದ್ಯಕ್ಕೆ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ದೇಶದಲ್ಲಿ ಕುಸ್ತಿ ಕಲೆ ಪುರುಷ ಕ್ರೀಡೆಗಳಲ್ಲಿ ಅತ್ಯಂತ ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿದೆ. ಕುಸ್ತಿ ಶರೀರದ ಎಲ್ಲಾ ಭಾಗಗಳಿಗೂ ವ್ಯಾಯಾಮ ಒದಗಿಸಿ ದೇಹವನ್ನು ಸದೃಢಗೊಳಿಸುತ್ತದೆ. ಯುವಕರು ಕೆಟ್ಟ ಚಟಕ್ಕೆ ಬಲಿಯಾಗದೇ ಕುಸ್ತಿ ಪಂದ್ಯದಲ್ಲಿ ಭಾಗವಹಿಸಿ ಕುಸ್ತಿ ಉಳಿಸಿ ಬೆಳೆಸಿರಿ ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಸಾಹುಕಾರ ಕಾಪಸೆ ಮಾತನಾಡಿ, ಪ್ರತಿಯೊಬ್ಬ ಯುವಕರು ಕುಸ್ತಿ ಪಂದ್ಯದಲ್ಲಿ ಭಾಗವಹಿಸಬೇಕೆಂದರು. ಭೀಮಾಶಂಕರ ಸಕ್ಕರೆ ಕಾರ್ಖಾನೆ ನಿರ್ದೇಶಕ ಎಂ.ಆರ್.ಪಾಟೀಲ, ಕಾಮನಗೌಡ ಬಿರಾದಾರ, ಈರಣ್ಣ ಸಾಹುಕಾರ ಪಾಲಿ, ಮಾದೇವ ಕದರಿ, ಅಶೋಕ ತೋಟದಾರ, ರೇವಣಸಿದ್ದ ಶಿರಶ್ಯಾಡ, ಶಿವಾನಂದ ಸಗಾಯಿ, ರಾಜು ಸಗಾಯಿ, ಮಲ್ಲಪ್ಪ ವಾಲಿಕಾರ, ರೋಹನ ತಾಡ, ಶಂಕರ ಬಡಗೇರ, ವಿನೋದ ಖಾನಾಪುರ, ಚಂದ್ರಾಮ ವಾಲಿಕಾರ, ಅಮಸಿದ್ದ ಶಿಕ್ಷಕರು ಹಿರೇಕುರಬರ ಇದ್ದರು.



ಕಿರುಸುದ್ದಿ



ಕಲಬುರಗಿ: ರಾಮನವಮಿ ಅಂಗವಾಗಿ ನಗರದಲ್ಲಿ ನಡೆದ 15 ಅಡಿ ಎತ್ತರದ ರಾಮನ ಭವ್ಯ ಶೋಭಾಯಾತ್ರೆಯಲ್ಲಿ ಬಾಲರಾಮನ ಅವತಾರದಲ್ಲಿ ಗಮನ ಸೆಳೆದ 4 ವರ್ಷದ ಬಾಲಕ.



ಹೂವಿನಹಡಗಲಿ: ಅಖಂಡ ಬಳ್ಳಾರಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ ಅವರಿಗೆ ಹಾಗೂ ಸಂಡೂರು ಮೂಲದ ಡಾ.ವಸುಂದರಾ ಭೂಪತಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಕೊಡ ಮಾಡುವ 2025ನೇ ಸಾಲಿನ 'ಸಾಹಿತ್ಯ ಶ್ರೀ' ಪ್ರಶಸ್ತಿ ಒಲಿದು ಬಂದಿದೆ. ಡಾ.ನಿಷ್ಠಿ ರುದ್ರಪ್ಪ ಅವರನ್ನು ಗಂಗಾವತಿ ಭಾಗ್ಯಮ್ಮ ಪದವಿ ಮಹಾವಿದ್ಯಾಲಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ಸನ್ಮಾನಿಸಲಾಯಿತು.

ಅಂತರ್ ವಿವಿ ಖೋ-ಖೋ ಪಂದ್ಯಾವಳಿಗೆ ಪಾರ್ವತಿ ಆಯ್ಕೆ



• **ಸಿಂಧನೂರು:** ತಾಲೂಕಿನ ತುರುವಿಹಾಳ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಕಾಂ 2ನೇ ಸೆಮಿಸ್ಟರ್ ವಿದ್ಯಾರ್ಥಿನಿ ಪಾರ್ವತಿ ತಂದೆ ತಿರುಪತಿ ಅವರು ರಾಯಚೂರಿನ ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದಡಿಯಲ್ಲಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಲಿಂಗಸಗೂರಿನಲ್ಲಿ ನಡೆದ 2025-26ನೇ ಸಾಲಿನ ಮಹಿಳೆಯರ ಖೋ-ಖೋ ತಂಡದ ಆಯ್ಕೆಯಲ್ಲಿ ಭಾಗವಹಿಸಿ, ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆಯಾಗಿದ್ದಾರೆ.

ಈ ವಿದ್ಯಾರ್ಥಿನಿಯು ಮಾ.25ರಿಂದ 31ರವರೆಗೆ ವಿಶ್ವವಿದ್ಯಾಲಯದಲ್ಲಿ ತರಬೇತಿ ಪಡೆದು, ನಂತರ ಏ.1ರಿಂದ 4ರವರೆಗೆ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಜರುಗಲಿರುವ ಅಂತರ್ ವಿಶ್ವವಿದ್ಯಾಲಯಗಳ ಮಹಿಳಾ ಖೋ-ಖೋ ಪಂದ್ಯಾವಳಿಯಲ್ಲಿ, ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ತಂಡವನ್ನು ಪ್ರತಿನಿಧಿಸಲಿದ್ದಾರೆ. ವಿದ್ಯಾರ್ಥಿನಿಯ ಈ ಸಾಧನೆಗೆ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಹಾಗೂ ಸ್ಥಳೀಯ ಶಾಸಕ ಆರ್.ಬಸನಗೌಡ ತುರುವಿಹಾಳ ಹಾಗೂ ಇನ್ನುಳಿದ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರು, ಊರಿನ ಮುಖಂಡರು, ಪ್ರಾಂಶುಪಾಲರು, ದೈಹಿಕ ಶಿಕ್ಷಣ ನಿರ್ದೇಶಕ ಹಾಗೂ ಎಲ್ಲ ಸಿಬ್ಬಂದಿ, ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.



ಬಳ್ಳಾರಿ: ತಾಲೂಕಿನ ಕಮ್ಮರಚೇಡು ಗ್ರಾಮದ ಶ್ರೀವೀರಭದ್ರೇಶ್ವರ ಜಾತ್ರಾ ಮಹೋತ್ಸವ ಹಿನ್ನೆಲೆ ಗುರುವಾರ ಶ್ರೀಕಲ್ಯಾಣ ಸ್ವಾಮೀಜಿ ಅವರು ಸಪ್ತ ಭಜನೆಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಇಂದಿನಿಂದ ಮಾ.2ರವರೆಗೆ ಶ್ರೀವೀರಭದ್ರೇಶ್ವರ ಸ್ವಾಮಿ ಭಕ್ತರು ಜಾತ್ರೆ ನಿಮಿತ್ತ ಶ್ವೇತ ವಸ್ತ್ರ ಮಡಿ ಪಂಚೆಯೊಂದಿಗೆ ನಮಃ ಶಿವಾಯ, ಓಂ ನಮಃ ಶಿವಾಯ ಪಂಚಾಕ್ಷರಿ ಮಂತ್ರದೊಂದಿಗೆ ಸಪ್ತ ಭಜನೆ ಮಾಡಲಿದ್ದಾರೆ.

ನವೋದಯ ವಿದ್ಯಾಲಯಕ್ಕೆ ಆಯ್ಕೆ



• **ಮುನಿರಾಬಾದ್:** ಗ್ರಾಮೀಣ ಭಾಗದ ವರ್ಷ ಎಂಟಿ ಯುವತಿ ಜವಾಹರ್ ನವೋದಯ ವಿದ್ಯಾಲಯ ಸೆಲೆಕ್ಷನ್ ಟೆಸ್ಟ್ ಅಲ್ಲಿ ಕೊಪ್ಪಳ ಜಿಲ್ಲೆಗೆ 97.05% ಪಡೆದು 3ನೇ ಸ್ಥಾನ ಗಿಟ್ಟಿಸಿಕೊಂಡ ನಾಗೇಶನಹಳ್ಳಿಯ ಬಡ ವಿದ್ಯಾರ್ಥಿ ವರ್ಷ ಹನುಮಂತ ರೆಡ್ಡಿ ಗೊಲ್ಲರ್ ಸರ್ಕಾರಿ ಪ್ರಾಥಮಿಕ ಶಾಲೆ ನಾಗೇಶನಹಳ್ಳಿ ಕನ್ನಡ ಮೀಡಿಯಂನಲ್ಲಿ ಓದಿ ಮುಂದಿನ 6ನೇ ತರಗತಿಯ ವಿದ್ಯಾಭ್ಯಾಸಕ್ಕೆ ಕುಕನೂರು ಪಟ್ಟಣದಲ್ಲಿರುವ ಸ್ಕೂಲ್ ಜವಾಹರ್ ನವೋದಯ ವಿದ್ಯಾಲಯಕ್ಕೆ ಆಯ್ಕೆ ಆಗಿದ್ದಾಳೆ.

ನದಿ ಪಾತ್ರಗಳಿಗೆ ಅಕ್ರಮ ಪ್ರವೇಶ ನಿಷೇಧ



• **ಮಾನ್ವಿ:** ನದಿ ಪಾತ್ರಗಳಿಗೆ ಅಕ್ರಮ ಪ್ರವೇಶ ನಿಷೇಧಿಸಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಅವರು ಆದೇಶ ಹೊರಡಿಸಿದ್ದಾರೆ. ಜಿಲ್ಲಾ ಹಿರಿಯ ಭೂವಿಜ್ಞಾನಿ ಹಾಗೂ ಸದಸ್ಯ ಕಾರ್ಯದರ್ಶಿ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಅವರು ಪತ್ರದಲ್ಲಿ ತಿಳಿಸಿದಂತೆ ಜಿಲ್ಲೆಯ ದೇವದುರ್ಗ, ರಾಯಚೂರು, ಮಾನವಿ ಮತ್ತು ಸಿಂಧನೂರು ತಾಲೂಕಿನ ಕೃಷ್ಣ ಮತ್ತು ತುಂಗಭದ್ರಾ ನದಿಪಾತ್ರದ ಗ್ರಾಮಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ಹಾಗೂ ಸಾಗಾಣಿಕೆಯನ್ನು ಈ ಕಚೇರಿಯಿಂದ ಸಂಭಾವ್ಯ ಎಲ್ಲ ಕ್ರಮಗಳನ್ನು ಸತತವಾಗಿ ಜರುಗಿಸುತ್ತಿದ್ದರೂ ಸಹ ಅನೇಕ ದೂರುಗಳು ಬರುತ್ತಿದ್ದು, ಅನಧಿಕೃತ ಮರಳು ಸಾಗಾಣಿಕೆ, ಗಣಿಗಾರಿಕೆ, ದಾಸ್ತಾನು ನಿಯಂತ್ರಣ ಕಷ್ಟ ಸಾಧ್ಯವಾಗಿರುವುದರಿಂದ. ನದಿ ಪಾತ್ರದ ಗ್ರಾಮಗಳಲ್ಲಿ, ನಿಷೇಧಾಜ್ಞೆಯನ್ನು ಜಾರಿಗೊಳಿಸಲು ಕೋರಿರುವ ಹಿನ್ನೆಲೆಯಲ್ಲಿ ಮಾನ್ವಿ ತಾಲೂಕಿನ ತುಂಗಭದ್ರಾ ನದಿ ಹಾಗೂ ಹಳ್ಳದ ಪಾತ್ರದ ಗ್ರಾಮಗಳಾದ ರಾಜಲಬಂಡಾ, ಕಾತರಕಿ, ಮದ್ಲಾಪೂರ, ಚಿಕಲಪರ್ವಿ, ದದ್ದಲ್, ಸುಂಕೇಶ್ವರ, ತಮ್ಮಾಪುರ, ಬೂಕರ, ರಾಜೋಳ್ಳಿ, ಯಡಿವಾಳ, ಹಾಗೂ ಉಟಕನೂರು, ತಡಕಲ್, ಬೇನೂರು ಪೋತ್ನಾಳ, ಮುದಮಗುಡ್ಡಿ, ಖರಬದಿನ್ನಿ, ನಲಂಗದಿನ್ನಿ ಜಾಗೀರ ಪನ್ನೂರು, ಯಡಿವಾಳ ಗ್ರಾಮಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ನಿಯಂತ್ರಿಸಲು ಅವಶ್ಯಕವಾಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮನವಮಿ ಆಚರಣೆ



• **ಹಟ್ಟಿಚಿನ್ನದಗಣಿ:** ರಾಮ ನವಮಿ ನಿಮಿತ್ತ ಹಟ್ಟಿ ಪಟ್ಟಣದಲ್ಲಿ, ರಾಮದೇವರಿಗೆ ಹಟ್ಟಿ ಠಾಣೆ ಸಿಪಿಐ ಶಿವಾನಂದ್ ಗಾಣಿಗೇರ್ ಪೂಜೆ ಸಲ್ಲಿಸಿದರು. ಶ್ರೀರಾಮ ಸೇನೆ ಹಟ್ಟಿ ನಗರ ಘಟಕ ಅಧ್ಯಕ್ಷ ರಾಜು ರೆಡ್ಡಿ ಮಾತನಾಡಿ, ಪುರುಷೋತ್ತಮ, ಏಕ ಪತ್ನಿ ವ್ರತಸ್ಥರಾದ ರಾಮದೇವರು ಜಗತ್ತಿಗೆ ಮಾದರಿಯಾಗಿದ್ದಾರೆ. ರಾಮನ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕೆಂದರು.

ಪಪಂ ಸದಸ್ಯ ರಂಗನಾಥ್ ಮುಂಡರಗಿ, ಜಿಲ್ಲಾಧ್ಯಕ್ಷ ರಘು ಗೌಡ ನಾಯಕ್ ಸಂಘಟನೆಯ ಕಾರ್ಯಕರ್ತರಾದ ನಿಂಗಪ್ಪ ಬೋವಿ ಯಲ್ಲಪ್ಪ ನಾಯಕ್, ರಮೇಶ್ ಮಾಂತೇಶ್ ಮಡಿವಾಳ್ ಬಸವರಾಜ್ ಲಿಂಗರಾಜ್ ಅಂಬರೀಶ್ ಬೋರ್ ಯಾಟ್ಟಿರೇಶ್ ರಮೇಶ್ ಗೌಡ ಸುರೇಶ್ ದಾಳಿ ಅಂಬರೀಶ್ , ಗುಂಡು ಇದ್ದರು. ಸಕಲ ಭಕ್ತರಿಗೆ ಪಾನಕೋಸಂಬರಿ ವಿತರಣೆ ಹಾಗೂ ಸಾಮೂಹಿಕ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು.

ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಶ್ಯಾಮ್ ಭಟ್ ಹೇಳಿಕೆ

ಅಧಿಕಾರಿಗಳು ಸೌಜನ್ಯದಿಂದ ವರ್ತಿಸಲಿ

• **ರಾಯಚೂರು:** ಪ್ರತಿಯೊಂದು ಇಲಾಖೆಯ ಅಧಿಕಾರಿಗಳು, ಮಾನವ ಹಕ್ಕುಗಳ ಸಂರಕ್ಷಣಾಧಿಕಾರಿಗಳು ಕಚೇರಿಗಳಿಗೆ ಯಾರೇ ದೂರು ಹೊತ್ತು ಬರಲಿ ಅವರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶ್ಯಾಮ್ ಭಟ್ ಸಲಹೆ ಮಾಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಕರಣಗಳ ವಿಲೇವಾರಿ ಹಾಗೂ ಸಾರ್ವಜನಿಕ ಅಹವಾಲು ಸ್ವೀಕಾರ ಮತ್ತು ದೂರುಗಳ ವಿಚಾರಣೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ನಗರದಲ್ಲಿ ವಸತಿ ನಿಲಯ, ಬಸ್ ನಿಲ್ದಾಣ, ಕಾರಾಗೃಹ ಸೇರಿದಂತೆ ವಿವಿಧೆಡೆ ಭೇಟಿ ನಡೆಸಿ ಆಯಾ ಕಡೆಗಳಲ್ಲಿನ ವಾಸ್ತವ ಪರಿಸ್ಥಿತಿಯನ್ನು ಅವಲೋಕಿಸಲಾಗಿದೆ. ವಿದ್ಯಾರ್ಥಿನಿಯರು ವಸತಿ ನಿಲಯದ ಇಕ್ಕಟ್ಟಾದ ಕೋಣೆಯಲ್ಲಿ ವಾಸ್ತವ್ಯ ಮಾಡುತ್ತಿರುವುದು ಕಂಡು ಬಂದಿದೆ. ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಕಟ್ಟಡದ ವ್ಯವಸ್ಥೆಗೆ ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.

ಬಸ್ ನಿಲ್ದಾಣದ ಭೇಟಿ ವೇಳೆ ಕೆಲ ಕಡೆ ಅಶುಚಿತ್ವ ಕಂಡು ಬಂದಿದೆ. ಇದು ಕೂಡಲೇ ಸರಿಯಾಗಬೇಕು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ಬಸ್ ನಿಲ್ದಾಣದ ಆವರಣದಲ್ಲಿರುವ ಅಂಗಡಿಗಳು ಪ್ರಯಾಣಿಕರನ್ನು ಸುಲಿಯಬಾರದು. ಹೆಚ್ಚಿನ ಬೆಲೆ ನಿಗದಿಪಡಿಸಬಾರದು. ಅವಧಿ ಮುಗಿದ ಆಹಾರ ಪದಾರ್ಥ ಸೇರಿದಂತೆ ಯಾವುದೇ ವಸ್ತುಗಳನ್ನು ಮಾರಾಟ ಮಾಡಬಾರದು. ಈ ಬಗ್ಗೆ ಸಾರಿಗೆ



> ವಸತಿ ನಿಲಯದ ಮಕ್ಕಳು ಸಮರ್ಪಕ ಗಾಳಿ, ಬೆಳಕು, ಶುಚಿಯಾದ ಆಹಾರ, ಶುದ್ಧ ನೀರು ಸಿಗದೇ ವಂಚಿತರಾದರೆ ಅದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಯಾವುದೇ ವಿಷಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಯಾವುದೇ ಕಡೆಗೆ ಯಾವುದೇ ವಿಷಯದಲ್ಲಿ ಮಾನವ ಹಕ್ಕುಗಳು ಉಲ್ಲಂಘನೆಯಾಗಿರುವುದು ಕಂಡು ಬಂದಲ್ಲಿ ಅದಕ್ಕೆ ಅಧಿಕಾರಿಗಳನ್ನೇ ನೇರ ಹೊಣೆಯಾಗಿಸಿ ಕ್ರಮ ಜರುಗಿಸುವುದು.
>
> ■ ಎಸ್.ಕೆ.ವಂಟಿಗೋಡಿ, ಆಯೋಗದ ನ್ಯಾಯಿಕ ಸದಸ್ಯ

ಅಧಿಕಾರಿಗಳು ಬಸ್ ನಿಲ್ದಾಣದ ಆವರಣದಲ್ಲಿರುವ ಅಂಗಡಿಗಳ ಮಾಲೀಕರಿಗೆ ಸೂಕ್ತ ಹೊರಡಿಸಿ ನಿರ್ದೇಶನ ನೀಡಬೇಕು ಎಂದರು.

ಆಯೋಗದ ನ್ಯಾಯಿಕ ಸದಸ್ಯ ಎಸ್.ಕೆ.ವಂಟಿಗೋಡಿ ಮಾತನಾಡಿ, ವ್ಯಕ್ತಿಯೊಬ್ಬರು ಸಂತೋಷದಿಂದ ಬಾಳಲು ಬೇಕಾದ ಮೂಲಭೂತ ಹಕ್ಕುಗಳೇ ಮಾನವ ಹಕ್ಕುಗಳು. ವ್ಯಕ್ತಿಯ ಜನ್ಮತಃದಿಂದ ಬರುವ ಹಕ್ಕುಗಳೇ ಮಾನವ ಹಕ್ಕುಗಳ ಎಂದು ತಿಳಿಯಬೇಕು. ಜನಿಸಿದ ಪ್ರತಿಯೊಬ್ಬರಿಗೂ ಸಮಾಜದಲ್ಲಿ ಸಮಾನ ಅವಕಾಶ ಪಡೆದು ಬದುಕುವ ಹಕ್ಕಿದೆ. ಯಾರು ಸಹ ಶೋಷಣೆಗೆ ಒಳಗಾಗಬಾರದು ಎಂದರು. ಜಿಲ್ಲೆಯು ಸಹ ಇನ್ನು ಬದಲಾಗಬೇಕು, ಅಭಿವೃದ್ಧಿಯಾಗಬೇಕು. ಇಲ್ಲಿಗೆ ಬರುವ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡಿ ಜಿಲ್ಲೆಯ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ಡಿಸಿ ನಿತೀಶ ಕೆ. ಅವರ ಜನಸ್ನೇಹಿ ಹೊಂದಿದ ಜಿಲ್ಲಾಧಿಕಾರಿಗಳಾಗಿದ್ದಾರೆ ಎಂದರು.

ಡಿಸಿ ನಿತೀಶ ಕೆ., ಜಿಪಂ ಸಿಇಒ ಈಶ್ವರ ಕಾಂದೂ, ಎಸ್ಪಿ ಅರುಣಾಂಗ್ಶು ಗಿರಿ, ಎಎಸ್ಪಿ ಕುಮಾರಸ್ವಾಮಿ, ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ಡಾ.ಹಂಪಣ್ಣ ಸಜ್ಜನ್ ಸೇರಿದಂತೆ ವಿವಿಧ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

ವಿಪತ್ತು ವೇಳೆ ಪ್ರತಿಯೊಬ್ಬರ ಪಾತ್ರವು ಮುಖ್ಯ

> ಜಿಲ್ಲೆಯ ಎಲ್ಲ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ವಿಪತ್ತು ನಿರ್ವಹಣೆಯ ಸಲುವಾಗಿ ವಿವಿಧ ತರಬೇತಿ ಕಾರ್ಯಗಳನ್ನು ಕಾಲಾನುಕ್ರಮವಾಗಿ ಹಮ್ಮಿಕೊಳ್ಳಲಾಗುತ್ತಿದೆ. ವಿಪತ್ತನ್ನು ಎದುರಿಸಲು ಜಿಲ್ಲಾ ಪೊಲೀಸ್ ಸದಾ ಸಿದ್ಧವಾಗಿದೆ.
>
> ■ ಡಾ.ರಾಮ್ ಎಲ್.ಅರಸಿದ್ದಿ, ಎಸ್ಪಿ

• **ಕೊಪ್ಪಳ:** ಸಂಭವನೀಯ ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ, ನೈಸರ್ಗಿಕ ವಿಪತ್ತು ಸಂದರ್ಭಗಳಲ್ಲಿ, ಪ್ರತಿಯೊಬ್ಬರ ಪಾತ್ರವು ಮುಖ್ಯವಾಗಿದೆ ಎಂದು ಡಿಸಿ ಡಾ.ಸುರೇಶ ಬಿ.ಇಟ್ನಾಳ ಹೇಳಿದರು.

ಅವರು ಗುರುವಾರ ಜಿಲ್ಲೆಯ ಗಂಗಾವತಿ ತಾಲೂಕಿನ ಸಾಣಾಪುರ ಕೆರೆ ವ್ಯಾಪ್ತಿ ಪ್ರದೇಶದಲ್ಲಿ ಎನ್‌ಡಿಆರ್‌ಎಫ್ ತಂಡ ಮತ್ತು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಅಗ್ನಿಶಾಮಕ ಇಲಾಖೆ ಹಾಗೂ ಇತರೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಬೆಟಾಲಿಯನ್ 10ನೇ ತಂಡದಿಂದ ವಿಪತ್ತು ನಿರ್ವಹಣೆಯ ಅಣಕು ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯಾವುದೇ ವಿಕೋಪ ಸಂದರ್ಭದಲ್ಲಿ, ಮುಂಜಾಗ್ರತೆ ವಹಿಸಿದರೆ ಸಾವಿರಾರು ಜನರ ಜೀವಗಳು ಉಳಿಯುತ್ತವೆ. ಹಾಗಾಗಿ ವಿಪತ್ತು ಸಂದರ್ಭಗಳಲ್ಲಿ ಸ್ಥಳೀಯ ಆಡಳಿತ, ವಿವಿಧ ಇಲಾಖೆಗಳು ಹಾಗೂ ಸಾರ್ವಜನಿಕರು ತಮ್ಮ ಪಾತ್ರವನ್ನು ಅರ್ಥೈಸಿಕೊಳ್ಳುವುದರೊಂದಿಗೆ ವಿಪತ್ತು ಸಂದರ್ಭದಲ್ಲಿ ಅಗತ್ಯ ಮುಂಜಾಗ್ರತೆ ವಹಿಸುವುದು ತುಂಬಾ ಅತ್ಯವಶ್ಯಕವಾಗಿದೆ ಮತ್ತು ಇದು ಎಲ್ಲರ ಆದ್ಯ ಕರ್ತವ್ಯವೂ ಸಹ ಆಗಿದೆ ಎಂದರು.

ಎನ್‌ಡಿಆರ್‌ಎಫ್ ಡೆಪ್ಯೂಟಿ ಕಮಾಂಡೆಂಟ್ ಅಖಿಲ್‌ಕುಮಾರ್ ಚೌಟೆ ಮಾತನಾಡಿದರು.

ಜಿಲ್ಲೆಯಲ್ಲಿ, ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆದ ಎನ್.ಡಿ.ಆರ್.ಎಫ್ ತಂಡದ ವಿಪತ್ತು ನಿರ್ವಹಣೆಯ ಅಣಕು ಪ್ರದರ್ಶನ ಕಾರ್ಯಕ್ರಮದ ನೇತೃತ್ವವನ್ನು ಕೊಪ್ಪಳ ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರು ವಹಿಸಿದ್ದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಾಮಪ್ಪ ಗಂಗಾವತಿ ತಹಶೀಲ್ದಾರ ವಿಶ್ವನಾಥ ಮುರಡಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ್ ಜಾಬಗೌಡರ ಸೇರಿದಂತೆ ಗಂಗಾವತಿ ತಾಪಂ, ಸಾಣಾಪೂರ ಗ್ರಾಪಂ ಮತ್ತು ಇತರೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.



ಗುದ್ನೇಶ್ವರ ಸೇವಾ ಸಮಿತಿ ಕಾರ್ಯ ಶ್ಲಾಘನೀಯ

• **ಕುಕನೂರು:** ಇಂದಿನ ರಾಜಕೀಯ ದುರೀಣರಿಗೆ ಕೇವಲ ಗಳಿಕೆಯಲ್ಲಿ ಮಗ್ನರಾಗಿದ್ದಾರೆ ಬಡವರ ಬಗ್ಗೆ ಕಾಳಜಿ ಇಲ್ಲಾ ಎಂದು ತಾಪಂ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಹೇಳಿದರು.

ಪಟ್ಟಣದ ಗುದ್ನೇಶ್ವರಮಠದಲ್ಲಿ ಶ್ರೀನೀಲಗುಂದ ಗುದ್ನೇಶ್ವರ ಸ್ವಾಮಿ ಸೇವಾ ಸಮಿತಿ ಆಶ್ರಯದಲ್ಲಿ ನಡೆದ ಧಾರ್ಮಿಕ ವಿವಾಹ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಇಂದಿನ ದಿನಮಾನಗಳಲ್ಲಿ ರಾಜಕೀಯ ದುರೀಣರಿಗೆ ಕೇವಲ ಗಳಿಕೆ ಮಾಡುವುದು ಬಿಟ್ಟರೇ ಮತ್ತೇನು ಅವರಿಗೆ ಗೊತ್ತಿಲ್ಲಾ, ಬಡವರ ಹಿತ ಕಾಯುವ ಕೆಲಸ ಮಾಡುವುದು ಕೂಡ ಗೊತ್ತಿಲ್ಲ, ಬಡವರ ಹಿತ ಕಾಯುವ ಮತ್ತು ದುಂದುವೆಚ್ಚಕ್ಕೆ ಕಡಿವಾಣ ಹಾಕುವ ಕೆಲಸ ಗುದ್ನೇಶ್ವರ ಸೇವಾ ಸಮಿತಿ ಯುವಕರು ಮಾಡಿದ್ದಾರೆ. ಅವರ ಕೆಲಸ ನಿಜಕ್ಕೂ ಶ್ಲಾಘನೀಯವಾಗಿದೆ ಎಂದು ಹೇಳಿದರು.

ಗೌಡ ಸೇನಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಸುರೇಶ ಬಳೂಟಗಿ ಮಾತನಾಡಿ, ಇಂದಿನ ಧಾರಾವಾಹಿಗಳಿಂದಾ ಮನೆ ಹಾಳು ಮಾಡುವ ನೀತಿಯನ್ನು ಬಿತ್ತನೆ ಮಾಡುತ್ತಿವೆ ಅಂತಹ ಧಾರಾವಾಹಿ ಮೇಲೆ ಹಾಕುವುದು ಬಡಬೇಕು ಉತ್ತಮ ಜೀವನ ನಡೆಸಬೇಕು ಎಂದು ಹೇಳಿದರು.

ಮಾಜಿ ಜಿಪಂ ಸದಸ್ಯ ಈರಪ್ಪ ಕುಡಗುಂಟಿ ಮಾತನಾಡಿ, ನೂತನ ವಧುವರರು ಜನಸಂಖ್ಯೆ ನಿಯಂತ್ರಣ ಮಾಡಲು ಮುಂದಾಗಬೇಕು ಎಂದು ಹೇಳಿದರು.

ಕುದುರಿಮೋತಿ ಶ್ರೀಗಳು ಸ್ವಾಮೀಜಿ ಮಾತನಾಡಿ, ಜೀವನದಲ್ಲಿ ಹೊಂದಾಣಿಕೆ ಬಹಳ ಮುಖ್ಯ, ಹೊಂದಾಣಿಕೆ ಒಂದು ಇದ್ದರೆ ಜಗತ್ತನ್ನೇ ಗೆಲ್ಲಲ್ಲೂ ಸಾಧ್ಯ, ಅದಕ್ಕೆ ನೂತನ ವಧುವರರು ಹೊಂದಾಣಿಕೆಯ ಜೀವನ ಸಾಗಿಸಲು ಮುಂದಾಗಬೇಕು ಎಂದು ಹೇಳಿದರು.

ಗುದ್ನೇಶ್ವರಮಠ ಹಾಗೂ ನೀಲಗುಂದ ಮಹಾಸ್ವಾಮಿಗಳಾದ ಪ್ರಭುಲಿಂಗ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದರು ಜೊತೆಗೆ ಯಲಬುರ್ಗಾದ ಮುರುಡಿಮಠದ ಬಸವಲಿಂಗೇಶ್ವರ ಮಹಾಸ್ವಾಮಿಗಳು, ಕುಕನೂರ ಅನ್ನದಾನೇಶ್ವರ ಮಠದ ಮಹಾದೇವ ಮಹಾಸ್ವಾಮಿಗಳು ಸಾನಿಧ್ಯವನ್ನು ವಹಿಸಿದ್ದರು. ಮುರಗಯ್ಯ ಮಠದ್, ಚನ್ನಬಸಪ್ಪ ದೂಪದ್, ಗುದ್ನೇಶ್ವರ ಕಮಿಟಿಯ ಎಲ್ಲಾ ಸದಸ್ಯರು ಹಾಗೂ ಯುವಕರು ಭಾಗಿಯಾಗಿದ್ದರು.



ರಾಮನವಮಿ ಪ್ರಭು ಶ್ರೀರಾಮನ ಭವ್ಯ ಶೋಭಾಯಾತ್ರೆ

• **ಕಲಬುರಗಿ:** ರಾಮನವಮಿ ಅಂಗವಾಗಿ ನಗರದಲ್ಲಿ ಶ್ರೀರಾಮನ ಮೂರ್ತಿಯ ಭವ್ಯ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು.

ನಗರದ ಹೊಸ ಜೇವರ್ಗಿ ರಸ್ತೆಯ ಶ್ರೀಸೈಸ್ವನೇಶ್ವರ ದೇವಸ್ಥಾನದಿಂದ ರಾಮಮಂದಿರ ದೇವಸ್ಥಾನದವರೆಗೆ ಕನ್ನಡ ನಾಡು ರಕ್ಷಣಾ ಪಡೆ ವತಿಯಿಂದ ಮೊದಲ ಬಾರಿಗೆ ಆಯೋಜಿಸಲಾದ ಈ ಶೋಭಾಯಾತ್ರೆಯಲ್ಲಿ 7 ಅಡಿ ಎತ್ತರದ ಬೃಹತ್ ಶ್ರೀರಾಮನ ಮೂರ್ತಿ ವಿಶೇಷ ಆಕರ್ಷಣೆಯಾಯಿತು. ಕನ್ನಡ ನಾಡು ರಕ್ಷಣಾ ಪಡೆಯ ರಾಜ್ಯ ಕಾರ್ಯದರ್ಶಿ ಗಜಾನಂದ ದೇಶಪಾಂಡೆ ನೇತೃತ್ವದಲ್ಲಿ ನಡೆದ ಶೋಭಾಯಾತ್ರೆಗೆ ಪೂಜ್ಯರು ಹಾಗೂ ಗಣ್ಯರು ಶೋಭಾಯಾತ್ರೆಗೆ ಚಾಲನೆ ನೀಡಿದರು.

ಗುರುವಾರ ಸಂಜೆ 5:30ಕ್ಕೆ ಪ್ರಾರಂಭವಾದ ಶೋಭಾಯಾತ್ರೆಯಲ್ಲಿ ವಿವಿಧ ವಾದ್ಯಗಳ ನಾದ, ಭಕ್ತರ ಘೋಷಣೆ ಹಾಗೂ ಸಾಂಪ್ರದಾಯಿಕ ಕಲಾ ತಂಡಗಳ ಪ್ರದರ್ಶನಗಳು ಮತ್ತಷ್ಟು ರಂಗು ತಂದವು.

ಕನ್ನಡ ನಾಡು ರಕ್ಷಣಾ ಪಡೆಯ ರಾಜ್ಯಾಧ್ಯಕ್ಷ ಗಂಗಾಧರ ರಾಯಣ್ಣ, ರಾಜ್ಯ ಉಪಾಧ್ಯಕ್ಷ ಡಾ.ಪ್ರಸಾದ ಎಂ.ಪಾಟೀಲ, ಕಾಂಗ್ರೆಸ್ ಮುಖಂಡ ಅಭಿಷೇಕ್ ಪಾಟೀಲ, ಕನ್ನಡ ನಾಡು ರಕ್ಷಣಾ ಪಡೆ ಜಿಲ್ಲಾ ಅಧ್ಯಕ್ಷ ವಿನೋದ್ ಎಂ.ಪಾಟೀಲ, ಶಿವಕುಮಾರ್ ಹಿರೇಮಠ, ವಿಶ್ವನಾಥ್ ಸಾಲಿಮಠ, ಶಶಿಧರ್ ಪಾರದ್, ವಿಶಾಲ್ ಮುತ್ತಾ, ಮಲ್ಲಿಕಾರ್ಜುನ ಅವಂಟಿ, ಗುರು ನೆಲೋಗಿ, ಗುರುರಾಜ್ ಕೊರಳ, ಪವನ್ ಕುಮಾರ್ ಸಾವಳಗಿ, ಕಾರ್ತಿಕ್ ಜಮಾದಾರ್, ಶರಣು ಉಪ್ಪಿನಾಯಕ್, ಸಾಗರೆಡ್ಡಿ, ಶಕ್ತಿ ಚೌವ್ಹಾಣ, ವಿಶಾಲ್ ಸಂಪತ್, ಮಂಜುನಾಥ್ ನಾಗಂಟೆ ಸೇರಿದಂತೆ ಜಿಲ್ಲೆಯ ಪರಮಪೂಜ್ಯರು, ರಾಜಕೀಯ ಮುಖಂಡರು ಹಾಗೂ ಭಕ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ದಲಿತ ಸೇನೆ ಸಂಘಟನೆಯಿಂದ ಸ್ಪರ್ಧಾತ್ಮಕ ಪರೀಕ್ಷೆ

• **ಗಂಗಾವತಿ:** ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಡಾ.ಬಿ.ಆರ್.ಅಂಬೇಡ್ಕರ್‌ರವರ, ಡಾ.ಬಾಬು ಜಗಜೀವನ್ ರಾಮ್ ಅವರ ಜಯಂತಿಯ ಅಂಗವಾಗಿ ಜಿಲ್ಲಾ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುವುದು ಎಂದು ದಲಿತ ಸೇನೆ ಸಂಘಟನೆಯ ಜಿಲ್ಲಾಧ್ಯಕ್ಷ ಉಡಮಪ್ಪ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ದಲಿತ ಸೇನೆ ಸಂಘಟನೆಯ ಕಾರ್ಯಕರ್ತರು ಬುಧವಾರ ಹಮ್ಮಿಕೊಂಡ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು. ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು ಎನ್ನುವ ಉದ್ದೇಶದಿಂದ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ, ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ನಗರದ ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏ.5ರಂದು ಪರೀಕ್ಷೆಯನ್ನು ನಡೆಸಲಾಗುವುದು. ಪರೀಕ್ಷೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಮುಂಚಿತವಾಗಿಯೇ ನೋಂದಾಣಿಯನ್ನು ಮಾಡಿಕೊಳ್ಳಬೇಕು. ನೋಂದಾಣಿ ಮಾಡಿಕೊಳ್ಳಲು ಏ.1 ಕೊನೆಯ ದಿನವಾಗಿದ್ದು, ಮೊದಲ ನೋಂದಾಣಿ ಮಾಡಿಕೊಂಡಿರುವ 150 ಜನ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು.



ಪ್ರವೇಶ ಶುಲ್ಕವಾಗಿ 50ರೂ.ಗಳನ್ನು ತೆಗೆದುಕೊಳ್ಳಲಾಗುತ್ತಿದ್ದು, ಪರೀಕ್ಷೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳು ಪ್ರಮಾಣ ಪತ್ರಗಳನ್ನು ನೀಡಲಾಗುವುದು. ಪಿಯುಸಿಯಿಂದ ಸ್ನಾತಕೋತ್ತರ ಪದವಿಯವರೆಗಿನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಬಹುದು. ಇನ್ನೂ ಮೊದಲನೇ ಬಹುಮಾನವಾಗಿ 20,000 ರೂ.ಗಳು, ದ್ವಿತೀಯ ಬಹುಮಾನವಾಗಿ 10,000 ರೂಗಳು, ತೃತೀಯ ಬಹುಮಾನವಾಗಿ 5000 ರೂ.ಗಳನ್ನು ನೀಡಲಾಗುವುದು. ಆದಷ್ಟು ಬೇಗನೇ ವಿದ್ಯಾರ್ಥಿಗಳು ಈ ನಂಬರಗಳಿಗೆ 78997-31214, 97310-96754, 94835-88758 ಸಂಪರ್ಕಿಸಿ, ನೋಂದಾಣಿಯನ್ನು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸಂಘಟನೆಯ ಮುಖಂಡರಾದ ಮೌಲಾಲಿಕೆ, ಪರಶುರಾಮ, ನೂಕಪ್ಪ, ಮೂಲಪ್ಪ ಗಣೇಶ, ದುರುಗಪ್ಪ, ಶಿವಕುಮಾರ, ರಾಘವೇಂದ್ರ ಹಾಗೂ ಇತರರಿದ್ದರು.

ನೀರನ್ನು ಮಿತವಾಗಿ ಬಳಸಿ: ರಂಗಸ್ವಾಮಿ ಜೆ. ಸಲಹೆ



• **ಯಲಬುರ್ಗಾ:** ಪ್ರತಿಯೊಬ್ಬರು ನೀರಿನ ಮಹತ್ವ ಅರಿತುಕೊಂಡು ಕುಡಿಯುವ ನೀರನ್ನು ಮಿತವಾಗಿ ಬಳಸಬೇಕು. ವ್ಯರ್ಥವಾಗಿ ನೀರನ್ನು ಹರಿಬಿಡದೆ ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ಶ್ರೇಣಿ ನ್ಯಾಯಾಧೀಶ ರಂಗಸ್ವಾಮಿ ಜೆ. ಹೇಳಿದರು.

ಪಟ್ಟಣದ ಕಂದಾಯ ಭವನದಲ್ಲಿ ಗುರುವಾರ ತಾಲೂಕ ಸೇವಾ ತಾಲೂಕ ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕಾಡಳಿತ, ಪಟ್ಟಣ ಪಂಚಾಯತ ಸಹಯೋಗದಲ್ಲಿ ವಿಶ್ವ ಜಲ ದಿನಾಚರಣೆ ಹಾಗೂ ವಿಶ್ವ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮನುಷ್ಯನಿಗೆ ಆಹಾರಕ್ಕಿಂತಲೂ ಕುಡಿವ ನೀರು ಬಹುಮುಖ್ಯವಾಗಿದ್ದು ನಮಗೆಷ್ಟು ಅಗತ್ಯವೋ ಅಷ್ಟನ್ನು ಬಳಸಿಕೊಂಡು ಅದಕ್ಕೆ ಕ್ಯಾಪ್ ಹಾಕುವ ಮೂಲಕ ನೀರು ವ್ಯರ್ಥವಾಗಿ ಹರಿದುಹೋಗದಂತೆ ಜಾಗೃತಿ ವಹಿಸಬೇಕು. ಹಣ ಕೊಟ್ಟರೆ ಆಹಾರ ಎಲ್ಲಿಯಾದರೂ ಸಿಗಬಹುದು. ಆದರೆ, ಹಣ ಕೊಟ್ಟರು ನೀರು ಸಿಗುವುದು ಕಷ್ಟ ಸಾಧ್ಯ. ಹೀಗಾಗಿ ಜಲವನ್ನು ನಾವು ಹೆಚ್ಚು ಸಂರಕ್ಷಿಸಬೇಕು. ಯಾವುದೇ ರೀತಿಯಿಂದ ಕಲುಷಿತಗೊಳಿಸದೆ, ವ್ಯರ್ಥವಾಗಿ ಹರಿಬಿಡದೆ ಮಿತವಾಗಿ ಬಳಸಿಕೊಂಡು ಮುಂದಿನ ಪೀಳಿಗೆಗೆ ಅದನ್ನು ಉಳಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಹೇಳಿದರು.

ವಿಶ್ವ ಒಂದು ಮಾರುಕಟ್ಟೆ ಆದರಲ್ಲಿ, ನಾವೆಲ್ಲರೂ ಗ್ರಾಹಕರು ಯಾವುದೇ ವಸ್ತುಗಳನ್ನು ಕೊಂಡುಕೊಳ್ಳುವಾಗ ಅದರ ಗುಣಮಟ್ಟ ನೋಡಿಕೊಂಡು ಖರೀದಿಸಬೇಕು ಎಂದರು.

ಪ್ರಧಾನ ಸಿವಿಲ್ ನ್ಯಾಯಾಧೀಶ ಸಂಜೀವಕುಮಾರ ಪಟಗಾರಿ ಮಾತನಾಡಿ, ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಇದನ್ನು ನಿರ್ಲಕ್ಷಿಸಿದರೆ ನಮಗೆ ಅಪಾಯ ತಪ್ಪಿದ್ದಲ್ಲ ಎಂದರು.

ತಹಶೀಲ್ದಾರ್ ಪ್ರಕಾಶ ನಾಶಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಹಾಯಕ ಸರ್ಕಾರಿ ಅಭಿಯೋಜಕಿ ಗೀತಾ ಆಸೂಟಿ, ನ್ಯಾಯವಾದಿಗಳಾದ ಎಂ.ಎಸ್.ನಾಯ್ಕರ್, ಹಸನ್‌ಸಾಬ ನದಾಫ್, ಶಿರಸ್ತೇದಾರ ಮಲ್ಲಿಕಾರ್ಜುನ ಶಾಸ್ತ್ರಿಮಠ, ನ್ಯಾಯವಾದಿ ಗೀತಾ ಪ್ರಾರ್ಥಿಸಿದರು. ಅಪರ ಸರ್ಕಾರಿ ವಕೀಲ ಮಲ್ಲನಗೌಡ ಪಾಟೀಲ ನಿರೂಪಿಸಿದರು. ರಾಘವೇಂದ್ರ ಕೋಳಿಹಾಳ ಸ್ವಾಗತಿಸಿದರು, ವಿನಾಯಕ ವಂದಿಸಿದರು.

ಸ್ಕೌಟ್ಸ್, ಗೈಡ್ಸ್‌ನಿಂದ ಬೇಸಿಗೆ ಶಿಬಿರ

• **ಮಸ್ಕಿ:** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಸ್ಕಿ ಮತ್ತು ಶ್ರೀಧರ್ಮಸ್ಥಳ ಮಂಜುನಾಥ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಸಂಯುಕ್ತಾಶ್ರಯದಲ್ಲಿ, ಪಟ್ಟಣದ ಎಸ್‌ಡಿಎಂ ಶಾಲೆಯಲ್ಲಿ ಇಂದು ಬೇಸಿಗೆ ಶಿಬಿರ ಕಾರ್ಯಕ್ರಮ ದೈಹಿಕ ಶಿಕ್ಷಕರಾದ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯದರ್ಶಿ ಶಿವಪ್ಪ ಹನಮಕಲ್ ಉದ್ಘಾಟಿಸಿದರು.

ಈ ಬಾರಿ ಬೇಸಿಗೆ ಬಿಸಿಲು ಜಾಸ್ತಿ ಆಗಿದ್ದು ನೆಟ್ಟ ಗಿಡಗಳಿಗೆ ಜೂನ್ ವರೆಗೆ ನೀರಿನ ಅವಶ್ಯಕತೆ ಸಲುವಾಗಿ ನಮ್ಮ ಸಂಸ್ಥೆಯಿಂದ ನೀರಿನ ಸೇವೆ ಮಾಡಬೇಕು. ಗಿಡಗಳನ್ನು ಉಳಿಸಲು ನಮ್ಮ ಸಂಸ್ಥೆಯ ಸದಸ್ಯರು, ಪದಾಧಿಕಾರಿಗಳು, ವಿದ್ಯಾರ್ಥಿಗಳ ಪಾಲಕರು,ಹಾಗೂ ಕುಟುಂಬದ ಸದಸ್ಯರ ಜನ್ಮದಿನವನ್ನು ಗಿಡಗಳಿಗೆ ನೀರು ಹಾಕುವುದರ ಮೂಲಕ ಪರಿಸರ ಸಂರಕ್ಷಣೆ ಮಾಡಲು ಮನಸು ಮಾಡಬೇಕು ಎಂದು ಮಲ್ಲಿಕಾರ್ಜುನ ನಾಯನೇಗಿಲಿ ಮನವಿ ಮಾಡಿದರು.

ಇದರ ಅಂಗವಾಗಿ ರೈತರ ಗದ್ದೆಗಳಿಗೆ ಹೋಗಿ ಮಕ್ಕಳು ಸಂಭ್ರಮ ಪಟ್ಟರು.



ಕೆರೆಗಳ ಸಂರಕ್ಷಣೆಗೆ ಎಲ್ಲರ ಸಹಕಾರ ಅಗತ್ಯ

• **ಕುಷ್ಟಗಿ:** ವಿಶ್ವ ಜಲ ದಿನಾಚರಣೆ ಅಂಗವಾಗಿ ತಾಲೂಕಿನ ಮುದಲಗಟ್ಟಿ ಗ್ರಾಮದ ಸಮೀಪದ ನಿಡಶೇಸಿ ಕೆರೆ ಮೈದಾನದಲ್ಲಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಯಶಸ್ವಿಯಾಗಿ ಜರುಗಿತು.

ಪೊಲೀಸ್ ಇಲಾಖೆ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕು ಪಂಚಾಯತ್, ಪುರಸಭೆ ಹಾಗೂ ಸಣ್ಣ ನೀರಾವರಿ ಉಪವಿಭಾಗದ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಮಂಜುನಾಥ ಆರ್., ಕೆರೆಗಳ ಸಂರಕ್ಷಣೆ ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಸ್ಥಳೀಯ ಜನರ ಸಹಭಾಗಿತ್ವವೂ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಮಹಾಂತೇಶ ಬೇವಿನಗಿ ಮಾತನಾಡಿ, ಗಾಳಿ, ಬೆಳಕು ಮತ್ತು ಆಹಾರದ ಮಹತ್ವವನ್ನು ಅರಿತಿದ್ದರೂ ನೀರಿನ ಕೊರತೆಯ ಬಗ್ಗೆ ಜನರಲ್ಲಿ ಸಮರ್ಪಕ ಅರಿವು ಇಲ್ಲ ಎಂದು ಅಭಿಪ್ರಾಯಪಟ್ಟರು. ಪ್ರತಿಯೊಬ್ಬರೂ ನೀರಿನ ಮೌಲ್ಯವನ್ನು ಅರಿತುಕೊಂಡು ಕೆರೆಗಳಲ್ಲಿ ನೀರು ಸಂಗ್ರಹಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದರು.

ಸಿಪಿಐ ವಿಶ್ವನಾಥ ಹಿರೇಗೌಡ್ರು ಮಾತನಾಡಿದರು.



ಸಣ್ಣ ನೀರಾವರಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ದೇವೇಂದ್ರಪ್ಪ ಇಟ್ಟಂಗಿ ಅಧ್ಯಕ್ಷತೆ ವಹಿಸಿದ್ದರು. ತಾಪಂ ಇಒ ಪಂಪಾಪತಿ ಹಿರೇಮಠ 'ಒಂದು ಹನಿ ನೀರು ಅಮೃತಕ್ಕೆ ಸಮಾನ' ಎಂದು ಹೇಳಿ, ಕೆರೆಗಳ ಅಭಿವೃದ್ಧಿಯಿಂದ ಅಂತರ್ಜಲ ಮಟ್ಟ ಹೆಚ್ಚಾಗಿ ಕೃಷಿಗೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರಧಾನ ಸಿವಿಲ್ ನ್ಯಾಯಾಧೀಶರು ಎಂ.ಎಲ್.ಪೂಜೇರಿ, ಉಪ ತಹಶೀಲ್ದಾರ್ ರಜನಿಕಾಂತ ಕೆಂಗೇರಿ, ವಕೀಲರ ಸಂಘದ ಅಧ್ಯಕ್ಷ ಎಚ್.ಆರ್.ನಾಯಕ್, ಪಿಎಸ್ಐ ಹನುಮಂತಪ್ಪ ತಳವಾರ, ಅರಣ್ಯ ಇಲಾಖೆ ಅಧಿಕಾರಿ ಶಿವರಾಜ ಮೇಟಿ ಮತ್ತು ಹನುಮಂತಪ್ಪ, ಪುರಸಭೆ ಮುಖ್ಯಾಧಿಕಾರಿ ವೆಂಕಣ್ಣ ಬೀಳಗಿ, ಸಹಾಯಕ ಸರ್ಕಾರಿ ಅಭಿಯೋಜಕ ರಾಮನಗೌಡ ಎಲ್., ಅಪರ ಸರ್ಕಾರಿ ವಕೀಲ ಪರಸಪ್ಪ ಗುಜಮಾಗಡಿ ಹಾಗೂ ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ಗಿರೀಜಾ ಮಾಲಿಪಾಟೀಲ ಇತರರಿದ್ದರು.

ಕಿರುಸುದ್ದಿ

ವಿಧೇಯಕ ತಿದ್ದುಪಡಿಗೆ ವೈ.ಎಂ.ಸತೀಶ್ ಮನವಿ



• ಬಳ್ಳಾರಿ: ವಿಧಾನ ಪರಿಷತ್‌ನ ಅಧಿವೇಶನದಲ್ಲಿ, ಬುಧವಾರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು ಶಿಕ್ಷಕರ ವರ್ಗಾವಣೆ ನಿಯಂತ್ರಣ ತಿದ್ದುಪಡಿ ವಿಧೇಯಕದ ಮೇಲೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಅವರು, ಅಧಿಕಾರಿಗಳು ವಿಧೇಯಕದ ಪದಗಳನ್ನು ಸರಿಪಡಿಸಲು ಸೂಚನೆ ನೀಡುವಂತೆ ಸಭಾಪತಿಗಳ ಮೂಲಕ ಸರ್ಕಾರವನ್ನು ಕೋರಿದರು. ಈ ವಿಧೇಯಕವನ್ನು ತರುವ ಬಗ್ಗೆ ಹಾಗೂ ಶಿಶು ಪಾಲನೆ ಮಾಡುವ ಸಣ್ಣ ಮಕ್ಕಳ ತಾಯಂದಿರ ಬಗ್ಗೆ ಯೋಚನೆ ಮಾಡಿ, ಸೂಕ್ತ ತಿದ್ದುಪಡಿಗಳನ್ನು ತರುವಂತೆ ಈ ಹಿಂದೆ ಪ್ರಶ್ನೋತ್ತರದ ಸಮಯದಲ್ಲಿ ಚರ್ಚೆ ನಡೆಸಿ ಮಾನ್ಯ ಸಚಿವರ ಗಮನಕ್ಕೆ ತರಲಾಗಿತ್ತು ಎಂದು ತಿಳಿಸಿದ್ದಾರೆ.

ಹುಣಸಗಿಯಲ್ಲಿ ಓದುಗರ ಬಳಗ ಶುಭಾರಂಭ



• ಹುಣಸಗಿ: ವಿಶ್ವಮಯರ ಓದುಗರ ಬಳಗದ ಶುಭಾರಂಭ ಹಾಗೂ "ಅಮರ ಕನ್ನಡ" ಕೃತಿ ಅವಲೋಕನ ಕಾರ್ಯಕ್ರಮವನ್ನು ಮಾ.29ರಂದು ಭಾನುವಾರ ಸಂಜೆ 5 ಗಂಟೆಗೆ ನಾರಾಯಣಪುರ ರಸ್ತೆಯ ಶ್ರೀನೀಲಕಂಠೇಶ್ವರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಹೇಶ ಸ್ಥಾವರಮಠ ತಿಳಿಸಿದ್ದಾರೆ.

ಪ್ರತಿ ತಿಂಗಳು ಓದು, ಪುಸ್ತಕ ಚರ್ಚೆ, ಸ್ಥಳೀಯ ಇತಿಹಾಸ ಹಾಗೂ ಸಾಹಿತ್ಯ ಚಟುವಟಿಕೆಗಳ ಕುರಿತು ಕಾರ್ಯಕ್ರಮಗಳನ್ನು ಆಯೋಜಿಸಿ ಓದುವ ಹವ್ಯಾಸ ಬೆಳೆಸುವ ಉದ್ದೇಶ ಹೊಂದಿರುವುದಾಗಿ ದೇವರಾಜ ಕುಲಕರ್ಣಿ ಹೇಳಿದರು. ಸಿದ್ಧಲಿಂಗಯ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದು, ಸಿದ್ದಪ್ಪ ಹೊಟ್ಟಿ, ಕಸಾಪ ಅಧ್ಯಕ್ಷ ವೆಂಕಟಗಿರಿ ದೇಶಪಾಂಡೆ ಸೇರಿದಂತೆ ಹಲವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬಸವರಾಜ ವೈಲಿ ಅಧ್ಯಕ್ಷತೆ ವಹಿಸಲಿದ್ದು, ಸುನೀಲ ಚಂದಾ ಮತ್ತು ತಂಡ ನಿರ್ವಹಿಸಲಿದ್ದಾರೆ.

ಹದಗೆಟ್ಟ ನಂದಿಹಳ್ಳಿ ರಸ್ತೆ: ಆಕ್ರೋಶ



• ಹೂವಿನಹಡಗಲಿ: ತಾಲೂಕಿನ ನಂದಿಹಳ್ಳಿ ಗ್ರಾಮಕ್ಕೆ ತೆರಳುವ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಇಲ್ಲಿವರೆಗೂ ಸ್ಥಳೀಯ ಶಾಸಕರು ಭರವಸೆ ಕೊಟ್ಟು ಸಾಕಷ್ಟು ದಿನಗಳಾದರೂ ಈ ರಸ್ತೆ ದುರಸ್ತಿ ಕಾಣದಿರುವುದನ್ನು ಕಂಡು ಸ್ಥಳೀಯ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಾಜಿ ಶಾಸಕ ಆದ ವಿ.ಬಿ.ಹಾಲಪ್ಪನವರ ಗಮನಕ್ಕೆ ಇದ್ದರೂ ಕೂಡ ತಮ್ಮದೇ ಪಕ್ಷದ ಹಾಲಿ ಶಾಸಕ ಕೃಷ್ಣನಾಯ್ಕ ಅವರ ಗಮನಕ್ಕೆ ತಂದು ರಸ್ತೆ ದುರಸ್ತಿ ಮಾಡದಿರುವುದು ಈ ಗ್ರಾಮದ ದುರ್ಭಾಗ್ಯವೆ ಸರಿ ಎಂದೆನಿಸುತ್ತದೆ. ಒಂದು ತಿಂಗಳೊಳಗಾಗಿ ರಸ್ತೆ ದುರಸ್ತಿ ಕಾರ್ಯ ನಡೆಯದೆ ಹೋದರೆ, ರಸ್ತೆ ತಡೆ ಮಾಡಿ ಪ್ರತಿಭಟಿಸುತ್ತೇವೆ ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ. ಹಿರಿಯ ಪತ್ರಕರ್ತರಾದ ವಿ.ಬಿ.ಮಲ್ಲಪ್ಪ, ಕೊಟ್ರೇಶ್, ವಿ.ಬಿ.ಶಿವಪುತ್ರ, ಮಲ್ಲನಗೌಡ ಹಾಗೂ ಕಂಠ ವೀರೇಶ ಇತರರಿದ್ದರು.

ಇಂದು ರಕ್ತದಾನ ಶಿಬಿರ

• ಗಾದಿಗನೂರು: ಗುಂಡ್ಲುವದ್ದಿಗೇರಿ ಗ್ರಾಮದಲ್ಲಿ, ಶ್ರೀರಾಮ ನವಮಿ ಪ್ರಯುಕ್ತ ಸ್ವಯಂಪ್ರೇರಿತ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಮಾ.27ರಂದು ಹಮ್ಮಿಕೊಳ್ಳಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಗಾದಿಗನೂರು ಹಾಗೂ ಉಪ ಕೇಂದ್ರ ಬೈಲವದ್ದಿಗೇರಿ ವಿಮ್ಸ್ ರಕ್ತ ಭಂಡಾರ ಬಳ್ಳಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ ಸಹಯೋಗದೊಂದಿಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಬೈಲವದ್ದಿಗೇರಿ ಗ್ರಾಮ ಪಂಚಾಯಿತಿಗೆ ಒಳಪಡುವ ಗುಂಡ್ಲುವದ್ದಿಗೇರಿ ಗ್ರಾಮದ ಶ್ರೀರಾಮ ದೇವಸ್ಥಾನದಲ್ಲಿ ಶುಕ್ರವಾರ ಬೆಳಗ್ಗೆ 9 ಗಂಟೆಯಿಂದ ಸಂಜೆ 5ರವರೆಗೆ ರಕ್ತದಾನ ಶಿಬಿರ ನಡೆಯಲಿದೆ. ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ತಿಳಿಸಿದ್ದಾರೆ.



ಹೂವಿನಹಡಗಲಿ: ತಾಲೂಕಿನ ಹೊಳಗುಂದಿ ಗ್ರಾಮದ ಹೊರವಲಯದಲ್ಲಿರುವ ಗ್ಲೋಬಲ್ ಪದವಿಪೂರ್ವ ಕಾಲೇಜಿನಲ್ಲಿ ಮಾದರಿ ಕೆಸಿಇಟಿ ಪರೀಕ್ಷೆಯನ್ನು ಗುರುವಾರ ಆಯೋಜಿಸಲಾಯಿತು.

ತೈಲ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

• ವಿಜಯನಗರ: ನಗರದ ಡಾ.ಪುನೀತ್‌ರಾಜಕುಮಾರ್ ಜಿಲ್ಲಾ ಕ್ರೀಡಾಂಗಣದಿಂದ ಅಂಬೇಡ್ಕರ್ ವೃತ್ತದ ವರೆಗೆ 100 ಅಡಿ ಉದ್ದ, 40 ಅಡಿ ಅಗಲದ ಬೃಹತ್ ಗಾತ್ರದ ಬ್ಯಾನರ್‌ನಲ್ಲಿ ಕಾಂಪ್ರಮೈಸ್ ಮೋದಿ ಎಂದು ಬರೆದಿರುವ ಬ್ಯಾನರ್ ಹಿಡಿದು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಭರತ್ ಕುಮಾರ್ ಸಿಆರ್ ನೇತೃತ್ವದಲ್ಲಿ ಪ್ರತಿಭಟನೆ ಮಾಡಿತು.

ಈ ವೇಳೆ ಮಾತನಾಡಿದ ಅವರು, ರೈತರು ಪ್ರತಿದಿನ ಬಳಸುವಂತಹ ದಿನಸಿ ಮೇಲೆ ತೈಲದ ಮೇಲೆ ದುಬಾರಿ ಬೆಲೆಯನ್ನು ಏರಿಕೆ ಮಾಡಿ ಜನರಿಗೆ ಮೋಸ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಎಂದು ದೂರಿದರು.

ರಾಜ್ಯ ಕಾರ್ಯದರ್ಶಿ ಅಬ್ದುಕಾದಿರ್, ರಾಜ್ಯ ಸಾಮಾಜಿಕ ಜಾಲತಾಣದ ಸಂಯೋಜಕರಾದ ಗಣೇಶ್ ಪಾಟೀಲ್, ಜಿಲ್ಲಾ ಉಪಾಧ್ಯಕ್ಷರಾದ ಜೀಶನ್ ಹ್ಯಾರಿಸ್, ಲೀಗಲ್ ಸೆಲ್ ಅಧ್ಯಕ್ಷರದ ಅಬ್ದುಲ್ ಕಲಾಂ, ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷರಾದ ಯಾರಿಸ್ವಾಮಿ, ಜಿಲ್ಲಾ ಉಪಾಧ್ಯಕ್ಷರು ಆಯೇಷಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಲ್ತಾಫ್, ಅರುಣ್, ರೋಷನ್, ಭರತ್ ಕುಮಾರ್ ಸಿ.ಆರ್., ಹೊಸಪೇಟೆ ಅಧ್ಯಕ್ಷ ಹಾರೂನ್, ಹೊಸಪೇಟೆ ಬ್ಲಾಕ್ ಅಧ್ಯಕ್ಷ ಪ್ರದೀಪ್, ಕಮಲಾಪುರ ಬ್ಲಾಕ್ ಅಧ್ಯಕ್ಷ ಗೌಸ್, ಹಗರಿಬೊಮ್ಮನಹಳ್ಳಿ ಅಧ್ಯಕ್ಷರಾದ ಪ್ರೇಮ್ ಕುಮಾರ್, ಮರಿಯಮ್ಮನಹಳ್ಳಿ ಬ್ಲಾಕ್ ಅಧ್ಯಕ್ಷರಾದ ಶರತ್, ಕೂಡ್ಲಿಗಿ ಅಧ್ಯಕ್ಷ ಕೊಟ್ರೇಶ್, ಉಪಾಧ್ಯಕ್ಷರಾದ ಸುಹಾಯಿಲ್ ಇದ್ದರು.



ವಿಜಯನಗರ: ನಗರದ ಡಾ.ಪುನೀತ್‌ರಾಜಕುಮಾರ್ ಜಿಲ್ಲಾ ಕ್ರೀಡಾಂಗಣದಿಂದ ಅಂಬೇಡ್ಕರ್ ವೃತ್ತದ ವರೆಗೆ 100 ಅಡಿ ಉದ್ದ, 40 ಅಡಿ ಅಗಲದ ಬೃಹತ್ ಗಾತ್ರದ ಬ್ಯಾನರ್‌ನಲ್ಲಿ ಕಾಂಪ್ರಮೈಸ್ ಮೋದಿ ಎಂದು ಬರೆದಿರುವ ಬ್ಯಾನರ್ ಹಿಡಿದು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಭರತ್ ಕುಮಾರ್ ಸಿಆರ್ ನೇತೃತ್ವದಲ್ಲಿ ಪ್ರತಿಭಟನೆ ಮಾಡಿತು.

ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಹೇಳಿಕೆ

ಬೂತ್ ಮಟ್ಟದಲ್ಲಿ ಪಕ್ಷ ಭದ್ರಪಡಿಸಿ

• ಯಾದಗಿರಿ: ರಾಜ್ಯದಲ್ಲಿ ಮುಂಬರುವ ದಿನಗಳಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಉತ್ತಮ ಭವಿಷ್ಯವಿದೆ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್ ತಿಳಿಸಿದರು.

ನಗರದ ಎನ್‌ವಿಎಂ ಹೋಟೆಲ್ ಸಭಾಂಗಣದಲ್ಲಿ ಬಿಜೆಪಿಯಿಂದ ಆಯೋಜಿಸಿದ್ದ ಪಂ.ದೀನ್‌ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಅಭಿಯಾನ, ನಗರ ಮಂಡಲ ಪ್ರಶಿಕ್ಷಣ ವರ್ಗವನ್ನು ಉದ್ಘಾಟಿಸಿ ಮಾತನಾಡಿ, ಕೇಂದ್ರದಲ್ಲಿ ಕಳೆದ 12 ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನಮ್ಮ ಸರ್ಕಾರ ಭ್ರಷ್ಟಾಚಾರ ರಹಿತ ಆಡಳಿತ ನೀಡುತ್ತಿದೆ ಎಂದರು.

ಇಂದು ಮಧ್ಯಪ್ರಾಚ್ಯ ರಾಷ್ಟ್ರಗಳು ಯುದ್ಧದಿಂದ ತತ್ತರಿಸಿವೆ. ಇದರಿಂದ ಕಚ್ಚಾತೈಲಗಳ ಬೆಲೆ ಆಯಾ ರಾಷ್ಟ್ರಗಳಲ್ಲಿ ಹೆಚ್ಚಾಗಿವೆ. ಆ ದೇಶದ ಪ್ರಜೆಗಳು ಬೆಲೆ ಏರಿಕೆಯಿಂದ ತೊಂದರೆಯಲ್ಲಿದ್ದಾರೆ. ಆದರೆ, ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ಯಾವುದೇ ಏರಿಕೆಯಾಗಿಲ್ಲ, ಇದು ನಮ್ಮ ಪ್ರಧಾನಿಗಳ ಕಾರ್ಯವೈಖರಿ ಎಂದು ಹೇಳಿದರು.

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪ್ರಧಾನಿ ಮೋದಿ ಅವರು ದೇಶವನ್ನು ಕಟ್ಟಲು ಹಗಲಿರುಳು ಶ್ರಮಿಸುತ್ತಿದ್ದಾರೆ. ರಾಜ್ಯದಲ್ಲೂ ನಡೆಯಲಿರುವ ಎಲ್ಲ ಚುನಾವಣೆಗಳಲ್ಲಿ ಬಿಜೆಪಿ ಗೆಲುವು ಸಾಧಿಸಬೇಕು. ಈನಿಟ್ಟಿನಲ್ಲಿ ಪಕ್ಷದಿಂದ ಇಂಥ ವರ್ಗಗಳನ್ನು ನಡೆಸುತ್ತಿದೆ ಎಂದು ತಿಳಿಸಿದರು.

ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ ಪ್ರಮುಖರಾದ ಮಹೇಶರೆಡ್ಡಿ ಮುದ್ನಾಳ್, ರಾಚನಗೌಡ ಮುದ್ನಾಳ್, ನಾಗರತ್ನ ಕುಪ್ಪಿ, ಖಂಡಪ್ಪ ದಾಸನ್, ಡಾ.ಶರಣಭೂಪಾಲರೆಡ್ಡಿ ನಾಯ್ಕಲ್, ಸಿದ್ದನಗೌಡ ಕಾಡಂನೂರ, ದೇವಿಂದ್ರನಾಥ ನಾದ್, ನಿಂಗಪ್ಪ ಹತ್ತಿಮನಿ, ರಾಜಶೇಖರ ಕಾಡಂನೂರ, ಮಹೇಶ ಬೆಳಗೇರಾ ಇದ್ದರು.



> ಬೂತ್ ಮಟ್ಟದಲ್ಲಿನ ಅಧ್ಯಕ್ಷರು ಆ ಬೂತ್ ಗೆ ಮುಖ್ಯಮಂತ್ರಿ ಇದ್ದ ಹಾಗೆ. ನಿಮ್ಮ ಬೂತ್‌ಗಳನ್ನು ಭದ್ರಗೊಳಿಸಿಕೊಳ್ಳಬೇಕು. ಬಿಎಲ್‌ಒ ಗಳೊಂದಿಗೆ ಸಮನ್ವಯ ಸಾಧಿಸಿ, ಮತದಾರರೊಂದಿಗೆ ನಿಕಟ ಸಂಪರ್ಕವಿಟ್ಟುಕೊಳ್ಳಬೇಕು.
> ■ ಭಾಸ್ಕರರಾವ್, ನಿವೃತ್ತ ಐಪಿಎಸ್ ಅಧಿಕಾರಿ

ಹಜ್ ಯಾತ್ರಿಕರಿಗೆ ಆರೋಗ್ಯ ಜಾಗೃತಿ

• ಬಳ್ಳಾರಿ: ಹಜ್ ಯಾತ್ರೆಗೆ ತೆರಳಲಿರುವ ಮುಸ್ಲಿಂ ಸಮುದಾಯದ ಯಾತ್ರಿಕರಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಬುಧವಾರ ನಗರದ ಮುಹಮ್ಮದಿಯ ಕಾಲೇಜಿನಲ್ಲಿ ಆರೋಗ್ಯ ಜಾಗೃತಿ ಹಾಗೂ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಮಾತನಾಡಿ, ವಿದೇಶ ಪ್ರಯಾಣದ ಸಂದರ್ಭದಲ್ಲಿ ಯಾತ್ರಿಕರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಇದೇವೇಳೆಹೆಣ್ಣುಮಕ್ಕಳಲ್ಲಿಕಾಣಿಸಿಕೊಳ್ಳುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಹೆಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮಾ ವೈರಸ್) ಲಸಿಕೆ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ತಪ್ಪು ಮಾಹಿತಿ ಹಾಗೂ ವದಂತಿಗಳಿಗೆ ಸಾರ್ವಜನಿಕರು ಕಿವಿಕೊಡಬಾರದು. 14 ವರ್ಷದ ಹೆಣ್ಣು ಮಕ್ಕಳಿಗೆ ಈ ಲಸಿಕೆ ಹಾಕಿಸುವುದು ಅತ್ಯಂತ ಸುರಕ್ಷಿತ. ಗರ್ಭಕಂಠದ ಕ್ಯಾನ್ಸರ್ ಮುಕ್ತ ನಾಡಿಗಾಗಿ ಪ್ರತಿಯೊಬ್ಬ ಪೋಷಕರು ತಮ್ಮ ಹೆಣ್ಣು ಮಕ್ಕಳಿಗೆ ಲಸಿಕೆ ಕೊಡಿಸಬೇಕು ಎಂದು ಮನವಿ ಮಾಡಿದರು.

ಯಾತ್ರಿಕರಿಗೆ ಕಡ್ಡಾಯವಾಗಿ ಮೆನಿಂಗೋಕೋಕಲ್ ಮೆನಿಂಜೈಟಿಸ್ ಲಸಿಕೆ ಹಾಗೂ 64 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಬಿ-ಒಪಿವಿ ಮತ್ತು ಇನ್‌ಫ್ಲುಯೆಂಜಾ ಲಸಿಕೆ ಹಾಗೂ ಇತರೆ ಅಗತ್ಯ ಲಸಿಕೆಗಳನ್ನು ಹಾಕಿಸಿದರು.

ಬಳ್ಳಾರಿಯ ದಾರುಲ್ ಸರ್ಕಾರಿ ಖಾಜೀಗಳಾದ ಗುಲಾಮ್ ಮೊಹಮ್ಮದ್ ಸಿದ್ದಿಖಿ ಮಾತನಾಡಿ, ಲಸಿಕೆಯ ಬಗ್ಗೆ ಸಮುದಾಯದಲ್ಲಿ ಯಾರು ಭಯ ಪಡುವ ಅಗತ್ಯವಿಲ್ಲ, ಹೆಣ್ಣು ಮಕ್ಕಳ ಆರೋಗ್ಯ ದೃಷ್ಟಿಯಿಂದ ಎಲ್ಲರೂ ಸಹಕರಿಸಬೇಕು ಎಂದು ಜಾಗೃತಿ ಮೂಡಿಸಿದರು.

ಡಿ.ಡಬ್ಲ್ಯು.ಎ.ಸಿ ಮಾಜಿ ಅಧ್ಯಕ್ಷ ಹುಮಾಯೂನ್ ಖಾನ್ ಮಾತನಾಡಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಪ್ರಭಾರಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಷಿದ್ ಬೇಗಮ್, ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಶಾಂತಮ್ಮ, ಹಿರಿಯ ಪ್ರಾಥಮಿಕ ಸುರಕ್ಷಾಧಿಕಾರಿ ಗಂಗಮ್ಮ ಹಾಗೂ ಡಿಡಬ್ಲ್ಯುಎಸಿ ಮಾಜಿ ಅಧ್ಯಕ್ಷರಾದ ಹುಸೇನ್ ಪೀರ್, ಮೊಹಮ್ಮದ್ ಗೌಸ್, ಅಯಾಜ್ ಅಹಮ್ಮದ್, ಅಲ್ಲಾ ಭಕ್ಷಿ ಮತ್ತು ಶೌಕತ್ ಸಾಬ್, ಸಾದತ್ ಸಾಬ್ ಇತರರಿದ್ದರು.



ಸೈನಿಕ ಶಾಲೆಗೆ 23 ವಿದ್ಯಾರ್ಥಿಗಳು ಆಯ್ಕೆ

• ಸಿರುಗುಪ್ಪ: ತಾಲೂಕಿನ 30 ವಿದ್ಯಾರ್ಥಿಗಳು ಜ.18ರಂದು ನಡೆದ ಸೈನಿಕ ಪರೀಕ್ಷೆ ಬರೆದಿದ್ದು, ಅದರಲ್ಲಿ 23 ವಿದ್ಯಾರ್ಥಿಗಳು ಸೈನಿಕ ಶಾಲೆಗಳಿಗೆ ಅರ್ಹತೆಯನ್ನು ಪಡೆದಿದ್ದಾರೆ.

ವಿದ್ಯಾರ್ಥಿನಿ ಅನುಶ್ರೀ ಕನ್ನಡ ವಿಷಯದಲ್ಲಿ 50 ಅಂಕಗಳಿಗೆ 48 ಅಂಕಗಳು, ಸ್ಫೂರ್ತಿ ಗಣಿತ ವಿಷಯದಲ್ಲಿ 150 ಅಂಕಗಳಿಗೆ 144 ಅಂಕಗಳನ್ನು ಪಡೆದು ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಕಿತ್ತೂರು ಸೈನಿಕ ಶಾಲೆಗೆ ಪರೀಕ್ಷೆ ಬರೆದ 6 ವಿದ್ಯಾರ್ಥಿಗಳಲ್ಲಿ 3 ವಿದ್ಯಾರ್ಥಿನಿಯರು ಆಯ್ಕೆಗೊಂಡಿರುತ್ತಾರೆ.

ವಿದ್ಯಾರ್ಥಿಗಳು ಆಯ್ಕೆಗೊಳ್ಳಲು ಶ್ರಮವಹಿಸಿದ ಶಿಕ್ಷಕ ವರ್ಗದವರಿಗೆ ಹಾಗೂ ಆಯ್ಕೆಗೊಂಡ ಎಲ್ಲ ವಿದ್ಯಾರ್ಥಿಗಳಿಗೆ ಸಾಧನಾ ಕೋಚಿಂಗ್ ಸೆಂಟರ್‌ನ ವ್ಯವಸ್ಥಾಪಕ ನಿರ್ದೇಶಕ ಲಿಂಗನಗೌಡ ಅಭಿನಂದನೆ ಸಲ್ಲಿಸಿದ್ದಾರೆ.

ಹೊಸ ಪ್ರತಿಭೆಗಳ ಅನಾವರಣಕ್ಕೆ ಅವಕಾಶ

• ಸಿರುಗುಪ್ಪ: ಕವಿಗೋಷ್ಠಿ ಮತ್ತು ಗಾನ ಸಿಂಚನ ಕಾರ್ಯಕ್ರಮವು ಹೊಸ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವುದಲ್ಲದೆ ಸಾಹಿತ್ಯ ಸಂಸ್ಕೃತಿಯನ್ನು ಉತ್ತೇಜಿಸುತ್ತದೆ ಎಂದು ಜ್ಞಾನಭಾರತಿ ವಿದ್ಯಾ ಸಂಸ್ಥೆ ಅಧ್ಯಕ್ಷ ದಮ್ಮೂರು ಮಲ್ಲಿಕಾರ್ಜುನ ಹೇಳಿದರು.

ನಗರದ ಜ್ಞಾನಭಾರತಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ, ಮಂಗಳವಾರ ನೇತ್ರಾ, ಕಲಾ ಸಂಘದ ವತಿಯಿಂದ ಹಮ್ಮಿಕೊಂಡ ಯುಗಾದಿ ಕವಿಗೋಷ್ಠಿ ಹಾಗೂ ಗಾನ ಸಿಂಚನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಯುಗಾದಿ ಕವಿಗೋಷ್ಠಿ ಹೊಸ ಕವನಗಳನ್ನು ಆಚರಿಸುವ ಯುವಕವಿಗಳಿಗೆ ಹಿರಿಯ ಕವಿಗಳು ಒಂದೆಡೆ ಸೇರಿ ತಮ್ಮ ಕವನಗಳನ್ನು ವಾಚಿಸಿ ಚರ್ಚಿಸುವ ಸಾಹಿತಿಕ ಕಾರ್ಯಕ್ರಮ ಇದಾಗಿದೆ ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಿಲ್ಲಾ ಸಾಹಿತ್ಯ ಪರಿಷತ್ತು ದಸರಾ ಹಾಗೂ ಹಂಪಿ ಉತ್ಸವ ಇತರೆ ವಿಶೇಷ ಸಂದರ್ಭಗಳಲ್ಲಿ ಇಂತಹ ಕವಿಗೋಷ್ಠಿಗಳನ್ನು ಆಯೋಜಿಸುವುದು ವಾಡಿಕೆ. ಸಂಘ, ಸಂಸ್ಥೆಗಳು ಇಂತಹ ಕಾರ್ಯಕ್ರಮಗಳನ್ನು ರೂಪಿಸುವುದರಿಂದ ಯುವಕರಿಗೆ, ಹಿರಿಯ ಸಾಹಿತಿಗಳಿಗೆ ಸಂವಾದಕ್ಕೆ ಅವಕಾಶ ನೀಡುವ ವೇದಿಕೆಯಾಗಿದೆ. ಸಾಮಾಜಿಕ ಕಳಕಳಿ ಇರುವ ಕವನಗಳನ್ನು ಹೆಚ್ಚಾಗಿ ಯುವಕರು ಬರೆಯುವುದರ ಜೊತೆಗೆ ಸಮಾಜದ ಓರೆ ಕೋರೆಗಳನ್ನು ತಿದ್ದುವ ಕೆಲಸ ಎಲ್ಲರಿಂದ ಆಗಲಿ ಎಂದು ಹೇಳಿದರು.

ಹಾಸ್ಯ ಕಲಾವಿದ ಹಾಗೂ ಹಿರಿಯ ಸಾಹಿತಿ ಜೆ.ನರಸಿಂಹಮೂರ್ತಿ ಮಾತನಾಡಿ, ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವ ಮೂಲಕ ಸಾಹಿತ್ಯವನ್ನು ಬರೆಯುವ ಓದುವ ಅಭ್ಯಾಸವನ್ನು ಮೈಗೂಡಿಸಿಕೊಳ್ಳಬೇಕು. ಯುವಕರು ಸಣ್ಣ ಸಣ್ಣ ಪದ್ಯಗಳನ್ನು ಬರೆಯುವ ಮೂಲಕ ಸಾಹಿತ್ಯ ಬರವಣಿಗೆಯ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದರು. ಕರ್ನಾಟಕ ಬೈಲಾಟ ಕಲಾವಿದರ ಸಂಘದ ರಾಜ್ಯಾಧ್ಯಕ್ಷ ವಿಶ್ವನಾಥ್ ಸಾಹುಕಾರ, ಪ್ರಾಚಾರ್ಯ ಅಯ್ಯಣ್ಣ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಚಂದ್ರಕಾಂತ್, ನೇತ್ರ ಕಲಾ ಸಂಘದ ಕಾರ್ಯದರ್ಶಿ ವೀರೇಶ್ ದಳವಾಯಿ, ಕಲಾವಿದರಾದ ಎಚ್.ಎಸ್.ನಾಗರಾಜ್, ಸಿ.ಲಕ್ಷ್ಮಣ, ದೊಡ್ಡ ಹುಸೇನಪ್ಪ ಅರಳಿಗನೂರು, ಹರಿಕೃಷ್ಣ ಸಂಗನಕಲ್, ಗೋಷ್ಠಿಯಲ್ಲಿ ಭಾಗವಹಿಸಿದ ಕವಿಗಳಾದ ಕುರುವಳ್ಳಿ ತಿಮ್ಮಯ್ಯ, ಎಸ್.ವಾಲಾಕ್ಷಿ, ಗಾದಿಲಿಂಗಪ್ಪ, ಜೀವನ್ ಕುರುವಳ್ಳಿ, ಜೈ.ಸಿಂಹ ಅಲ್ಲಾರಿ ಇತರರಿದ್ದರು.



ದೇವಸ್ಥಾನದ ಹುಂಡಿ ಎಣಿಕೆ: 96 ಲಕ್ಷ ರೂ. ಸಂಗ್ರಹ

• ಕೊಟ್ಟೂರು: ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದ ಹುಂಡಿ ಎಣಿಕೆ ಕಾರ್ಯ ಪೂರ್ಣಗೊಂಡಿದ್ದು 96,07,800,70 ಹಣ ಸಂಗ್ರಹವಾಗಿದೆ.

ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಫೆ.12ರಂದು ಜರುಗಿದ್ದು, ಈ ರಥೋತ್ಸವದ ಸಂದರ್ಭದಲ್ಲಿ ಅಳವಡಿಸಿರುವ ಶಾಶ್ವತ ಹುಂಡಿಗಳು ಮತ್ತು ತಾತ್ಕಾಲಿಕ ಹುಂಡಿಗಳಿಂದ ದಾಖಲೆಯ ಪ್ರಮಾಣದ ಹಣ ಸಂಗ್ರಹವಾಗಿದೆ. ಬೆಳಗ್ಗೆ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು, ತಹಶೀಲ್ದಾರರು, ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ, ವಂಶ ಪಾರಂಪರ್ಯ ಪ್ರಧಾನ ಧರ್ಮಕರ್ತರು ಹಾಗೂ ದೇವಸ್ಥಾನದ ಆಯಗಾರರ ಬಳಗದ ನೇತೃತ್ವದಲ್ಲಿ ಹುಂಡಿ ಪೆಟ್ಟಿಗೆಯನ್ನು ಒಡೆಯಲಾಯಿತು. ಅನಂತರದಲ್ಲಿ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಬ್ಯಾಂಕ್ ಸಿಬ್ಬಂದಿ ನೋಟುಗಳನ್ನು ಹಾಗೂ ನಾಣ್ಯಗಳನ್ನು ಬೇರ್ಪಡಿಸಿದ ನಂತರ ಹಣದ ಎಣಿಕೆ ಕಾರ್ಯವು ಮುಂದುವರೆಯಿತು. ಎಲ್ಲಾ ಹುಂಡಿಗಳ ಎಣಿಕೆ ಕಾರ್ಯವು ರಾತ್ರಿ 8:00 ಸುಮಾರಿಗೆ ಪೂರ್ಣಗೊಂಡಿತು. ಅದೇ ರೀತಿಯಾಗಿ ದೇವಸ್ಥಾನದ ಆವರಣದಲ್ಲಿರುವ ಚೌಡೇಶ್ವರಿ ದೇವಿ ದೇವಸ್ಥಾನದಲ್ಲಿ ಈ ಬಾರಿ ಹುಂಡಿ ಪೆಟ್ಟಿಗೆಯನ್ನು ಅಳವಡಿಸಲಾಗಿದ್ದು ಆ ಹುಂಡಿ ಪೆಟ್ಟಿಗೆ ಅಲ್ಲಿಯೂ ಸಹ 2,01,670 ರೂಪಾಯಿಗಳ ದಾಖಲೆ ಸಂಗ್ರಹವಾಗಿದೆ. ಇಷ್ಟೊಂದು ದಾಖಲೆಯ ಪ್ರಮಾಣದಲ್ಲಿ ಹಣ ಸಂಗ್ರಹವಾಗುತ್ತಿದ್ದು, ದೇವಸ್ಥಾನದ ಅಭಿವೃದ್ಧಿಗೆ ಇದನ್ನು ಬಳಸಬೇಕೆಂದು ಭಕ್ತರ ಒತ್ತಾಯವಾಗಿದೆ.



ಡಾ.ವೈ.ಪಿ.ವಿಠಲ್ ಸೇವೆ ಅಪಾರ: ಡಾ.ಭರತ್ ವಿ.ಜೆ.

• ಬಳ್ಳಾರಿ: ಡಾ.ವೈ.ಪಿ.ವಿಠಲ್ ಅವರ ಮಹತ್ವದ ಸೇವೆಗಳು ಅಗಾಧವಾದದ್ದು, ಅವರು ವಿಶೇಷವಾಗಿ ಕಳೆದ 1960ರ ದಶಕದಲ್ಲಿ ಬಳ್ಳಾರಿಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡಲು ನೀಡಿದ ಅವರ ಕೊಡುಗೆಯನ್ನು ಎಂದು ಮರೆಯಲಾಗದು ಎಂದು ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಭರತ್ ವಿ.ಜೆ. ಹೇಳಿದರು.

ನಗರದ ಭಾರತೀಯ ವೈದ್ಯಕೀಯ ಸಂಘದಲ್ಲಿ, ಡಾ.ವೈ.ಪಿ.ವಿಠಲ್ ಅವರ ಸ್ಮರಣಾರ್ಥ ಹಮ್ಮಿಕೊಂಡಿದ್ದ 23ನೇ ಎಂಡೋಮೆಂಟ್ ಒರೇಶನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಭಾರತೀಯ ವೈದ್ಯಕೀಯ ಸಂಘದ ಉಪಾಧ್ಯಕ್ಷ ಡಾ.ಸೈಯದ್ ಸದಾತ್ ಹುಸೇನ್ ಅವರು, ಡಾ.ವೈ.ಪಿ.ವಿಠಲ್ ಅವರ ಜೀವನ ಚರಿತ್ರೆ ಹಾಗೂ ಅವರ ಸಾಧನೆಗಳನ್ನು ಸ್ಮರಿಸಿ ಮಾತನಾಡಿದರು. ಡಾ.ಸಿದ್ದಾರ್ಥ ಜೋಶಿ ಅವರು, ಅಕ್ಯೂಟ್ ಸ್ಟ್ರೋಕ್‌ನ ನಿರ್ಣಯ ಹಾಗೂ ಚಿಕಿತ್ಸೆ ಹಾಗೂ ಇತ್ತೀಚಿನ ಪ್ರಗತಿಗಳು ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಿ, ತ್ವರಿತ ನಿರ್ಣಯ ಮತ್ತು ಆಧುನಿಕ ಚಿಕಿತ್ಸೆಯ ಮಹತ್ವದ ಕುರಿತು ಮಾತನಾಡಿ ಗಮನಸೆಳೆದರು. ನಂತರ ಐಎಂಎ ಎಲ್ಲ ಪದಾಧಿಕಾರಿಗಳು ಡಾ.ಸಿದ್ದಾರ್ಥ ಜೋಶಿ ಹಾಗೂ ವಿಶೇಷ ಅತಿಥಿಯಾಗಿ ಆಗಮಿಸಿದ್ದ ಡಾ.ಚಕೋರ ರಾಮನಾಥ್ ಅವರನ್ನು ಸನ್ಮಾನಿಸಿ ಗೌರವಿಸಿದರು. ಐಎಂಎ ಕಾರ್ಯದರ್ಶಿ ಡಾ.ಪಿ.ಹರೀಶ್ ಸ್ವಾಗತಿಸಿದರು. ಡಾ.ಹರಿ ವಿಠಲ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಲ್ಲ ಗಣ್ಯರು ಡಾ.ವೈ.ಪಿ.ವಿಠಲ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರ ಸಾಧನೆಗಳನ್ನು ಸ್ಮರಿಸಿದರು. ಸಂಯುಕ್ತ ಕಾರ್ಯದರ್ಶಿ ಡಾ.ಮಧುರಿ ಅಲ್ಲಂ ಅವರು ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ನಂತರ ಸಂಘದ ಖಜಾಂಚಿ ಡಾ.ರಾಕೇಶ್ ಕೆ.ಬಿ.ವಂದಿಸಿದರು. ಐಎಂಎ ಬಳ್ಳಾರಿಯ ಅನೇಕ ವೈದ್ಯರು ಭಾಗವಹಿಸಿದ್ದರು.



ಕಾಲೇಜಿನಲ್ಲಿ ಮಾದರಿ ಕೆಸಿಇಟಿ ಪರೀಕ್ಷೆ

• ಹೂವಿನಹಡಗಲಿ: ತಾಲೂಕಿನ ಹೊಳಗುಂದಿ ಗ್ರಾಮದ ಹೊರವಲಯದಲ್ಲಿರುವ ಗ್ಲೋಬಲ್ ಪದವಿಪೂರ್ವ ಕಾಲೇಜಿನಲ್ಲಿ ಮಾದರಿ ಕೆಸಿಇಟಿ ಪರೀಕ್ಷೆಯನ್ನು ಗುರುವಾರ ಆಯೋಜಿಸಲಾಯಿತು. ವಿದ್ಯಾರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಈ ಪರೀಕ್ಷೆ ಅತ್ಯಂತ ಸಹಾಯಕವಾಗಲಿದೆ.

ಕಾಲೇಜಿನಲ್ಲಿ ಈಗಾಗಲೇ ವಿಶೇಷ ಕ್ರ್ಯಾಶ್ ಕೋರ್ಸ್ ಆರಂಭಿಸಲಾಗಿದ್ದು, ಪರಿಣಿತ ಉಪನ್ಯಾಸಕರಿಂದ ಸಮಗ್ರ ಮಾರ್ಗದರ್ಶನ ನೀಡಲಾಗುತ್ತಿದೆ. ಕಡಿಮೆ ಅವಧಿಯಲ್ಲಿ ಹೆಚ್ಚು ವಿಷಯಗಳನ್ನು ಅವಲೋಕಿಸಲು "ಕ್ವಿಕ್ ರಿವಿಷನ್" ತರಗತಿಗಳು ಸಹ ನಡೆಯುತ್ತಿವೆ.

ಇದರೊಂದಿಗೆ ಮಾದರಿ ಪ್ರಶ್ನೆ ಪತ್ರಿಕೆಗಳ ಅಭ್ಯಾಸ ಹಾಗೂ ಪರಿಹಾರ ವಿಧಾನಗಳನ್ನು ತಿಳಿಸಲಾಗುತ್ತಿದ್ದು, ಶಾರ್ಟ್‌ಕಟ್ ವಿಧಾನಗಳು ಮತ್ತು ಸಮಯ ನಿರ್ವಹಣೆಯ ಕುರಿತಾಗಿ ವಿಶೇಷ ತರಬೇತಿ ನೀಡಲಾಗುತ್ತಿದೆ ಎಂದು ಪ್ರಾಂಶುಪಾಲರಾದ ಮಹೇಶ್ ಕುಮತಿಮಠ ತಿಳಿಸಿದ್ದಾರೆ.

ಈ ಮಾದರಿ ಕೆಸಿಇಟಿ ಪರೀಕ್ಷೆಯಲ್ಲಿ, ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಗಣಿತ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಒಳಗೊಂಡಿದ್ದು, ಪ್ರತಿದಿನ ಪರೀಕ್ಷಾ ಮಾದರಿಯಂತೆ ಮಿನಿ ಟೆಸ್ಟ್‌ಗಳನ್ನು ನಡೆಸಿ, ಪ್ರತಿ ವಾರ ಎರಡು ಮಾದರಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ವಿದ್ಯಾರ್ಥಿಗಳ ಸಾಧನೆಯನ್ನು ವಿಶ್ಲೇಷಿಸಿ ಅವರಿಗೆ ವೈಯಕ್ತಿಕ ಮಾರ್ಗದರ್ಶನವೂ ನೀಡಲಾಗುತ್ತಿದೆ.

ವಿದ್ಯಾರ್ಥಿಗಳು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಕೆಸಿಇಟಿ ಮುಖ್ಯ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಲು ಕಾಲೇಜು ಆಡಳಿತ ಮಂಡಳಿ ಕೋರಿದೆ.

ಮಹಿಳೆಯರ ಸಾಧನೆಗೆ ಪ್ರೋತ್ಸಾಹ ಅಗತ್ಯ: ನ್ಯಾ.ಮಧುಸೂದನ್

• ಹಗರಿಬೊಮ್ಮನಹಳ್ಳಿ: ಶೈಕ್ಷಣಿಕವಾಗಿ ರಾಜಕೀಯವಾಗಿ ಸಾಮಾಜಿಕವಾಗಿ ಔದ್ಯೋಗಿಕವಾಗಿ ಅಂತರಿಕ್ಷ ಬಾಹ್ಯಾಕಾಶ ಸೇರಿದಂತೆ ಇನ್ನಿತರ ಎಲ್ಲ ರಂಗಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಮಹಿಳೆಯರ ಕಾರ್ಯ ಸಾಧನೆಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು ಪ್ರತಿಯೊಬ್ಬರೂ ಮಾಡುವಂತಾಗಬೇಕು ಎಂದು ಹಗರಿಬೊಮ್ಮನಹಳ್ಳಿ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶ ಮಧುಸೂದನ್ ಡಿ.ಕೆ. ತಿಳಿಸಿದರು.

ಬುಧವಾರ ಪಟ್ಟಣದ ನ್ಯಾಯಾಲಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳೆಯರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ಕಾನೂನು ವಿಷಯ ತಿಳಿದುಕೊಳ್ಳಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾನೂನು ಸೇವಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವಂತಾಗಬೇಕು ಎಂದರು.



ವಕೀಲರಾದ ಶ್ರೀದೇವಿ ಹಡಪಾಲ್ಡಾರ್ ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಲಾರ್ ಚೆಸ್ಟರ್ ಮಹಿಳೆಯ ಹಕ್ಕುಗಳಿಗಾಗಿ ಮಹಿಳೆಯರನ್ನು ಸಂಘಟಿಸುವ ಮಹಿಳೆಯರಿಗೆ ಮತದಾನ ಹಕ್ಕು ಸಮಾನ ಕೆಲಸಕ್ಕಾಗಿ ಸಮಾನ ವೇತನಕ್ಕಾಗಿ ಹೋರಾಡಿದರು.

ಎಂಜಿನಿಯರ್ ಪದವಿ ಪಡೆದು ಸಂಸ್ಥೆ ಪ್ರಾರಂಭಿಸಿ ಇನ್ಫೋಸಿಸ್ ಸಂಸ್ಥೆಯ ಮುಖ್ಯಸ್ಥರಾದ ಸುಧಾಮೂರ್ತಿ ಅವರು ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದ್ದಾರೆ. 1.5 ಮಿಲಿಯನ್‌ಗೂ ಹೆಚ್ಚು ಮಹಿಳಾ ಪಾಯಿಸಲಾ ಪೈಲಟ್‌ಗಳಿದ್ದಾರೆ. ಪ್ರಪಂಚದಲ್ಲಿ ಅತಿ ಹೆಚ್ಚು ಮಹಿಳಾ ಪೈಲೆಟ್‌ಗಳನ್ನು ಹೊಂದಿರುವ ದೇಶ ನಮ್ಮದಾಗಿದೆ. ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸಿದ್ದು ಇದೊಂದು ಸ್ಫೂರ್ತಿದಾಯಕ ಬೆಳವಣಿಗೆ ಯಾಗಿದ್ದು ಮಹಿಳೆಯರು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳಬೇಕಿದೆ. ರಾಜ್ಯ ವಕೀಲರ ಸಂಘದಲ್ಲಿ ಮಹಿಳಾ ವಕೀಲರಿಗೆ ಹೆಚ್ಚಿನ ಆದ್ಯತೆ ದೊರೆಯುವಂತಾಗಬೇಕು ಎಂದರು.

ಸಿವಿಲ್ ನ್ಯಾಯಾಧೀಶರಾದ ಸಯ್ಯದ್ ಮೊಹಿದ್ದೀನ್, ಸರ್ಕಾರಿ ಅಭಿಯೋಜಕ ಟಿ.ರಾಘವೇಂದ್ರ, ವಕೀಲರ ಸಂಘದ ಅಧ್ಯಕ್ಷ ಕೊಟ್ರೇಶ್ ಶೆಟ್ಟರ್, ಹಿರಿಯ ವಕೀಲರಾದ ವಿಶಾಲಾಕ್ಷಮ್ಮ, ಅಶೋಕ್ ಕನಕೇರಿ, ಜಾಣ ಶಿವಾನಂದ, ಲಿಂಗನ ಗೌಡ್ರು, ಪಿ.ರಮೇಶ್ ಮಾತನಾಡಿದರು.

ಹಿರಿಯ ವಕೀಲರಾದ ವಿಶಾಲಾಕ್ಷಮ್ಮ ಅವರಿಗೆ ಸನ್ಮಾನಿಸಲಾಯಿತು.

ವಕೀಲರ ಸಂಘದ ಉಪಾಧ್ಯಕ್ಷ ಬಿ.ಎಂ.ಅಂಜನೇಯ, ಕಾರ್ಯದರ್ಶಿ ಡಿ.ಮಂಜುನ್ನ, ಜಂಟಿ ಕಾರ್ಯದರ್ಶಿ ಕೆ.ಪ್ರಹ್ಲಾದ್, ಖಜಾಂಚಿ ಕೆ.ಪೂರ್ಣಿಮಾ, ಯಾಸ್ಮಿನ್, ಅಖಿಲಾ, ಶೀಲಾ, ಶಿವಗಂಗಮ್ಮ, ಸುಜಾತಾ, ಮಹೇಶ್ವರ ಗೌಡ, ಸುಭಾಷ್ ನಾಯ್ಕ, ಎಚ್.ಎಂ.ಕೊಟ್ರೇಶ್, ಯು.ಕೊಟ್ರೇಶ್ ಸೇರಿದಂತೆ ಇತರ ವಕೀಲರು ಮತ್ತು ನ್ಯಾಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ವಕೀಲರಾದ ವೀಣಾ ಎಚ್., ಸುನೀತಾ ಹಾಗೂ ವಾಸಂತಿ ಸಾಲ್ಯಾನ್ ನಿರ್ವಹಿಸಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

• ಕುರುಗೋಡು: ತಾಲೂಕಿನ ಗೆಣಿಕೆಹಾಳು ಗ್ರಾಮದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸಮುದಾಯ ಆಧಾರಿತ ಒಗ್ಗೂಡಿಸುವಿಕೆ ಕಾರ್ಯಕ್ರಮ ನಡೆಯಿತು.

ಈ ವೇಳೆ ಗ್ರಾಮ ಪಿಡಿಒ ಜಯಲಕ್ಷ್ಮೀ ಮಹಿಳಾ ಸಬಲೀಕರಣ ಮತ್ತು ಆರೋಗ್ಯದ ಮಹತ್ವ ಕುರಿತು ಮಾತನಾಡಿ, ಕಾರ್ಯಕ್ರಮದ ಗುರಿ ಗ್ರಾಮೀಣ ಮಹಿಳೆಯರನ್ನು ಸಂಘಟಿಸಿ ಸಮುದಾಯದಲ್ಲಿ ಒಗ್ಗೂಡಿಸುವಿಕೆ ಬಲಪಡಿಸುವುದು ಮಹಿಳೆಯರಲ್ಲಿ ಆರೋಗ್ಯ, ಶಿಕ್ಷಣ, ಮತ್ತು ಹಕ್ಕುಗಳ ಕುರಿತು ಜಾಗೃತಿ ಮೂಡಿಸುವುದು, ಮಹಿಳಾ ಸಬಲೀಕರಣದ ಮೂಲಕ ಸಮಾಜದ ಸಮಗ್ರ ಅಭಿವೃದ್ಧಿ ಸಾಧಿಸುವುದು ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು. ಸಮುದಾಯ ಆಧಾರಿತ ಒಗ್ಗೂಡಿಸುವಿಕೆ ಪರಿಕಲ್ಪನೆಯಡಿ ನಡೆಸಲ್ಪಟ್ಟಿದೆ ಸಂಜೀವಿನಿ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳು ಪ್ರಮುಖ ಪಾತ್ರ ವಹಿಸುತ್ತವೆ ಗ್ರಾಮ ಮಟ್ಟದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯಿಂದ ಅಭಿವೃದ್ಧಿ ಕಾರ್ಯಗಳು ವೇಗ ಪಡೆಯುತ್ತವೆ ಮಹಿಳಾ ಒಕ್ಕೂಟಗಳು ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ ಎಂದರು

ನಂತರ ಒಕ್ಕೂಟದ ಅಧ್ಯಕ್ಷೆ ಚಂದ್ರಕಲಾ ಮಹಿಳಾ ಒಕ್ಕೂಟಗಳ ಮೂಲಕ ಗ್ರಾಮ ಮಟ್ಟದಲ್ಲಿ ನಾಯಕತ್ವ ಬೆಳೆಸುವುದು, ಸರ್ಕಾರದ ವಿವಿಧ ಯೋಜನೆಗಳ ಲಾಭವನ್ನು ಮಹಿಳೆಯರಿಗೆ ತಲುಪಿಸುವುದು ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಹೆಚ್ಚಿಸುವುದು ಆರೋಗ್ಯ, ಪೌಷ್ಟಿಕಾಂಶ ಮತ್ತು ಸ್ವಚ್ಛತೆ ಕುರಿತು ಮಾಹಿತಿ ನೀಡಿದರು.

ಮಹಿಳಾ ಸಂಘದ ಸದಸ್ಯರು, ಒಕ್ಕೂಟ ಅಧಿಕಾರಿಗಳು, ಗ್ರಾಮ ಸಿಬ್ಬಂದಿ ಇದ್ದರು.

